

ಶ್ರೀ ನಮನ

ನವೋದಯಕ್ಕೆ
ಶ್ರೀಕಾರ
ಹಾಕಿದವರು.

ರಾ.ಯ. ಧಾರವಾಡಕರ

ಪೂಜ್ಯ ಡಾ. ರಂಗನಾಥ ದಿವಾಕರ ಅವರಿಗೆ

— ವಿಶ್ವಾಸಪೂರ್ವಕವಾಗಿ

ರ. ಶ್ರೀ. ಮುಗಳಿ

ಧಾರವಾಡ
3.6.58

ಶ್ರೀನಮನ

ರಾ. ಯ. ಧಾರವಾಡಕರ

೧೯೮೪

(U/S 18 of the P and R Act, 1867)

Name of the book	:	SHRI-NAMANA
Language	:	Kannada
Author	:	Dr. R. Y. Dharwadkar
Printed & Published	:	Hubli-Dharwad 580002.
Name of Printer	:	Sri Shankar Patil M.A. Jagrati Printers, Janatabazar, Hubli-580028.
Published by	:	Dr. R. Y. Dharwadkar
No. of Pages	:	135 + 8
Size	:	Demy 1/8th
Edition	:	First
No. of Copies	:	1000
Printed/Cyclostyled	:	Printed
Price	:	Rs. 15/-
Copy Right	.	Smt. Bhanumti R. Dharwadkar
Copies available with	:	Smt. Sujata A. Dharwadkar B.Sc. 'Satyadeepa' Saraswatpur, Dharwad-580002.

ಮೊದಲ ಮಾತು :

'ಶ್ರೀನಮನ' ಪುಸ್ತಕ ಜನೆವರಿ ಐದರಂದೇ ಪ್ರಕಟವಾಗಬೇಕಾಗಿದ್ದಿತು. ಆದರೆ, ಮುದ್ರಿತ ಪುಟಗಳೆಲ್ಲ ಸಿದ್ಧವಾಗಿದ್ದರೂ, ಕಾರಣಾಂತರದಿಂದ ಔಪಚಾರಿಕ ಪ್ರಕಟನೆಯಲ್ಲಿ ವಿಲಂಬವಾಯಿತು. ಶ್ರೀಯವರ ಜೀವನದ ಕೊನೆಯ ಭಾಗದಲ್ಲಿ ಅವರ ಊಳಿಗದಲ್ಲಿ ಕೆಲಸ ಮಾಡುವ ಸೌಭಾಗ್ಯ ನನಗೆ ಒದಗಿತ್ತು. ಅವರ ಪಾಂಡಿತ್ಯವನ್ನು ಕಂಡು ನಾನು ಬೆರಗಾಗಿದ್ದೆ; ಅವರ ಮಾತಿನ ಮೋಡಿಗೆ ಮರುಳಾಗಿದ್ದೆ; ಅವರ ಕನ್ನಡದ ಪ್ರೇಮವನ್ನು ಕಂಡು ಮುಗ್ಧನಾಗಿದ್ದೆ. ಅವರು ಇನ್ನೂ ಕೆಲಕಾಲ ಬದುಕಿದ್ದರೆ, ಅವರ ಒಡನಾಟದಲ್ಲಿ, ನಾನು ಇನ್ನೂ ಅವರ ಹಿಮಾಲಯಸದೃಶ ವ್ಯಕ್ತಿತ್ವವನ್ನು ಅರಿತುಕೊಳ್ಳಬಹುದಾಗಿತ್ತು. ಆದರೆ, ಆ ಪುಣ್ಯ ಕೂಡಿ ಬರಲಿಲ್ಲ. ಕನ್ನಡ, ಆಂಗ್ಲ ಭಾಷೆಗಳ ಮಹಾವಿದ್ವಾಂಸರಾದ ಡಾ. ವಿ. ಕೃ. ಗೋಕಾಕರಂಥವರೇ ಶ್ರೀಯವರನ್ನು ಕುರಿತು ಹೇಳಿದ ಮಾತುಗಳನ್ನು ಮನದಂದಾಗ, ಶ್ರೀಕಂಠಯ್ಯನವರ ವ್ಯಕ್ತಿತ್ವ ಎಂಥದು ಎಂಬ ಕಲ್ಪನೆ ಯಾರಿಗೂ ಬಾರದಿರದು. ಡಾ. ಗೋಕಾಕರು ಹೇಳಿದರು:

"ಇಂದು ಮೈಸೂರು ಕರ್ನಾಟಕದಲ್ಲಿ ಶ್ಲಾಘ್ಯವಾದ ಸಾಹಿತ್ಯವನ್ನು ನಿರ್ಮಿಸುತ್ತಿರುವ ತರುಣರನೇಕರು, 'ಶ್ರೀ'ಯವರು ಹಿಡಿದ ಆರತಿಯಲ್ಲಿಯೇ, ತಮ್ಮ ನೀಲಾಂಜನಗಳನ್ನು ಹಚ್ಚಿಕೊಂಡರು. ಸಾಹಿತ್ಯವನ್ನು ನಿರ್ಮಿಸುವುದಕ್ಕಿಂತ, ಈ ರೀತಿಯಾಗಿ ಸಾಹಿತ್ಯವನ್ನು ಸ್ಫೂರ್ತಿಸುವ ಕಾರ್ಯವೂ ಮಹತ್ತರವಾದುದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು......ಇಂಗ್ಲಿಷ ಪ್ರೊಫೆಸರರು ಕನ್ನಡವನ್ನು ಮಾತನಾಡುವದೆಂದರೇ ಅವರ ಕಾಲದಲ್ಲಿ ಮಹಾಪಾಪವಾಗಿತ್ತು. ಕನ್ನಡದಲ್ಲಿ ಓದಿಬರೆಯುವದಂತೂ ದೂರುಳಿಯಿತು. ಕನ್ನಡದ ನಡುಮನೆಯಾದ ಮೈಸೂರಲ್ಲಿಯೇ ಆಗ ಕನ್ನಡವು ಹೇಳ ಹೆಸರಿಲ್ಲದಾಗುವ ಹೊತ್ತು ಬಂದಿತ್ತು. ಇಂಥದರಲ್ಲಿಯೇ ಶ್ರೀಯವರು ಕೆಲವು ಆಂಗ್ಲ ಕವನಗಳನ್ನು ಅನುವಾದಿಸಿದರು....ಹುಟ್ಟಿದೊಡನೆಯೇ ಹೊಳೆಯತೊಡಗಿದ, ಕೆಲವೇ ಕೃತಿಗಳಲ್ಲಿ 'ಇಂಗ್ಲಿಷ ಗೀತಗಳೂ' ಒಂದು....ಶ್ರೀಯವರು 'ಮೇಷ್ಟರು'. ರಾಜಕಾರಣದಲ್ಲಿ ಬಿದ್ದವರಲ್ಲ; ಸಭಾಪತಿಗಳಾಗಿ ಕಾರ್ಯಸಮಿತಿಗಳನ್ನು

ನಡೆಸುವದಕ್ಕಿಂತ, ಉಪನ್ಯಾಸಕಾರರಾಗಿ ಮಾತನಾಡುವುದು ಅವರಿಗೆ ಹೆಚ್ಚು ಪ್ರಿಯವಾದುದು. ಸಭೆಯ ವಿಧಾಯಕ ರೀತಿಗಳಲ್ಲಿ ಅನೇಕ 'ಮೇಷ್ಟರು' ಗಳಂತೆ ಅವರು ಗೊಂದಲಗೆಟ್ಟರೆ ಆಶ್ಚರ್ಯವಲ್ಲ....ಮುಕ್ಕು ಚಿಕ್ಕೆಯ ಕಾಳನ್ನೇನೊ ಶ್ರೀಯವರು ಬಿತ್ತಿದ್ದಾರೆ....ನಾಡಿನ ಪ್ರಗತಿಗಾಗಿ ಟೊಂಕಕಟ್ಟಿ ಕುಯ್ಯುಲೂ ನಿಂತಿದ್ದಾರೆ" (ಇಂದಿನ ಕನ್ನಡ ಕಾವ್ಯದ ಗೊತ್ತು ಗುರಿಗಳು—೧೯೪೬ ಪು. ೧೨೭–೧೩೨). ಡಾ. ಗೋಕಾಕರವರ ಈ ಮಾತುಗಳು ಶ್ರೀಯವರ ವ್ಯಕ್ತಿತ್ವದ ಸಾರಸತ್ವವನ್ನು ವಿವರಿಸುವಂತಿವೆ.

ಈ ಪುಸ್ತಕ ಪ್ರಕಟನೆಯಲ್ಲಿ ನನಗೆ ಅನೇಕರ ಸಹಾಯವಾಗಿದೆ. ನಮ್ಮ ನಾಡಿನ ಆದರ್ಶ ಜೀವಿಗಳಲ್ಲಿ ಒಬ್ಬರಾಗಿರುವ ಪೂಜ್ಯ ಶ್ರೀ ಶ್ರೀ ವೀರೇಂದ್ರ ಹೆಗ್ಗಡೆಯವರು ಈ ಪುಸ್ತಕವನ್ನು ತಮಗೆ ಸಮರ್ಪಿಸಲು ದಯವಿಟ್ಟು ಒಪ್ಪಿಕೊಂಡರು. ಅದಕ್ಕಾಗಿ, ಅವರಿಗೆ ಕೃತಜ್ಞ.


ಈ ಪುಸ್ತಕವನ್ನು ಬಿಡುಗಡೆ ಮಾಡಿದ ಶ್ರವಣ ಬೆಳ್ಗೊಳದ ಶ್ರೀ ಶ್ರೀ ಶ್ರೀ ಚಾರುಕೀರ್ತಿ ಭಟ್ಟಾರಕರಿಗೆ ವಂದನೆಗಳು. ಅದೂ ಅಲ್ಲದೆ, ಶ್ರೀಯವರ ಪತ್ರದ ಹಸ್ತ ಪ್ರತಿಯನ್ನು ಕೊಟ್ಟ ಶ್ರೀ ಕೆ. ಎಸ್. ದೇಶಪಾಂಡೆ, ಈ ಪುಸ್ತಕದ ಹಸ್ತ ಪ್ರತಿಯನ್ನು ಓದಿ ಸೂಚನೆಗಳನ್ನಿತ್ತ ಪ್ರೊ. ಹಾ. ಮಾ. ನಾಗೇಶ. ಸೌಪ್ತಿಕ ಪರ್ವವನ್ನು ನನ್ನೊಡನೆ ಓದಿ ಸಂದೇಹಗಳನ್ನು ನಿವಾರಿಸಿದ ಪ್ರೊ. ಬಿ. ಎಸ್. ಕಲ್ಲಾಪುರ, ರಕ್ಷಾಕವಚದ ಮುಖ ಚಿತ್ರವನ್ನು ಬರೆದು ಕೊಟ್ಟ ಸುರೇಶ ಕುಲಕರ್ಣಿ, ರಕ್ಷಾಕವಚವನ್ನು ಮುದ್ರಿಸಿದ ಶಿರಸಿಯ ಸ್ಕ್ರೀನ್ ಆರ್ಟ್ಸ್, ಎಷ್ಟೇ ವಿಲಂಬವಾದರೂ, ಬೇಸರಗೊಳ್ಳದೆ ಮುದ್ರಿಸಿದ ಶಂಕರ ಪಾಟೀಲ್, ಪಡಿಯಚ್ಚುಗಳನ್ನು ಮುದ್ರಿಸಿಕೊಟ್ಟ ರವೀಂದ್ರ ಆಕಳವಾಡಿ, ಈ ಪುಸ್ತಕದ ಬಗ್ಗೆ ಸದಭಿಪ್ರಾಯವನ್ನು ವ್ಯಕ್ತಮಾಡಿದ ಪ್ರೊ. ಎಂ. ವಿ. ಸೀತಾರಾಮಯ್ಯ

—ಇವರಿಗೆಲ್ಲ ನನ್ನ ಕೃತಜ್ಞತೆಗಳು. ಇದರೊಡನೆ, ಆ ಮಹಾವ್ಯಕ್ತಿತ್ವಕ್ಕೆ ಇದೋ ನನ್ನ 'ಶ್ರೀನಮನ'ವನ್ನು ಸಲ್ಲಿಸುತ್ತಿದ್ದೇನೆ.

ರಾ. ಯ. ಧಾರವಾಡಕರ

ಸತ್ಯದೀಪ
ಸಾರಸ್ವತಪುರ
ಧಾರವಾಡ
೨೦–೪–೧೯೮೪

ಸಮರ್ಪಣೆ



ರಾಷ್ಟ್ರದ ನೈತಿಕ ಮತ್ತು ಸಾಂಸ್ಕೃತಿಕ ಪುನರುತ್ಥಾನಕ್ಕಾಗಿ ಅಹರ್ನಿಶಿ
ಪರಿಶ್ರಮಿಸುತ್ತಿರುವ ಧರ್ಮಾಧಿಕಾರಿ ಪೂಜ್ಯ ಶ್ರೀ ವೀರೇಂದ್ರ ಹೆಗ್ಗಡೆ
ಅವರಿಗೆ ಭಕ್ತಿಪೂರ್ವಕ ಸಮರ್ಪಿತ



ಕೆಲವು ಅಭಿಪ್ರಾಯಗಳು

ಖ್ಯಾತ ಕವಿಗಳೂ, ವಿದ್ವಾಂಸರೂ, ಸಂಶೋಧಕರೂ ಹಾಗು ಬಿ. ಎಂ. ಶ್ರೀ. ಪ್ರತಿಷ್ಠಾನದ ಸಂಸ್ಥಾಪಕ ಕಾರ್ಯದರ್ಶಿಗಳೂ ಆಗಿರುವ ಪ್ರೊ. ಎಂ. ವಿ. ಸೀತಾರಾಮಯ್ಯ. ಅವರು ಈ ಪುಸ್ತಕದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯ :

"ಪ್ರಾಧ್ಯಾಪಕ ಡಾ॥ ರಾ. ಯ. ಧಾರವಾಡಕರರು ವಿದ್ವಾಂಸರು,ಸಂಶೋಧಕರು, ಉಭಯ ಭಾಷೆಗಳಲ್ಲಿ ಪ್ರಗಲ್ಭ ಪಂಡಿತರು. ಒಳ್ಳೆಯ ಶ್ರೇಷ್ಠಮಟ್ಟದ ಪ್ರಾಧ್ಯಾಪಕ ರೆಂದು, ವಾಗ್ಮಿ ಎಂದು ಹೆಸರಾದವರು. ಗಣ್ಯ ಪ್ರಬಂಧಕಾರರೂ ಆದದ್ದರಿಂದ ಇವರ ಯಾವುದೇ ಗ್ರಂಥದ ಗದ್ಯಶೈಲಿ ಗ್ರಂಥವಿಷಯಕ್ಕೆ ಅಪೂರ್ವವಾದ ಮೆರುಗನ್ನು ನೀಡುತ್ತದೆ. ಕೆಲವೇ ತಿಂಗಳುಗಳ ಹಿಂದೆ ಇವರ 'ತೂರಿದ ಚಿಂತನ'ಗಳಿಗೆ ಮಾರುಹೋದ ನಾನು ಆಚಾರ್ಯ ಬಿ. ಎಂ. ಶ್ರೀ. ಅವರ ಜನ್ಮಶತಮಾನೋತ್ಸವ ವರ್ಷದಲ್ಲಿ ಅವರ ಗೌರವಾರ್ಥ ಹೊರತಂದಿರುವ 'ಶ್ರೀನಮನ'ವನ್ನು ಅತ್ಯಂತ ಆದರ ಅಭಿಮಾನಗಳಿಂದ ಸ್ವಾಗತಿಸುತ್ತೇನೆ.

'ಶ್ರೀನಮನ' ತನ್ನ ಸಮಗ್ರತೆಯಿಂದ, ಕೃತಿ ನಾಯಕನ ಘನತೆಗೆ ತಕ್ಕ ವಸ್ತು ನಿಷ್ಠೆಯನ್ನು ಕಾಯ್ದುಕೊಂಡ ಪೂಜ್ಯ ಭಾವದ ಬರವಣಿಗೆಯಿಂದ, ಲಲಿತ ಶೈಲಿಯಿಂದ, 'ಶ್ರೀ'ಯವರ ಬಗೆಗೆ ಈವರೆಗೆ ಪ್ರಕಟವಾಗಿರುವ ಹಲಕೆಲವು ಗ್ರಂಥಗಳಲ್ಲಿ ಇದೊಂದು ವಿಶಿಷ್ಟ ಕೊಡುಗೆಯಾಗಿದೆ. ಬಿ. ಎಂ. ಶ್ರೀ. ತಮ್ಮ ಆಯುಷ್ಯದ ಕೊನೆಗಾಲವನು ಧಾರವಾಡದಲ್ಲಿ ಕಳೆದು, ಅಲ್ಲಿಯೇ ಕೊನೆಯುಸಿರನ್ನು ಎಳೆದರು. ಅವರು ಮೈಸೂರು ಸೀಮೆಯನ್ನು ಬಿಟ್ಟು ಧಾರವಾಡಕ್ಕೆ ಏಕೆ ಹೋದರು ಎಂಬ ಬಗೆಗೆ ಊಹಾಪೋಹಗಳು ಇದ್ದುವು. ಧಾರವಾಡದಲ್ಲಿ 'ಶ್ರೀ' ಅವರನ್ನು ಅಲ್ಲಿಯ ಗಣ್ಯರು ಸರಿಯಾಗಿ ನಡಸಿ ಕೊಳ್ಳಲಿಲ್ಲ ಎಂಬ ಪ್ರತೀತಿಯು ಹಬ್ಬಿತ್ತು. ಈ ಅಹಿತಕರ ಹಿನ್ನೆಲೆಯನ್ನು ಗಮನಿಸಿದ್ದ ಶ್ರೀಯುತರು ಎರಡು ವರ್ಷಕಾಲ ಅವರ ಆಪ್ತ ಸಹೋದ್ಯೋಗಿಯಾಗಿ, ಆ ಸಂದರ್ಭದ ವಿದ್ಯಮಾನವನ್ನು ಪ್ರತ್ಯಕ್ಷದರ್ಶಿಯಾಗಿ ಬಲ್ಲವರಾಗಿ, 'ಶ್ರೀ'ಯವರು ಧಾರವಾಡಕ್ಕೆ ಹೋದದ್ದು ತಮಗೆ ಪ್ರಿಯವಾದ ಸಾಹಿತ್ಯ-ಬೋಧೆಗಾಗಿ ಹಾಗೂ ಸಾಂಸ್ಕೃತಿಕ ರಾಯ ಭಾರಿಯಾಗಿ ಎಂಬುದನ್ನು ಸ್ಪಷ್ಟಪಡಿಸಿ, ಧಾರವಾಡದಲ್ಲಿ ಅವರು ಹೇಗೆ ಎಲ್ಲರಿಗೂ ಬೇಕಾದವರಾಗಿದ್ದರು ಎಂಬುದನ್ನು ತಿಳಿಸಿ, ಸಲ್ಲದ ಅಪಪ್ರಚಾರದ ಕದಡನ್ನು ತಿಳಿ ಗೊಳಿಸಿದ್ದಾರೆ. ಈ ಒಂದು ಮಹತ್ವದ ಸಂಗತಿಗಾಗಿ ಮಾತ್ರವಲ್ಲದೆ, ಶ್ರೀಯವರ ಬದುಕು-ಬರಹಗಳನ್ನು ವಸ್ತುನಿಷ್ಠವಾಗಿ, ಸವಿವರ್ವವಾಗಿ, ಸ್ವಾರಸ್ಯವಾಗಿ ನಿರೂಪಿಸಿ ರುವ ಕಾರಣಕ್ಕಾಗಿ ಕೂಡ ಶ್ರೀಸಾಹಿತ್ಯಕ್ಕೆ 'ಶ್ರೀನಮನ' ಒಂದು ಬೆಲೆಯುಳ್ಳ ಮಹತ್ವದ ಕೊಡುಗೆ.

–ಎಂ. ವಿ. ಸೀತಾರಾಮಯ್ಯ

ಇದೇ ಲೇಖಕರ 'ನವಿಲುಗರಿ' ಪ್ರಬಂಧ ಸಂಕಲನದ ಬಗ್ಗೆ ಗ್ರಂಥ ಲೋಕದ ಅಭಿಪ್ರಾಯ :

ಕನ್ನಡದಲ್ಲಿ ತುಂಬ ಉದಾಸೀನಕ್ಕೊಳಗಾಗಿರುವ ಪ್ರಕಾರವೆಂದರೆ ಪ್ರಬಂಧ. ಇತರ ಪ್ರಕಾರಗಳಿಗೆ ಹೋಲಿಸಿದಾಗ ಅತಿ ಕಡಿಮೆ ಸಂಖ್ಯೆಯಲ್ಲಿ ಪ್ರಕಟವಾಗಿರುವಂಥವು ಪ್ರಬಂಧ ಸಂಕಲನಗಳು. ಪ್ರಬಂಧ ರಚನೆ ಕಷ್ಟ ಸಾಧ್ಯವೆಂದೋ ಅಥವಾ ಪ್ರಬಂಧಕಾರರಿಗೆ ಕತೆ ಕವಿತೆ ಕಾದಂಬರಿ ನಿರ್ಮಾತೃಗಳಿಗೆ ಸಲ್ಲುವ ಗೌರವ ಸಲ್ಲುವುದಿಲ್ಲವೆಂಬ ಮನೋಭಾವದಿಂದಲೋ ಇದರ ಪ್ರಕಟಣೆ ತೀರ ಹಿಂದುಳಿದಿದೆ. ಗ್ರಂಥಲೋಕದ ವಾರ್ಷಿಕ ಸಮೀಕ್ಷೆಯನ್ನು ಅವಲೋಕಿಸಿದರೆ ಈ ಮಾತಿನ ಯಥಾರ್ಥತೆ ಮನವಟ್ಟಾಗುತ್ತದೆ. ಅಂತಹದರಲ್ಲಿ ಪ್ರಬಂಧ ಪ್ರಕಾರ ಇನ್ನೂ ಜೀವ ಹಿಡಿದು ನಿಂತಿದೆ ಎಂಬುದನ್ನು ತೋರಿಸಲೋ ಎನ್ನುವಂತೆ ವರ್ಷದಲ್ಲಿ ಆಗೊಂದು ಈಗೊಂದು ಹೊರಬರುತ್ತಿವೆ. ಅವುಗಳಲ್ಲಿ ಧಾರವಾಡಕರ ಅವರ 'ನವಿಲುಗರಿ' ಒಂದು.

ಪ್ರಬಂಧ ರಚನೆಯಲ್ಲಿ ಧಾರವಾಡಕರ ಅವರದು ಪಳಗಿದ ಕೈ. ಈಗಾಗಲೇ ಹಲವು ಸಂಕಲನಗಳನ್ನು ಪ್ರಕಟಿಸಿ ತಮ್ಮ ಸ್ಥಾನವನ್ನು ಗಟ್ಟಿಗೊಳಿಸಿಕೊಂಡಿದ್ದಾರೆ. ಅಂತಹ ಮತ್ತೊಂದು ಪ್ರಯತ್ನನವಿಲುಗರಿ. ಮಗುವಿಗೆ ಹೆಸರಿಡುವುದರಿಂದ ಪ್ರಾರಂಭವಾಗಿ ನವಿಲುಗರಿಯವರೆಗೆ ಇದು ವಿವಿಧ ಮುಖಗಳಲ್ಲಿ ಹರಡಿದೆ.

ಧಾರವಾಡಕರ ಅವರದು ಪಳಗಿದ ಕೈ ಎಂದು ಹೇಳಿದೆ. ತಾವು ಎತ್ತಿಕೊಂಡ ವಸ್ತುವಿನ ಚರ್ಚೆಯ ಸಮರ್ಥನೆಗೆ ಯಾವುಯಾವುದೋ ಮೂಲದಿಂದ ಉದಾಹರಣೆಗಳನ್ನು ಹೆಕ್ಕಿ ತಂದು ಅದರ ಸುತ್ತಮುತ್ತ ಜೋಡಿಸುವ ರೀತಿ ಮೆಚ್ಚುವಂಥದ್ದು. ಮಕ್ಕಳಿಗೆ ಹೆಸರಿಡುವ ವಿಚಾರದಲ್ಲಿ, ಹೆಣ್ಣಿನ ಮೇಲಾಳ್ತನವನ್ನು ವರ್ಣಿಸುವಾಗ, ಪೂರ್ವಗ್ರಹಗಳ ಬಗೆಗೆ ಹೇಳುವಾಗ, ಪಿಂಚಣಿಯ ಲಾಭಗಳನ್ನು ಕುರಿತು ಹರಟುವಾಗ, ಸಂಭಾವಿತರನ್ನು ಗೇಲಿ ಮಾಡುವ ಸಂದರ್ಭದಲ್ಲಿ, ಹಳಸಲು ಮಾತುಗಳಲ್ಲಿ, ಮೂಗರ್ಜಿಗಳ ಅನಾಹುತಗಳನ್ನು ವಿವರಿಸುವಾಗ ಮತ್ತು ತಮ್ಮ ಶಾಲಾದಿನಗಳ ಸಿಂಹಾವಲೋಕನದಲ್ಲಿ ಹೀಗೆ ಎಲ್ಲೆಂದರಲ್ಲಿ ಅವರ ಪ್ರತಿಭಾಸಾಮರ್ಥ್ಯ ಮಯೂರದಂತೆ ಗರಿಗೆದರಿ ನರ್ತಿಸಿರುವುದನ್ನು ಕಾಣಬಹುದು.

ಕೆಲವೆಡೆ ಹಾಸ್ಯವಿದ್ದರೆ ಹಲವುಕಡೆ ವಿಚಾರದ ಹೊಳಹು ಕಂಡುಬರುತ್ತದೆ. ವ್ಯಂಗ್ಯವಿದೆ, ವಿಡಂಬನೆಯಿದೆ. ಆದರೆ ಎಲ್ಲಿಯೂ ಅತಿರೇಕಕ್ಕೆ ಹೋಗದೆ ಸಮಾಧಾನ ಚಿತ್ತದಿಂದ ನಿರೂಪಿಸಿರುವುದನ್ನು ಕಾಣಬಹುದು. ಒಟ್ಟಾರೆ, ಪ್ರಬಂಧ ಸಾಹಿತ್ಯಕ್ಕೆ 'ನವಿಲುಗರಿ' ಒಂದು ಒಳ್ಳೆಯ ಸೇರ್ಪಡೆ. ಇಂಥವು ಇನ್ನಷ್ಟು ಧಾರವಾಡಕರರ ಲೇಖನಿಯಿಂದ ಹೊರಬರಲೆಂದು ಆಶಿಸಬಹುದು.

–ಸದಾಶಿವ ಎಣ್ಣೆಹೊಳೆ

ಪರಿವಿಡಿ

ಅನುಬಂಧಗಳು

ಅವಗುಣಕೋಟಿಯಂ ಮರೆದು ಸದ್ಗುಣಮೆಳ್ಳನಿತುಳ್ಳೊಡಂತದಂ
ಭುವನದೊಳೈದೆ ಬಿಚ್ಚಳಿಸಿ ನಲ್ಮೆಮಿಗಲ್ ತಲೆದೂಗಿ ಮೆಚ್ಚಿ ಪೆ-
ರ್ಚುವ ನಿರಸೂಯರಂ ವಿಗತಮತ್ಸರರಂ ಸುಚರಿತ್ರರಂ ಬುಧ-
ಪ್ರವರರನರ್ಚಿಪೆಂ ವಿಮಲವಾಕ್ಕುಸುಮಾವಳಿಯಿಂದಮಾವಗಂ ॥

—ಚೌಂಡರಸ

ಶ್ರೀ ಜೀವನ

'ಶ್ರೀ' ಎಂದು ಖ್ಯಾತನಾಮರಾದ ದಿವಂಗತ ಬಿ. ಎಂ. ಶ್ರೀಕಂಠಯ್ಯನವರು ಕನ್ನಡಕ್ಕೆ ಮರ್ಯಾದೆ ತಂದು ಕೊಟ್ಟವರಲ್ಲಿ ಅಗ್ರಗಣ್ಯರು. ಉತ್ತರ ಕರ್ನಾಟಕದಲ್ಲಿ ಕನ್ನಡ ಭಾಷೆಗೆ ನೆಲೆಯಿಲ್ಲದಾಗ ಕೈ. ವಾ. ಡೆಪ್ಯುಟಿ ಚೆನ್ನಬಸಪ್ಪನವರು ಕನ್ನಡಕ್ಕೆ ಒಂದು ಪ್ರತಿಷ್ಠೆಯನ್ನು ತಂದು ಕೊಟ್ಟರು. ಹಳೆಯ ಜಾಡಿನಲ್ಲಿಯೇ ಕನ್ನಡ ಸಾಹಿತ್ಯ ರಚನೆ ಸಾಗುತ್ತಿದ್ದಾಗ,ಅದಕ್ಕೊಂದು **ಸಾಹಿತ್ಯಕ** ಹೊಸ ದಿಸೆಯನ್ನು ಹಾಕಲು ಯತ್ನಿಸಿದವರು ದಿವಂಗತ ಶಾಂತಕವಿಗಳು. ಇದೊಂದು ಕೈ. ಅದೊಂದು ಕೈ. ಆದರೆ,ಸ್ವತಃ ಆಂಗ್ಲ ವಿಷಯಕ ಪ್ರಾಧ್ಯಾಪಕರಾಗಿದ್ದ ಬಿ. ಎಂ. ಶ್ರೀಯವರು ಕನ್ನಡದ ತೇರಿಗೆ ತಮ್ಮ ಕೈಯನ್ನು ಹಚ್ಚಿದಾಗ, ಇಂಗ್ಲಿಷಬಲ್ಲವರು ಕನ್ನಡವನ್ನು ಪುರಸ್ಕರಿಸುತ್ತಾರೆ; ಮೆಚ್ಚುತ್ತಾರೆ, ಅದರ ಬಗ್ಗೆ ಅಭಿಮಾನ ಪಡುತ್ತಾರೆ ಎಂಬ ಭಾವನೆ ಜನಸಾಮಾನ್ಯರಲ್ಲಿ ಮೂಡಿತು. ಆಂಗ್ಲ ಸಾಹಿತ್ಯವನ್ನು ಓದಿದವರು ಕನ್ನಡದಲ್ಲಿ ಮಾತನಾಡುವುದು ಕೂಡ ಕಡಿಮೆಯ ದರ್ಜೆಯದೆಂದು ತಿಳಿದುಕೊಂಡಿದ್ದ ಕಾಲದಲ್ಲಿ, ಶ್ರೀಯವರು ಕನ್ನಡದಲ್ಲಿ ಮಾತನಾಡಿದರು, ಬರೆದರು, ಹೊಸ ಪಂಥಗಳನ್ನು ಹಾಕಿಕೊಟ್ಟರು, ಕನ್ನಡ ಜನಸಮ್ಮರ್ದವನ್ನು ಸೇರಿಸಿದರು, ಪುಸ್ತಕಗಳನ್ನು ಹೊರತಂದರು; ತಮ್ಮ ಆರೋಗ್ಯದ ಚಿಂತೆಯಿಲ್ಲದೆ ಸಮಸ್ತ ಕನ್ನಡ ನಾಡನ್ನು ಸಂಚರಿಸಿ, ಆ ಕನ್ನಡತಾಯಿ ಪ್ರಫುಲ್ಲವದನವನ್ನು ಕಂಡು ಹರ್ಷನಿರ್ಭರರಾದರು.

ಸಮತೋಲ ವಿಮರ್ಶೆಗೆ ಪ್ರಸಿದ್ಧರಾದ ಡಾ. ಹಾ. ಮಾ. ನಾಯಕ ಅವರು ಹೇಳುವಂತೆ :

"(ಬಿ. ಎಂ. ಶ್ರೀಕಂಠಯ್ಯನವರು) ನಮ್ಮ ಸಾಹಿತ್ಯಕ್ಕೆ ನವೋದಯವನ್ನು ತಂದ

ಆಚಾರ್ಯರು; ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಸ್ಥಾನವನ್ನು ಉನ್ನತ ವಾಗಿಸಿದ ಪ್ರಾಧ್ಯಾಪಕರು; ನೂರಾರು ಹೊಸ ಲೇಖಕರಿಗೆ ಸ್ಫೂರ್ತಿಯನ್ನೂ, ಪ್ರೇರಣೆ ಯನ್ನೂ ಕೊಟ್ಟ ಮಾರ್ಗದರ್ಶಕರು; ಒಂದು ಪರಂಪರೆಯ ನಿರ್ಮಾಪಕರು; ಕನ್ನಡ ಕಾವ್ಯಕ್ಕೆ ಹೊಸ ಸಿಂಗಾರ ಮುಡಿಸಿದ, ಗದ್ಯಕ್ಕೆ ನವಶಕ್ತಿಯನ್ನು ತುಂಬಿದ ಕವಿಗಳು, ಲೇಖಕರು: ವಿದ್ವತ್ತಿನಲ್ಲಿ ಜಲಚಿಹ್ನೆಯನ್ನು ಸ್ಥಾಪಿಸಿದವರು; ಕಂಠಶ್ರೀಯಲ್ಲಿ ಅದ್ವಿತೀಯರು. ಯುಗಪ್ರವರ್ತಕ ಎಂಬ ಹೆಸರಿಗೆ ಮಾಡಿಸಿಟ್ಟ ವ್ಯಕ್ತಿ, ಬಿ. ಎಂ. ಶ್ರೀಕಂಠಯ್ಯ. ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯಕ್ಕೆ ಅವರು ಅಡಿಗಲ್ಲು; ಸ್ತಂಭ; ದೀಪ; ಕೈಮರ. ಇಂಥವರು ಎಲ್ಲ ಕಾಲಕ್ಕೂ ಬರುವುದಿಲ್ಲ. ಇಂಥವರಿಂದಲೇ ಒಂದು ಜನಾಂಗದ ಪ್ರಗತಿ, ಅಭ್ಯುದಯ.... ೧."

ಡಾ. ನಾಯಕರ ಈ ತುಂಬುಹೃದಯದ ಪ್ರಶಂಸೆಗೆ ಶ್ರೀಯವರ ಪ್ರತಿಭೆ, ಕಂಠಶ್ರೀ, ವಿದ್ವತ್ತುಗಳು ಕಾರಣವಾದಂತೆ, ಆಂಗ್ಲಭಾಷಾ ಪ್ರಾಧ್ಯಾಪಕರು ಎಂಬ ಅವರ ಸ್ಥಾನಬಲವೂ ಕಾರಣವಾಯಿತು. ಕೆಲವು ಜನ 'ಶ್ರೀ ಕಂಠಮಠ' ಎಂದು ಗೇಲಿ ಮಾಡಿದರೂ, ಅವರ ಶಿಷ್ಯರು, ಅನುಯಾಯಿಗಳು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಅವರ ಸುತ್ತಲೂ ನೆರೆದರು.

ಇಂಥ ಅದ್ಭುತ ಸಾಧನೆಯನ್ನು ಮಾಡಿದ ಶ್ರೀ ಚೇತನದ ಶಕ್ತಿಯೇನು? ಅವರ ಜೀವನ ಎಂಥದು? ಅವರು ಕಂಡುಂಡ ನೋವು ನಲಿವುಗಳು ಯಾವುವು? ಅವರು ಬೆಳಗಿದ ಮಾರ್ಗ ಯಾವುವು? ಎಂಬವುಗಳನ್ನು ತಿಳಿದುಕೊಳ್ಳುವುದು ಕ್ರಮಪ್ರಾಪ್ತ ವಾಗಿದೆ.

೨

'ಶ್ರೀ' ಎಂದು ಪ್ರಖ್ಯಾತರಾದ ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯನವರು ಜನವರಿ ೩, ೧೮೮೪ ರಂದು ತುಮಕೂರು ಜಿಲ್ಲೆಗೆ ಸೇರಿದ ಸಂಪಿಗೆ ಎಂಬ ಗ್ರಾಮದಲ್ಲಿ ಹುಟ್ಟಿದರು. ಬೆಳ್ಳೂರು ಅವರ ಪೂರ್ವಜರು ವಾಸಿಸುತ್ತಿದ್ದ ಊರು. ತಂದೆಯ ಹೆಸರು ಮೈಲಾರಯ್ಯ, ತಾಯಿಭಾಗೀರಥಮ್ಮ. ಅವರದು ಬೊಬ್ಬೂರು ಕಮ್ಮೆ ವಂಶ.

ಆನುಷಂಗಿಕವಾಗಿ, ಈ ಕಮ್ಮೆ ವಂಶದ ಬಗ್ಗೆಯೂ ಒಂದು ಮಾತನ್ನು ನೋಡ ಬೇಕು. ಬ್ರಾಹ್ಮಣ ವರ್ಗದ ಈ ಜನ ಸದ್ಯ ಹಳೆಯ ಮೈಸೂರು ಭಾಗದಲ್ಲಿಯೇ ಹೆಚ್ಚಾಗಿ ಕಂಡು ಬರುತ್ತಾರೆ. ಇಂದಿನ ಉತ್ತರಕರ್ನಾಟಕದಲ್ಲಿ ಈ ಕಮ್ಮೆಗಳು ಕಡಿಮೆ, ಇಲ್ಲವೆಂದರೂ ನಡೆದೀತು. ಆದರೆ, ಒಂದು ಕಾಲಕ್ಕೆ ಇಂದಿನ ಉತ್ತರ ಕರ್ನಾಟಕದ ಭಾಗದಲ್ಲಿಯೂ ಅನೇಕ ಸುಪ್ರಸಿದ್ಧರಾದ ಕಮ್ಮೆ ವಂಶಜರು ಆಗಿ ಹೋದರು. ೧೦ನೇ ಶತಮಾನದ ಪುಲಿಗೆರೆಯ (ಇಂದಿನ ಲಕ್ಷ್ಮೇಶ್ವರದ)ಪಂಪ ತನ್ನನ್ನು ಕಮ್ಮೆ ಕುಲದವ

---

೧ ಶ್ರೀ ಸಾಹಿತ್ಯ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೮೩, ಪು: ೧,

ನೆಂದು ಹೇಳಿಕೊಳ್ಳುತ್ತಾನೆ. ಹನ್ನೆರಡನೆಯ ಶತಮಾನದ ಬಸವಣ್ಣನವರೂ ಕಮ್ಮೆ ವಂಶದವರೇ. ಬಸವಣ್ಣನವರ ವಂಶದ ಬಗ್ಗೆ ೧೩ ನೆಯ ಶತಮಾನದ ಹರಿಹರ ಕವಿ ಹೀಗೆ ಹೇಳುತ್ತಾನೆ :

ಬಂದು ಭೂಲೋಕದೊಳು ಕೀರ್ತಿಯಂ ಪಡೆದಿರ್ಪ
ಸಂದಣಿಪ ವಿಪ್ರಸಂತಾನದಿಂದಿಡಿದಿರ್ಪ
ಶಿವಪುರಾಣಾಗಮಕುಳಂಗಳಿಂದೆಸೆದಿರ್ಪ
ಶಿವಶಾಸ್ತ್ರ ಘೋಷಸಂಗೀತದಿಂದಿಡಿದಿರ್ಪ
ಅಗ್ರಹಾ (ರಂ) ಬಾಗೆವಾಡಿಯೊಳಗೆಸೆದಿರ್ಪ
ಅಗ್ರೇಶ್ವರಂ ಕಮ್ಮೆಕುಲದಿಂದೆ ಮೆರೆದಿರ್ಪ
ವಿಪ್ರನಿರ್ಪಂ ಮಾದಿರಾಜನಾತನ ಸತಿಯು
ಅಪ್ರತಿಮ ಮಾದಾಂಬೆಯೆಂದೆಂಬ ಗುಣವತಿಯು [೧].

ಕಮ್ಮೆ ವಂಶದವರಲ್ಲಿ ಮೈಲಾರ ದೇವರಿಗೆ ಪ್ರಾಧಾನ್ಯ. ಮೈಲಾರ ಶಿವನ ಒಂದು ಅವತಾರ. ಮಣಿಮಲ್ಲ ದೈತ್ಯನನ್ನು ಸಂಹರಿಸಲು ಪರಶಿವ ಮೈಲಾರ ರೂಪವನ್ನು ತಾಳಿ, ತನ್ನ ಏಳುಕೋಟಿ ಸೈನ್ಯದೊಂದಿಗೆ ಹೋಗಿ ಅವನನ್ನು ಕೊಂದನೆಂದು ಮಲ್ಲಾರಿ ಮಹಾತ್ಮೆಯಲ್ಲಿ ಬರುತ್ತದೆ.

ಧಾರವಾಡ ಜಿಲ್ಲೆಯ ದೇವರಗುಡ್ಡದಲ್ಲಿ ಇಂದಿಗೂ ಸುಪ್ರಸಿದ್ಧ ಮೈಲಾರ ದೇವಾಲಯವಿದೆ. ಅಲ್ಲಿಯ ಗೊಗ್ಗಯ್ಯಗಳು ಜಾತ್ರೆಯ ಕಾಲಕ್ಕೆ ಕೈ ಉಪಯೋಗಿಸಿ ಆಹಾರವನ್ನು ತಿನ್ನುವುದಿಲ್ಲ. ತಟ್ಟೆಯಲ್ಲಿದ್ದ ಆಹಾರವನ್ನು ಶ್ವಾನಗಳ ಹಾಗೆ ನೇರ ಬಾಯಿಗೆ ಹಚ್ಚಿಯೇ ತಿನ್ನುತ್ತಾರೆ. ಬಸವಣ್ಣನವರ ವಚನದಲ್ಲಿ:

ವಿಷ್ಣುವ ಪೂಜಿಸಿ ಮುಡುಹ ಸುಡಿಸಿ ಕೊಂಬುದ ಕಂಡೆ,
ಜಿನನ ಪೂಜಿಸಿ ಬತ್ತಲೆಯಿಪ್ಪುದ ಕಂಡೆ,
ಮೈಲಾರನ ಪೂಜಿಸಿ ನಾಯಾಗಿ ಬಗಳುವದ ಕಂಡೆ,
ನಮ್ಮ ಕೂಡಲಸಂಗನ ಶರಣರ ಪೂಜಿಸಿ
ದೇವಾ ಭಕ್ತರೆನಿಸಿ ಕೊಂಬುದ ಕಂಡೆ.

ಎಂದು ಬರುತ್ತದೆ. ಬ್ರಹ್ಮಶಿವ :

ಎಕ್ಕಲದೇವಿಗೆ ಮಾಮಾ
ಲಕ್ಕನಿಗಂ ಬನದ ಬಳರಿಗಂ ಮೈಲಾರಂ-
ಗಳ್ಕದೆ ಜಾತ್ರೆಯ ಮಾಳ್ಪಂ
ಮೊಕ್ಕಳಗಂ ಜೈನನಲ್ಲನಾತಂ ಕಾಳಂ.

೧ ಬಸವರಾಜದೇವರ ರಗಳೆ: ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು,೧೯೫೫,ಪು : ೫.

ಎಂದೂ "ವೀರದೊಳುಕ್ಕಿ ಮಚ್ಚರಿಸಿ ಕೋಪದೆ ಜೈನನೆ" ಕಾದಿ ಸತ್ತು ಮೈಲಾರನಾದನೆಂದು ಹೇಳುತ್ತಾನೆ. ಮನೆವೆರ್ಗ್ಗಡೆ ಜಟ್ಟಿವಸೆಂದೆ, ಪಿನ್ನೆ ತಾನಾದ ಮೈಲನುಂ ಮಾಳಚಿಯುಂ ಜನಕಾಪ್ತರಾದರ್–ಎಂಬ ಮಾತನ್ನೂ ಹೇಳುತ್ತಾನೆ. ತಾತ್ಪರ್ಯ: ಮೈಲಾರದೇವರ ಅರ್ಚನೆ ೧೨ನೆಯ ಶತಮಾನದಿಂದಲೂ ನಡೆದಿತ್ತೆಂಬುದು ಇದರಿಂದ ಸ್ಪಷ್ಟ.

ಅಂದರೆ,ಒಂದು ಕಾಲಕ್ಕೆ **ನಮ್ಮ ಕುಲದವರು ಉತ್ತರಕರ್ನಾಟಕದಲ್ಲಿಯೂ** ಇದ್ದರೆಂಬುದು ಇದರಿಂದ ವ್ಯಕ್ತವಾಗುತ್ತದೆ.

ಇರಲಿ; ಶ್ರೀಯವರ ತಂದೆಯವರು ಶ್ರೀರಂಗಪಟ್ಟಣದಲ್ಲಿ ವಕೀಲರಾಗಿದ್ದರು. ಮೈಲಾರಯ್ಯನವರಿಗೆ ಐದು ಜನ ಮಕ್ಕಳು–ಮೂರು ಗಂಡು, ಎರಡು ಹೆಣ್ಣು. ಶ್ರೀ ಕಂಠಯ್ಯನವರೇ ಅವರೆಲ್ಲರಲ್ಲಿ ಹಿರಿಯರು.

ಶ್ರೀಕಂಠಯ್ಯನವರು ಪ್ರೌಢ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಹೋದರು. ಅಲ್ಲಿ ಶ್ರೀರಂಗಪಟ್ಟಣದ ಹುಡುಗರದೇ ಒಂದು ದೊಡ್ಡ ಗುಂಪಿತ್ತು. ತಮ್ಮನ್ನು 'ಪಟ್ಟಣ್ ಬಾಯ್ಸ್' ಎಂದು ಜನ ಕರೆಯುತ್ತಿದ್ದರೆಂದು ಶ್ರೀಯವರು ನನಗೆ ಹೇಳುತ್ತಿದ್ದರು. ಈ ಗುಂಪಿನವರೆಲ್ಲ ಕಾಲಕ್ರಮದಲ್ಲಿ ತುಂಬಾ ಪ್ರಸಿದ್ಧಿಯನ್ನು ಹೊಂದಿದರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಎನ್. ಎಸ್. ಸುಬ್ಬರಾಯರು ಈ ಗುಂಪಿನವರು. ಇವರು ಕೇಂಬ್ರಿಜ್‌ಕ್ಕೆ ಹೋಗಿ ಪದವಿಯನ್ನು ಪಡೆದುಬಂದವರು. ಪ್ರಸಿದ್ಧ ವಕೀಲರಾಗಿದ್ದ ಎಂ. ಜಿ. ವರದಾಚಾರ್ಯರು, ಪ್ರೊ.ಅಣ್ಣಾಜಿರಾಯರು, ಎಂಜಿನೀಯರ ವೆಂಕಟಸುಬ್ಬರಾಯರು– ಎಲ್ಲರೂ ಈ ಶ್ರೀರಂಗಪಟ್ಟಣದ ಗುಂಪಿನವರೇ. ಈ ಗುಂಪಿನ ಬಗ್ಗೆ ತಮಾಷೆಯಾಗಿ, ಡಿ. ವಿ. ಜಿ.ಯವರು ಒಂದು ಮಾತನ್ನು ಹೇಳುತ್ತಾರೆ:

"ಈ ತಂಡದಲ್ಲಿ ಎರಡು ದೊಡ್ಡ ಗುಣಗಳು : ೧) ಪರಸ್ಪರ ಸ್ನೇಹ ೨) ತಂಡಕ್ಕೆ ಹೊರಗಿನವರು ತಂಡದ ಒಳಗಿನವರನ್ನು ಯಾರನ್ನು ಆಕ್ಷೇಪಿಸಿದರೂ ಅವರನ್ನು ಪ್ರತಿಭಟಿಸತಕ್ಕದ್ದು.

ಅಣ್ಣಾಜಿ : "ಏನು ಸೊಗಸಾಗಿ ಬರೀತಾನಯ್ಯ ನಮ್ಮ ಸುಬ್ಬು"

ಸುಬ್ಬು : "ಶ್ರೀಕಂಠಯ್ಯನ ಮುಂದೆ ನನ್ನದೇನಿದೆ?"

ಶ್ರೀಕಂಠಯ್ಯ : ಎಲೊಕ್ವೆನ್ಸ್ ಎಂದರೆ ಎಂ. ಜಿ. ಎಂಥ ಸೊಗಸಾದ ಶೈಲಿ."

ಎಂ. ಜಿ. : "ಎಲೊಕ್ವೆನ್ಸನಲ್ಲೇನಿದೆ? ಸ್ಕಾಲರ್‌ಶಿಪ್ ದೊಡ್ಡದು. ನೋಡು ಅಣ್ಣಾಜಿಯನ್ನು."

ಹೀಗೆ ಒಬ್ಬರನ್ನೊಬ್ಬರು ಬಿಟ್ಟುಕೊಡುತ್ತಿರಲಿಲ್ಲ. ೧ .

ಇದು ಸ್ನೇಹಧರ್ಮವಷ್ಟೇ. ನಾಲ್ಕು ಜನ ದಿಕ್ಕಗೊಂದು ಮುಖವಾಗುವದಕ್ಕಿಂತ ನಾಲ್ಕು ಜನ ಒಮ್ಮುಖವಾಗಿ ನೋಡುವುದರಲ್ಲಿ ಸಂತೋಷವಿದೆ. ಬಾಳು ಇಡಿಗಾಳಾಗ ಬೇಕೆ ವಿನಾ ಬಿಡಿಗಾಳಾಗಬಾರದು.

ಶ್ರೀಕಂಠಯ್ಯನವರು ಮೈಸೂರಿನಲ್ಲಿ ಮ್ಯಾಟ್ರಿಕ್ಯುಲೇಶನ್ ಮತ್ತು ಎಫ್. ಎ. ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಮೇಲೆ ಕಾಲೇಜು ಶಿಕ್ಷಣಕ್ಕಾಗಿ ಬೆಂಗಳೂರು ಸೆಂಟ್ರಲ್ ಕಾಲೇಜನ್ನು ಸೇರಿದರು. ಅಲ್ಲಿ ೧೯೦೩ ರಲ್ಲಿ ಬಿ. ಎ. ಮಾಡಿಕೊಂಡರು. ಬಿ. ಎಲ್. ಪರೀಕ್ಷೆಗಾಗಿ ಮದ್ರಾಸಿಗೆ ಹೋದರು. ೧೯೦೬ ರಲ್ಲಿ ಬಿ. ಎಲ್. ಮುಗಿಸಿ, ೧೯೦೭ರಲ್ಲಿ ಎಂ. ಎ. ಮುಗಿಸಿದರು. ಆದಾದನಂತರ, ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೆ ಕುಳಿತರು. ಕನ್ನಡದ ಪುಣ್ಯ, ಅದರಲ್ಲಿ ಅವರಿಗೆ ಹೆಚ್ಚು ಅಂಕಗಳು ಬರಲಿಲ್ಲ. ಹಾಗೇ ನಾದರೂ ಅವರು ಮೇಲ್ದರ್ಜೆಯಲ್ಲಿ ಸಿವಿಲ್ ಸರ್ವಿಸ್ ಪರೀಕ್ಷೆ ಪಾಸುಮಾಡಿ ನೌಕರಿಗೆ ಸೇರಿದ್ದರೆ, ಈಗಿನಂತೆ ಅವರಿಗೆ ಕನ್ನಡಕ್ಕಾಗಿ ತಮ್ಮನ್ನು ಪರಿಪೂರ್ಣವಾಗಿ ಅರ್ಪಿಸಿ ಕೊಳ್ಳಲು ಆಗುತ್ತಿರಲಿಲ್ಲವೇನೋ?

ಶ್ರೀಯವರು ಶಿಷ್ಟ ವಿದ್ಯಾರ್ಥಿಗಳಾಗಿದ್ದರೂ, ಅವರು ಸಹ ಎಳೆಯರಿದ್ದಾಗ ಹುಡುಗಾಟ ಮಾಡದೆ ಹೋಗಿಲ್ಲ. ಇಂಥ ಒಂದು ಘಟನೆಯನ್ನು ಡಿ. ವಿ. ಜಿ. ಯವರು ವರ್ಣಿಸುತ್ತಾರೆ. ಶ್ರೀಯವರು ೮-೧೦ ವರ್ಷದ ಬಾಲಕರಿದ್ದಾಗ ಅವರು ನಾಲ್ಕಾರು ಜನರ ಒಂದು ಗುಂಪು ಇತ್ತು. ಈ ಗುಂಪಿಗೆ ಇವರೆಲ್ಲರಿಗಿಂತ ಒಂದೆರಡು ವರ್ಷ ಹೆಚ್ಚಿನವನಾದ ಒಬ್ಬ ಗಟ್ಟಿ ಮುಟ್ಟಾದ ಹುಡುಗನೂ ಬಂದು ಸೇರಿದ. ಅವ ತುಂಬಾ ಸಾಹಸಿ. ಊರ ಜನವೆಲ್ಲ ಅವನಿಗೆ 'ಪುಂಡಾ ಮಾಮ' ಎಂದು ಹೆಸರಿಟ್ಟಿದ್ದರು. ಈ ಪುಂಡಾಮಾಮಾ ಶ್ರೀಯವರ ಗುಂಪಿನ ಮುಖಂಡನಾದ. ಒಂದು ದಿನ, ಅವ ತನ್ನ ಶಿಷ್ಯರನ್ನೆಲ್ಲ ಕರೆದು "ಎಲೋ ಈ ಹೊತ್ತು ದೇವರ ಪೂಜೆ ಮಾಡೋಣ" ಎಂದ.

"ಓಹೋ. ಮಾಡಬೇಕು ಸಾರ್,ನೀವೇ ನಮ್ಮ ದೇವರು" ಎಂದು ಶಿಷ್ಯವತ್ಸಲರೆಲ್ಲ ಹೇಳಿದರು. ಸರಿ; ದೇವರ ಪೂಜೆ ಮಾಡಬೇಕಲ್ಲವೆ? ಶ್ರೀರಂಗಪಟ್ಟಣದ ಕೋಟೆಯ ಆವಾರದಲ್ಲಿ ಸ್ವಲ್ಪ ತಗ್ಗಿದ್ದ ಸ್ಥಳದಲ್ಲಿ ಇನ್ನಷ್ಟು ತಗ್ಗು ತೋಡಿ, ಅಲ್ಲಿ ದೇವರಾದ ನಾಯಕ ಪುಂಡಾಮಾಮಾನನ್ನು ಪ್ರತಿಷ್ಠಾಪಿಸಿದರು. ಅವನ ಸುತ್ತ ಮಣ್ಣನ್ನೆಲ್ಲ ತುಂಬಿ ದೇವರು ಅಲುಗಾಡದಂತೆ ಭದ್ರ ಮಾಡಿದರು. ಕೊರಳವರೆಗೂ ಮಣ್ಣು ತುಂಬಿತು.ಮುಖ ಮಾತ್ರ ಕಾಣಿಸುತ್ತಿತ್ತು. ದೇವರ ಪ್ರತಿಷ್ಠಾಪನೆಯಾದ ಮೇಲೆ ವಿಗ್ರಹದ ಪೂಜೆ ಯಾಗ ಬೇಕಲ್ಲವೆ? ಅದಕ್ಕಾಗಿ ಹೂವು ಹಣ್ಣು ಕಾಯಿ ತರಲು ಭಕ್ತವತ್ಸಲರೆಲ್ಲ ಪೇಟೆಗೆ ಹೋದರು. ಪಾಪ ಪುಂಡಾಮಾಮಾ ದೇವರು ಕೈ ಕಾಲು ಅಲುಗಾಡಿಸಲಿಕ್ಕೆ ಬಾರದೆ,

---

೧. ಸಾಹಿತ್ಯೋಪಾಸಕರು, ಕಾವ್ಯಾಲಯ ಮೈಸೂರು, ೧೯೭೦, ಪು. ೨೧೪

ಕಣ್ಣು ಕಣ್ಣು ಬಿಡ ಹತ್ತಿದ. ಕಣ್ಣಲ್ಲಿ ನೀರು ಬರಹತ್ತಿದವು....... ಪುಣ್ಯಕ್ಕೆ ಅಷ್ಟಕ್ಕೇ ಕೋರ್ಟಿನ ವೇಳೆಯಾದದ್ದರಿಂದ ಪಕ್ಷಗಾರರು, ವಕೀಲರು ಕೋರ್ಟಿಗೆ ಬರತೊಡಗಿದರು. ನೋಡುತ್ತಾರೆ. ಭೂಮಿಯಲ್ಲಿ ಹೂಳಿಹೋದ ದೇಹ. ರುಂಡ ಮಾತ್ರ ಕಾಣಿಸುತ್ತದೆ. ಹತ್ತಿರ ಹೋಗಿ ನೋಡಿ, ಈ ಬಾಲಕನ ವ್ಯಥೆಯನ್ನು ಕಂಡು, ಸುತ್ತಲಿನ ಮಣ್ಣನ್ನೆಲ್ಲ ತೆಗೆದರು.ಪುಂಡಾಮಾಮಾ ದೇವರು ಅರೆ ಜೀವವಾಗಿದ್ದ. ಡಾಕ್ಟರನ್ನು ಕರೆದು ಉಪಚಾರ ಮಾಡಿಸಿದರು. ಪೇಟೆಯಿಂದ ಮರಳಿದ ಶಿಷ್ಯ ವತ್ಸಲರು ತಮ್ಮ ದೇವರಿಗಾದ ಕಷ್ಟಕರ ಸ್ಥಿತಿಯನ್ನು ಕಂಡು ಕಣ್ಣೀರು ತುಂಬಿದರು. ತಮ್ಮ ದೇವರನ್ನು ಕಿತ್ತೊಗೆದವರು ಯಾರೆಂದು ಪೇಚಾಡಿದರು. ಜನ ಹುಡುಗರಿಗೆ ಸಮಾಧಾನ ಹೇಳಿದರು. ಡಾಕ್ಟರರ ಶುಶ್ರೂಷೆಯಿಂದ ದೇವರು ಬದುಕಿಕೊಂಡ. ಭಕ್ತರು, ತಾವು ತಂದಿದ್ದ ಹಣ್ಣುಗಳನ್ನೆಲ್ಲ ತಾವೇ ತಿಂದು ಹಾಕಿದರು. ಇದು ಶ್ರೀಕಂಠಯ್ಯನವರೇ ಡಿ.ವಿ.ಜಿ.ಯವರಿಗೆ ಹೇಳಿದ ಘಟನೆ.

೧೯೦೭ ರಲ್ಲಿ ಅವರು ಎಂ. ಎ. ಪಾಸು ಮಾಡಿದ ಮೇಲೆ, ಮೈಸೂರು ಸರ್ಕಾರ ಅವರನ್ನು ೧೯೦೯ ರಲ್ಲಿ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರನ್ನಾಗಿ ನೇಮಿಸಿತು. ಇದೇ ಕಾಲಕ್ಕೆ, ಅಂದರೆ ಶ್ರೀಕಂಠಯ್ಯನವರು ಕೇವಲ ೨೭ ವರ್ಷದವರಿದ್ದಾಗಲೇ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರು ತಮ್ಮ ವಾರ್ಷಿಕ ಉತ್ಸವಕ್ಕಾಗಿ ಅವರನ್ನು ಧಾರವಾಡಕ್ಕೆ ಆಮಂತ್ರಿಸಿದರು. ಅವರು ಸಂಘದಲ್ಲಿ ಡಿಸೆಂಬರ್ ತಿಂಗಳಲ್ಲಿ ಮಾಡಿದ ಭಾಷಣವೇ "ಕನ್ನಡ ಮಾತು ತಲೆ ಎತ್ತುವ ಬಗೆ" ಎಂಬ ಹೆಸರಿನಿಂದ ಸುಪ್ರಸಿದ್ಧವಾಗಿದೆ. ಇದಾದ ನಂತರ ೧೯೧೪ ರಲ್ಲಿ ಅವರು ಉಪಪ್ರಾಧ್ಯಾಪಕರಾದರು. ಇದೇ ಸಮಯಕ್ಕೇ ಅವರು ಬರೆದ "A Handbook of Rhetoric" ಎಂಬ ಪುಸ್ತಕ ಪ್ರಕಟವಾಯಿತು.

ಈ ಪುಸ್ತಕದ ಬಗ್ಗೆ ವೀಸಿ ಹೀಗೆ ಬರೆಯುತ್ತಾರೆ. :

“........ಎರಡನೆಯ ದಶಕ ಮುಗಿವ ಸುಮಾರಿನಲ್ಲಿ ‘ಶ್ರೀ’ ಯವರೊಡನೆ ನಾನು ಮಂಗಳೂರಿಗೆ ಹೋಗುವ ಪ್ರಸಂಗ ಒದಗಿತು. ಅಲ್ಲಿನ ಸೈಂಟ್ ಅಲೋಯಿಸಿಯಸ್ ಕಾಲೇಜ ಪ್ರಿನ್ಸಿಪಲ್ ಫಾದರ್ ಪ್ರಾಸರ್ಪಿಯೊ ಅವರು ಅಲ್ಲಿ ಇಂಗ್ಲಿಷ್ ಪ್ರೊಫೆಸರ್. ಶ್ರೀ ಷೇಕ್ಸಪಿಯರನ್ನು ಕುರಿತು ಏನೊ ಮಾತನಾಡಿದರು. ಪರಿಚಯ ಭಾಷಣದಲ್ಲಿ. ಪ್ರಾಸರ್ಪಿಯೊ ಈ ಮಾತನ್ನು ಹೇಳಿದರು. “ಇದು ಮಂಗಳೂರಿಗೇ ಒಂದು ಪುಣ್ಯದ ದಿನ. ನಾನು ಇಟಲಿಯಿಂದ ಬಂದ ಪಾದ್ರಿ. ಮದ್ರಾಸ ವಿಶ್ವವಿದ್ಯಾನಿಲಯದಲ್ಲಿ Rhetoric ಎಂಬ ವಿಷಯವನ್ನು ಪಠ್ಯಭಾಗವಾಗಿ ನೇಮಿಸಿದ್ದರು. ಅದರ ನೆಲೆಸೇನು ಎಂಬುದು ಮನಸ್ಸಿಗೆ ವಿಶದವಾಗಿ, ಖಚಿತವಾಗಿ ತಿಳಿಯದಿದ್ದ ಕಾಲದಲ್ಲಿ ಬಿ. ಎಂ. ಶ್ರೀ. ಅವರ A Handbook of Rhetoric ನನಗೆ ಸಿಕ್ಕಿ, ತುಂಬಾ ಉಪಕಾರ

ಮಾಡಿತು. ಆದುದರಿಂದ ಒಂದು ರೀತಿಯಲ್ಲಿ ನಾನೂ ಅವರ ಶಿಷ್ಯವರ್ಗಕ್ಕೆ ಸೇರಿದವನು" (ಶ್ರೀ ಸಾಹಿತ್ಯ : ಪು ೮-೯) Rhetoricದ ಬಗ್ಗೆ ಅವರು ಮದ್ರಾಸಿನಲ್ಲಿ ಮಾಡಿಕೊಂಡಿದ್ದ ಟಿಪ್ಪಣಿಗಳೇ ಇದಕ್ಕೆ ಆಧಾರವಾದುವು. ಅಧ್ಯಾಪಕರೆಂದೂ ಪ್ರಗಲ್ಭಪಂಡಿತರೆಂದೂ ಈಗಾಗಲೇ ಅವರ ಹೆಸರು ಲೋಕಪ್ರಸಿದ್ಧಿ ಪಡೆದಿತ್ತು. ಸುಮಾರು ಈ ಸಮಯಕ್ಕೆ ಕೆಲವುವರ್ಷಗಳ ಮುಂಚೆಯೇ ಅವರು ದೇವಮ್ಮ ಎಂಬವರನ್ನು ಮದುವೆಯಾಗಿದ್ದರು. ಮನಸ್ಸಿಗೊಪ್ಪುವ ಮಡದಿ. ಇವರಿಂದ ಶ್ರೀಕಂಠಯ್ಯನವರಿಗೆ ಮೂರುಜನ ಮಕ್ಕಳಾದರು. ಪ್ರೊ. ಎಂ. ಎನ್. ಮೂರ್ತಿರಾಯರು ಹೇಳುವಂತೆ "ಅನುಕೂಲವಾದಂತ ದಾಂಪತ್ಯ; ಮೂರುಜನ ಮಕ್ಕಳು, ಎರಡು ಹೆಣ್ಣು ಮತ್ತು ಒಂದು ಗಂಡು. ಮನಸ್ಸಿಗೆ ಒಗ್ಗುವ ಹಿತವಾದ ಕಸಬು, ಅದರಲ್ಲಿ ಆಗಲೇ ಗಳಿಸಿದ್ದ ಖ್ಯಾತಿ ಇನ್ನೇನಾಗಬೇಕು.? ೧.

ಆದರೆ, ಶ್ರೀಕಂಠಯ್ಯನವರ ಈ ಸಂತೃಪ್ತ ಸಮಾಧಾನದ ಜೀವನ ದೇವರ ಮನಸ್ಸಿಗೆ ಬರಲಿಲ್ಲವೇನೋ! ಒಂದರ ಮೇಲೊಂದರಂತೆ ಆಘಾತಗಳು ಅವರ ಜೀವನದ ಮೇಲೆ ಎರಗಿದುವು. ಮಗುವಾಗಿದ್ದ ತಮ್ಮಯ್ಯಗೆ ಕಣ್ಣುಬೇನೆ ಬಂದದ್ದರಿಂದ, ಏನೋ ಔಷಧಿ ಹಾಕಿದರು. ಏನು ತಪ್ಪು ಔಷಧಿ ಹಾಕಲಾಯಿತೋ, ಅಥವಾ ಹುಡುಗ ಕಣ್ಣುಜ್ಜಿಕೊಂಡನೋ, ಅಂತೂ ಅವನ ಎರಡೂ ಕಣ್ಣುಗಳು ಇಂಗಿ ಹೋದವು. ಇದ್ದ ಒಬ್ಬ ಗಂಡು ಮಗನು ದೃಷ್ಟಿಹೀನನಾದನು. (ಬಿಎಂಶ್ರೀ ಧಾರವಾಡಕ್ಕೆ ಪ್ರಾಚಾರ್ಯರಾಗಿ ಬಂದಾಗಲೂ, ಬೆಳೆದು ದೊಡ್ಡವನಾಗಿದ್ದ ತಮ್ಮಯ್ಯ ಶ್ರೀಯವರ ಕೂಡವೇ ಇರುತ್ತಿದ್ದ. ಶ್ರೀಯವರು ತೀರಿಕೊಂಡಾಗ ಮನೆಯವರಿಗೆಲ್ಲ ಸಮಾಧಾನ ಹೇಳುವವರು ತಮ್ಮ ಜೀವನದುದ್ದಕ್ಕೂ ಅಂಧಕಾರವನ್ನೇ ಕಂಡ ಈ ತಮ್ಮಯ್ಯನವರು.) ಮುಂದೆ ಕೆಲವೇ ದಿವಸಗಳಲ್ಲಿ, ಗರ್ಭಿಣಿಯಾಗಿದ್ದ ಶ್ರೀಮತಿ ದೇವಮ್ಮನವರು ಪ್ರಸವಾನಂತರ ನಂಜಾಗಿ ತೀರಿಕೊಂಡರು. ಆಗ ಶ್ರೀಕಂಠಯ್ಯನವರಿಗೆ ಕೇವಲ ಮೂವತ್ತು ಮೂವತ್ತೊಂದು ವರ್ಷ. ಕುರುಡು ಮಗ, ಉತ್ಸಾಹದಿಂದ ಸಂಸಾರವನ್ನು ನಡೆಸಬೇಕೆಂಬ ಕಾಲವಲ್ಲಿಯೇ ಪತ್ನೀ ವಿಯೋಗ. ಒಳ್ಳೆಯವರಿಗೆ ಯಾಕೆ ಹೀಗಾಗಬೇಕು? ಇದು ಜೀವನದ ಒಡೆಯಲಾರದ ಒಗಟು. ದುಷ್ಟರು, ಸಮಾಜ ಕಂಟಕರು ಸುಖವಾಗಿ ಇರುತ್ತಾರೆ, ಸಂಭಾವಿತರು ಜೀವನದಲ್ಲಿ ತತ್ತರಿಸಿ ಹೋಗುತ್ತಾರೆ. ಶ್ರೀಯವರು ರಚಿಸಿದ 'ಇಂಗ್ಲಿಷ್ ಗೀತಗಳು' ಮುನ್ನುಡಿಯ ಮೊದಲನೆಯ ಸಾಲು ಅನೇಕರ ಕಣ್ಣು ತಪ್ಪಿಸಿಕೊಂಡಂತಿದೆ. ನಾವೆಲ್ಲ ಮುಂದಿನ ಪದ್ಯಗಳ ಪಾತರಗಿತ್ತಿ ಪಕ್ಕದ ಸೌಂದರ್ಯಕ್ಕೆ ಮಾರು ಹೋಗಿದ್ದೇವೆಯೇ ಹೊರತು, ಈ ಮೊದಲ ಸಾಲಿನಲ್ಲಿ ತುಂಬಿ ಮಡುಗಟ್ಟಿ ನಿಂತ ಕಾರುಣ್ಯವನ್ನು ಗಮನಿಸಿದಂತೆ ಕಾಣುವದಿಲ್ಲ. ಶ್ರೀಯವರು ಈ ಕಾಲಕ್ಕೇ ಇಂಗ್ಲೀಷಿನಿಂದ ಗೀತಗಳನ್ನು ಕನ್ನಡಕ್ಕೆ ಅನುವಾದ ಮಾಡುತ್ತಿರಬೇಕು. ಅವು ಪ್ರಕಟವಾದುದು ೧೯೧೯ ರಲ್ಲಿ 'ವಿದ್ಯಾದಾಯಿನಿ' ಯಲ್ಲಿ, ಅನಂತರ ೧೯೨೧ ಹಾಗೂ ೧೯೨೪ ರಲ್ಲಿ ಇತರ ಪತ್ರಿಕೆ

೧ ಬಿ. ಎಂ. ಶ್ರೀಕಂಠಯ್ಯ; ಕನ್ನಡ ಸಾಹಿತ್ಯ ಪರಿಷತ್ತು, ೧೯೮೩. ಪು: ೪,

ಗ್ಳಿ.. ಹಸ್ತಪ್ರತಿರೂಪದಲ್ಲಿದ್ದಾಗ ಶ್ರೀಯವರು ಈ ಕವನಗಳನ್ನು ಯಾರ ಸಂತೋಷ ಕ್ಕಾಗಿ ಭಾಷಾಂತರಿಸಿದರೋ! "ಇಂಗ್ಲಿಷ ಗೀತಗಳು" ಪುಸ್ತಕದ ಅರಿಕೆಯ ಮೊದಲಿನ **ಸಾಲು ಹೀಗೆ ಹೇಳುತ್ತದೆ:**

"ಯಾರ ಸಂತೋಷಕ್ಕಾಗಿ ಮೊದಲು ನಾನು ಈ ಗೀತಗಳನ್ನು ಬರೆದೆನೋ, ಆ ಕಣ್ಣುಗಳು ಬೇಗ ಮುಚ್ಚಿಹೋಗಿ ಕೆಲವು ವರ್ಷ ಗ್ರಂಥ ನನ್ನಲ್ಲಿಯೇ ಉಳಿದುಕೊಂಡಿತು."

ಯಾರ ಸಂತೋಷಕ್ಕಾಗಿ ಮೊದಲು ಶ್ರೀಯವರು ಈ ಗೀತಗಳನ್ನು ಬರೆದರೋ, ಆ ಕಣ್ಣುಗಳು ಬೇಗ ಮುಚ್ಚಿಹೋಗಿದ್ದವು. ಆ ಬೇಗ ಮುಚ್ಚಿ ಹೋಗಿದ್ದ ಕಣ್ಣುಗಳು, ದೇವಮ್ಮನವರವೇ ಅಲ್ಲವೆ? ಅದೂ ಅಲ್ಲದೇ ಲ್ಯಾಂಬನ Old Familiar Faces ದಲ್ಲಿ ಹಳೆಯ ಪಳಕೆಯ ಮುಖಗಳಲ್ಲಿ, ಎಂಬ ಪದ್ಯದಲ್ಲಿ ಬರುವ:

ಪರಸಿ ಪಡೆದೆನು ಹೆಣ್ಣನೊಂದನು–ಕೇಳಲರಿಯೆನು ಹಿತವನು;
ಉರಿದು ಹೋದಳು, ಬೂದಿಯಾದಳು ಹಿಡಿ ವುದಿನೆಲ್ಲವಳನು;
ಎಲ್ಲ ಎಲ್ಲಾ ಮಾಯವಾದವು ಹಳೆಯ ಪಳಕೆಯ ಮುಖಗಳು.

ಈಸಾಲುಗಳಲ್ಲಿಯೂ ನಾನು ಆ ಕಾರುಣ್ಯವನ್ನೇ ಕಾಣುತ್ತೇನೆ.

ಇದೂ ಸಾಲದೆಂಬಂತೆ, ಕೆಲವೇ ವರ್ಷಗಳಲ್ಲಿ ಅವರ ಅಳಿಯಂದಿರಾದ ಯುವಕ ಎಸ್. ಆರ್. ಗುಂಡಪ್ಪನವರೂ ವಿಷಮಶೀತ ಜ್ವರದಿಂದ ತೀರಿಕೊಂಡರು. ತುಂಬು ಸೌಭಾಗ್ಯವತಿಯಾಗಿ ತವರಿನಿಂದ ಹೊರಬಿದ್ದ ಮಗಳು ಪತಿ ವಿಹೀನಳಾಗಿ ಮನೆಯನ್ನು ಸೇರಿದಳು. ಗುಂಡಪ್ಪನವರ ಉತ್ತರ ಕ್ರಿಯೆಗಳು ಮುಗಿದ ದಿನವೇ ಶ್ರೀಯವರ ತಾಯಿ ಯವರೂ ತೀರಿಕೊಂಡರು. ಒಂದರ ಮೇಲೊಂದರಂತೆ ನಾಲ್ಕು ಆಘಾತಗಳು! ಯಾಕೆ ಹೀಗೆ? ಈ ಜಗತ್ತಿನಲ್ಲಿ ವಿದ್ವಾಂಸರೆಂದು, ಸಜ್ಜನರೆಂದು ಒಳ್ಳೆಯಪ್ರಾಧ್ಯಾಪಕರೆಂದು, ಸ್ನೇಹಿತರೆಂದು ಜನರಿಂದ ಹೊಗಳಲ್ಪಟ್ಟ ಶ್ರೀಯವರಿಗೆ ಒಂದು ಸಾಲದೆಂಬಂತೆ ನಾಲ್ಕು ಹೊಡೆತಗಳು ಏಕೆ? ಏನು ದೈವದ ಕೈವಾಡ? ಮುತ್ತೈದೆಗೆ ಐದು ಕುತ್ತು. ಇದು ಜೀವನದ ಬಿಡಿಸಲಾರದ ಒಗಟು. ಬೈಬಲ್‌ದಲ್ಲಿ ಬರುವ Job ಒಳ್ಳೆಯವ, ದೈವೀ ಶ್ರದ್ಧೆಯುಳ್ಳವ. ಆದರೆ, ಮನೆ, ಮಠ, ಮಡದಿ ಎಲ್ಲರನ್ನೂ ಎಲ್ಲವನ್ನೂ ಕಳೆದು ಕೊಳ್ಳುತ್ತಾನೆ. Book of Job ಅವನ ಸಂಕಟಪರಂಪರೆಯನ್ನೇ ವಿವರಿಸುತ್ತದೆ. ಮಾರ್ಟಿನ ಲ್ಯೂದರ್ ಕಿಂಗ್, ಜ್ಯೂನಿಯರ್, ತಾನು ಸಾಯುವ ಹಿಂದಿನ ದಿವಸ : 'Like Moses, I had been to the mountain top and saw the Promised Land,' ಎಂದು ಹೇಳಿದರು. ಹಾಗೆ ಹೇಳಿದ ಮರುದಿವಸವೇ ಅವರ ಕೊಲೆಯಾಯಿತು. ಮೋಝೆಸನ ಹಾಗೆ ಅವರೂ ಆ ಆಶ್ವಾಸಿತ ನೆಲದ ಚಿತ್ರವನು ಕನಸಿನಲ್ಲಿ ಕಂಡರೇ ಹೊರತು, ಪ್ರತ್ಯಕ್ಷವಾಗಿ ನೋಡಲಿಲ್ಲ. ಹ್ಯಾರೊಲ್ಡ್ ಎಸ್ ಕುಶ್ನರ್

ಎಂಬ ಜ್ಯೂ ಧರ್ಮಬೋಧಕರು ತಮಗೊದಗಿದ ವಿಪತ್ತಿನ ಸಮಯದಲ್ಲಿ ಇದೇ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾರೆ.

"When bad things happen to good people" ಏನು ಅರ್ಥ? ಪ್ರಪಂಚದಲ್ಲಿ ಈ ವೈಷಮ್ಯ, ನೈರ್ಘೃಣ್ಯ ಏಕೆ? ನಮ್ಮವರೇನೋ ಪೂರ್ವಜನ್ಮದ ಕರ್ಮ ಕ್ಷಯ ಎಂದು ಸಮಾಧಾನ ಹೇಳಿದರು. ಇದು ಸಮಾಧಾನವಾಯಿತೇ ಹೊರತು ಸಮರ್ಥನೆ ಯಾಗಲಿಲ್ಲ. ಕೊಲೆಗಾರನ ಆಯುಧಗಳ ಮೇಲೆ ದೇವರ ಬೆರಳಚಿಹ್ನಗಳು ಇರಬೇಕಾಗಿಲ್ಲ.

ಈ ಮಾತನ್ನು ಸ್ವಲ್ಪ ಬೆಳಸಿ ಹೇಳಲು ಕಾರಣವೆಂದರೆ, ದೈವ, ಪುರುಷಪ್ರಯತ್ನ ಗಳ ನಡುವಿನ ಈ ಸಂಬಂಧದ ಪ್ರಶ್ನೆ ಶ್ರೀಯವರನ್ನು ಯುವಕರಿದ್ದಾಗಿನಿಂದಲೂ ಬಾಧಿಸುತ್ತಿರಬೇಕು. ದೈವ ಹೆಚ್ಚೊ? ಪುರುಷ ಪ್ರಯತ್ನ, ಚಾರಿತ್ರ್ಯ ಹೆಚ್ಚೊ? 'ಅಶ್ವತ್ಥಾಮ' ನಾಟಕದ ಮೂಲ ಸೂತ್ರವೂ ಇದೆಯೇ......

ಪತ್ನೀವಿಯೋಗದ ನಂತರ ಶ್ರೀಯವರು ಪುನಃ ಮದುವೆ ಮಾಡಿಕೊಳ್ಳಲಿಲ್ಲ. ಕನ್ನಡದ ಕೆಲಸಕ್ಕಾಗಿ ತಮ್ಮನ್ನು ತಾವು ಸಂಪೂರ್ಣವಾಗಿ ಸಮರ್ಪಿಸಿ ಕೊಂಡರು. ಕನ್ನಡ, ಇಂಗ್ಲಿಷಿನ ಸರಿ ಸಮವಾಗಬೇಕು. ಅದು ತನ್ನ ಹಳೆಯ ಸಂಪ್ರದಾಯಗಳಲ್ಲಿ ನಿರರ್ಥಕವಾದುದನ್ನು ಬಿಡಬೇಕು. ಕನ್ನಡಿಗರೆಲ್ಲರೂ ಒಂದೆಡೆ ಸೇರಿ ಕನ್ನಡಿಗರ ಹೃದಯ ಒಂದಾಗಬೇಕು — ಎಂಬುದೇ ಅವರ ಜೀವನ ಧ್ಯೇಯವಾದುವು. ಅಂತೆಯೇ ಪೂಜ್ಯ ಮಾಸ್ತಿಯವರನ್ನು, ಶಿವಮೂರ್ತಿಶಾಸ್ತ್ರಿ, ಅ. ನ. ಕೃ. ಅವರನ್ನು ಬಿಟ್ಟರೆ, ಶ್ರೀಅವರಷ್ಟು ಉತ್ತರ ಕರ್ನಾಟಕದ ನೆಲವನ್ನು ತುಳಿದವರು ಬೇರೊಬ್ಬರಿಲ್ಲ. ಅವರಿಗೆ ಷೇಕ್ಸಪಿಯರ್ ಮಹಾಕವಿಯ ಸ್ಟ್ರಾಟ್‌ಫರ್ಡ ಆನ್ ಎವನ್‌ದ ನೆಲದ ಮಣ್ಣಿ ನಷ್ಟೇ, ರನ್ನ ಪಂಪರ ಮುದವೊಳಲು ಪುಲಿಗೆರೆಯ ಮಣ್ಣು ಪವಿತ್ರವಾಯಿತು. ಕನ್ನಡದ ಸಮೀಚೀನ ದರ್ಶನವನ್ನು ಮಾಡಿಕೊಳ್ಳಲು, ಮುಧೋಳ, ಲಕ್ಷ್ಮೇಶ್ವರ, ಗದಗು, ಬಾಗೇವಾಡಿ, ಬಸವಕಲ್ಯಾಣ, ಬನವಾಸಿ, ಕಾರವಾರ, ಉಡುಪಿ, ಮೊದಲಾದ ಕ್ಷೇತ್ರಗಳ ಯಾತ್ರೆ ಮಾಡಿದ್ದೂ ಮಾಡಿದ್ದೇ, ಅದರಿಂದ ತಮ್ಮ ಹೃನ್-ಮನಗಳನ್ನು ತೃಪ್ತಿಗೊಳಿಸಿಕೊಂಡದ್ದು ಮಾತ್ರವಲ್ಲದೆ ಅವರು ಇಂಥ ದರ್ಶನವುಳ್ಳ ತಮ್ಮ ಶಿಷ್ಯರ ಪಡೆಯೊಂದನ್ನೇ ನಿರ್ಮಿಸಿದರು. ವಿ. ಸೀ, ರಾಘವಾಚಾರ್ಯ, ರಾಜರತ್ನಂ, ಮೂರ್ತಿರಾವ್, ಹತ್ತಾರು ಜನ. ಬಾಗಲಕೋಟೆ ನಿಲ್ದಾಣದಲ್ಲಿ ಒಂದು ಸಲ ಅವರು ವಿ. ಸೀ. ಯವರಿಗೆ ಹೇಳಿದರು :- ನಾನು ಯಾರು ಯಾರಿಗೋ ಹೇಳಿದೆನಪ್ಪ: ಅವರು ಯಾರೂ ಕನ್ನಡನಾಡನ್ನು ಸುತ್ತಲು ಮನಸ್ಸು ಮಾಡಲಿಲ್ಲ. ನಿಮ್ಮ ಸ್ಥಿತಿ ನನಗೆ ಗೊತ್ತು. ಒಡೆದುಹೋದ ಕನ್ನಡನಾಡು ಒಂದಾಗಬೇಕು. ರಾಜರತ್ನಂ ನೀವು, ಬೇರೆಯಾಗಿ ಅ.ನ.ಕೃ. ಶಿವಮೂರ್ತಿಶಾಸ್ತ್ರಿಗಳು ಹೋಗುತ್ತಿರುತ್ತೀರಿ. ಸಂತೋಷ. ನೀವುಮಾತ್ರ ಏನೇ ಕಾರಣ ದಿಂದ ಈ ಕಡೆಗೆ ಬರುವುದನ್ನು ನಿಲ್ಲಿಸಬೇಡಿ.—"Let us be the living

human bridges across the Tungabhadra" ಶ್ರೀಯವರು ತಾವು ನುಡಿದಂತೆಯೇ ನಡೆದು ತಮ್ಮ ದೇಹವನ್ನು ಸಹ ತುಂಗಭದ್ರೆಯ ಈಚೆಗೆ ತೊರೆದರು. ವಿ.ಸೀ. ಯವರೂ ಕೂಡ ಈ ಕಡೆಗೆ ಬಂದು ಒಂದು ಕಾಲೇಜಿನ ಕರಣಧಾರತ್ವನ್ನು ವಹಿಸಿದ್ದಲ್ಲದೇ, ತಮ್ಮ ದೇಹದಲ್ಲಿ ಶಕ್ತಿ ಇರುವವರೆಗೂ ಉತ್ತರ ಕರ್ನಾಟಕ ಹಾಗೂ ಹಳೆಯ ಮೈಸೂರುಗಳ ಹೃದಯ ಬಾಂಧವ್ಯಕ್ಕಾಗಿ ಹೆಣಗಿದರು...........

ಶ್ರೀಕಂಠಯ್ಯನವರು ಅಧ್ಯಾಪಕರಾಗಿ ಸೇರಿದಾಗ, ಕನ್ನಡ ಮೇಷ್ಟ್ರಿಗೆ ಮರ್ಯಾದೆಯ ಸ್ಥಾನವಿರಲಿಲ್ಲ. ಉತ್ತರಕರ್ನಾಟಕದಲ್ಲಿಯಂತೂ ಅವರನ್ನು 'ತಗಡು ಮಾಸ್ತರ' ಎಂದೇ ಕರೆಯುತ್ತಿದ್ದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕ ಹುದ್ದೆಯನ್ನು ನಿರ್ಮಿಸುವ ಪ್ರಶ್ನೆ ಬಂದಾಗ ಪ್ರಾಧ್ಯಾಪಕ ಹುದ್ದೆಯವರು ಕನ್ನಡದಲ್ಲಿ ಕಲಿಸುವಷ್ಟು ಏನಿದೆ ಎಂದು ಹುಬ್ಬೇರಿಸಿದ ಮಹನೀಯರು ಅನೇಕರಿದ್ದರು. ಭೌತಶಾಸ್ತ್ರ, ರಸಾಯನ ಶಾಸ್ತ್ರ, ಇಂಗ್ಲಿಷ್, ಈ ವಿಷಯಗಳಿಗೆ ಸರಿ; ಕನ್ನಡದಲ್ಲಿ ಅಂಥದೇನಿದೆ ಎಂಬುದು ಇವರ ವಾದ. ಇಂಗ್ಲೆಂಡದಲ್ಲಿಯೂ ಕೂಡ, ಇಂಗ್ಲಿಷ್ ಭಾಷೆಗೆ ಮರ್ಯಾದೆಯ ಸ್ಥಾನ ಬಂದದ್ದು ತೀರ ಇತ್ತೀಚೆಗೆ ಮಾತ್ರ. ಅಂತೆಯೇ ಇಂಗ್ಲಿಷದ ಶ್ರೇಷ್ಠ ವಿದ್ವಾಂಸರೂ, ಜನಪ್ರಿಯ ಪ್ರಾಧ್ಯಾಪಕರೂ, ಆಗಿದ್ದ ಶ್ರೀಯವರು ತಗ್ಗಿನಿಂತಿದ್ದ ಕನ್ನಡದ ತೇರಿಗೆ ತಮ್ಮ ಭುಜವನ್ನು ಕೊಟ್ಟು ಅದನ್ನು ಪುನಃ ಎಬ್ಬಿಸಲು ಪ್ರಯತ್ನಿಸಿದರು.

ಇದನ್ನು ಸಾಧಿಸಬೇಕಾದರೆ, ಅವರು ಇಂಗ್ಲಿಷಿನಲ್ಲಿ ಏಕಮೇವ ಅದ್ವಿತೀಯ ಪ್ರಾಧ್ಯಾಪಕರೆನ್ನಿಸಿಕೊಳ್ಳುವುದೂ ಅವಶ್ಯವಿತ್ತು. ಅವರು ಎಂಥವರೇ ಇರಲಿ, ಇಂಗ್ಲೆಂಡದಿಂದ ಬಂದ ಮಾತ್ರಕ್ಕೆ ಇಂಗ್ಲಿಷ್ ಕಲಿಸಬಲ್ಲರೆಂಬ ಭಾವನೆ ಬೇರೂರಿದ್ದ ಕಾಲವದು. ಈ ವರ್ಣಾಶ್ರಮ ವ್ಯವಸ್ಥೆಯಲ್ಲಿ ಅವರಿಗೆ ಪ್ರಥಮ ಸ್ಥಾನ, ಅಗ್ರಶೀರ್ಷ. ಇದಾದನಂತರ ಇಂಗ್ಲೆಂಡಿಗೆ ಹೋಗಿ ಇಂಗ್ಲಿಷ್ ಕಲಿತು ಬಂದವರು ಎರಡನೇ ದರ್ಜೆಯವರು. ಭಾರತೀಯ ವಿಶ್ವವಿದ್ಯಾಲಯಗಳಲ್ಲಿಯೇ ಇಂಗ್ಲಿಷ್ ಕಲಿತವರು ಮೂರನೆಯ ದರ್ಜೆಯವರು. ಇವರು ಎಂತಹ ಪ್ರತಿಭಾವಂತರೇ ಆಗಿರಲಿ, ಮೇಧಾವಿಗಳೇಆಗಿರಲಿ, ವಾಗ್ಮಿಗಳೇಆಗಿರಲಿ ಇವರಿಗೆ ಉನ್ನತಿ ಎಂಬುದೇ ಇಲ್ಲ.

ಆದ್ದರಿಂದ ಶ್ರೀಯವರು ಈ 'ಮೇಲ್ವರ್ಗ'ದವರ ಕೂಡ ಸ್ಪರ್ಧಿಸಬೇಕಾಯಿತು. ನಿಮಗೆ ಬಡತಿ ಬೇಕಾದರೆ ಇಂಗ್ಲೆಂಡಿಗೆ ಹೋಗಿ ಯಾವುದಾದರೂ ಒಂದು ಡಿಗ್ರಿ ಪಡೆದುಕೊಂಡು ಬನ್ನಿ ಎಂದು ಮಿತ್ರರಾದ ಎಸ್. ಎಸ್. ಸುಬ್ಬರಾಯರಂಥವರು ಶ್ರೀಯವರಿಗೆ ಅನೇಕ ಸಲ ಹೇಳಿದರು. ಆದರೆ ಶ್ರೀ ಇದ್ದ ನೆಲದಲ್ಲಿಯೇ ತಮ್ಮ ಹೆಗ್ಗಳಿಕೆಯನ್ನು ಮೆರೆಯಲು ಪ್ರಯತ್ನಿಸಿದರು. ಯಾರೋ ಒಂದು ಸಲ ಡಾ. ಸರ್ವಪಳ್ಳಿ ರಾಧಾಕೃಷ್ಣನ್ ಅವರಿಗೆ "ನೀವು ಇಂಥ ಮೇಧಾವಿಗಳಾಗಿದ್ದೀರಿ,

ವಾಗ್ಮಿಗಳಾಗಿದ್ದೀರಿ. ಆಕ್ಸಫರ್ಡ್ ಇಲ್ಲವೆ ಕೇಂಬ್ರಿಜ್‌ಕ್ಕೆ ಹೋಗಿ ಯಾಕೆ ಕಲಿತು ಬರಬಾರದು? ಡಿಗ್ರಿ ತೆಗೆದುಕೊಳ್ಳಬಾರದು?" ಎಂದು ಕೇಳಿದ್ದಕ್ಕೆ, ಡಾ. ರಾಧಾಕೃಷ್ಣನ್ ಅವರು "ನಾನು ಆಕ್ಸಫರ್ಡ್ ಕೇಂಬ್ರಿಜ್ಜಕ್ಕೆ ಹೋಗುವುದೇ ಆದರೆ, ಕಲಿಯಲು ಹೋಗುವದಿಲ್ಲ. ಕಲಿಸಲು ಹೋಗುತ್ತೇನೆ." ಎಂದು ಹೇಳಿದರಂತೆ. ಕೊನೆಗೂ ಡಾ. ರಾಧಾಕೃಷ್ಣನ್ ಅವರು ಇಂಗ್ಲಂಡಿಗೆ ಸ್ಪಾಲ್ಡಿಂಗ ಪ್ರೊಫೆಸರ್ ಆಫ್ ಫಿಲಾಸಫಿ ಎಂದು ಕಲಿಸಲು ಹೋದರೇ ವಿನಾ ಅಲ್ಲಿ ಕಲಿಯಲು ಹೋಗಲಿಲ್ಲ. ಶ್ರೀಯವರವೂ ಇಂತಹದೇ ಎದೆಗಾರಿಕೆ.

ಅದಕ್ಕಾಗಿ ಅವರು ಇಂಗ್ಲಿಷ್ ಸಾಹಿತ್ಯವನ್ನು ಆಮೂಲಾಗ್ರವಾಗಿ ಅರೆದು ಕುಡಿದರು. ಅಷ್ಟೇ ಅಲ್ಲ, ಐರೋಪ್ಯ ಭಾಷೆಗಳ ಪರಿಚಯವಿಲ್ಲದೆ ಇಂಗ್ಲಿಷಿನ ಸಮಗ್ರ ಜ್ಞಾನವುಂಟಾಗದು ಎಂದು ಕಂಡಾಗ, ಗ್ರೀಕ್, ಲ್ಯಾಟಿನ್ ಭಾಷೆಗಳ ಅಭ್ಯಾಸಕ್ಕೆ ತೊಡಗಿದರು. ಈ ಅನುಷ್ಠಾನವನ್ನು ಸಂಸ್ಕೃತ, ತಮಿಳು, ಕನ್ನಡಗಳ ಪೂರಕ ಅಭ್ಯಾಸದಿಂದ ಮತ್ತಷ್ಟು ಬಲಶಾಲಿಗೊಳಿಸಿದರು.

ಇದಕ್ಕಾಗಿ ತಪಸ್ಸಮಾನವಾದ ಏಕಾಗ್ರಚಿತ್ತದ ಅನುಷ್ಠಾನ ಅವಶ್ಯವಿತ್ತು. ಇಂಥ ವ್ಯಾಸಂಗವನ್ನು ಯಾವ ರೀತಿ ಶ್ರೀಯವರು ಮಾಡಿದರು ಎಂಬ ಬಗ್ಗೆ ಡಿ. ವಿ. ಜಿ. ಯವರು ಒಂದು ಘಟನೆಯನ್ನು ಹೇಳುತ್ತಾರೆ :

"ಶ್ರೀಕಂಠಯ್ಯನವರು ಬೆಂಗಳೂರಿನಲ್ಲಿ ಇದ್ದಷ್ಟು ದಿವಸವೂ ಅವರೂ ನಾನೂ ದಿನಕ್ಕೊಂದು ಸಾರಿಯಾದರೂ ಸೇರದೇ ಇದ್ದದ್ದು ಅಪರೂಪ. ಇಬ್ಬರೂ ಸೇರಿ ವಾಕಿಂಗ್ ಹೋಗುತ್ತಿದ್ದೆವು. ನನ್ನ ಮನೆಗೆ ಅವರು ಬಾರದಿದ್ದರೆ, ನಾನು ಅವರ ಮನೆಗೆ ಹೋಗುತ್ತಿದ್ದೆ. ಒಂದು ದಿನ ಬೆಳಿಗ್ಗೆ ಸುಮಾರು ಏಳು-ಏಳೂವರೆ ಘಂಟೆಯ ಹೊತ್ತಿಗೆ ಅವರ ಮನೆಗೆ ಹೋದೆ. ಮೊಗಸಾಲೆಯಲ್ಲಿ ನಿಂತು ಅವರ ರೂಮಿನ ಕದವನ್ನು ತಟ್ಟಿದೆ. ಉತ್ತರ ಬರಲಿಲ್ಲ. ಆಲಿಸಿ ಕೇಳಿದೆ. ಏನೋ ಒಂದು ಹಾಡಿನ ಧ್ವನಿ ಕೇಳಿ ಬರುತ್ತಿತ್ತು. ಮತ್ತೊಮ್ಮೆ ಬಾಗಿಲು ತಟ್ಟಿದೆ. ತೆರೆಯಲಿಲ್ಲ. ಮೂರನೆಯ ಸಾರಿ ಗಟ್ಟಿಯಾಗಿ ಡಬಡಬ ಎಂದು ಕಟ್ಟಿಗೆಯಿಂದ ಬಾಗಿಲ ಮೇಲೆ ಬಾರಿಸಿದೆ. ಆಗ ಬಾಗಿಲು ತೆರೆದರು. ನಾನು ಮೊದಲು ಎರಡು ಸಲ ಮಾಡಿದ ಸದ್ದು ಅವರ ಕಿವಿಗೆ ಸೋಕಿರಲಿಲ್ಲ ಅವರು ಮಾಡುತ್ತಿದ್ದದ್ದೇನು? ಡಾಂಟೆ ಕವಿಯ 'ಡಿವೈನ ಕಾಮೆಡಿ' ಕಾವ್ಯವನ್ನು ಸಣ್ಣ ಮೇಜಿನ ಮೇಲೆ ತೆರೆದಿಟ್ಟು ಅದರ ವಾಕ್ಯಗಳನ್ನೋದಿ ಬಾಯಿಗೆ ಗಟ್ಟಿ ಮಾಡಬೇಕೆಂದು ಅದರ ವಾಕ್ಯವನ್ನು ನುಡಿಯುತ್ತಾ ಮುಂದಿನ ಕೋಣೆಯಿಂದ ಅದರ ಹಿಂದಿನ ಕೋಣೆಯ ಗೋಡೆಯವರೆಗೂ ಶತಪಥ ತುಳಿಯುತ್ತಿದ್ದರು. ಆ ವೇಳೆಗೆ ಶ್ರೀಕಂಠಯ್ಯನವರ ವಯಸ್ಸು ಐವತ್ತು ಮೀರಿತ್ತು. ಪೆನ್‌ಶನ್ ದಿನ ಹತ್ತಿರ ಹತ್ತಿರ

ಬಂದಿತ್ತು. ವಿದ್ವಾಂಸರ ಲಕ್ಷಣ ಸ್ವಾಧ್ಯಾಯ ಪ್ರವಚನೇ ಏವೇತಿ ನಾಕೋ ಮೌದ್ಗಲ್ಯಃ ತದ್ಧಿ ತಪ : ತದ್ಧಿ ತಪ :" ೧.

ಇದು ಜ್ಞಾನಾರ್ಜನೆಗಾಗಿ ಶ್ರೀಕಂಠಯ್ಯನವರು ಗೈದ ತಪಸ್ಸು. Pursue knowledge like a sinking star ಎಂದು ಟೆನಿಸನ್ ಹೇಳಲಿಲ್ಲವೇ? ಜ್ಞಾನದ ಈ ನಕ್ಷತ್ರ ಎಲ್ಲಿ ಮುಳುಗಿಹೋಗುತ್ತದೋ ಎಂದು ಶ್ರೀಕಂಠಯ್ಯನವರು ಬಿಟ್ಟೂಬಿಡದೆ ಅದರ ಬೆನ್ನಟ್ಟಿದರು. ಅಂತೆಯೇ ಶ್ರೀಯವರ ಮಾತುಗಾರಿಕೆಯನ್ನು ಕೇಳಿದ ಪ್ರೊ. 'ಮ್ಯಾಕಿಂಟಾಷ್' ಎಂಬ ಆಂಗ್ಲ ವಿದ್ವಾಂಸರು "ನಾನು ಪೂರ್ವಜನ್ಮಗಳಲ್ಲಿ ನಂಬುವವನಾದರೆ, ಪ್ರೊ. ಶ್ರೀಕಂಠಯ್ಯನವರು ಹಿಂದಿನ ಜನ್ಮದಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಆಂಗ್ಲ ಸಾಹಿತ್ಯದ ಪ್ರೊಫೆಸರರೇ ಆಗಿರಬೇಕು." ಎಂದು ಹೇಳಿದರಂತೆ. ಇನ್ನೊಬ್ಬ ಆಂಗ್ಲ ಪ್ರೊಫೆಸರರು "ಶ್ರೀಕಂಠಯ್ಯನವರು ಇಂಗ್ಲಂಡಿಗೆ ಹೋದರೆ, ಅಲ್ಲಿಂದ ವಾಪಸು ಬರುವುದು ಅಸಾಧ್ಯವಾಗುತ್ತದೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಅವರನ್ನು ಬಿಟ್ಟು ಕೊಡುವುದಿಲ್ಲ." ಎಂದು ಹೇಳಿದರಂತೆ. ಅಂಥ ಪಾಂಡಿತ್ಯ, ಅಂಥ ಪ್ರತಿಪಾದನೆ,ಶ್ರೀಯವರದು.

ಶ್ರೀಯವರು 'ಇಂಗ್ಲಿಷ್ ಗೀತೆಗಳು' ಎಂಬ ಪುಸ್ತಕದಲ್ಲಿ ಬರೆದಿರುವ ಕವನಗಳಲ್ಲಿ ಅನೇಕವನ್ನು ೧೯೨೬ ರ ಮೊದಲೇ ಬರೆದಿದ್ದರು. ಅವೆಲ್ಲ ಒಟ್ಟುಗೂಡಿ 'ಇಂಗ್ಲಿಷ್ ಗೀತೆಗಳು' ಎಂಬ ಹೆಸರಿನಲ್ಲಿ ೧೯೨೬ ರಲ್ಲಿ ಪ್ರಕಟವಾದವು. '**ಗದಾಯುದ್ಧ ನಾಟಕಂ**' ಸಹ ೧೯೨೬ ರಲ್ಲಿಯೇ ಪ್ರಕಟವಾಯಿತು. '**ಅಶ್ವತ್ಥಾಮನ್**' ೧೯೨೯ ರಲ್ಲಿ ಪ್ರದರ್ಶಿತವಾಗಿದ್ದರೂ ಪ್ರಕಟವಾದದ್ದು ೧೯೩೦ ರಲ್ಲಿ. '**ಪಾರಸಿಕರು**' ೧೯೩೫ ರಲ್ಲಿ ಪ್ರಕಟವಾಯಿತು. ಇದಾದ ನಂತರ '**ಕನ್ನಡ ಛಂದಸ್ಸಿನ ಚರಿತ್ರೆ**' ೧೯೩೬ ರಲ್ಲಿಯೂ, '**ಕನ್ನಡ ಸಾಹಿತ್ಯದ ಚರಿತ್ರೆ**' ೧೯೪೭ ರಲ್ಲಿಯೂ ಪ್ರಕಟವಾದವು. ಸಂಪಾದಿತ ಕೃತಿ:**ಕನ್ನಡದ ಬಾವುಟ**'೧೯೩೮ರಲ್ಲಿ ಪ್ರಕಟವಾದರೆ,'**ಹೊಂಗನಸುಗಳು**' ೧೯೪೮ರಲ್ಲಿಯೂ, ಅವರು ಕಾಲಕಾಲಕ್ಕೆ ಮಾಡಿದ ಭಾಷಣಗಳ ಹಾಗೂ ಬರೆದ ಮುನ್ನುಡಿಗಳ ಸಂಗ್ರಹ ಗ್ರಂಥವಾದ '**ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ**' ೧೯೪೮ ರಲ್ಲಿಯೂ, ಮಹಮ್ಮದ ಅಬ್ಬಾಸ ಷೂಸ್ತ್ರಿ ಗ್ರಂಥದ ಅನುವಾದವಾದ "ಇಸ್ಲಾಂ ಸಂಸ್ಕೃತಿ" ಎಂಬುದು ಪ್ರಥಮ ಬಾರಿ ೧೯೪೮ ರಲ್ಲಿಯೂ ಪ್ರಕಟವಾದವು. ಇವಲ್ಲದೆ '**ಹಿಪ್ಪಾ ಪಾಸಿಸ್**' ಎಂಬುದರ ಬಗೆಗೆ ಅಚ್ಚಾದ ಪ್ರಬಂಧವನ್ನು ತಾವು ಮಹಾರಾಜಾ ಕಾಲೇಜ ಪುಸ್ತಕ ಭಂಡಾರದಲ್ಲಿ ನೋಡಿದ್ದಾಗಿ ವಿ. ಸೀ. ಯವರು ಹೇಳುತ್ತಾರೆ. ಅಲ್ಲದೆ, ಈಸ್ಕಿಲಸ್‌ನ 'ಪ್ರೊಮಿಥೂಸ್ ಬೌಂಡ್' ಹಾಗೂ ಷೆಲ್ಲಿಯ 'ಪ್ರೊಮಿಥೂಸ್ ಅನ್‌ಬೌಂಡ್' ಎರಡನ್ನೂ ಆಧಾರವಾಗಿಟ್ಟುಕೊಂಡು ಋಗ್ವೇದದ

---

೧ **ಸಾಹಿತ್ಯೋಪಾಸಕರು : ಕಾವ್ಯಾಲಯ, ೧೯೬೦ ಪು, ೨೧೯-೨೨೦**

"ಮಾತರಿಶ್ವ"ನ ಜೊತೆಗೆ ಹೋಲಿಸಿ ಗ್ರಂಥವೊಂದನ್ನು ಬರೆಯುವ ಇಚ್ಛೆ ಅವರಿಗೆ ಇತ್ತಂತೆ. ತಮಿಳಿನ 'ಕುರಳ್' 'ಮಣಿಮೇಖಲೈ' ಮತ್ತು 'ಶಿಲಪ್ಪದಿಕಾರಂ' ಗಳನ್ನೂ ಭಾಷಾಂತರ ಮಾಡಿದ್ದರಂತೆ.

೧೯೩೦ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಅವರನ್ನು ಪ್ರಥಮ ದರ್ಜೆಯ ಪ್ರಾಧ್ಯಾಪಕರನ್ನಾಗಿ ಮಾಡಿ ಬೆಂಗಳೂರು ಸೆಂಟ್ರಲ್ ಕಾಲೇಜಿಗೆ ವರ್ಗಾಯಿಸಿತು. ೧೯೩೮ ರಿಂದ ೧೯೪೨ರ ವರೆಗೆ ಪರಿಷತ್ತಿನ ಉಪಾಧ್ಯಕ್ಷರಾಗಿ ನಾಡಿನ ತುಂಬೆಲ್ಲಾ ಸುತ್ತಾಡಿ, ಪರಿಷತ್ತಿನ ಬಗ್ಗೆ ಎಲ್ಲರಲ್ಲಿಯೂ ಗೌರವವನ್ನು ಉಂಟು ಮಾಡಿದ್ದಲ್ಲದೆ, ಅದರ ಸದಸ್ಯ ಸಂಪತ್ತನ್ನೂ ಹೆಚ್ಚಿಸಿದರು.

ಶ್ರೀಕಂಠಯ್ಯನವರು ಕನ್ನಡಕ್ಕಾಗಿ ದುಡಿದದ್ದು ಅನೇಕ ಮುಖವಾಗಿ ಅನೇಕ ಹಸ್ತಗಳಿಂದ, ತಾವು ಹಿರಿಯ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಕನ್ನಡದ ಬೋಧೆ ಮಾಡಿದರೆ, ಕನ್ನಡಕ್ಕೊಂದು ಹೆಚ್ಚಿನ ಬೆಲೆ ಬರುತ್ತದೆಂದು ನಂಬಿದ್ದ ಅವರು ಕನ್ನಡದ ಗೌರವ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಕನ್ನಡವನ್ನು ಬೋಧಿಸುವಾಗ, ಕನ್ನಡ ಸಾಹಿತ್ಯ, ಭಾಷೆ, ಛಂದಸ್ಸುಗಳ ವಿಷಯವಾಗಿ ಆಳವಾಗಿ ವಿವರಿಸಿ, ಕನ್ನಡದ ಪಾಂಡಿತ್ಯ ನೆಲೆಗೊಳ್ಳುವಂತೆ ಮಾಡಿದರು. ಇಂಗ್ಲಿಷ ಗೀತೆಗಳಿಂದ ಪ್ರಾರಂಭವಾದ ಹೊಸ ಪರಂಪರೆಯ ಬರವಣಿಗೆಯ ಮೂಲಕ, ಕನ್ನಡ ಕಾವ್ಯದಲ್ಲಿ ಹೊಸ ವಸ್ತು, ವಿಷಯ, ಛಂದಸ್ಸು, ಶೈಲಿ, ಬರುವಂತೆ ಮಾಡಿದರು. ಇಂಥ ಕಾವ್ಯ ಪ್ರಯೋಗಗಳನ್ನು ಮಾಡಲು ಹಾಡುವ ಹಕ್ಕಿಯ ಕವಿಗಳ ಒಂದು ಗೂಡನ್ನೇ ಕಟ್ಟಿದರು. ಕರ್ನಾಟಕ ಮತ್ತು ಕನ್ನಡದ ಅಭಿಮಾನದಿಂದ ಪ್ರೇರಿತರಾದ ಶಿಷ್ಯರ ಒಂದು ಪಡೆಯನ್ನೇ ನಿರ್ಮಿಸಿ, ಅವರು ಉತ್ತರ ಕರ್ನಾಟಕ ಹಾಗೂ ಹಳೆಯ ಮೈಸೂರುಗಳ ನಡುವಿನ ಸುವರ್ಣಸೇತುವೆಯಾಗಿರುವ ಹಾಗೆ ನಿರ್ಮಿಸಿದರು. ಅವರು ಮೈಸೂರು ವಿಶ್ವವಿದ್ಯಾನಿಲಯದ ರಜಿಸ್ಟ್ರಾರರಿದ್ದಾಗಲೇ, ಆ ವಿಶ್ವವಿದ್ಯಾನಿಲಯದಲ್ಲಿ ಕನ್ನಡಕ್ಕಾಗಿ ಒಂದು ಪ್ರಾಧ್ಯಾಪಕ ಹುದ್ದೆಯು ಏರ್ಪಾಡಾಯಿತು. ಸಾಹಿತ್ಯ ವಿಮರ್ಶೆ, ಸಮಾಜಶಾಸ್ತ್ರ, ತತ್ವಜ್ಞಾನ, ಅರ್ಥಶಾಸ್ತ್ರ ಮೊದಲಾದವುಗಳ ಬಗ್ಗೆ ಕನ್ನಡದಲ್ಲಿ ಪ್ರೌಢ ಗ್ರಂಥಗಳ ರಚನೆಯಾಗುವದಕ್ಕೆ, ರಜಿಸ್ಟ್ರಾರ ಇದ್ದಾಗ 'ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ'ಯ ಯೋಜನೆಯನ್ನು ಪೂರ್ಣ ಮಾಡಿದರು. ತಾವೇ ಕಲ್ಪಿಸಿದ 'ಇಂಗ್ಲಿಷ್ ಸೆಮಿನಾರ' ಗಳ ಮೂಲಕ ಗಂಭೀರ ವಿಷಯಗಳ ಬಗ್ಗೆ ಚರ್ಚೆ, ಪ್ರತಿಪಾದನೆ ಉಂಟಾಗುವ ಏರ್ಪಾಡು ಮಾಡಿದರು. ವಿದ್ಯೆ ಮಡುಗಟ್ಟಿ ಕೇವಲ ವಿದ್ಯಾನಿಲಯಗಳ ಆವಾರದಲ್ಲಿ ಮಾತ್ರ ನಿಲ್ಲದೆ, ಜನಸಾಮಾನ್ಯರಲ್ಲೂ ಪ್ರವಹಿಸಬೇಕೆಂಬ ಆಶಯದಿಂದ ಜ್ಞಾನದ ಬೆಳಕು ಪ್ರತಿಯೊಬ್ಬರ ಮನೆಯ ಹೊಸ್ತಿಲನ್ನೂ ಅಂತರ್ಯವನ್ನೂ ಬೆಳಗಬೇಕು, ಎಂಬ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಸಾಹಿತ್ಯ, ತತ್ವಶಾಸ್ತ್ರ, ವೈದ್ಯಕ ಜಾನಪದ ಮೊದಲಾದ ವಿಷಯಗಳ ಬಗ್ಗೆ ಸರಳವಾದ ಕನ್ನಡದಲ್ಲಿ ಭಾಷಣಗಳು ಏರ್ಪಾಡಾಗುವಂತೆ ಮಾಡಿ ಪುಸ್ತಕರೂಪದಲ್ಲಿ ಅವು ಕೇವಲ ಎರಡಾಣೆಗೆ

ಲಭ್ಯವಾಗುವಂತೆ ಮಾಡಿದರು. ತರುಣ ಕನ್ನಡ ಬರಹಗಾರರಿಗೆ ಉತ್ತೇಜನ ದೊರಕಬೇಕೆಂಬ ದೃಷ್ಟಿಯಿಂದ, ಸ್ವತಃ ತಾವೇ ಹಣವನ್ನು ಕೊಟ್ಟು ದತ್ತಿಯನ್ನು ಸ್ಥಾಪಿಸಿ ಪ್ರತಿವರ್ಷ ಅತ್ಯುತ್ತಮ ಕವನ ಬರೆದವರಿಗೆ ಸುವರ್ಣ ಪದಕ ದೊರಕುವಂತೆ ಮಾಡಿದರು. ಪರಿಷತ್ತಿನ ಉಪಾಧ್ಯಕ್ಷರಿದ್ದಾಗ, ಪರಿಷತ್ತಿನ ಪ್ರಕಟನೆಗಳ ಮುದ್ರಣಕ್ಕೆ ಒಂದು ಮುದ್ರಣಾಲಯದ ಅಗತ್ಯವಿದೆಯೆಂದು ಮನದಂದು ತಮ್ಮ ಕೈಯಿಂದ ಆ ಕಾಲದಲ್ಲಿ ೫,೦೦೦ ರೂಪಾಯಿಗಳನ್ನು ಕೊಟ್ಟು ಪರಿಷತ್ತಿಗಾಗಿ ಒಂದು ಮುದ್ರಣಾಲಯವನ್ನು ಸ್ಥಾಪಿಸಿದರು. ಕನ್ನಡ ಜನ ಅಕ್ಕರೆಯಿಂದ ಕರೆದಲ್ಲೆಲ್ಲ, ಅದು ಹಳೆಯ ಮೈಸೂರು ಭಾಗವೇ ಆಗಿರಲಿ, ಉತ್ತರ ಕರ್ನಾಟಕವಾಗಿರಲಿ, ಹೈದರಾಬಾದ ಭಾಗವಾಗಿರಲಿ, ಬಳ್ಳಾರಿ ಸೀಮೆಯಾಗಿರಲಿ, ದಕ್ಷಿಣ ಉತ್ತರ ಕನ್ನಡವಿರಲಿ,ಸಾಂಗಲಿ,ಮಿರಜ.ಜಮಖಂಡಿಗಳಂಥ ಸಂಸ್ಥಾನಗಳೇ ಆಗಿರಲಿ,ಅಥವಾ ಗಡಿನಾಡ ಭಾಗವಾಗಿರಲಿ, ಕರ್ನಾಟಕದ ಹೊರಗಿನ ಮಹಾನಗರಗಳಾದ ಮುಂಬಯಿ, ಪುಣೆ, ಮದ್ರಾಸ ಕಡೆಗಳಲ್ಲಾಗಲಿ, ಕನ್ನಡಿಗರ ಹೃದಯದ ಕೂಗಿಗೆ ಓಗೊಟ್ಟು ಅವರ ಅಂತಃಕರಣದ ಆಮಂತ್ರಣಕ್ಕೆ ತಲೆಬಾಗಿ, ತಮ್ಮ ದೇಹದ ಆರೋಗ್ಯದ ಪರಿವೆಯನ್ನು ಸಹ ಲೆಕ್ಕಿಸದೆ, ಅಲ್ಲಲ್ಲಿ ಕಡೆಗೂ ಹೋಗಿ ಉಜ್ವಲವಾದ ಭಾಷಣಗಳನ್ನು ಮಾಡಿ, ಅವರೆಲ್ಲರನ್ನೂ ತಣಿಸಿದರು, ಒಲಿಸಿದರು, ಕುಣಿಸಿದರು. ಒಟ್ಟು ಕನ್ನಡ ರತ್ನಸಿಂಹಾಸನ ಒಂದುಗೂಡುವಂತೆ ಮಾಡಿದರು. ಹಿರಿಯರೊಬ್ಬರು ಹೇಳಿದಂತೆ "ಸುಮಾರು ಎರಡು ದಶಕಗಳ ಕಾಲ ಕನ್ನಡ ಸಾಹಿತ್ಯ ಸಾಮ್ರಾಜ್ಯಕ್ಕೆ ಅವರೇ ಅಧಿಪತಿಗಳಾಗಿದ್ದರು. ಕೀರ್ತಿ ಬೆನ್ನು ಹತ್ತಿ ಬಂತು. ಅವರ ಮೇಲೆ ಗೌರವ ಪುರಸ್ಕಾರಗಳ ಮಳೆ ಕರೆಯಿತು. ೧೯೨೮ ರಲ್ಲಿಯೇ ಅವರು ಕಲಬುರ್ಗಿಯಲ್ಲಿ ನಡೆದ ಕರ್ನಾಟಕ ಸಾಹಿತ್ಯಪರಿಷತ್ತಿನ ಸಮ್ಮೇಳನದ ಅಧ್ಯಕ್ಷರಾಗಿ ಚುನಾಯಿತರಾದರು. ೧೯೩೮ ರಲ್ಲಿ ಮೈಸೂರಿನ ಮಹಾರಾಜರು ಇವರಿಗೆ 'ರಾಜಸೇವಾಸಕ್ತ' ಎಂಬ ಬಿರುದು ಕೊಟ್ಟು, ಗೌರವಿಸಿದರು. ಒಟ್ಟು ಅಖಂಡ ಕರ್ನಾಟಕದ ಕಣ್ಮಣಿಯಾಗಿ, ಅಭಿಮಾನದ ಮೂರ್ತಿಯಾಗಿ, ಕನ್ನಡದ ಕಣ್ವರಾಗಿ, ವಿಜೃಂಭಿಸಿದರು. ಹೀಗೆ, ಸಮಗ್ರ ಕರ್ನಾಟಕದ ದೃಷ್ಟಿಯುಳ್ಳ ಜನರ ಆವಶ್ಯಕತೆ ಇಂದು ಕನ್ನಡಕ್ಕೆ ಎಂದಿನಕಿಂತಲೂ ಹೆಚ್ಚಾಗಿದೆಯೆಂದು ಅನಿಸುತ್ತದೆ. Milton thcu shouldst be living at this hour ಎಂದು ಕವಿಯೊಬ್ಬರು ಹೇಳಿದ ಹಾಗೆ, "ಶ್ರೀಕಂಠಯ್ಯನವರೆ, ಈ ಕಾಲಕ್ಕೆ ನೀವು ಅವಶ್ಯ ಬದುಕಿರಬೇಕಿತ್ತು. ಬದುಕಿ ನಮಗೆಲ್ಲ ಸಮಗ್ರ ದೃಷ್ಟಿ ಬರುವಂತೆ ಮಾಡಬೇಕಿತ್ತು" ಎಂದು ಹೇಳಬೇಕೆನಿಸುತ್ತದೆ.

●

ಧಾರವಾಡದಲ್ಲಿ ಬಿ. ಎಂ. ಶ್ರೀ.

ಇಸ್ವಿಸನ್ ೧೯೩೭ ರ ಫೆಬ್ರುವರಿ ತಿಂಗಳವೆಂದು ಕಾಣುತ್ತದೆ. ಧಾರವಾಡದ ಕರ್ನಾಟಕ ಕಾಲೇಜಿನ ವಸತಿಗೃಹಗಳ ವಿದ್ಯಾರ್ಥಿಗಳು,ಪ್ರೊ. ಬಿ. ಎಂ. ಶ್ರೀಯವರ ಉಪನ್ಯಾಸವನ್ನು ಕಾಲೇಜಿನ ಟೆನಿಸ್ ಮೈದಾನದಲ್ಲಿ ಏರ್ಪಡಿಸಿದ್ದರು. ಸಮಯ ರಾತ್ರಿ ೯ ಗಂಟೆಗೆ, ಭೋಜನಾನಂತರ. ವಸತಿಗೃಹಗಳ ಭೋಜನವೆಂದರೆ ಕೇಳುವದೇನು? ಎಲ್ಲರೂ ಭರ್ಜರಿ ಊಟ ಮಾಡಿದರು. ಅನಂತರ ರಾತ್ರಿ ೯ ಗಂಟೆಗೆ ಭಾಷಣ ಎಂದು ನಮ್ಮಲ್ಲಿ ಹಲವರು ಗೊಣಗಿದರು. ಆದರೂ ಭಾಷಣಕಾರರಿಗೆ ಒಂದು Chance ಕೊಟ್ಟು ನೋಡೋಣ, ಮನಸ್ಸು ಹಿಡಿದರೆ ಕೂಡೋಣ. ಇಲ್ಲವಾದರೆ ಎದ್ದು ಬಂದ ರಾಯಿತು ಎಂಬ ಅರೆಮನಸ್ಸಿನಿಂದಲೇ ನಾವು ಹಲವರು ಉಪನ್ಯಾಸ ಕೇಳಲು ಹೋದೆವು.

ರಾತ್ರಿ ಹಿಟ್ಟು ಚೆಲ್ಲಿದ ಹಾಗೆ ಬೆಳದಿಂಗಳು ಬಿದ್ದಿತ್ತು. ಇದು ಹಾಲುಗಡಲಿನಾ ಸೀಮೆ, ಇಲ್ಲಿ ಚಂದ್ರಮನೆ ಸ್ವಾಮಿ ಎನ್ನುವ ಹಾಗೆ ಬೆಳದಿಂಗಳು ಮೋಹಕವಾಗಿದ್ದಿತು. ಮದವೇರಿದ ಟಿಂವಕ್ಕಿಗಳು ಅಲ್ಲಲ್ಲಿ ಚೀತ್ಕಾರ ಮಾಡುತ್ತಿದ್ದವು. ಅಷ್ಟು ರಾತ್ರಿ ಯಾಗಿದ್ದರೂ, ವಿದ್ಯಾರ್ಥಿಸಮೂಹ, ಊರ ನಾಗರಿಕರು, ಕಿಕ್ಕಿರಿದು ನೆರೆದಿದ್ದರು. ದೇವರು ಕೆಳಗಿಳಿದು ಬಂದು ಉಪನ್ಯಾಸ ಕೇಳಲು ಕುಳಿತುಕೊಳ್ಳುವ ವಾತಾವರಣ, ಸರಿಯಾಗಿ ಒಂಬತ್ತಕ್ಕೆ ಐದು ನಿಮಿಷವಿರುತ್ತಲೇ ಬಂದ ಶ್ರೀಯವರು ತಮ್ಮ ಅಮೋಘ ವಾದ ಉಪನ್ಯಾಸವನ್ನು ಪ್ರಾರಂಭಿಸಿದರು. ನುರಿತ ಸಂಗೀತಗಾರ ಮೊದಲನೆಯ ಆಲಾಪದಲ್ಲಿಯೇ ಹೃದಯಕ್ಕೆ ಲಗ್ಗೆ ಹಾಕುವ ಹಾಗೆ, ಶ್ರೀಯವರು ಸುತ್ತಲಿನ ಪ್ರಶಾಂತತೆ, ಬೆಳದಿಂಗಳು, ಶ್ರೋತೃಗಳು, ಎಲ್ಲವನ್ನೂ ನೋಡಿ, ಮುಗುಳು ನಗೆ ನಕ್ಕು ಷೇಕ್ಸಪಿಯರನ ಮರ್ಚಂಟ ಆಫ್ ವೇನೀದಸ್‌ಲ್ಲಿಯ —

How sweet the moon light sleeps upon this bank!
Here will we sit, and let the sounds of music
Creep in our ears; soft stillness and night
Become the touches of sweet harmony. Sit Jessica

ಎಂದು ಹೇಳಿ, ಹಾಲು ಚೆಲ್ಲಿದ ಹಾಗೆ ಇದ್ದ ಬೆಳದಿಂಗಳು ತುಂಬಿದ ಆಕಾಶದ ಕಡೆಗೆ ನೋಡಿ ಭಾವ ತನ್ಮಯರಾಗಿ—

Look how the floor of heaven
Is thick inlaid with patines of bright gold;
There is not smallest orb which thou behold'st
But in his motion like an angel sings;........
Such harmony is in immortal souls;

—ಎಂದು ಮಂತ್ರಮುಗ್ಧರಾಗಿ ಹೇಳಿ, ಅರೆಕ್ಷಣ ಭಾವಪರವಶರಾಗಿ ಕಣ್ಣು ಮುಚ್ಚಿದರು. ಈ ಸಾಲುಗಳಿಂದ ನೆರೆದವರೆಲ್ಲರ ಹೃದಯಗಳನ್ನು ಮೀಟಿದರು; ತೃಪ್ತಿ ಪಡಿಸಿದರು, ತಣಿಸಿದರು. ಹೊರಗೆ ಜ್ಯೋತ್ಸ್ನಾವರ್ಷ, ಟೆನಿಸ್ ಗ್ರೌಂಡುಗಳ ಮೇಲೆ ಶ್ರೀಯವರ ವಾಗ್ವರ್ಷ. ಅ–ಖಂಡ ಎರಡು ಗಂಟೆ ಕಾಲ ಷೇಕ್ಸ್‌ಪಿಯರ ಸಾಮ್ರಾಜ್ಯದಲ್ಲಿ ಶ್ರೋತೃಗಳನ್ನು ಮೀಯಿಸಿ ಮೀಯಿಸಿ ತೃಪ್ತಿಪಡಿಸಿದರು. ಜ್ಯೋತ್ಸ್ನೆ ತುಂಬಿ ತುಳುಕಿ ಹರಿಯೆ ಸ್ನಿಗ್ಧ ಶರತ್ಕಾಲದಿ, ಮುಗಿಲು ರಂಗವಲ್ಲಿ ಬರೆಯೆ ವ್ಯೋಮ ಪಟದ ನೀಲದಿ. ವಿಯತ್ತಳದಿ ಮೌನ ಮುದ್ರೆ, ಜಗನ್ಮುಖದಿ ಶಾಂತ ನಿದ್ರೆ, ಇದ್ದಾಗ ನಿಜವಾಗಿಯೂ Such harmony is in immortal souls ಅನ್ನುವ ಹಾಗಾಯಿತು. ಏನು ಶ್ರೀಕಂಠಯ್ಯನವರ ಕಂಠಶ್ರೀ ಎಂದು ವರ್ಣಿಸುವ ಜನಸ್ತೋಮ ಅಪಾರ ಸಾಗರದಂತೆ ಟೆನಿಸ್‌ಕೋರ್ಟಿನಿಂದ ಹೊರಬಿದ್ದಿತು........ಹೀಗೆ ಧಾರವಾಡಕ್ಕೂ ಶ್ರೀಕಂಠಯ್ಯನವರಿಗೂ ಮೊದಲಿನಿಂದಲೂ ನಂಟು.

ಆಗಿನ ಕಾಲದಲ್ಲಿ ದಿವಂಗತ ಶ್ರೀಯವರು, ಮಾಸ್ತಿಯವರು, ವಿ. ಸೀಯವರು ತೀ. ನಂ, ಎಂ. ಆರ್. ಶ್ರೀ, ಮೂರ್ತಿರಾಯರು, ಕೆ. ವಿ. ರಾಘವಾಚಾರರು, ಶಿವಮೂರ್ತಿ ಶಾಸ್ತ್ರಿಗಳು, ಜಿ. ಪಿ. ರಾಜರತ್ನಂ, ಅ.ನ.ಕೃ. ಅವರು ಉತ್ತರ ಮತ್ತು ಮೈಸೂರು ಕರ್ನಾಟಕದ ಮಧ್ಯ ಸಾಂಸ್ಕೃತಿಕ ರಾಯಭಾರಿಗಳಾಗಿ, ಅಂತಃಕರಣದ ಸೇತುವೆಯಾಗಿ ಕೆಲಸ ಮಾಡಿದರು. ಈ ವಿದ್ವಾಂಸರು ಉತ್ತರ ಕರ್ನಾಟಕಕ್ಕೆ ಬಂದ ಸಲವೆಲ್ಲ ಜನ ಮಂತ್ರ ಮುಗ್ಧರಾಗಿ ಗೌರವ ಪೂರ್ವಕವಾಗಿ ಇವರ ಭಾಷಣಗಳನ್ನು ಕೇಳಲು ಮುಕುರುತ್ತಿದ್ದರು.

ಶ್ರೀಯವರು ಕೇವಲ ಇಪ್ಪತ್ತೇಳು ವರ್ಷದವರಿದ್ದಾಗಲೇ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರು ಅವರನ್ನು ಆಮಂತ್ರಿಸಿ ಡಿಸೆಂಬರ ತಿಂಗಳಲ್ಲಿ ಉಪನ್ಯಾಸ ಏರ್ಪಡಿಸಿದ್ದರು. ಅದರ ಫಲವೇ 'ಕನ್ನಡ ಮಾತು ತಲೆಯೆತ್ತುವ ಬಗೆ'

ಮೈಸೂರು
೧೫-೧-೧೯೨೮.

ಮಾ|| ರಾ. ಹ. ದೇಶಪಾಂಡೆಯವರ
ಸನ್ನಿಧಾನಕ್ಕೆ. ಸೇವಕ ಬಿ.ಎಂ.
ಶ್ರೀಕಂಠಯ್ಯನ ನಮಸ್ಕಾರ ಮುಟ್ಟಿ
ವಿಜ್ಞಾಪನೆಗಳು.

ತಮ್ಮ ಪತ್ರಿಕೆಯನ್ನು ನೋಡಿ ಬಹಳ ಸಂತೋಷವಾಯಿತು. ತಾವು ಇಟ್ಟ ಮೇಲ್ಪಂಕ್ತಿಯನ್ನನುಸರಿಸಿ ಕನ್ನಡದಲ್ಲಿಯೇ ಉತ್ತರ ಬರೆದಿರುತ್ತೇನೆ. ಉದ್ಯೋಗಕ್ಕಾಗಿ ಆಫೀಸು ಕಾಗದಗಳನ್ನು ಇಂಗ್ಲಿಷಿನಲ್ಲಿ ಬರೆಯುವುದೇ ಹೊರತು, ಮಿಕ್ಕ ಕಡೆ ನಮ್ಮ ತಾಯಿನುಡಿಯಲ್ಲಿಯೇ ವ್ಯವಹಾರ ಮಾಡುವುದರಲ್ಲಿ ನ್ಯಾಯವಿಲ್ಲದೆ ತಪ್ಪೇನಿರುವುದು?

ವಿಶ್ವವಿದ್ಯಾನಿಲಯದ ಸೂರಾಜದ ಗ್ರಂಥಗಳು ಕನ್ಯಾಕೇಟರ ವಶಕ್ಕೆ ಕಳುಹಿಸಿ ಅಲ್ಲಿಯೇ ವ್ಯಾಪಾರಕ್ಕೆ ಸಿಕ್ಕುತ್ತವೆ. ತಮ್ಮ ಪತ್ರಿಕೆಯ ಸೂಚನೆಯನ್ನು ಅವರಿಗೆ ತಿಳಿಸಿರುತ್ತೇನೆ. ತಾವೂ ಅವರೊಡನೆ ಪತ್ರಿಕೆಯನ್ನು ಬೆಳಸಿ ಏರ್ಪಾಡು ಮಾಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಅವರಲ್ಲಿ ಕಂಡು

ಈ ಪ್ರಸ್ತಾವವನ್ನು ಮಾಡುತ್ತೇನೆ.

ನಮ್ಮ ವಿಶ್ವವಿದ್ಯಾನಿಲಯವು ಕನ್ನಡನಾಡಿನ ಎಲ್ಲಾ ಭಾಗಗಳಿಗೂ ಸೇರಿರುತ್ತದೆ. ಇದಕ್ಕೆ ಯಾವ ಬೇರೆ ಕಾರಣದಿಂದ ನಿರ್ಬಂಧವಿಲ್ಲ.

ಕನ್ನಡ ಎಂ.ಎ ತರಗತಿಗೆ ಈ ವರ್ಷ ಹೈದರಾಬಾದ್ ಪ್ರಾಂತದ ವಿದ್ಯಾರ್ಥಿಯೊಬ್ಬರನ್ನು ಸೇರಿಸಿರುತ್ತದೆ. ತಮ್ಮ ಪ್ರಾಂತದಿಂದ ಯಾರು ಬಂದರೂ ನಾವು ಬಹಳ ಸಂತೋಷದಿಂದ ಬರಮಾಡಿಕೊಳ್ಳುವೆವು. ಮುಖ್ಯ ತಮ್ಮ ಕಡೆಯವರು ಇಲ್ಲಿಯೂ, ನಮ್ಮ ಕಡೆಯವರು ಅಲ್ಲಿಯೂ ಹೋಗಿ ಬರುತ್ತ ಇರಬೇಕು, ನಾವೆಲ್ಲರೂ ಒಬ್ಬ ಕನ್ನಡ ತಾಯಿಯ ಮಕ್ಕಳೆಂಬುದನ್ನು ನಿತ್ಯ ಕಾರ್ಯದಲ್ಲಿ ತೋರಬೇಕೆಂಬುದೇ ಸರ್ವರ ಪ್ರಾರ್ಥನೆಯಾಗಿರುತ್ತದೆ.

ಕನ್ನಡ ಪ್ರೀತಿಯ ವಿಷಯದಲ್ಲಿ ತಾವು ತೋರಿರುವ ಆದರಕ್ಕೆ ಕೃತಜ್ಞನಾಗಿದ್ದೇನೆ.

ಇತಿ ನಮಸ್ಕಾರಗಳು

ಬಿ. ಎಂ. ಶ್ರೀಕಂಠಯ್ಯ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಕನ್ನಡ ತರಗತಿಗಳು ಪ್ರಾರಂಭವಾದಾಗ ವಿದ್ಯಾವರ್ಧಕ ಸಂಘದ ಸಂಸ್ಥಾಪಕ ಕಾರ್ಯದರ್ಶಿ ರಾ. ಹ. ದೇಶಪಾಂಡೆ ಅವರಿಗೆ ಶ್ರೀ ಅವರು ೧೫-೧-೧೯೨೭ ರಂದು ಬರೆದ ಪತ್ರ

ಎಂಬ ಪ್ರಬಂಧ, ಹೀಗಾಗಿ ಧಾರವಾಡವೆಂದರೆ ಶ್ರೀಯುವರಿಗೆ ಅಚ್ಚು-ಮೆಚ್ಚು. ಶ್ರೀಯವರೆಂದರೆ ಧಾರವಾಡದವರಿಗೆ ತುಂಬ ಅಭಿಮಾನ ಗೌರವ...........ಅವರು ಅನಂತರವಲ್ಲೂ ಧಾರವಾಡಕ್ಕೆ ಅ-ಪರಿಚಿತರಾಗಿಯೇನೂ ಬರಲಿಲ್ಲ....

೧೯೪೪ ಜೂನ್‌ದಲ್ಲಿ ಧಾರವಾಡದಲ್ಲಿ ಕೆ. ಇ. ಬೋರ್ಡಿನ(ಕರ್ನಾಟಕ ಎಜ್ಯುಕೇಶನ್) ಆರ್ಟ್ಸ ಕಾಲೇಜ್ ಪ್ರಾರಂಭವಾಯಿತು. ಆಗ ಧಾರವಾಡದಲ್ಲಿ ೧೯೧೭ ರಲ್ಲಿ ಪ್ರಾರಂಭ ವಾಗಿದ್ದ ಕರ್ನಾಟಕ ಕಾಲೇಜ ಮಾತ್ರ ಇತ್ತು. ಅದು ಸರ್ಕಾರಿ ಕಾಲೇಜು. ಅದಕ್ಕೆ M.S.M. ರೈಲ್ವೆದವರ ಭವ್ಯವಾದ ಕಟ್ಟಡ. ಅಲ್ಲಿಯ ಪ್ರಾಧ್ಯಾಪಕರೆಲ್ಲ ಬಹುಮಟ್ಟಿಗೆ ತುಂಬಾ ಸೀನಿಯರ್ ಇದ್ದವರು. ಅವರಲ್ಲನೇಕರು ಆ ದಿವಸಗಳಲ್ಲಿ ಕಾರುಗಳನ್ನಿಟ್ಟು ಕೊಂಡು ಕಾಲೇಜಿಗೆ ಬರುವವರು.ಹೀಗಾಗಿ ಶ್ರೀಮಂತಿಕೆ ಆ ಕಾಲೇಜಿನಲ್ಲಿ ತುಂಬಿ ತುಳುಕು ತ್ತಿತ್ತು. ಇಂಥ ಸ್ಪಾನಿಶ್ ಆರ್ಮಡಾದ ಕೂಡ ಸ್ಪರ್ಧಿಸಬೇಕಾದರೆ ಚುಕ್ಕಾಣಿ ಹಿಡಿಯು ಬೇಕಾದ ಕಪ್ತಾನ ನಿಜವಾಗಿ ಗಟ್ಟಿಗನೇ ಆಗಿರಬೇಕು ಎಂದು ಆಡಳಿತ ಮಂಡಳ ನಿರ್ಧ ರಿಸಿತು. ಆ ಮೇರೆಗೆ, ಅವರು ಬೆಂಗಳೂರಿಗೆ ಹೋಗಿ ಶ್ರೀಯವರನ್ನು ವಿಜ್ಞಾಪಿಸಿದರು. ಇದರಲ್ಲಿ ನಿಟ್ಟೂರ ಶ್ರೀನಿವಾಸರಾಯರು, ಮಾಸ್ತಿಯವರು, ಎ. ಸೀ. ಯವರು ಸಂಪದ್ಗಿರಿರಾಯರು ಸಹಾಯ ಮಾಡಿದರೆಂದು ನಾನು ಕೇಳಿದ್ದೇನೆ, ತತ್ ಪರಿಣಾಮ ವಾಗಿ ಶ್ರೀಯವರು ಧಾರವಾಡಕ್ಕೆ ಈ ಸಲ ಅತಿಥಿಯಾಗಿ ಬರದೆ, ಯಜಮಾನರಾಗಿಯೇ ಬಂದರು. ೧೯೪೪ ರಲ್ಲಿ ನಾನು ಮುಂಬಯಿಯಲ್ಲಿ ಸಾಕಷ್ಟು ಮಟ್ಟಿನ ಒಳ್ಳೆಯ ಸರ್ಕಾರಿ ನೌಕರಿಯುಲ್ಲಿದ್ದೆ. ಇದು ಹೊಸ ಖಾಸಗಿ ಕಾಲೇಜು. ನನಗೆ ಇವರು ಕೊಡ ಮಾಡಿವ ಸಂಬಳ ನನಗೆ ಅಲ್ಲಿ ದೊರೆಯುತ್ತಿದ್ದ ಸಂಬಳದ ಕೇವಲ ಅರ್ಧದಷ್ಟು. ಆದರೂ ನಾನು ನನ್ನ ನಾಡಿನಲ್ಲಿ ಇರುತ್ತೇನೆ. ಶ್ರೀಯವರಂಥ ವಿದ್ವಾಂಸರ ಸಾನ್ನಿಧ್ಯ ದೊರಕುತ್ತದೆ ಎಂಬ ವಿಚಾರಗಳು ನಾನು ಧಾರವಾಡಕ್ಕೆ ಬರುವಂತೆ ಪ್ರೇರೇಪಿಸಿದವು. ನಾನು ಮುಂಬಯಿಯಿಂದ ಧಾರವಾಡಕ್ಕೆ ರೈಗಿನಲ್ಲಿ ಬರುವ ಉದ್ದಕ್ಕೂ ನಾನು ವಿದ್ಯಾರ್ಥಿಯಾಗಿದ್ದಾಗ ಓದಿದ್ದ ಶ್ರೀಯವರ ಸಾಲುಗಳೇ ನನ್ನ ತಲೆಯಲ್ಲಿ ನಿನದಿಸು ತ್ತಿದ್ದವು.

ವಸಂತ ಬಂದ, ಋತುಗಳ ರಾಜ ತಾ ಬಂದ; ಆಹ ಎಲ್ಲಡಗಿತೋ ಆರ್ಯ ಧರ್ಮದ ಕರುಣ, ಆರ್ಯ ಜನಗಳ ಮರುಕ ಉರಿಯುವನೆ ಬಲ್ಲ; ಭಾವಗಳು, ರಾಗಗಳು, ಬಗೆಬಗೆಯ ಭೋಗಗಳು, ಆವಾವುವಲೆಯುವವು ಮನುಜನೆದೆಯ, ಕಾಮರಾಯಂಗೆಲ್ಲ ಕುಲಪುರೋಹಿತರಾಗಿ ಹೋಮಾಗ್ನಿಯನು ಬೀಸಿ ಕೆರಳಿಸುವುವು; ಋತವೊಂದೆ ಗೆಲ್ಲುವುದು ಅನೃತವಲ್ತು, ಅಮೃತವೆನೆ ವಿದ್ಯೆಯೆ ಅವಿದ್ಯೆಯಲ್ತು; ವಿಶ್ವಭಾರತಿ ಶರಣು. ಕಿರು ತೀರ್ಥವಲ್ತು....ನಾನು ಧಾರವಾಡ ಮುಟ್ಟಿದೊಡನೆ ಯಾವಾಗ ಶ್ರೀಯವರನ್ನು ಕಂಡೇನೋ, ಅವರಿಗೆ ನನ್ನ ನಮನವನ್ನು ಸಲ್ಲಿಸಿ ಅವರ ಊಳಿಗದಲ್ಲಿ ಒಬ್ಬ ಕೆಲಸಗಾರ ನಾಗಿ ಸೇರುವ ಭಾಗ್ಯಕ್ಕಾಗಿ ತೃಪ್ತಿವ್ಯಕ್ತಪಡಿಸುವೆನೋ ಎಂಬ ತವಕ ನನಗೆ. ಆ ಮೇರೆಗೆ

ನಾನು ಅವರು ವಾಸಿಸುತ್ತಿದ್ದ ಬಂಗಲೆಗೆ ಹೋದೆ. ಅವರು ಆಗ ರೈಲ್ವೆ ನಿಲ್ದಾಣದ ಆಚೆಗಿದ್ದ ಪ್ಲೈವುಡ್ ಫ್ಯಾಕ್ಟರಿಯೆದುರಿಗಿನ ಭವ್ಯ ಬಂಗಲೆಯಲ್ಲಿ ಒಬ್ಬರೇ ವಾಸಿಸುತ್ತಿದ್ದರು. ಆಡಳಿತ ವರ್ಗ ಅವರಿಗೆ ಒಬ್ಬ ಸೇವಕ ಹಾಗೂ ಒಬ್ಬ ಅಡುಗೆಯವನನ್ನು ಕೊಟ್ಟಿದ್ದರು. ನಾನು ಊಹಿಸಿದ್ದ ಶ್ರೀ ಹಿಮಾಲಯ ಸದೃಶ ಗಂಭೀರ ವ್ಯಕ್ತಿ, ಯಾವಾಗಲೂ ಪಾಂಡಿತ್ಯವನ್ನೇ ಸಾರುವ ಮಾತುಗಾರಿಕೆ, ಭರ್ಜರಿ ಪೋಷಾಕಿನಲ್ಲಿರುವವರು ಎಂದು ಭಾವಿಸಿದ್ದೆ. ನಾನು ಅವರನ್ನು ಕಂಡಾಗ, ತೀರಾ ಸಾದಾ–ಸೀದಾ ವೇಷದಲ್ಲಿದ್ದ ಶ್ರೀಯವರು ಹೊರಬಂದರು. "ಓಹೋ! ನೀವೇನೇ ಧಾರವಾಡಕರರು. ಬಹಳ ಚೆನ್ನಾಯಿತು. ಇಂದೇ ರಿಪೋರ್ಟ್ ಮಾಡಿಬಿಡಿ; ನಾಳೆಯಿಂದ ಕೆಲಸ ಪ್ರಾರಂಭಿಸೋಣ" ಎಂದು ಹೇಳಿ ಇಪ್ಪತ್ತೈದು ವರ್ಷದ ಈ ಯುವಕನ ಕೈ ಕುಲುಕಿ, ಬೆನ್ನು ತಟ್ಟಿ, ಆಶೀರ್ವದಿಸಿ ಕಳಿಸಿದರು. ನಾನೂ ನಮಸ್ಕರಿಸಿ ಬಂದೆ. ಮರುದಿವಸವಾದರೂ ಶ್ರೀಯವರು ಕಾಲೇಜಿಗೆ ಬರುವಾಗ, ತಮ್ಮ ಭರ್ಜರಿ ಸೂಟಿನಲ್ಲಿ ಬರುವರೆಂದು ನಾನು ಭಾವಿಸಿದ್ದೆ. ಆದರೆ ಅವರು ಪುನಃ ಸಾದಾ ವೇಷದಲ್ಲಿಯೇ ಬಂದರು. ದೊಡ್ಡ ಅಂಚಿನ ಕಚ್ಚೆ ಧೋತರ, ಕ್ಲೋಸ್‌ಕಾಲರ್ ಕೋಟು, ಮೇಲೊಂದು ದಪ್ಪ ಕಂಬಳಿ ಟೊಪ್ಪಿಗೆ–ಕಂದು ಬಣ್ಣದ್ದು. ನಾವು ಈವರೆಗೆ ನೋಡಿದ್ದ ಪ್ರೊಫೆಸರ್ ಪ್ರಿನ್ಸಿಪಾಲರಿಗೂ ಶ್ರೀಯವರಿಗೂ ಅಜಗಜಾಂತರ! ಆದರೆ ಅವರು ಒಮ್ಮೆ ಮಾತು ಸುರು ಮಾಡಿದರೆಂದರೆ ಸಾಕು; ಅನೂನ ಗಂಗಾ ಪ್ರವಾಹ ಧುಮ್ಮಿಕ್ಕುತ್ತಿತ್ತು.

ನನ್ನ ಸುದೈವ, ಶ್ರೀಯವರು ಇಂಗ್ಲಿಷ್ ಕಲಿಸುತ್ತಿದ್ದರು. ನನ್ನ ಪಾಲಿಗೆ ಕನ್ನಡ ಮತ್ತು ಇಂಗ್ಲಿಷ್ ಬಂದವು. ಅವರು ಪ್ರಥಮ ವರ್ಷದಲ್ಲಿ ಪೊಯೆಟ್ರಿ ಸಿಲೆಕ್ಷನ್ಸ ಕಲಿಸಿದರೆ, ನಾನು ಮೆಕಾಲೆ ಬರೆದ ಜಾನ್ಸನ್ ಮತ್ತು ಗೋಲ್ಡ್‌ಸ್ಮಿತ್‌ರ ಜೀವನಗಳನ್ನು ಕಲಿಸುತ್ತಿದ್ದೆ. ನನ್ನ ಕಲಿಸುವಿಕೆಯನ್ನೂ ವಿದ್ಯಾರ್ಥಿಗಳು ತುಂಬಾ ಮೆಚ್ಚಿದರು. ಇದರಿಂದ ಶ್ರೀಯವರು ತುಂಬಾ ಅಭಿಮಾನ ಪಟ್ಟುಕೊಂಡರು. ಮರುವರ್ಷ ಅವರು ಮಿಲ್ಟನ್‌ನ ಪ್ಯಾರಡೈಸ ಲಾಸ್ಟ ಕಲಿಸುತ್ತಿದ್ದರು. ನಾನು ಬರ್ಕನ ಅಮೇರಿಕನ್ ಟ್ಯಾಕ್ಸೇಶನ್ ಕಲಿಸುತ್ತಿದ್ದೆ. ನನ್ನ ಪರಿಶ್ರಮವನ್ನು ಮೆಚ್ಚಿಕೊಂಡ ಶ್ರೀಯವರು ನನ್ನನ್ನು ಕಾಲೇಜ ಯೂನಿಯನ್‌ದ ಕಾರ್ಯಾಧ್ಯಕ್ಷನನ್ನಾಗಿ ಮಾಡಿದರು. ಹೀಗಾಗಿ,ಅವರ ಸಂಪರ್ಕ ಇನ್ನೂ ಹೆಚ್ಚು ನಿಕಟವಾಯಿತು.ಆದರೂ ಅವರು ಕಾಲಕಾಲಕ್ಕೆ ಅಭ್ಯಾಸ–ಪರಿಶ್ರಮಗಳ ಮಹತ್ವವನ್ನು ನನಗೆ ಸೂಚಿಸದೆ ಹೋಗಲಿಲ್ಲ.ಶ್ರೀಯವರು ಮಿಲ್ಟನ್‌ನನ್ನು ನೀರು ಕುಡಿದ ಹಾಗೆ ಕುಡಿದಿರಬಹುದು. ಪ್ಯಾರಡೈಸ ಲಾಸ್ಟ ಸಾವಿರಸಲ ಕಲಿಸಿರಬಹುದು.ಆದರೂ ಪ್ರತಿಸಲ ಅವರು ಅಷ್ಟೇ ತಯಾರಿ ಮಾಡಿ ಕ್ಲಾಸಿಗೆ ಹೋಗುತ್ತಿದ್ದರು. ಒಂದು ಸಲ ನಾನು ಅವರ ಕೈಯಲ್ಲಿ ಪ್ಯಾರಡೈಸ ಲಾಸ್ಟ ಪುಸ್ತಕ ಹಾಗೂ ಇನ್ನೊಂದು ಕೆಂಪು ಬೈಂಡಿನ ಪುಸ್ತಕ ನೋಡಿದೆ. ನನಗೆ ಆ ಇನ್ನೊಂದು ಪುಸ್ತಕ ಯಾವುದೆಂಬುದರ ಬಗ್ಗೆ ಕುತೂಹಲ. ಅದಕ್ಕಾಗಿ ಶ್ರೀಯವರನ್ನು ಕೇಳಿದೆ "ಸರ್, ಇದಂತೂ ಪಠ್ಯ ಪುಸ್ತಕವಾಯಿತು

ಇನ್ನೊಂದು ಪುಸ್ತಕ ಯಾವುದು?" ಎಂದೆ, ಆಗ ಅವರು "ಅದು Raleigh on Milton. I have read it 200 times and I am reading it again to get the proper inspiration. I never go to class without reading Raleigh again." ಎಂದು ಹೇಳಿದರು. ನನಗೆ ಎದೆ ಝಲ್ಲೆಂದಿತು. ಶ್ರೀಕಂಠಯ್ಯನವರಂಥ ಪ್ರಕಾಂಡ ಪಂಡಿತರು, ಇಡೀ ಇಂಗ್ಲಿಷ್ ಸಾಹಿತ್ಯವನ್ನು ಅರಗಿಸಿ ಕುಡಿದವರು; ಒಂದು ಚಿಕ್ಕ ಇಂಟರಮೀಡಿಯೇಟ್ ಕ್ಲಾಸಿಗೆ ಕಲಿಸಲು ಹೋಗಬೇಕಾದರೆ ಎರಡನೂರಾ ಒಂದನೆಯ ಸಲ ಓದುತ್ತಾರಲ್ಲ! ಅಂದಮೇಲೆ ನಮ್ಮಂಥವರು ಎಷ್ಟು ಮಾರ್ಗವನ್ನು ಕ್ರಮಿಸಬೇಕು? ಇದು ನನ್ನನ್ನು ಯಾವಾಗಲೂ ಅಭ್ಯಾಸಪ್ರವೃತ್ತನನ್ನಾಗಿ ಮಾಡಿತು.

ಶ್ರೀಕಂಠಯ್ಯನವರ ಕಲಿಸುವ ಪದ್ಧತಿಯೂ ಅಂಥದೇ. ಆಗ ಉತ್ತರ ಕರ್ನಾಟಕದ ಕಾಲೇಜುಗಳಲ್ಲಿ ಇಂಗ್ಲಿಷ್ ಭಾಷೆಯ ದಿಗ್ಗಜಗಳಿದ್ದರು. ಕೆ. ಇ. ಬೋರ್ಡ ದಲ್ಲಿ ಬಿ. ಎಂ. ಶ್ರೀ. ಕರ್ನಾಟಕ ಕಾಲೇಜಿನಲ್ಲಿ ಪ್ರೊ. ಕೋರಿಯಾ ಅಫೋನ್ಸೊ, ಬಾಗಿಲುಕೋಟೆಯಲ್ಲಿ ಡಾ. ಕೆ. ಆರ್. ಶ್ರೀನಿವಾಸ ಅಯ್ಯಂಗಾರ, ವಿಜಾಪುರದಲ್ಲಿ ಪ್ರಿನ್ಸಿಪಾಲ್ ಭೂಷನ್.ಧನಿಯ ಮೇಲೆ ಧನಿ, ಒಬ್ಬರಕಿಂತ ಒಬ್ಬರು ಮಿಗಿಲು,ಪ್ರಕಾಂಡ ಪಂಡಿತರು! ಶ್ರೀಯವರು ಪರೀಕ್ಷೆಗಾಗಿ ಅಷ್ಟು ಮಹತ್ವ ಕೊಡುತ್ತಿದ್ದಿಲ್ಲ. ಅವರ ಮೇರೆಗೆ ಜ್ಞಾನ ಮುಖ್ಯ. ಯಾವುದೋ ಒಂದು ಸಂದರ್ಭ ಬಂದರೆ, ಭಾರತೀಯ ಪುರಾಣ ಗಳು, ಗ್ರೀಕ ಐತಿಹ್ಯಗಳು,ರೋಮನ್ ಕಥಾನಕಗಳು, ಇವುಗಳ ನಡುವಿನ ಸಾಮ್ಯವನ್ನು ವಿಶ್ಲೇಷಿಸಿ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಜ್ಞಾನದಾಹ ಕುದುರುವಂತೆ ಮಾಡುವರು. ಒಂದೊಂದು ಸಲ ಏನೂ ಮಹತ್ವವಿಲ್ಲದ ಚಿಕ್ಕ ಕವನವೆಂದು ಕಂಡುಬಂದ ಕವನದ ಬಗ್ಗೆ ಗಂಟೆಗಟ್ಟಲೆ ಹೇಳುವರು. ಅವರು ಯಾವುದೋ ಒಂದು ಚಿಕ್ಕ ಕವನದಲ್ಲಿಯ He took out the souls from his pocket ಎಂಬುದನ್ನು ಗಂ-ಭೀ-ರ-ವಾ-ಗಿ ಸಾಭಿನಯವಾಗಿ ಹೇಳಿದ ರೀತಿಯನ್ನು ಅವರ ಅಂದಿನ ವಿದ್ಯಾರ್ಥಿ ಗಳು ಇಂದಿಗೂ ನೆನೆಯುತ್ತಾರೆ. ಹೀಗಾಗಿ ಶ್ರೀಯವರು ವರ್ಗಗಳಲ್ಲಿ ಪರೀಕ್ಷಾ ವಿದ್ಯಾರ್ಥಿಗಳನ್ನು ಸಿದ್ಧಪಡಿಸಿದಷ್ಟೆ–ಅಥವಾ ಅದಕ್ಕೂ ಹೆಚ್ಚು–ಕವಿಗಳನ್ನು, ಲೇಖಕರನ್ನು, ವಿಮರ್ಶಕರನ್ನು ನಿರ್ಮಿಸಿದರು. ಮಿಡ್ ಸಮರ ನೈಟ್ಸ ಡ್ರೀಮ್ ಕಲಿಸು ವಾಗ ಇಂಗ್ಲಿಷ್ ಪ್ರವಚನದ ಜೊತೆಗೆ ಕನ್ನಡ ನಾಟಕಾಭಿನಯವೂ ನಡೆಯುತ್ತಿತ್ತು. ಇಂದು ಖ್ಯಾತನಾಮ ಸಾಹಿತಿಗಳಾಗಿರುವ ಕೀರ್ತಿನಾಥ ಕುರ್ತಕೋಟಿ, ಶಂಕರ ಮೊಕಾಶಿ ಪುಣೇಕರ ಮೊದಲಾದವರೆಲ್ಲ ಆಗ ಶ್ರೀಯವರ ಪದತಲದಲ್ಲಿ ವಿದ್ಯಾರ್ಥಿ ಗಳಾಗಿ ಬೆಂಚಿನ ಮೇಲೆ ಕುಳಿತು ಅವರಿಂದ ಸೃಜನಾತ್ಮಕ ಸಾಹಿತ್ಯದ ಸ್ಫೂರ್ತಿಯನ್ನು ಪಡೆದವರು.

ಶ್ರೀ ಬರಿಯ ಪದ್ಯಗಳ ಬಗ್ಗೆ ಮಾತ್ರ ಹೇಳುತ್ತಿರಲಿಲ್ಲ. ವಿದ್ಯಾರ್ಥಿಗಳಿಗೆ ಆ ಆ

ಕವಿಗಳ ಸಮಗ್ರ ಸಾಹಿತ್ಯ ಹಾಗೂ ಜೀವನಗಳ ನಿಕಟ ಪರಿಚಯವಾಗಬೇಕೆಂದು ವರ್ಗಗಳ ಅವಧಿ ಮುಗಿದ ಮೇಲೆ ಸೆಮಿನಾರುಗಳನ್ನು ನಡೆಸುವರು. ಅವರಿಗೆ ಹೆಚ್ಚಿಗೆ ಓದಲು ಪುಸ್ತಕಗಳನ್ನು ಒದಗಿಸಿ ಕೊಡುವರು. ಆಂಗ್ಲ ಮತ್ತು ಐರೋಪ್ಯ ಸಾಹಿತ್ಯದ ಜೊತೆಗೆ ಭಾರತೀಯ ವೇದಗಳ ತುಲನೆ ಮಾಡಿ ಹೇಳಿ ಮಾತರಿಶ್ವನ್ ಮೊದಲಾದವರ ಬಗ್ಗೆ ವಿವರಗಳನ್ನು ಕೊಡುವರು.

ಶ್ರೀಯವರು ಬರಿಯ ಮೇಷ್ಟರಲ್ಲ. He was a poet and cause of poetry that was in others. ಅವರು ಸ್ವತಃ ಕವಿಗಳಾಗಿದ್ದರು. ಅನೇಕ ಕವಿಗಳ ನಿರ್ಮಾಪಕರಾಗಿದ್ದರು. ನನಗೊಂದು ಘಟನೆ ಇಂದಿಗೂ ಜ್ಞಾಪಕಕ್ಕೆ ಬರುತ್ತದೆ. ಅವರು ಹಾಕಿಕೊಟ್ಟ ಮಾರ್ಗವನ್ನೇ ನಾನೂ ಅನುಸರಿಸಲು ಅನೇಕ ಸಲ ಯತ್ನಿಸಿದ್ದೇನೆ. ಶ್ರೀಯವರು ಕೆ. ಇ. ಬೋರ್ಡಿನಲ್ಲಿದ್ದಾಗ ಒಬ್ಬ ವಿದ್ಯಾರ್ಥಿ ಇಂಗ್ಲಿಷ್ ಭಾಷೆಯಲ್ಲಿ ಕವನಗಳನ್ನು ಬರೆಯುತ್ತಿದ್ದ. ಅವನ್ನು ಅವನು ನನಗೂ ಕೊಟ್ಟಿದ್ದ. ಆ ಪದ್ಯಗಳಲ್ಲಿ ಪ್ರಾಸವೇನೋ ಇರುತ್ತಿತ್ತು. ಆದರೆ ಭಾವ, ರಸ ಕಾಣುತ್ತಿರಲಿಲ್ಲ. ಆ ವಿದ್ಯಾರ್ಥಿ ತನ್ನ 'ಕವನ' ಗಳನ್ನು ಶ್ರೀಯವರಿಗೂ ತೋರಿಸಿದ. ಆಗ ನಾನೂ ಎದುರಿನಲ್ಲಿದ್ದೆ, ಶ್ರೀಯವರು ಏನೋ ಒಬ್ಬ ದೊಡ್ಡ ಕವಿಯ ಕವನಗಳನ್ನು ಓದುವವರ ಹಾಗೆ ಅವನ ಎಲ್ಲ ಕವನಗಳನ್ನು ಚಾ—ಚೂ ಬಿಡದೆ ಓದಿ "ಪರವಾ ಇಲ್ಲ; They are very fine, You keep it up. You have a very good promise" ಎಂದು ಹೇಳಿ ಅವನ ಬೆನ್ನು ತಟ್ಟಿ ಕಳಿಸಿದರು. ಆ ವಿದ್ಯಾರ್ಥಿ ಹೋದ ಮೇಲೆ ನಾನು ಸಹಜವಾಗಿ ಕೇಳಿದೆ. "ಸರ್ ನಿಜವಾಗಿಯೂ ಆ ಕವನಗಳು ಅಷ್ಟು ಒಳ್ಳೆಯವಿದ್ದವೆ? ಅವ ನನಗೂ ತೋರಿಸಿದ್ದ: ಯಾಕೋ ಅವು ನನ್ನ ಮನಸ್ಸನ್ನು ಹಿಡಿದಿರಲಿಲ್ಲ. ನೀವು ತುಂಬಾ ವರ್ಣಿಸಿ ಬಿಟ್ಟಿರಲ್ಲ." ಎಂದೆ. ಆಗ ಶ್ರೀಯವರು "ಇಲ್ಲಿ ನೋಡಿ ಧಾರವಾಡಕರ್, ನಿಮಗೊಂದು ಮಾತು ಹೇಳುತ್ತೇನೆ. ಬರೆಯುವವರ ಬಗ್ಗೆ ನಾವು ಕೆಟ್ಟ ಮಾತನ್ನು ಆಡಬಾರದು: ನಾಲ್ಕು ಒಳ್ಳೆಯ ಮಾತನ್ನು ಆಡೋಣ. ಆ ವ್ಯಕ್ತಿಯಲ್ಲಿ ನಿಜವಾದ ಅಂತಸ್ಸತ್ವವಿದ್ದರೆ, ಅವ ಪ್ರಯತ್ನ ಮುಂದುವರೆಸಿ ಹೆಚ್ಚೆಚ್ಚು ಬರೆಯುತ್ತಾನೆ, ಇಲ್ಲವಾದರೆ ಅಲ್ಲಿಯೇ ಕಮರಿ ಹೋಗುತ್ತಾನೆ. ಹುಟ್ಟಿದ ಮಗುವಿನ ಜಾತಕ ಬರೆ ಅಂದರೆ ನಾವು ಮರಣ ದಿವಸವನ್ನೇ ಹೇಳುವುದೆ? ಮಗು ಬದುಕಲಿ, ಬೆಳೆಯಲಿ, ದೇವರ ಕೃಪೆ ಇದ್ದರೆ ಘನವಂತನಾದೀತು" ಎಂದು ಹೇಳಿದರು. ಎಂಥ ಅನೋಘ ಉಕ್ತಿಗಳಿವು. ಯಾರಾದರೂ ಸಾಯುವವರಾದರೆ, ಅವರು ನಮ್ಮ ಕೈಯಿಂದೇಕೆ ಸಾಯಬೇಕು? ಸತ್ವವಿದ್ದ ಬೀಜ ಎಂಥ ಕಂಟಿಯಲ್ಲಿ ಬಿದ್ದರೂ ಫಲಿಸುತ್ತದೆ. ಯಾರೋ ತಮ್ಮ ಕವಿತೆಗಳನ್ನು ಒಬ್ಬ ಮಹಾಕವಿಗೆ ತೋರಿಸಿದಾಗ, ಅವರು ಹೇಳಿದರಂತೆ "ಏನೂ ಪರವಾ ಇಲ್ಲ. ಹೀಗೇ ಕವಿತೆ ಬರೆಯುತ್ತ ಹೋಗು, ನೀನು ಬರೆದಂತೆ ನಿನ್ನ ಗದ್ಯವಾದರೂ ಸುಧಾರಿಸುತ್ತದೆ" ಈ ಮಾತಿಗೂ ಶ್ರೀಯವರ ಮಾತಿಗೂ ಎಷ್ಟು ಅಂತರ....

ಆಡಳಿತ ವರ್ಗದವರು ಶ್ರೀಯವರ ವಾಸ್ತವ್ಯಕ್ಕಾಗಿ ಊರ ಹೊರಗಿನ ಭವ್ಯವಾದ ಬಂಗಲೆಯನ್ನು ಕೊಟ್ಟಿದ್ದರೆಂದು ಹೇಳಿದೆನಷ್ಟೆ. ಅದು ಅವರು ಕಲಿಸುವ ಕಾಲೇಜಿನಿಂದ ಸುಮಾರು 2-2-½ ಮೈಲಿ ದೂರದಲ್ಲಿ ರೇಲ್ವೆ ಸ್ಟೇಶನದ ಹತ್ತಿರ ಇತ್ತು. ಶ್ರೀ ದಿನಾಲು ಟಾಂಗಾದಲ್ಲಿ ಮದಿಹಾಳದಲ್ಲಿದ್ದ ಕಾಲೇಜಿಗೆ ಬಂದು, ಟಾಂಗಾದಲ್ಲಿ ಮರಳಿ ಹೋಗುತ್ತಿದ್ದರು. ಈ ವ್ಯವಸ್ಥೆ ಅವರಿಗೆ ಸರಿ ಕಾಣಲಿಲ್ಲ, **ಒಂದು**, ಇದು ಕಾಲ ಮತ್ತು ಹಣದ ಅಪವ್ಯಯ. **ಎರಡು** ಅವರಿಗೆ ತಮ್ಮ ಕಾಲೇಜಿನ, ತಮ್ಮ ವಿದ್ಯಾರ್ಥಿಗಳ ಪರಿಸರದಲ್ಲಿಯೇ ಇರಬೇಕೆಂಬ ಅಪೇಕ್ಷೆ. ಆದಕ್ಕಾಗಿ ಕಾಲೇಜ ಆವಾರದಲ್ಲಿಯೇ ಇದ್ದ ಒಂದು ವಿಭಾಗವನ್ನು ತಮ್ಮ ವಾಸ್ತವ್ಯಕ್ಕಾಗಿ ಏರ್ಪಡಿಸಿದರೆ, ಅನು-ಕೂಲವಾಗುತ್ತದೆಂದು ಸೂಚಿಸಿದರು. ಆ ರೀತಿ ಆಡಳಿತವರ್ಗ ಸಮರ್ಪಕವಾಗಿಯೇ ಬದಲಾವಣೆಯನ್ನು ಮಾಡಿ ಶ್ರೀಯವರ ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಟ್ಟಿತು. ಸಾಮಾನ್ಯವಾಗಿ, ತಮ್ಮ ಪಾಠ ಮುಗಿದ ಮೇಲೆ ಅವರು ಇಪ್ಪತ್ತು ಅಡಿಯಲ್ಲಿದ್ದ ತಮ್ಮ ಮನೆಗೇ ಹೋಗಿ ಅಲ್ಲಿ ಪುನಃ ತಮ್ಮ ವ್ಯಾಸಂಗದಲ್ಲಿ ನಿರತರಾಗಿರುತ್ತಿದ್ದರು. ಸಾಯಂಕಾಲ, ಕಾಲೇಜಿನ ವಿಶಾಲವಾದ ಆಟದ ಮೈದಾನದಲ್ಲಿ ವಾಕ್ ಮಾಡುತ್ತಿದ್ದರು. ಇಲ್ಲವೆ, ಆಗ ಬರುತ್ತಿದ್ದ ಮೈಸೂರು ವಿಶ್ವವಿದ್ಯಾನಿಲಯದ ನಿಘಂಟುವಿನ (?) ಪ್ರೂಫುಗಳನ್ನು ಪರಿಶೀಲಿಸುವುದರಲ್ಲಿ ನಿರತರಾಗಿರುತ್ತಿದ್ದರು. ಶ್ರೀಯವರ 'ಶಿಲಪ್ಪದಿಕಾರಂ' ನ ಭಾಷಾಂತರ ಕನ್ನಡ ನಾಡಿನ ದುರದೃಷ್ಟದಿಂದ ಗೆದ್ದಲು ತಿಂದೋ, ಅರಿಯದವರು ಒಲೆಗೆ ಹಾಕಿಯೋ, ಧಾರವಾಡದಲ್ಲಿದ್ದಾಗ ನಷ್ಟವಾದುವು" ಎಂದು ವಿ.ಸೀ. ಯವರು ಹೇಳುತ್ತಾರೆ. (ಶ್ರೀ ಸಾಹಿತ್ಯ ಪುಟ-೪೭.) ಇದರ ಬಗ್ಗೆ ಮಾತ್ರ ಶ್ರೀಯವರು ನಮ್ಮ ಯಾರ ಎದುರು ಏನೂ ಮಾತನಾಡಿರಲಿಲ್ಲ.

ಶ್ರೀಯವರಿಂದ ಆಶೀರ್ವಾದ ಪಡೆದ ಅನೇಕ ಯುವಕರು ಇಂದು ಒಳ್ಳೆಯ ಹೆಸರನ್ನು ಮಾಡಿಕೊಂಡಿದ್ದಾರೆ. ಶ್ರೀ ಕೀರ್ತಿನಾಥ ಕುರ್ತಕೋಟಿ ಹಾಗೂ ಶ್ರೀ ಶಂಕರ ಮೊಕಾಶಿ ಪುಣೇಕರ ಬಗ್ಗೆ ಈಗಾಗಲೇ ಹೇಳಿದ್ದೇನೆ. ೧೯೪೫ ರಲ್ಲಿ ಎಂದು ಕಾಣುತ್ತದೆ. ಧಾರವಾಡದ ಸಾತ್ವಿಕ ಕವಿ ಶ್ರೀ ಸಾಲಿ ರಾಮಚಂದ್ರರಾಯರು, ಕೆ.ಇ. ಬೋರ್ಡಿನಿಂದ ನಿವೃತ್ತರಾದರು. ಅದೇ ವರ್ಷ ಒಬ್ಬ ಯುವ ವಿದ್ಯಾರ್ಥಿ, ಮುಂಬಯಿ ವಿಶ್ವವಿದ್ಯಾಲಯದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ರ್‍ಯಾಂಕ ಬಂದಿದ್ದು, ಈ ವಿದ್ಯಾರ್ಥಿಯ ಸತ್ಕಾರ ಹಾಗೂ ಸಾ.ರಾ. ಅವರ ಬೀಳ್ಕೊಡುಗೆ ಎರಡನ್ನೂ ಕಲೆಹಾಕಿ ಕೆ.ಇ. ಬೋರ್ಡದವರು ಒಂದು ಸಮಾರಂಭವನ್ನು ಹಮ್ಮಿದ್ದರು. ಶ್ರೀಯವರು ಸಭಾಧ್ಯಕ್ಷರು. ನಾನು ಮಾತುಗಾರರಲ್ಲಿ ಒಬ್ಬ. ನಾನು ಸಾಲಿಯವರ ಬಗ್ಗೆ ಮಾತಾಡಬೇಕಿತ್ತು "ಸಾಲಿಯವರ ಶೈಲಿ, ಶೆಲ್ಲಿಯ ಶೈಲಿ" ಎಂದು ಏನೇನೋ ಪಾಂಡಿತ್ಯ ಪೂರ್ಣವಾಗಿ ಮಾತಾಡಿದ ನೆನಪು ನನಗಿದೆ. ಶ್ರೀಯವರು ಸಾಲಿಯವರ ಬಗ್ಗೆ ಮಾತನಾಡಿ ರ್‍ಯಾಂಕ ಬಂದಿದ್ದ ಯುವ ವಿದ್ಯಾರ್ಥಿಯನ್ನು ಕುರಿತು" "ಮಗೂ ನಿನಗೆ ಉಜ್ವಲವಾದ

ಭವಿಷ್ಯವಿದೆ. ನೀನು ಹೀಗೆಯೇ, ನಿನ್ನ ಪ್ರಯತ್ನವನ್ನು ಮುಂದುವರಿಸು.ದೇವರು ನಿನಗೆ ಕಲ್ಯಾಣ ಮಾಡುತ್ತಾರೆ." ಎಂದು ಅವನ ಮೈದಡವಿ ಅವನನ್ನು ಆಶೀರ್ವದಿಸಿದರು. ಹೀಗೆ ಶ್ರೀಯವರಿಂದ ಆಶೀರ್ವಾದ ಹೊಂದಿದ ಯುವ ವಿದ್ಯಾರ್ಥಿಯೇ ಇಂದು ಕೊಲ್ಲಾಪುರ ಶಿವಾಜಿ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ ಪ್ರಾಧ್ಯಾಪಕರಾಗಿರುವ ಖ್ಯಾತ ಸಾಹಿತಿ ಶ್ರೀ ಶಾಂತಿನಾಥ ದೇಸಾಯಿ ಅವರು. ಶ್ರೀಯವರ ಆಶೀರ್ವಾದ ಎಂದಿಗೂ ಹುಸಿ ಹೋಗುತ್ತಿರಲಿಲ್ಲ.

ನಾವು ಕಾಲೇಜಿನಲ್ಲಿ ಅನೇಕ ಸಂಘಗಳನ್ನು ಪ್ರಾರಂಭಿಸಿದಂತೆ, ಕನ್ನಡಕ್ಕಾಗಿ ಆಗ ತುಂಬಾ ಪ್ರಚಲಿತವಿರುವ 'ಕರ್ನಾಟಕ ಸಂಘ' ಎಂಬ ಹೆಸರಿನ ಸಂಘವನ್ನು ಪ್ರಾರಂಭಿಸಿದೆವು. ಶ್ರೀಯವರಿಗೆ ಈ ಹೆಸರು ಮನಸ್ಸಿಗೆ ಬರಲಿಲ್ಲ. ಅಕಾಡೆಮಿಕ್ ಇರುವ ಪ್ರತಿಯೊಂದು ವಿಷಯದ ವಿವರದಲ್ಲಿಯೂ ಅವರು ಮನಸ್ಸು ಹಾಕುತ್ತಿದ್ದರು. ಕರ್ನಾಟಕದ ಧಾರವಾಡದಲ್ಲಿ ಕರ್ನಾಟಕ ಸಂಘವೆಂದರೇನು? ಮಹಾರಾಷ್ಟ್ರದಲ್ಲಿ, ಆಂಧ್ರ ಪ್ರದೇಶದಲ್ಲಿ ತಮಿಳುನಾಡಿನಲ್ಲಿ, ಕರ್ನಾಟಕ ಹೆಸರಿನಲ್ಲಿ ಸಂಘ ಸರಿ. ಅದನ್ನು ಬಿಟ್ಟು ಇಲ್ಲಿ ಕರ್ನಾಟಕದ ಬಗ್ಗೆ ನಾವೇನು ಮಾಡುವದಿದೆ? ಆದ್ದರಿಂದ ಸಾಂಸ್ಕೃತಿಕ ಕರ್ನಾಟಕ ಹಾಗೂ ಭಾಷಿಕ–ಸಾಹಿತ್ಯಕ ಕನ್ನಡವನ್ನೊಳಗೊಂಡ ಒಂದು ಸಮ ಮನಸ್ಕರ ತಂಡವನ್ನು ಕಟ್ಟೋಣ. ಅದು ಒಂದು ಮನೆತನ ಇದ್ದ ಹಾಗೆ ಇರಲಿ. ಅವರೆಲ್ಲ ಅಣ್ಣ ತಮ್ಮಂದಿರು. ಅದಕ್ಕಾಗಿ 'ಕರ್ನಾಟಕ ಸಂಘ' ಅನ್ನುವದಕ್ಕಿಂತ 'ಕನ್ನಡ ಬಳಗ' ಎಂದು ಹೆಸರಿಟ್ಟರೆ, ಒಳ್ಳೆಯದಲ್ಲವೇ? ಎಂದು ನಿರ್ಧಾರವನ್ನು ನಮಗೆ ಬಿಟ್ಟರು. ಅವರ ಮಾತಿನ ಹಿಂದಿನ ತರ್ಕ ಹಾಗೂ ಭಾವನೆ ನಮಗೆ ಸರಿಯೆನ್ನಿಸಿದವು. ಹೀಗಾಗಿ ಕಾಲೇಜಿನಲ್ಲಿ 'ಕನ್ನಡ ಬಳಗ' ಪ್ರಾರಂಭವಾಯಿತು. ಕನ್ನಡ ಸ್ಫೂರ್ತಿಯಿಂದ ಅನೇಕ ವಿದ್ಯಾರ್ಥಿಗಳು ದೀಪ್ತರಾದರು.

ಶ್ರೀಯವರು ಕೂಡ ಮಾತಾಡಿದಾಗ ಒಂದು ಸಲ ಏನೋ ವ್ಯಾಕರಣದ ಮಾತು ಬಂತು. ಬಹುಶಃ ಇನಾಗಮದ ಬಗ್ಗೆ ಎಂದು ಕಾಣುತ್ತದೆ. ನಾನು ಎಲ್ಲೆಲ್ಲಿ ಇನಾಗಮ ಬರಬೇಕು. ಎಲ್ಲಿ ಐಚ್ಛಿಕ ಎಂಬುದನ್ನು ಹೇಳಿ "ಉಳಿದೆಡೆಗೆ ಇನಾಗಮಂ ದೋಷ ಕರಮ್" ಎಂದು 'ಸಾರಿದೆ'. ಶ್ರೀಯವರು ಮುಗುಳು ನಗೆ ನಕ್ಕು "ಪರವಾ ಇಲ್ಲ. ಈ ವ್ಯಾಕರಣ ನಮ್ಮ ಜನಕ್ಕೆಲ್ಲ ಗೊತ್ತಾಗಲಿ. ಇದು ನಿಮ್ಮಂಥವರು ಮಾಡಲೇಬೇಕಾದ ಕೆಲಸ" ಎಂದರು. ನನಗೆ ನನ್ನ ಸ್ವಯಂಮಾನ್ಯ ಪಾಂಡಿತ್ಯದ ಮಂಪರಿನಿಂದ ಆಗ ಎಚ್ಚರ. ಶ್ರೀಯವರಂಥ ಪಂಡಿತರೆದುರು ನಾನೆಲ್ಲಿಯ ಹಾರು ಗುಬ್ಬಿ. ನಾನು ನನ್ನನ್ನ ತಿದ್ದಿಕೊಂಡು "ಅಲ್ಲ ಸಾರ್ ತಮ್ಮ ನೇತೃತ್ವದಲ್ಲಿ ನಾನು ಬಹಳ ಕಲಿಯು ಬೇಕಾಗಿದೆ. ವ್ಯಾಕರಣವನ್ನು ಸಹ" ಅಂದೆ. ಆಗ ಅವರು "ಪರವಾ ಇಲ್ಲ. ನಾನೂ ಕನ್ನಡಕ್ಕಾಗಿ ಕೆಲಸ ಮಾಡಿದ್ದೇನೆ. ಆದರೆ ನನ್ನದು Left handed work: ಎಡಗೈ ಕೆಲಸ. ಕನ್ನಡ ನನ್ನ ಪ್ರಥಮ ಭಾಷೆಯಾಗಿರಲಿಲ್ಲ. ನಿಮಗೆ ಆ ಅನುಕೂಲ

ಇದೆ. ನೀವು ಮಾಡಿರಿ" ಎಂದರು. ಯುವಕರಿಗೆ ಶ್ರೀಯವರು ಉತ್ತೇಜನ ಕೊಡುತ್ತಿದ್ದ ರೀತಿ ಇದು.

ಕರ್ನಾಟಕ ಏಕೀಕರಣ, ಸಮಸ್ತ ಕನ್ನಡಿಗರ ಭಾವೈಕ್ಯ–ಇವು ಶ್ರೀಯವರ ಜೀವನದುಸಿರಾಗಿದ್ದವು. ಹರಿಹರದ ಬಳಿಯ ಸೇತುವೆ ಬರಿಯ ಸಿಮೆಂಟ ಕಾಂಕ್ರಿಟಿನ ಸೇತುವೆಯಾಗದೆ ಉತ್ತರ ಮತ್ತು ಮೈಸೂರು ಕನ್ನಡಿಗರ ಹೃದಯವನ್ನು ಬೆಸೆಯುವ ಭಾವನಾತ್ಮಕ ಬಂಧನವಾಗಬೇಕೆಂದು ಅವರ ಪ್ರಬಲವಾದ ಇಚ್ಛೆ. ಇದಕ್ಕಾಗಿ ಅವರು ಕರ್ನಾಟಕ ಏಕೀಕರಣದ ಬಗ್ಗೆ ಅಷ್ಟೇ ತೀವ್ರವಾದ ಭಾವನೆಯುಳ್ಳವರನ್ನು ಕಾಲೇಜಿಗೆ ಮೇಲಿಂದ ಮೇಲೆ ಬರಮಾಡಿಕೊಳ್ಳುತ್ತಿದ್ದರು. ಹೀಗೆ ಬಂದವರಲ್ಲಿ ಕೈ.ವಾ.ಶಿ.ಶಿ. ಬಸವನಾಳ ಅವರು ಹಾಗೂ ದಿವಂಗತ ಮುದವೀಡು ಕೃಷ್ಣರಾಯರ ನೆನಪು ನನಗಿದೆ. ಕೈ.ವಾ. ಬಸವನಾಳ ಅವರು ವಿದ್ಯಾರ್ಥಿಗಳನ್ನುದ್ದೇಶಿಸಿ ಕರ್ನಾಟಕ ಏಕೀಕರಣದ ಬಗ್ಗೆ ಉದ್ಬೋಧಕವಾಗಿ ಮಾತನಾಡಿದ್ದಲ್ಲದೆ ಸಭೆಯ ಕೊನೆಯಲ್ಲಿ ಶ್ರೀಯವರು ಅಧ್ಯಕ್ಷ ಭಾಷಣ ಮಾಡಿ ಸಮಗ್ರ ಕರ್ನಾಟಕದ ಒಂದು ಭೂಪಟವನ್ನು ಹೊರ ತೆಗೆದು ಹೃದಯಗಳ ಏಕೀಕರಣದ ದ್ಯೋತಕವಾಗಿ ಬಸವನಾಳರು ಅದರ ಮೇಲೆ ತಮ್ಮ ಹಸ್ತಾಕ್ಷರವನ್ನು ಹಾಕಬೇಕೆಂದು ಬಿನ್ನವಿಸಿದರು. ಬಸವನಾಳರು ರುಜುಮಾಡಿದ ಮೇಲೆ ತಾವು ರುಜು ಹಾಕಿ ಅದನ್ನು ತಮ್ಮ ಪ್ರಾಚಾರ್ಯರ ಕಚೇರಿಯಲ್ಲಿ ಹಾಕಿದ್ದರು. ನಾನು ಕಾಲೇಜಿನ ಪ್ರಿನ್ಸಿಪಾಲನಾಗಿದ್ದಾಗಲೂ ಸಹ ಅದನ್ನು ಒಂದು ಸಾಂಸ್ಕೃತಿಕ ಪ್ರತೀಕವೆಂಬಂತೆ ಕಾಯ್ದಿರಿಸಿದ್ದೆ.

೨

ಶ್ರೀಯವರು ಧಾರವಾಡದಲ್ಲಿದ್ದಾಗ, ಅವರನ್ನು ಸರಿಯಾಗಿ ಕಾಣಲಿಲ್ಲ. ಅವರಿಗೆ ಸಿಗಬೇಕಾದ ಮರ್ಯಾದೆ ಅವರಿಗೆ ಸಿಗಲಿಲ್ಲ ಎಂಬ ಮಾತು ಒಂದೊಂದು ಸಲ ಅಲ್ಲಲ್ಲಿ ಕೇಳಿ ಬರುತ್ತದೆ. ನನ್ನ ಮಟ್ಟಿಗೆ, ಇದು ಸತ್ಯಕ್ಕೆ ತುಂಬಾ ದೂರವಾದುದು. ಶ್ರೀಯವರು ದಿನಚರಿಯನ್ನೇನಾದರೂ ಇಟ್ಟಿದ್ದರೆ, ಯಾವ ವಿಷಯ ಉಲ್ಲಿಖಿತವಾಗಿವೆಯೋ ಗೊತ್ತಿಲ್ಲ. ಆದರೆ ಅವರನ್ನು ಸಾಕಷ್ಟು ಸನಿಹದಿಂದ ಕಂಡ ನನ್ನಂಥವರಿಗೆ ಇದು ಸರಿಯಾದ ಅಭಿಪ್ರಾಯವೆಂದು ಕಂಡು ಬರುವದಿಲ್ಲ. ಅವರು ತಮ್ಮ ಅಂದಿನ ಅನಾರೋಗ್ಯದ ಸ್ಥಿತಿಯಲ್ಲಿ ಬೆಂಗಳೂರು ಬಿಟ್ಟು ಹೋಗಬಾರದಿತ್ತೆಂಬ ಪ್ರಾಮಾಣಿಕ ಸಾತ್ವಿಕ ಅಭಿಪ್ರಾಯ ವ್ಯಕ್ತವಾಗಿದೆ. ಇದು ಕೆಲಮಟ್ಟಿಗೆ ನಿಜವೇನೋ ಎನಿಸುತ್ತದೆ. ಆದರೆ ವ್ಯವಸ್ಥಾಪಕ ಮಂಡಳದ ಅವಜ್ಞೆ ಎಂಬ ಅಭಿಪ್ರಾಯ ಸರಿಯಲ್ಲ. ಈ ಬಗ್ಗೆ ಯಾವ ಯಾವ ಅಭಿಪ್ರಾಯ ವ್ಯಕ್ತವಾಗಿದೆ ಎಂಬುದನ್ನು ಈಗ ನೋಡೋಣ.

ಶ್ರೀಯವರು ಬೆಂಗಳೂರು ಬಿಟ್ಟ ಬಗ್ಗೆ ಡಿ.ವಿ.ಜಿ.ಯವರು ಹೀಗೆ ಹೇಳಿದ್ದಾರೆ. "ಶ್ರೀಕಂಠಯ್ಯನವರು ಸ್ವಾಭಾವಿಕವಾಗಿ ಸರಳರು, ನಿಷ್ಕಲ್ಮಷರು, ಉದಾರಿಗಳು,

ಇತರರಿಗೆ ಸಹಾಯವಾಗುವವರಲ್ಲಿ ಅವರಿಗೆ ಸಂತೋಷವಾಗುತ್ತಿತ್ತು. ಅವರು ಕಡೆ ಕಡೆಯ ದಿನಗಳಲ್ಲಿ ಅವರ ಆಗಿನ ಅನಾರೋಗ್ಯ ಸ್ಥಿತಿಯಲ್ಲಿ ಪರಸ್ಥಳಕ್ಕೆ ಹೋದದ್ದು ನಮ್ಮಲ್ಲಿ ಕೆಲವರಿಗೆ ಇಷ್ಟವಾಗಲಿಲ್ಲ. ಕನ್ನಡಿಗರ ದುರ್ದೈವ ಅವರನ್ನು ಬೇರೆ ಕಡೆಗೆ ಎಳೆಯಿತು." ಕೆಲವರಿಗೆ ಇಷ್ಟವಿರಲಿಲ್ಲ, ಸರಿ. ಆದರೆ ಹೋದದ್ದೇ ಕನ್ನಡಿಗರ ದುರ್ದೈವವಾಗಬೇಕಾಗಿಲ್ಲ; ಧಾರವಾಡದಲ್ಲಿದ್ದವರೂ ಕನ್ನಡಿಗರೇ ಅಲ್ಲವೇ? ಶ್ರೀಯವರು ಧಾರವಾಡಕ್ಕೆ ಹೋಗಲು ಕಾರಣೀಭೂತರಾದವರಲ್ಲಿ ಒಬ್ಬರಾದ ಪೂಜ್ಯ ಮಾಸ್ತಿಯವರು ಯಥಾರ್ಥವಾಗಿಯೇ ನಿರೂಪಿಸಿದ್ದಾರೆ. "ಶ್ರೀಕಂಠಯ್ಯನವರು ಕೊನೆಯವರೆಗೂ ಜ್ಞಾನವಿತರಣೆಯ ಕಾರ್ಯದಲ್ಲಿ ಇದೇ ಶ್ರದ್ಧೆ ಉಳ್ಳವರಾಗಿದ್ದರು. ಆದ್ದರಿಂದಲೇ, ಅವರು ಮೈಸೂರಿನಲ್ಲಿ ಕೆಲಸದಿಂದ ನಿವೃತ್ತರಾದ ಮೇಲೆ ಗೆಳೆಯರ ಒತ್ತಾಯಕ್ಕೆ ತಲೆಬಾಗಿ ಒಂದು ಕಾಲೇಜಿನ ಅಧ್ಯಕ್ಷರಾಗಿ ಧಾರವಾಡಕ್ಕೆ ಸಾರಿದರು. ಅವರ ಉಸಿರಿಗೆ ಪಾಠ ಹೇಳಿ ತೃಪ್ತಿಯಿಲ್ಲ; ಪರ್ಯಾಯವಾಗಿ, ಒಂದು ಪಾಠವನ್ನು ಹೇಳುತ್ತಿರುವಾಗಲೇ ಅವರು ದೇಹವನ್ನು ನೀಗಿದರು"೧.

ಶ್ರೀಯವರು ಪಾಠ ಹೇಳುತ್ತಿರುವಾಗ ದೇಹತ್ಯಾಗ ಮಾಡಲಿಲ್ಲ; ತಾವು ವಾಸಿಸುತ್ತಿದ್ದ ಮನೆಯಲ್ಲಿಯೇ ದೇಹತ್ಯಾಗ ಮಾಡಿದರು ('ಶ್ರೀಯವರ ಕೊನೆಯ ನಿಮಿಷಗಳು' ನೋಡುವುದು) ಈ ಬಗ್ಗೆ ಪ್ರೊ. ಎ. ಎನ್. ಮೂರ್ತಿರಾಯರು ಹೀಗೆ ಹೇಳುತ್ತಾರೆ:

"(ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷಸ್ಥಾನದಿಂದ) ಅವರು ೧೯೪೨ರಲ್ಲಿ ಬಿಡುಗಡೆ ಹೊಂದಿದರು. ಆ ವರ್ಷ ಧಾರವಾಡದ ಕೆ.ಇ. ಬೋರ್ಡ್ ಕಾಲೇಜಿನ ಪ್ರಿನ್ಸಿಪಲ್ ಆಗಿ ಬರಬೇಕೆಂದು ಅವರಿಗೆ ಕರೆ ಬಂತು. ಅವರ ಹಿತೈಷಿಗಳನೇಕರ ಇಷ್ಟಕ್ಕೆ ವಿರೋಧವಾಗಿ ಆ ಕೆಲಸವನ್ನು ಒಪ್ಪಿಕೊಂಡರು. ಕೆಲವು ವರ್ಷಗಳಿಂದ ಅವರ ಆರೋಗ್ಯ ಸರಿಯಾಗಿರಲಿಲ್ಲ. ರಕ್ತದ ಒತ್ತಡ ಹೆಚ್ಚುತ್ತಿತ್ತು. ಡಯಾಬಿಟಿಸ್ ರೋಗ ಬೇರೆ ಕಾಡುತ್ತಿತ್ತು. ವರ್ಷಗಟ್ಟಲೆ ಅವರು ತಮ್ಮ ಶರೀರವನ್ನು ತಡೆಯಲಾರದಷ್ಟು ಶ್ರಮಕ್ಕೆ ಈಡು ಮಾಡಿದ್ದರು. ೧೯೪೭ ನೆಯ (ಇದು ೧೯೪೬ ಇರಬೇಕು) ಜನೇವರಿ ೫ನೆಯ ತಾರೀಖು ಅವರು ಸ್ವರ್ಗಸ್ಥರಾದರು. ಇಡೀ ಕರ್ನಾಟಕ ಶೋಕದಲ್ಲಿ ಮುಳುಗಿತು."೨.

ಇದು ವಸ್ತುನಿಷ್ಠವಾದ ಚಿತ್ರ. ಇದರ ಜೊತೆಗೆ ಇನ್ನೂ ಹಲವು ಮಾತುಗಳೂ

---

೧. ಪೂಜನ; ಮಾಸ್ತಿ ವೆಂಕಟೇಶ ಅಯ್ಯಂಗಾರ, ಜೀವನ ಕಾರ್ಯಾಲಯ ೧೯೫೧-ಪು : ೧೨೧.

೨. ಬಿ. ಎಂ. ಶ್ರೀಕಂಠಯ್ಯ, ಎ. ಎನ್. ಮೂರ್ತಿರಾವ, ಕನ್ನಡ ಸಾಹಿತ್ಯ ಪರಿಷತ್ತು, ೧೯೮೨, ಪು, ೧೬.

ಕೇಳಿಬರುತ್ತವೆ. ಈ ಕೆಳಗಿನ ಅವತರಣಿಕೆಯಲ್ಲಿಯ ಸತ್ಯಾಂಶದ **ಮಾತು** ಏನೇ **ಇದ್ದರೂ** ಬರವಣಿಗೆ **ಅತ್ಯಂತ** ಸುಂದರವಾದದ್ದರಿಂದ, ಅದನ್ನು ಸುದೀರ್ಘವಾಗಿ ಕೊಡಬೇಕು. ನಿಜವಾಗಿಯೂ, ಇದು ಭಾವಪೂರಿತವಾದ, ಕಾವ್ಯಮಯವಾದ, ಸಂತಪ್ತ, ಸುಂದರ, ಪ್ರೋಜ್ವಲ ಬರವಣಿಗೆ. ಶ್ರೀಯವರನ್ನು ತಿಳಿಯಬಯಸುವವರು ಇದನ್ನು ಅವಶ್ಯವಾಗಿ ಓದಬೇಕೆನಿಸುತ್ತದೆ. ಈ ಮಾತುಗಳು ಇವು :

"೧೯೩೮ರಲ್ಲಿ ಕನ್ನಡ ಪರಿಷತ್ತಿನ ಉಪಾಧ್ಯಕ್ಷರಾಗಿ ಆಯ್ಕೆಯಾದ ಮೇಲೆ ಶ್ರೀ ಅವರು ಸಂಪೂರ್ಣವಾಗಿ ಕನ್ನಡ ನಾಡಿನ ಸ್ವತ್ತಾದರು. ಇದೇ ಸಮಯದಲ್ಲಿ ಅವರ ವ್ಯಕ್ತಿತ್ವದಲ್ಲಿಯೂ ಒಂದು ಮುಖ್ಯ ಬದಲಾವಣೆಯಾಯಿತು. ಇದುವರೆಗೂ ಅಂತರ್ಮುಖಿಯಾಗಿದ್ದ ಅವರ ವ್ಯಕ್ತಿತ್ವ ಬಹಿರ್ ಮುಖಿಯಾಗಲು ಹಾತೊರೆಯುತ್ತಿತ್ತೋ ಎಂಬಂತೆ ಒಮ್ಮಿಂದೊಮ್ಮೆಲೇ ಬಿಡುಗಡೆ ಪಡೆಯಿತು. ಕನ್ನಡವೇ ಉಸಿರೆಂಬಂತೆ ಈ ನಾಲ್ಕು ವರ್ಷಗಳನ್ನು ಅವರು ಕಳೆದರು. ಕನ್ನಡ ನಾಡಿನ ಮೂಲೆ ಮೂಲೆಯನ್ನೂ ಅವರು ಬೇಸರೆನ್ನದೆ ಸುತ್ತಿ ಜನತೆಯ ಹೃದಯದಲ್ಲಿ ಕನ್ನಡದ ಬಗ್ಗೆ ಪ್ರೀತಿ ಅಭಿಮಾನಗಳನ್ನು ಉಕ್ಕಿಸಿದರು. ಅನೇಕ ರೀತಿಯ ಸಾಹಿತ್ಯ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಪರಿಷತ್ತಿನ ಹೆಸರು ಎಲ್ಲೆಲ್ಲಿಯೂ ಕೇಳಿಬರುವಂತೆ ಮಾಡಿದರು. ಎಲ್ಲರ ಗಮನ ಸೆಳೆದು, ಸೊರೆಗೊಂಡರು. ಕನ್ನಡದ ಬಾವುಟವನ್ನು ಎತ್ತಿ ಹಿಡಿದರು. ಕನ್ನಡದ ಕೀರ್ತಿಯೆನಿಸಿಕೊಂಡರು. ದೊರೆಗಳ ಅನುಗ್ರಹಕ್ಕೂ ಪಾತ್ರರಾದರು. ಇನ್ನೇನು ಬೇಕು........

ಆದರೆ, ಪರಿಷತ್ತಿನ ಉಪಾಧ್ಯಕ್ಷ ಗದ್ದುಗೆ ಬರಬರುತ್ತಾ ಮುಳ್ಳಿನ ಹಾಸಿಗೆಯಾಯಿತು. ಸಣ್ಣಪುಟ್ಟ ವಿಷಯಗಳಿಗೂ ತೀವ್ರವಾದ ವಿರೋಧವನ್ನು ಅವರು ಎದುರಿಸಬೇಕಾಯಿತು. ನ. ಜ. ಪ್ರಸಂಗವಂತೂ ಅವರನ್ನು ಜಿಗುಪ್ಸೆಯಿಂದ ಹಿಮ್ಮೆಟ್ಟುವಂತೆ ಮಾಡಿತು. ಕ್ಷುದ್ರ ರಾಜಕೀಯ ಪರಿಷತ್ತಿನಲ್ಲಿ ತಾಂಡವವಾಡಿತು. ಇವೆಲ್ಲಾ ನಿಜವೇ ಎಂದು ಅವರೇ ಸಂಶಯಪಟ್ಟುಕೊಳ್ಳುವಷ್ಟರ ಮಟ್ಟಿಗೆ ವಾತಾವರಣ ಕಹಿಯಾಯಿತು. ಶ್ರೀ ಬಹಳಷ್ಟು ನೊಂದರು.

ಪರಿಣಾಮವಾಗಿ, ಪ್ರಾಧ್ಯಾಪಕ ವೃತ್ತಿಯಿಂದ, ಪರಿಷತ್ತಿನ ಉಪಾಧ್ಯಕ್ಷಸ್ಥಾನದಿಂದ ನಿವೃತ್ತರಾದ ದಿನವೇ ಹೆಚ್ಚು ಕಡಿಮೆ ಇದ್ದಕ್ಕಿದ್ದಂತೆ ಒಮ್ಮೆಲೇ ಅವರು ಜನತೆಯ ಹೃದಯರಂಗದಿಂದಲ್ಲದಿದ್ದರೂ, ಅವರ ಕಣ್ಣಿನ ರಂಗದಿಂದ ಮರೆಯಾದರು. ಈಗ ಅವರ ಆತ್ಮವಿಶ್ವಾಸದ ಅಡಿಪಾಯವೇ ಕುಸಿದು ಬಿತ್ತು. ಜೊತೆಗೇ ಅವರ ಸಹಜ ಪ್ರವೃತ್ತಿಗಳಾದ ಸಂಕೋಚ ಸೂಕ್ಷ್ಮ ಮನೋಭಾವಗಳೂ, ನಿರ್ವಿಣ್ಣತೆಯೂ ಕೂಡಿಕೊಂಡು ಶ್ರೀಯವರು ಬಸವನ ಹುಳುವಿನಂತೆ ಮತ್ತೆ ತಮ್ಮ ಚಿಪ್ಪನ್ನು ಹೊಕ್ಕರು. ಈ ಆಘಾತದಿಂದ ಮತ್ತೆ ಅವರು ಚೇತರಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ........

ಬಿ. ಎಂ. ಶ್ರೀ ಅವರ ಚಲಾವಣೆ ನಿಂತು ಹೋಯಿತು. ಉತ್ಸವಮೂರ್ತಿಯನ್ನು ಊರೆಲ್ಲಾ ವಿಜೃಂಭಣೆಯಿಂದ ಸುತ್ತಿಸಿ ತಂದು ದೇವಾಲಯದಲ್ಲಿರಿಸಿ ದೀಪ ಆರಿಸಿ, ಬೀಗ ಮುದ್ರೆ ಜಡಿದಂತಾಯಿತು. ಶ್ರೀಕಂಠವಾಣಿ ಸ್ಥಗಿತವಾಯಿತು....ನಾಲ್ಕು ವರುಷಗಳೂ ಕನ್ನಡನಾಡಿನ ಉದ್ದಗಲಕ್ಕೂ 'ಇಂತಪ್ಪನಿಲ್ಲ' ವೆಂಬಂತೆ ವಿಜೃಂಭಿಸಿದ ಬಿ. ಎಂ. ಶ್ರೀ. ಅವರ ಸ್ಥಿತಿ–ಎರಡು ಮೂರು ಗಂಟೆಗಳಿಗೆ ಬಾಡಿಗೆಗಾಗಿ ತಂದ ವಸ್ತ್ರ ಭೂಷಣಗಳಿಂದ ರಂಗದ ಮೇಲೆ ವಿಜೃಂಭಿಸಿದ ನಾಯಕನು, ಆಟ ಮುಗಿದ ಕೂಡಲೇ ಅವರ ಮಾಲೀಕನಿಗೆ ಒಪ್ಪಿಸಿ ಸಪ್ಪೆಯಾಗಿ ಮರಳುವಂತೆ ಆಯಿತು." ೧.

ಈ ಚಿತ್ರ ಸತ್ಯಪೂರ್ಣವಾಗಿಯೇ ಇದ್ದರೆ, ನಿಜವಾಗಿ ಕರುಳು ಮಿಡಿಯುವ ಸನ್ನಿವೇಶ. ಈ ಬಗ್ಗೆ ಪೂಜ್ಯ ಮಾಸ್ತಿಯವರ ಕೂಡ ನಾನು ಮಾತಾಡಿದಾಗ, ಉಪಾಧ್ಯಕ್ಷಸ್ಥಾನದಲ್ಲಿದ್ದ ತಮ್ಮಿಂದ ಅವರಿಗೆ ಕೊಂಚವೂ ತೋದರೆಯಾಗಲಿಲ್ಲ ಎಂದು ತಮ್ಮ ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಬಹುಶಃ ಹಳೆಯ ತಲೆಮಾರು ಹಾಗೂ ಹೊಸ ತಲೆಮಾರುಗಳ ನಡುವಿನ ಘರ್ಷಣೆ ಈ ರೀತಿ ಶ್ರೀಯವರನ್ನು ಘಾಸಿಗೊಳಿಸಿದ್ದರೂ ಗೊಳಿಸಿದ್ದಿರಬೇಕು ಎಂದು ಕಾಣುತ್ತದೆ.

ಇದೇ ಮಾತನ್ನು ಮುಂದುವರಿಸಿ, ಲೇಖಕರು ಇದೇ ಧಾಟಿಯಲ್ಲಿ ಶ್ರೀಯವರ ಧಾರವಾಡದ ವಾಸ್ತವ್ಯದ ಬಗ್ಗೆಯೂ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ.

"ಅಂತಿಮವಾದ ೧೯೪೪ ರಿಂದ ೧೯೪೬ ರ ವರೆಗಿನ ಎರಡು ವರುಷಗಳು ಕೂಡ ಅವರ ನಿರೀಕ್ಷೆಯನ್ನು ಮತ್ತೂ ಸುಳ್ಳಾಗಿಸಿದವು. ಅವರು ಪ್ರಿನ್ಸಿಪಾಲ್‌ಗಿರಿಯನ್ನು ಒಪ್ಪಿಕೊಂಡು ಧಾರವಾಡಕ್ಕೆ ಹೋದ ಸಂದರ್ಭವಂತೂ ಮುಳುಗುವ ವ್ಯಕ್ತಿಯೊಬ್ಬ ಜೀವದಾಸೆಯಿಂದ ತೇಲಿಬಂದ ಕಡ್ಡಿಯ ತುಂಡೊಂದನ್ನು ಬಾಚಿ ತಬ್ಬಿಕೊಂಡು ಬದುಕುಳಿಯಲೆತ್ನಿಸಿದಂತೆ ಎನ್ನಿಸದಿರದು. ಅವರ ಈ ಪ್ರತ್ಯಾಶೆ ಅವರ ಗೆಳೆಯರ ಈ ಪ್ರಯತ್ನ ಹೆಮ್ಮರವೊಂದನ್ನು (ಮುದಿಮರ) ಅದರ ಸ್ಥಾನದಿಂದ ಬೇರುಸಮೇತ ಕಿತ್ತು ಬೇರೊಂದೆಡೆ ನೆಡಲು ಮಾಡಿದ ಪ್ರಯತ್ನದಂತಿದೆ, ಹೊಸ ನೆಲ, ಹೊಸ ವಾತಾವರಣದಲ್ಲಿ ತನ್ನ ಜೀವಸತ್ವವನ್ನು ಹೀರಿಕೊಂಡು ವರ್ಧಿಸುವ ಶಕ್ತಿಯನ್ನು ಆ ಬೇರುಗಳು ಅಲ್ಲಿಗಾಗಲೇ ಬಹುಶಃ ಕಳೆದುಕೊಂಡಿವೆ. ಹಿಂದಿನ ಆತ್ಮವಿಶ್ವಾಸ ಅವರಿಗೆ ದಕ್ಕದೇ ಹೋಯಿತು. ಹಿಂದಿನಂತೆ ಜನತೆಯನ್ನು ಆಕರ್ಷಿಸಲಾಗಲೀ, ಆದರ್ಶವನ್ನು ತುಂಬಲಾಗಲೀ, ಅಸಮರ್ಥರಾದರು. ಕ್ರಮೇಣ ಆ ಮರ ಕಮರಿತು. ಒಂದು ದಿನ ಬುಡಮೇಲಾಗಿ ಬಿತ್ತು.

ಪ್ರಿನ್ಸಿಪಾಲರಾಗಿ ಅವರು ಧಾರವಾಡದಲ್ಲಿ ಸಾಧಿಸಿದ್ದೇನೇ ಇರಲಿ ಬಿಡಲಿ

---

೧. ಬಿ. ಎಂ. ಶ್ರೀ. ಅವರ ಬದುಕು–ಬರಹ, ಕನ್ನಡ ಸಾಹಿತ್ಯ ಪರಿಷತ್ತು ಪು. ೧೩೩-೧೩೪

ಆಧುನಿಕ ಕನ್ನಡ ಸಾಹಿತ್ಯದ ಆಚಾರ್ಯ ಪುರುಷರೆನ್ನಿಸಿಕೊಂಡ ಬಿ. ಎಂ. ಶ್ರೀ ಅಲ್ಲಿ ಸಾಧಿಸಿದ್ದೇನು? ಏನೂ ಇಲ್ಲ. ಧಾರವಾಡಕ್ಕೆ ಹೋಗಿ ನೆಲೆಸಿದ—ಬಿ. ಎಂ. ಶ್ರೀ. ಹಿಂದಿನ ಶ್ರೀ ಅಲ್ಲ. ಹಗಲ ಚಂದ್ರ. ಸಂಪೂರ್ಣ ನಿರ್ವಿಣ್ಣತೆಗೆ ಬಲಿಯಾಗಿದ್ದ ಅವರು ಅದೆಷ್ಟೋ ಪ್ರಯತ್ನಪಟ್ಟರೂ, ತಮ್ಮ ಆ ಪಾತ್ರಕ್ಕೆ ಜೀವಕಳೆ ತುಂಬಲು ಅಸಮರ್ಥರಾದರು. ಹೋಗಲಿ, ಅಲ್ಲಿ ಅವರು ಪಡೆದದ್ದಾದರೂ ಏನು? ಮಿತ್ರರೆನಿಸಿಕೊಂಡವರ ಅರೆಮನಸ್ಸಿನ ಆದರ; ವ್ಯವಸ್ಥಾಪಕ ಮಂಡಲಿಯ ಅವಜ್ಞೆ; ಸಾಹಿತಿ ಪ್ರಭೃತಿಗಳ ಅಸಡ್ಡೆ; ಎಲ್ಲಕ್ಕಿಂತಲೂ ಅನೈರ್ಮಲ್ಯ ವಾಸ್ತವ್ಯದ ಕಾರಣವಾದ ಮಲೇರಿಯಾ. ಶ್ರೀ ಸಂಪೂರ್ಣವಾಗಿ ಸೋಲನ್ನೊಪ್ಪಿಕೊಂಡು ಒದಗಿ ಬಂದ ಗತಿಯನ್ನು ತುಟಿಯೆರಡು ಮಾಡದೆ ಸಹಿಸಿಕೊಂಡು, ಬಹುಶಃ ದಿನಗಳನ್ನೆಣಿಸಿದರು. ಇಷ್ಟಾದರೂ, ಈ ಎರಡು ವರುಷಗಳು ಈ ಹಿಂದಿನ ಎರಡು ವರ್ಷಗಳಿಗಿಂತ ಅವರ ದೃಷ್ಟಿಯಲ್ಲಿ ಎಷ್ಟೋ ಪಾಲು ಮೇಲು ಎನ್ನಿಸಿರಬೇಕು. ಅಂತೂ ಬಿ. ಎಂ. ಶ್ರೀ ತಮ್ಮ ಜೀವನದ ಜೀರ್ಣೋದ್ಧಾರದ ಈ ಪ್ರಯತ್ನದಲ್ಲಿ ಸಂಪೂರ್ಣವಾಗಿ ಅಸಫಲರಾದರು. ಅಂತಿಮವಾಗಿ ಹತಾಶರಾದರು." ೧.

ಪುನಃ ಮನೋಜ್ಞವಾದ, ಕರುಳು ಮಿಡಿಯುವ, ಕಾವ್ಯಮಯವಾದ ಬರವಣಿಗೆ, ಈ ಬರಹದಿಂದ ಶ್ರೀಯವರು ಧಾರವಾಡಕ್ಕೆ ಬಂದಾಗ ಯಾವ ದೇಹಸ್ಥಿತಿಯಲ್ಲಿ ಮನಸ್ಸಿನ ಸ್ಥಿತಿಯಲ್ಲಿ ಇದ್ದರೆಂಬುದು ಮಾತ್ರ ವ್ಯಕ್ತವಾಗುತ್ತದೆ. ಆದರೂ ಧಾರವಾಡ ಅವರ ಮನಸ್ಸಿನಲ್ಲಿ ನೆಲಸಿರಬಹುದಾದ ನಿರಾಶೆಯನ್ನು ತೆಗೆದು ಹಾಕಲು ಬಹು ವಿಧವಾಗಿ ಪ್ರಯತ್ನಿಸಿತು. ವ್ಯವಸ್ಥಾಪಕ ಮಂಡಳಿಯೂ, ಶಿಕ್ಷಕ ವರ್ಗವೂ ಜನತೆಯೂ ವಿದ್ಯಾರ್ಥಿ ವೃಂದವೂ, ಅವರನ್ನು ತುಂಬಾ ಆದರ ಗೌರವಗಳಿಂದಲೇ ಕಂಡಿತು. ಅದೇ ತಾನೇ ಹೊಸದಾಗಿ ಧಾರವಾಡದಲ್ಲಿ ನೆಲೆಸಲು ಬಂದ ಶ್ರೀಯವರನ್ನು ಉತ್ತರ ಕರ್ನಾಟಕಕ್ಕೊಂದು ವಿಶ್ವವಿದ್ಯಾನಿಲಯ ಬೇಕು ಎಂಬ ಬೇಡಿಕೆಯನ್ನು ಮಂಡಿಸಲು ಸ್ಥಾಪಿಸಲಾದ ಕರ್ನಾಟಕ ವಿದ್ಯಾಪೀಠ ಸಮಿತಿಯ ಮೂರ್ಧನ್ಯರನ್ನಾಗಿ ಮಾಡಿತು. ಅವರ ಜೊತೆ ಅನೇಕ ಪ್ರಮುಖರು ಹೆಗಲಿಗೆ ಹೆಗಲು ಹಚ್ಚಿ ಕೆಲಸ ಮಾಡಿದರು.

ಶ್ರೀಯವರನ್ನು ವ್ಯವಸ್ಥಾಪಕ ವರ್ಗದವರು ಸರಿಯಾಗಿ ನೋಡಿಕೊಳ್ಳಲಿಲ್ಲ; ಅಸಡ್ಡೆ ಮಾಡಿದರು ಎಂಬ ಅಭಿಪ್ರಾಯ ಉಂಟಾಗಲು ಆ ಕಾಲದಲ್ಲಿ ಆ ಕಾಲೇಜಿನ ಬಗ್ಗೆ ನಡೆದ ಅಪಪ್ರಚಾರವೂ ಕೆಲವು ಮಟ್ಟಿಗೆ ಕಾರಣವೆಂದು ಕಾಣುತ್ತದೆ. ಧಾರವಾಡದ ಕೆ. ಇ. ಬೋರ್ಡ ಸಂಸ್ಥೆ ಈ ಕಾಲೇಜನ್ನು ಸ್ಥಾಪಿಸಿತು. ಇದನ್ನು ಸ್ಥಾಪಿಸಿದವರೆಲ್ಲ ನಿತಾಂತ ದೇಶಭಕ್ತರು, ಸ್ವಾತಂತ್ರ್ಯಯೋಧರು. ಅವರೆಲ್ಲ ಸೆರೆಮನೆ, ಉಪವಾಸ, ವನವಾಸಗಳನ್ನು ಕಂಡವರು. ದೇಶದ ಸ್ವಾತಂತ್ರ್ಯ

---

೧ ಬಿ. ಎಂ. ಶ್ರೀಯವರ ಬದುಕು-ಬರಹ, ಕನ್ನಡ ಸಾಹಿತ್ಯ ಪರಿಷತ್ತು, ಪು: ೧೩೪-೧೩೫

ಹೋರಾಟದಲ್ಲಿ ಅಗ್ರಗಣ್ಯ ಪಾತ್ರವನ್ನು ವಹಿಸಿದವರು. ಆದರ್ಶವಾದಿಗಳು. ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಧ್ಯೇಯವಾದಿ ವಿದ್ಯಾರ್ಥಿಗಳ ಪಡೆ ಬೇಕಾಗುತ್ತದೆ ಎಂಬ ದೃಷ್ಟಿಯಿಂದ, ಕೆ. ಇ. ಬೋರ್ಡ ಹೈಸ್ಕೂಲ್, ಕರ್ನಾಟಕ ಹೈಸ್ಕೂಲ್ ವಿಕ್ಟೋರಿಯಾ (ಇಂದಿನ ವಿದ್ಯಾರಣ್ಯ) ಹೈಸ್ಕೂಲ್, ಶಿಕ್ಷಕರ ತರಬೇತಿ ಸಂಸ್ಥೆ, ಪ್ರಾಥಮಿಕ ಶಾಲೆ ಮೊದಲಾದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದವರು. ಅವರು ಈ ಸಂಸ್ಥೆಗಳನ್ನು ಆದರ್ಶ, ಕಷ್ಟಸಹಿಷ್ಣುತೆ, ಶಿಸ್ತು, ರಾಷ್ಟ್ರ ಕಲ್ಪನೆಗಳ ಗಟ್ಟಿಮುಟ್ಟಾದ ಸಿಮೆಂಟ ಕಾಂಕ್ರೀಟಿನ ಮೇಲೆ ನಿಲ್ಲಿಸಿದವರು. ಈ ಸಂಸ್ಥೆಯಲ್ಲಿ ಆಗ ಖ್ಯಾತ ಸ್ವಾತಂತ್ರ್ಯಯೋಧರೂ, ಪಂಡಿತರೂ ಆದ ಶ್ರೀ. ದ. ಪ. ಕರಮರಕರ್ (ಅನಂತರ ಕೇಂದ್ರ ಮಂತ್ರಿಗಳು). ಡಾ॥ ಎನ್. ಬಿ. ಕಬ್ಬೂರ ಮೊದಲಾದವರು, ಗೌರವ ಶಿಕ್ಷಕರಾಗಿ ಪಾಠವನ್ನು ಹೇಳುತ್ತಿದ್ದ ಕಾಲವದು. ಅಂತೆಯೇ ಇಂದಿಗೂ ಕೆ. ಇ. ಬೋರ್ಡ ಸಂಸ್ಥೆ ಪ್ರತಿವರ್ಷ ಎಸ್. ಎಸ್. ಸಿ. ಯಲ್ಲಿ ರ್‍ಯಾಂಕ ಸ್ಥಾನಗಳನ್ನು ಗಿಟ್ಟಿಸದೇ ಬಿಟ್ಟಿಲ್ಲ. ಕೆ. ಇ. ಬೋರ್ಡಿನ ಈ ಶಿಕ್ಷಣ ಸಾಮ್ರಾಜ್ಯ ಹಾಗೂ ಯಶಸ್ಸು ಅನೇಕ 'ಬಿಳಿ ಛಾಯೆಯ' ಧಾರವಾಡಿಗರಿಗೆ ಸಮಾಧಾನವನ್ನು ತಂದಿರಲಿಲ್ಲ. ಆದ್ದರಿಂದ ಕೆ. ಇ. ಬೋರ್ಡ ಕಾಲೇಜು ಪ್ರಾರಂಭವಾದಾಗ ಯಾವಾಗಲೂ ಅದರ ಬಗ್ಗೆ ಈ ಜನ ಪಿಸುಮಾತಿನ ಅಪಪ್ರಚಾರವನ್ನು ಪ್ರಾರಂಭಿಸಿಯೇ ಇದ್ದರು. ಖ್ಯಾತ ತಜ್ಞರಾದ ರ್‍ಯಾಂಗ್ಲರ ಕಟ್ಟಿಯವರ ನೇತೃತ್ವದಲ್ಲಿ ವಿಕ್ಟೋರಿಯಾ ಕಾಲೇಜನ್ನು ಸ್ಥಾಪಿಸಿ, ಅದನ್ನು ಅಸಹಕಾರ ಆಂದೋಲನದ ಮೂಲಕ ಮುಚ್ಚಬೇಕಾಯಿತು. ಈಗ ಫಿನಿಕ್ಸ ಪಕ್ಷಿ ತನ್ನ ಬೂದಿಯಲ್ಲಿಯೇ ಪುನರ್ಜನ್ಮ ಪಡೆಯುವಂತೆ ಅದೇ ಸ್ಥಳದಲ್ಲಿ, ಅದೇ ನೆಲದಲ್ಲಿ, ಅದೇ ಕಟ್ಟಡಗಳಲ್ಲಿ ಕೆ. ಇ. ಬೋರ್ಡ ಕಾಲೇಜು ಪ್ರಾರಂಭವಾಯಿತು. ಇದು ಎಷ್ಟೋ ಜನರಿಗೆ ಅಸಹ್ಯವನ್ನುಂಟು ಮಾಡಿತು. ಈ ಪ್ರಯತ್ನ ಅಯಶಸ್ವಿಯಾಗಬೇಕೆಂದು ಅವರು ಪಿಸುಮಾತಿನ ಬಹಿರಂಗವಾದ ಅಪಪ್ರಚಾರವನ್ನೇ ಪ್ರಾರಂಭಿಸಿದರು. ಕಟ್ಟಿ ಕಾಲೇಜ ಹೋದ ಮೇಲೆ ಈ ಕಾಲೇಜ ಬಂದದ್ದರಿಂದ ಆಗ ಕಟ್ಟಿ ಕಾಲೇಜು, ಈಗ ತಟ್ಟಿ ಕಾಲೇಜು ಎಂದು ಅಪಹಾಸ್ಯಕರವಾದ ಮಾತುಗಳನ್ನು ನಮ್ಮೆದುರಿಗೇ ಈ ಪ್ರತಿಷ್ಠಿತರು ಆಡುತ್ತಿದ್ದರು. ಆಗ ಧಾರವಾಡದಲ್ಲಿದ್ದ ಇನ್ನೊಂದು ಕಾಲೇಜಿನ ಭವ್ಯ ಕಟ್ಟಡದ ಕೂಡ ಈ ಕಟ್ಟಡ ತುಲನೆ ಮಾಡಿದರೆ, ಇದು ತಟ್ಟಿ ಕಾಲೇಜೇ ಸರಿ. ನನಗೆ ಕೆ. ಇ. ಬೋರ್ಡನ್ನು,ಕತ್ತೆ, ಎಮ್ಮೆ ಬೋರ್ಡ ಎನ್ನುತ್ತಿದುದೂ ಗೊತ್ತು. ಮಾರ್ಚ ೧೫ಕ್ಕೆ ಕಾಲೇಜು ಮುಗಿದ ಮೇಲೆ ನಾವು ನಮ್ಮ ಊರಿಗೆ ಹೋಗಿ ಜೂನ್ ೧೫ರ ಸುಮಾರಿಗೆ ಧಾರವಾಡಕ್ಕೆ ಮರಳಿದಾಗ (ಜೂನ್ ೨೦ಕ್ಕೆ ಕಾಲೇಜು ಸುರು) ನನಗೆ ಗೊತ್ತಿದ್ದ ಹಲವು ಬೇರೆ ಕಾಲೇಜಿನ ಮಿತ್ರರು "ಏನು ಧಾರವಾಡಕರ್, ಯಾವಾಗ ಊರಿಂದ ಬಂದಿರಿ? ಯಾಕೆ ಬಂದಿರಿ? ನಿಮ್ಮ ಕಾಲೇಜ ಕ್ಲೋಸ್ ಆಗಿದೆಯೆಂದು ಗೇಟಿಗೆ ನೋಟಿಸ ಹಾಕಿಬಿಟ್ಟಿದ್ದಾರಲ್ಲ. ನಿಮಗೆ ತಿಳಿಸಿಲ್ಲವೇನು? ಯಾಕೆ ಸುಮ್ಮನೆ ಖರ್ಚು ಮಾಡಿಕೊಂಡು ಬಂದಿರಿ? ಕಾಲೇಜ ಸುರುವಾಗಲು ಇನ್ನೂ

ನಾಲ್ಕೈದು ದಿವಸವಿವೆ. ಪರತ ಹೋಗಿ ಬಿಡಿರಿ" ಎಂದು ಹೇಳುತ್ತಿದ್ದರು. ಈ ಅಪ ಪ್ರಚಾರ ಎಷ್ಟರ ಮಟ್ಟಿಗೆ ಪ್ರಬಲವಾಗಿತ್ತೆಂದರೆ, ಎಷ್ಟೋ ಸಲ ನಾನು ಇದನ್ನು ನಂಬಿ ಕೊನೆಗೆ ಹೋಗಿ ಕಾರ್ಯದರ್ಶಿಗಳನ್ನು ಕೇಳಬೇಕಾಯಿತು. ಅವರು "ಈಗಂತೂ ಹೋಗಿ ನೋಡಿರಿ, ಗೇಟ ತೆಗೆದಿದೆಯೋ ಇಲ್ಲವೊ? ಕಟ್ಟಡ ಅದೆಯೋ ಇಲ್ಲವೋ? ನಿಮಗೆ ಖಚಿತವಾಗುತ್ತದೆ" ಎಂದು ಹೇಳಿದರು. ಕಾಲೇಜಿನ ನಿವೇಶನವನ್ನು ಹುಬ್ಬಳ್ಳಿ ಮಾರ್ಗದಲ್ಲಿರುವ ವಿಸ್ತೀರ್ಣವಾದ ಹೊಸ ನಿವೇಶನಕ್ಕೆ ಸ್ಥಳಾಂತರಿಸಿದಾಗ, ಬೇರೊಂದು ಕಾಲೇಜಿನ ಒಬ್ಬ ಹಿರಿಯ ಪ್ರಾಧ್ಯಾಪಕರು "ಹುಕ್ಕೇರಿಕರ ತೀರ ಸರಿಯಾದ ಸ್ಥಳಕ್ಕೇ ಕಾಲೇಜ ಒಯ್ದಿದ್ದಾರೆ. ಮೈಲಾರಲಿಂಗನ ಗುಡ್ಡಕ್ಕೆ. ಮುಂದೆ ಸೌದೆ, ಕುಳ್ಳು ಹೋಗಿವೆ. ಹಿಂದೆ ಕಾಲೇಜು ಹೊರಟಿದೆ...." ಎಂದು ಕಟೂಕ್ತಿಗಳನ್ನಾಡಿದರು. (ಮೈಲಾರಲಿಂಗನ ಗುಡ್ಡ ಎಂದರೆ ಧಾರವಾಡದ ರುದ್ರಭೂಮಿ. ಕಾಲೇಜು ಸತ್ತು ಸ್ಮಶಾನಕ್ಕೆ ಹೊರಟಿತು ಎಂದು ಇವರ ಅಭಿಪ್ರಾಯ.) ಇಂಥ ವಾತಾವರಣದಲ್ಲಿ, ಪರಿಸರದಲ್ಲಿ, ನಾವೆಲ್ಲ ಕೆಲಸ ಮಾಡಬೇಕಾಗಿ ಬಂದದ್ದರಿಂದ ಈ ಅಪಪ್ರಚಾರದ ಪಿಸುಮಾತು ತುಂಗಭದ್ರಾ ನದಿಯನ್ನು ದಾಟಿಯೂ ಹರಡಿರುವ ಸಂಭವವಿದೆ.

ಇನ್ನೊಂದು ಕಾರಣ, ನನಗೆ ಗೊತ್ತಿದ್ದ ಮಟ್ಟಿಗೆ, ಬಿ. ಎಂ. ಶ್ರೀಯವರು ಧಾರವಾಡಕ್ಕೆ ಬರುವದರಲ್ಲಿಯೇ, ಅವರ ಆರೋಗ್ಯ ಬಹುಮಟ್ಟಿಗೆ ಹಾಳಾಗಿತ್ತು. ಅವರಿಗೆ ರಕ್ತದ ಒತ್ತಡ ಹಾಗೂ ಎದೆ ಬೇನೆ ಇದ್ದವು. ಶಿಕ್ಷಣ ಸಂಸ್ಥೆಯ ಕಾರ್ಯಾಧ್ಯಕ್ಷರೂ, ಖ್ಯಾತ ಸ್ವಾತಂತ್ರ್ಯಯೋಧರೂ, ನಿಷ್ಠಾವಂತ ರಚನಾತ್ಮಕ ಕಾರ್ಯಕರ್ತರೂ, ಸುಪ್ರಸಿದ್ಧ ಡಾಕ್ಟರರೂ ಆಗಿದ್ದ ದಿವಂಗತ ಡಾ. ಎನ್. ಬಿ. ಕಬ್ಬೂರ ಅವರು ವೈಯಕ್ತಿಕವಾಗಿ ಶ್ರೀಯವರ ಪ್ರಕೃತಿಯ ಮೇಲ್ವಿಚಾರಣೆ ಮಾಡುತ್ತಿದ್ದರು. ಶ್ರೀಯವರು ಉದ್ವೇಗಕರವಾದ ವಾತಾವರಣವಲ್ಲಿ ಹೋಗಬಾರದೆಂದೂ ಅನಗತ್ಯವಾದ ಸಭೆ–ಸಮಾರಂಭಗಳಲ್ಲಿ ಭಾಗವಹಿಸಿ ದೈಹಿಕ ಹಾಗೂ ಮಾನಸಿಕ ಒತ್ತಡಕ್ಕೆ ಒಳಗಾಗಬಾರದೆಂದೂ ಡಾ. ಕಬ್ಬೂರ ಅವರು ಅವರಿಗೆ ಸಲಹೆ ಮಾಡಿದ್ದರು. ಸಂಸ್ಥೆಗೆ ಆಗದವರು ಇದೇ ಮಾತುಗಳನ್ನು ತಿರುಗಿಸಿ, ಕೆ. ಇ. ಬೋರ್ಡ ಆಡಳಿತ ವರ್ಗ ಶ್ರೀಯವರನ್ನು ಬಂದಿಯನ್ನಾಗಿ ಮಾಡಿದೆ. ಅವರನ್ನು ಎಲ್ಲಿಯೂ ಹೊರಗೆ ಬಿಡುವದಿಲ್ಲ. ಅವರಿಗೆ ಯಾವ ಸ್ವಾತಂತ್ರ್ಯವೂ ಇಲ್ಲ. ಎಂಬ ಪ್ರಚಾರವನ್ನೂ ಪ್ರಾರಂಭಿಸಿದರು. ಆದರೂ ಡಾ. ಕಬ್ಬೂರ ಅವರು ಶ್ರೀಯವರಿಗೆ ತಮ್ಮ ಸಲಹೆಯನ್ನೇ ಪುನಃ ಪುನಃ ಮುಂದುವರಿಸಿದ್ದರು,

ಒಂದು ಸಲ ಹೀಗಾಯಿತು. ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಹಳೆಯ ಸಾಂಸ್ಕೃತಿಕ, ಭಾಷಿಕ, ಸಂಸ್ಥೆಯಲ್ಲವೇ. ಶ್ರೀಯವರಿಗೂ ಸಂಘದ ಬಗ್ಗೆ ಅಪಾರವಾದ ಅಭಿಮಾನವಿದ್ದಿತು. ಸಂಘದ ಅಧಿಕಾರಿಗಳು ಒಂದು ಭಾಷಣಕ್ಕಾಗಿ ಶ್ರೀಯವರನ್ನು ಆಮಂತ್ರಿಸಿದರು. ಇವರೂ ಒಪ್ಪಿಕೊಂಡರು. ಡಾ. ಕಬ್ಬೂರ

ಅವರಿಗೆ ಅಳುಕು ಇದ್ದೇ ಇದ್ದಿತು. ಭಾಷಣದ ಏರ್ಪಾಟು ಮಾಡಿದ್ದು ಸಂಘದ ಅಟ್ಟದ ಮೇಲೆ. ಶ್ರೀಯವರು ಆ ಮೆಟ್ಟಿಲುಗಳನ್ನು ಹತ್ತಿಕೊಂಡು ಹೋಗಬೇಕು. ಇವರು ಅಲ್ಲಿಗೆ ಹೋಗುವವರಲ್ಲಿಯೇ ಸಭಾಗೃಹ ಶ್ರೋತೃಗಳಿಂದ ಕಿಕ್ಕಿರಿದು ತುಂಬಿ ಹೋಗಿತ್ತು. ಇವರು ದಾರಿ ಮಾಡಿಕೊಂಡು ವೇದಿಕೆಯತ್ತ ಹೋದರು. ಸೂಜಿ ಬಿದ್ದರೆ ಕೇಳಿಸಬೇಕು ಅನ್ನುವಷ್ಟು ಶಾಂತತೆ ಸಭೆಯಲ್ಲಿ ನೆಲೆಸಿತ್ತು. ಕಾಲೇಜಿನ ಪ್ರಾಚಾರ್ಯರಾದ ಮೇಲೆ ಧಾರವಾಡದಲ್ಲಿ ಅದು ಶ್ರೀಯವರ ಮೊದಲ ಸಾರ್ವಜನಿಕ ಕಾರ್ಯಕ್ರಮ. ಎಲ್ಲರೂ ಅವರ ಮಾತನ್ನು ಕೇಳಲು ಕುತೂಹಲಿಗಳಾಗಿದ್ದರು. ವ್ಯಾಖ್ಯಾತರ ಔಪಚಾರಿಕ ಪರಿಚಯವಾದ ಕೂಡಲೇ ಶ್ರೀಯವರು ಎದ್ದು ನಿಂತರು. ಪ್ರಚಂಡ ಕರತಾಡನ, ಪುರಸ್ಕಾರ. ಗ್ರೀಕ್ ಮೂರ್ತಿ ನಿಂತ ಹಾಗೆ ನಿಂತ ಶ್ರೀಯವರಿಗೆ ತುಂಬಾ ಅಭಿಮಾನವೆನಿಸಿತು. ಅವರು ಪ್ರಾಸ್ತಾವಿಕ ನಾಲ್ಕು ಮಾತುಗಳನ್ನಾಡಿ, "ನನಗೆ ಈವರೆಗೆ ಹೊರಗೆ ಬಂದು ನಿಮ್ಮನ್ನೆಲ್ಲ ಸಂದರ್ಶಿಸುವ ಅನುಕೂಲವಿರಲಿಲ್ಲ. ಕನ್ನಡ ಸಾಹಿತ್ಯದ ಸ್ವತಂತ್ರ ಒಲವುಗಳ ಬಗ್ಗೆ ಈಗ ನಿಮ್ಮ ಕೂಡ ಮಾತಾಡಲು ಅವಕಾಶ ದೊರಕಿದೆ……" ಎನ್ನುತ್ತಲೇ, ನಾಲ್ಕು ಅಥವಾ ಆರನೆಯ ಸಾಲಿನಲ್ಲಿ ಕುಳಿತ ಒಬ್ಬ ವ್ಯಕ್ತಿ, ಸಭಾಮರ್ಯಾದೆ ಭಂಗವಾಗುವ ಹಾಗೆ "ಇದಕ್ಕೆಲ್ಲ ನೀವೇ ಕಾರಣ. ನೀವೇ ಬಂದಿಯಾಗಿ ಆ ನಾಲ್ಕು ಗೋಡೆಗಳ ನಡುವೆ ಕುಳಿತಿದ್ದೀರಿ. ಸ್ವಾತಂತ್ರ್ಯದ ಬಗ್ಗೆ ನಿಮಗೆ ಮಾತನಾಡಲು ಅಧಿಕಾರವಿಲ್ಲ. ನೀವು ದಾಸರು, ಗುಲಾಮರು, ಮೈಸೂರರಸರ ಸೇವಕರು." ಎಂದು ಮೊದಲಾಗಿ ಕೂಗಿತು. ಆಗ ಧಾರವಾಡದಲ್ಲಿದ್ದ ಒಬ್ಬ ಹಿರಿಯರು ಇಂಥ ಎರಡು ವ್ಯಕ್ತಿಗಳನ್ನು ಸಾಕಿದ್ದರು. ಇವರು ಯಾರಿಗೆ ಬೇಕಾದವರಿಗೆ ಏನು ಬೇಕಾದರೂ ಮಾತಾಡಿ, ಸಭೆಗಳಲ್ಲಿ ಕಹಿ ನಗೆ ನಗುತ್ತಿದ್ದರು. ದಿವಂಗತ ಕವಿಭೂಷಣ ಬೆಟಗೇರಿ ಕೃಷ್ಣಶರ್ಮ, ಪ್ರೊ ವಿ. ಕೃ. ಗೋಕಾಕ ಮೊದಲಾದ ಹಿರಿಯ ಸಾಹಿತಿಗಳೆಲ್ಲರೂ ಇವರ ಕಹಿ ನಾಲಗೆಯ ಬೆಂಕಿಯನ್ನು ಉಂಡವರೇ. ಈಗ ಈ ಪ್ರಯೋಗ ಬಿ. ಎಂ. ಶ್ರೀ. ಅವರ ಮೇಲಾಗಿತ್ತು. ಇಡೀ ಸಭಾಗೃಹ ತಲ್ಲಣಿಸಿತು. ಸುಪ್ರಸಿದ್ಧ ಸದ್ಗೃಹಸ್ಥರಿಗೆ ಈ ರೀತಿ ಮಾತನಾಡಿದರೂ ಯಾರಿಗೂ ಈ ಈರ್ವರ ನಾಲಗೆಯನ್ನು ಎದುರಿಸುವ ಸಾಮರ್ಥ್ಯವಿರಲಿಲ್ಲ. ಶ್ರೀಯವರೂ ಸಹ ಕ್ಷಣಮಾತ್ರ ಚಲವಿಚಲಿತರಾದರು. ಆದರೆ ರೇಗಿದಾಗ ಶ್ರೀಯವರು ಕೆರಳಿದ ಸಿಂಹವಾಗುತ್ತಿದ್ದರು. "ದಾಸನೇ? ಹೌದು ನಾನು ದಾಸ. ನಾವೆಲ್ಲರೂ ದೇವರ ದಾಸರು, ಇದರಲ್ಲಿ ಅಪಮಾನ ಪಡುವ ವಿಷಯ ಏನಿದೆ? ದೇವರ ದಾಸರಾದ ಈ ಕವಿಗಳ ಒಂದು ಸಾಹಿತ್ಯ ಪರಂಪರೆಯೇ ಕನ್ನಡದಲ್ಲಿ ಪ್ರಾರಂಭವಾಯಿತು. ಅವರು ದಾಸನ ಮಾಡಿಕೊ, ಎನ್ನ ಸಾಸಿರ ನಾಮದ ವೆಂಕಟರಮಣ ಎಂದು ಪ್ರಾರ್ಥಿಸಿಕೊಂಡರು. ಇನ್ನೂ ಹಲವರು ಹೀಗೆ ದೇವರ ದಾಸರಾಗಿ, ಅವನಿಗೆ ಶರಣರಾಗಿ ಶರಣರೆನಿಸಿಕೊಂಡು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಇವರೆಲ್ಲ ಪ್ರಾತಃಸ್ಮರಣೀಯರು. ಇವರ ಬಗ್ಗೆ ನಾಚಿಗೆ

ಪಡಬೇಕಾದುದು ಏನಿದೆ? ನನ್ನ ಬಗ್ಗೆ ನನಗೆ ನಾಚುಗೆ ಇಲ್ಲ. ನನ್ನ ವಿಚಾರಗಳಿವೆ ನಂಬುಗೆಗಳಿವೆ. ತತ್ವಗಳಿವೆ. ಅವು ನಿಮಗೆ ಸರಿ ಕಾಣಲಿಕ್ಕಿಲ್ಲ. ಆದರೆ ಅವನ್ನು ಇಟ್ಟು ಕೊಳ್ಳುವ ಸ್ವಾತಂತ್ರ್ಯ ನನಗಿದೆ..........." ಎನ್ನುವ ಧಾಟಿಯಲ್ಲಿ ಸುಮಾರು ೪೫ ನಿಮಿಷ ಕಾಲ ಅದ್ಭುತ ನೈಗೆರಾ ಭೋರ್ಗರೆದ ಹಾಗೆ ಭೋರ್ಗರೆದರು. ಭಾಷಣಕ್ಕೆ ವ್ಯತ್ಯಯವುಂಟು ಮಾಡಿದವರು ಸುಮ್ಮನೆ ಕುಳಿತರು. ಇತರರು ತೃಪ್ತಿಯಿಂದ ಈ ವಾಗ್ವೈಖರಿಯನ್ನು ಆಲಿಸಿದರು. ಜನಕ್ಕೇನೋ ಇದರಿಂದ ತೃಪ್ತಿಯಾಯಿತು. ಆದರೆ ಬಿ. ಎಂ. ಶ್ರೀಯವರ ರಕ್ತದ ಒತ್ತಡ ಹೆಚ್ಚಾಗಿತ್ತು. ಆ ಮೇಲೆ ಶ್ರೀಯವರು ಸಾಮಾನ್ಯ ವಾಗಿ ಹೊರಗೆಲ್ಲಿಯೂ ಹೋಗುತ್ತಿರಲಿಲ್ಲ.........

ಆದರೆ, ಅವರು ತೀರಿಕೊಳ್ಳುವ ಸಮಿ ಸಮೀಪದಲ್ಲಿ ಪುನಃ ಇನ್ನೊಂದು ಇಂಥ ಘಟನೆ ಅನಿವಾರ್ಯವಾಗಿ ಆಕಸ್ಮಿಕವಾಗಿ ಘಟಿಸಿತು. ೧೯೪೫ರಲ್ಲಿ ಅಕ್ಟೋಬರ ಸುಮಾರಿಗೆ ಎಂದು ಕಾಣುತ್ತದೆ, ಅಖಿಲ ಭಾರತ ಮುಂದಾಳುಗಳಲ್ಲಿ ಒಬ್ಬರಾದ ಡಾ. ಪಟ್ಟಾಭಿ ಸೀತಾರಾಮಯ್ಯನವರು ನಮ್ಮ ಕಾಲೇಜಿಗೆ ಭೆಟ್ಟಿಯಿತ್ತರು. ಪ್ರಿ. ಶ್ರೀಕಂಠಯ್ಯನವರು, ಡಾ. ಕಬ್ಬೂರ ಅವರು ಮೊದಲಾದ ಪ್ರಮುಖರು ಅವರನ್ನು ಬರಮಾಡಿಕೊಂಡರು. ಆಗ, ನಾನು ಕಾಲೇಜ್ ಯೂನಿಯನ್‌ದ ಕಾರ್ಯಾಧ್ಯಕ್ಷನಾಗಿದ್ದೆ. ವಿದ್ಯಾರ್ಥಿಗಳನ್ನು ಸಾಲಾಗಿ ನಿಲ್ಲಿಸಿ, ಅಖಿಲ ಭಾರತ ಮಟ್ಟದ ಮುಖಂಡನಿಗೆ ಸಲ್ಲಬೇಕಾದ ಮರ್ಯಾದೆ ಯೊಡನೆ ಗೌರವರಕ್ಷೆ ಕೊಡಿಸಿದೆವು. ಕಾಲೇಜಿನ ಸೆಂಟ್ರಲ್ ಹಾಃಲಿನಲ್ಲಿ ಪಟ್ಟಾಭಿಯವರ ಭಾಷಣದ ಏರ್ಪಾಟಾಗಿದ್ದಿತು. ಅವರು ಮಾತನಾಡುತ್ತ ಮಾತನಾಡುತ್ತ ಭಾಷಾವಾರು ಪ್ರಾಂತಗಳ ವಿಷಯವಾಗಿ ಏನೋ ಅಸಮಾಧಾನದ ಮಾತನ್ನಾಡಿದರು. ಆಂಧ್ರ ಮೊದ ಲಾಗಲಿ. ಉಳಿದ ಪ್ರಾಂತಗಳ ಬಗ್ಗೆ ಆ ಮೇಲೆ ನೋಡೋಣ ಎನ್ನುವದು ಅವರ ಅಭಿಪ್ರಾಯವಾಗಿತ್ತೋ ಏನೋ ನನಗೆ ಸರಿಯಾಗಿ ಕೇಳಿಸಲಿಲ್ಲ. ಪಟ್ಟಾಭಿ ಮಾತ ನಾಡುತ್ತಿದ್ದಂತೆಯೇ ಶ್ರೀಯವರ ಮುಖ ಕೆಂಪೇರಹತ್ತಿತು. ಪಟ್ಟಾಭಿ ಭಾಷಣ ಮುಗಿಯುವುದೊಂದೇ ತಡ, ಅಧ್ಯಕ್ಷೀಯ ಭಾಷಣ, ಕಾರ್ಯಕ್ರಮದ ಪಟ್ಟಿಯಲ್ಲಿ ಇರದಿದ್ದರೂ ಶ್ರೀಯವರು ಮೈಕನ್ನು ತಮ್ಮೆಡೆಗೆ ಎಳೆದುಕೊಂಡು ಪಟ್ಟಾಭಿಯವರ ವಾದಸರಣಿಯನ್ನು ಛಿದ್ರ-ವಿಚ್ಛಿದ್ರ ಮಾಡಿದರು. ಅವರ ಧ್ವನಿಯಲ್ಲಿ ಗುಡುಗಿತ್ತು. ರೋಷವಿತ್ತು, ಅಸಮಾಧಾನವಿತ್ತು. ಪಟ್ಟಾಭಿ ಏನೋ ಮಧ್ಯ ಮಾತಾಡಹೋದರು. ಆಗ ಶ್ರೀ ಮತ್ತಷ್ಟು ಕೆರಳಿ "A Seasoned Teacher need not learn anything from a politician" ಎಂದು ಆರ್ಭಟಿಸಿದರು. ಸಭೆ ಮುಗಿಯಿತು. ಆದರೆ ಸಭೆಯ ಕಾವು ಮಾತ್ರ ಮುಗಿದಿರಲಿಲ್ಲ. ಡಾ. ಕಬ್ಬೂರ ಅವರು ಪುನಃ "ಶ್ರೀಕಂಠಯ್ಯನವರೇ, ಇಷ್ಟೇಕೆ ಕೆರಳಿದಿರಿ. ಆಮೇಲೆ ಅವರಿಗೆ ಹೇಳಲಿಕ್ಕಾ ಗುತ್ತಿತ್ತು." ಅಂದರು. ಆದರೆ ಶ್ರೀ ಅದೇ ಗಡಸು ಧ್ವನಿಯಲ್ಲಿ "Dr. Kabbur, I do not want any interference from these politicians

in a cultural and vital subject like the linguistic
provinces. If these provinces do not come up ನಮ್ಮ
ಪಿಳ್ಗೆಯೇ ಇಲ್ಲ" ಎನ್ನುವ ಧಾಟಿ ಉತ್ತರ ಕೊಟ್ಟರು. ಪಟ್ಟಾಭಿ ಪಕ್ಕದಲ್ಲಿಯೇ
ಇದ್ದರು. "I will make a crusade of this. I will tell all
my fellow men what Pattabhi said and what we feel
about it." ಅಂದಿನಿಂದ ಪುನಃ ನಾಡಹಬ್ಬಗಳ ಭಾಷಣಗಳ ಆಮಂತ್ರಣಗಳನ್ನು
ಸ್ವೀಕರಿಸಹತ್ತಿದರು. ಬಾಗಿಲುಕೋಟೆಯ ಸಕ್ರಿ ಹೈಸ್ಕೂಲಿನ ಆಡಳಿತ ವರ್ಗದವರು ಆಗ
ನಾಡಹಬ್ಬವನ್ನು ಅತ್ಯಂತ ಅದ್ದೂರಿಯಿಂದ ನಡೆಸುತ್ತಿದ್ದರು. ನಮ್ಮ ಪೂಜ್ಯ ತಂದೆ
ಯವರು ಆ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಶ್ರೀಯವರಿಗೂ ನಮ್ಮ ತಂದೆಯವರ
ಪರಿಚಯವಿದ್ದಿತು. ಈ ಮೊದಲು ಅವರು ಬಾಗಿಲಕೋಟೆಗೆ ತಮ್ಮ ಶಿಷ್ಯ ಪರಿವಾರ
ದೊಡನೆ ಬಂದಾಗ ನಮ್ಮ ಮನೆಯಲ್ಲಿಯೇ ತಂಗಿದ್ದರು. ಬಾಗಿಲುಕೋಟೆಯ ಆಮಂತ್ರಣ
ಬಂದ ಕೂಡಲೇ ಅವರು ನನಗೆ ಹೇಳಿ ಕಳಿಸಿ ತಾವು ಬಾಗಿಲುಕೋಟೆಯ ಆಮಂತ್ರಣ
ಒಪ್ಪಿರುವದಾಗಿ ಹೇಳಿದರು. ನನಗೇನೋ ಅಳುಕು. ಆದರೂ ನಾನೂ ಅವರ ಕೂಡ
ಬಾಗಿಲುಕೋಟೆಗೆ ಹೋದೆ. ನಮ್ಮ ಮನೆಯಲ್ಲಿಯೇ ತಂಗಿದ್ದರು. ಅಂದಿನ ಭಾಷಣ
ಕೇಳಲು ಸುಮಾರು ೪-೫ ಸಾವಿರ ಜನ ನೆರೆದಿದ್ದರು. ಶ್ರೀಯವರು ಆಗ ಭಾಷಾವಾರು
ಪ್ರಾಂತಗಳ ಬಗ್ಗೆ ಸ್ವಲ್ಪ ಮಾತ್ರ ಪ್ರಸ್ತಾಪ ಮಾಡಿ,ಕನ್ನಡ ಸಾಹಿತ್ಯದ ಬಗ್ಗೆ ಸುದೀರ್ಘ
ವಾಗಿ ಮಾತಾಡಿದರು. ಜನರು ತಮ್ಮ ಜ್ಞಾನದಾಹವನ್ನು ಸಂಪೂರ್ಣವಾಗಿ ತೃಪ್ತಿ
ಪಡಿಸಿಕೊಂಡರು. ಮರು ದಿವಸ ಊರಿನ ಅನೇಕ ಪ್ರಮುಖರು ಬಂದು ಶ್ರೀಯವರನ್ನು
ಕಂಡು ತಮ್ಮ ಗೌರವವನ್ನು ವ್ಯಕ್ತ ಮಾಡಿದರು. ಶ್ರೀಯವರೂ ತೃಪ್ತರಾದಂತೆ
ಕಂಡರು.

ಶ್ರೀಯವರು ಘನ ವಿದ್ವಾಂಸರು, ಪ್ರಗಲ್ಭ ವಾಗ್ಮಿಗಳು, ಉತ್ತಮ ಶಿಕ್ಷಕರು,
ಶಿಷ್ಯ ವತ್ಸಲರು, ಹಿರಿಯ ಸಾಹಿತಿಗಳು, ಶಾಸ್ತ್ರಜ್ಞರು, ಭಾಷಾವಾರು ಪ್ರಾಂತ ರಚನೆ
ಯಲ್ಲಿ ಮುಂಚೂಣಿಯಲ್ಲಿದ್ದವರು. ಉತ್ತರ ಕರ್ನಾಟಕ ಮತ್ತು ಮೈಸೂರು ನಡುವಿನ
ಸಾಂಸ್ಕೃತಿಕ ಸೇತುವೆಯಾಗಿದ್ದರು, ಅವರ ವ್ಯಕ್ತಿತ್ವ ಅದ್ಭುತವಾಗಿದ್ದಿತು. ಆದರೆ ಕೆಲ
ಮಟ್ಟಿಗೆ ತೀರ ಸಮೀಪದಿಂದ ಅವರನ್ನು ನೋಡಿದ ನನಗೆ ಅವರು ಆಡಳಿತಗಾರರೆಂದು ಅಷ್ಟೇ
ಸಮರ್ಥರಿದ್ದರೆ ಎಂಬುದರ ಬಗ್ಗೆ ಸಂಶಯ. ವಿದ್ವಾಂಸ, ಕವಿ, ಅನೇಕ ಸಲ ಒಳ್ಳೆಯ
ಆಡಳಿತಗಾರನಾಗಲಾರ ಎಂಬ ಮಾತನ್ನು ಅನೇಕ ಸಲ ಕೇಳುತ್ತಿರುತ್ತೇವೆ. ಶ್ರೀಯವರ
ಬಗ್ಗೆಯೂ ಇದೇ ಮಾತನ್ನೇ ಹೇಳಬಹುದಿತ್ತೇನೋ. ಯಾಕಂದರೆ, ತೀರ ಸಣ್ಣ ಸಣ್ಣ
ಮಾತುಗಳೂ ಅವರನ್ನು ಕ್ಷೋಭೆಗೆ ಒಳಗುಮಾಡುತ್ತಿದ್ದವು. ಅನೇಕ ಸಲ ಭಾವಾವಿಷ್ಟರಾಗು
ತ್ತಿದ್ದರು. ಆಡಳಿತದಲ್ಲಿ ಬಲಗೈ ಮಾಡಿದ್ದು ಎಡಗೈಗೆ ಗೊತ್ತಿರಬಾರದು ಎಂದು
ಹೇಳುತ್ತಾರೆ. ಆದರೆ ಶ್ರೀಯವರು ತಮ್ಮ ಸಮಸ್ಯೆಯನ್ನು ಅನೇಕರೆದುರು ಚರ್ಚಿಸು



ಡಾ. ಪಟ್ಟಾಭಿ ಸೀತಾರಾಮಯ್ಯನವರಿಗೆ ಗೌರವರಕ್ಷೆ ಸಲ್ಲಿಸಿದಾಗ

(ಎಡದಿಂದ ಬಲಕ್ಕೆ) ಪ್ರೊ. ರಾ. ಯ. ಧಾರವಾಡಕರ, ಡಾ. ರಂಗನಾಥ ದಿವಾಕರ, ಡಾ. ಪಟ್ಟಾಭಿ ಶ್ರೀ ಎ. ಆರ್. ಮುಧೋಳಕರ, ಪ್ರಿ. ಬಿ. ಎಂ. ಶ್ರೀಕಂಠಯ್ಯ, ಡಾ. ಎನ್. ಬಿ. ಕಬ್ಬೂರ

ತ್ತಿದ್ದರು; ಎಷ್ಟೋ ಜನ ಇದರ ದುರ್ಲಾಭವನ್ನು ಪಡೆಯುತ್ತಿದ್ದುದೂ ಉಂಟು. ಒಂದು ಹೊಲಸು ಮೂಕರ್ಜಿ (anonymous letter) ಸಹ ಅವರಿಗೆ ಬಹಳ ದೊಡ್ಡದಾಗಿ ಕಾಣುತ್ತಿತ್ತು. ಅದಕ್ಕಾಗಿ ಅವರು ತುಂಬಾ ಪೇಚಾಡುತ್ತಿದ್ದರು. ನನ್ನಂಥ ಸಣ್ಣವರು ಈ ಮಾತನ್ನು ಈಗ ಹೇಳಬಾರದು. ಆದರೆ, ಆಗ ಅವರು ಕ್ಷೋಭೆಗೆ ಒಳಗಾಗುತ್ತಿದ್ದುದನ್ನು ನೋಡಿದರೆ ಮನಸ್ಸಿಗೆ ಬೇಜಾರಾಗುತ್ತಿತ್ತು. ಏನೇ ಆಗಲಿ ಶ್ರೀಯವರು ಕೆ. ಇ. ಬೋರ್ಡ ಕಾಲೇಜಿಗೆ ಪ್ರಥಮ ಪ್ರಿನ್ಸಿಪಾಲರಾಗಿ ದೊರಕಿದ್ದರಿಂದಲೇ ಆ ಕಾಲೇಜು ಗಟ್ಟಿಯಾಗಿ ನೆಲೆ ನಿಲ್ಲಲು ಸಾಧ್ಯವಾಯಿತು. ಅವರು ಅದಕ್ಕೆ ಭವ್ಯವಾದ ಅಕೆಡೆಮಿಕ್ ತಳಪಾಯವನ್ನು ಹಾಕಿದರು.

* * *

೧೯೪೬ ರ ಜನೆವರಿ ಐದನೆಯ ತಾರೀಖು. ಪ್ರೊ. ರಂ. ಶ್ರೀ. ಮುಗುಳಿಯವರನ್ನು ನಾನು ಕನ್ನಡ ಬಳಗದ ಕಾರ್ಯಕ್ರಮಕ್ಕಾಗಿ ಆಮಂತ್ರಿಸಿದ್ದೆ. ಅವರು ಆಗತಾನೆ ತಮ್ಮ ರನ್ನನ ಕೃತಿರತ್ನವನ್ನು ಬರೆದಿದ್ದರು. ಅದರ ಮುನ್ನುಡಿಯನ್ನು ಶ್ರೀಯವರು ಬರೆಯಬೇಕೆಂದು ಅವರ ಅಪೇಕ್ಷೆ ಇದ್ದಿತು. ಅದಕ್ಕಾಗಿ ಶ್ರೀಯವರನ್ನು ಭೇಟಿಯಾಗೋಣ ಅಂದರು. ನಾನು ಅವರ ಅನುಕೂಲ ಕೇಳಿಕೊಂಡು ಬರುತ್ತೇನೆ ಎಂದು ಹೇಳಿ ಶ್ರೀಯವರನ್ನು ಕೇಳಿದೆ. ಅವರು ಅವಶ್ಯ ಬರಬಹುದು ಎಂದು ಹೇಳಿದರು. ಬಳಗದ ನಮ್ಮ ಕಾರ್ಯಕ್ರಮ ಮುಗಿದ ಕೂಡಲೇ, ನಾವಿಬ್ಬರೂ ಶ್ರೀಯವರಲ್ಲಿ ಹೋದೆವು. ಸುಮಾರು ಮುಕ್ಕಾಲು ಗಂಟೆಯ ಆ ಸಂದರ್ಶನದಲ್ಲಿ ಹೆಚ್ಚಾಗಿ ಮಾತಾಡಿದವರು ಶ್ರೀಯವರೇ. "ತಮಗೆ ಆಯಾಸವಾಗುತ್ತಿರಬಹುದು; ನಾವು ಇನ್ನು ಬರುತ್ತೇವೆ." ಎಂದು ಎರಡು ಮೂರು ಸಲ ಹೇಳಿದೆವು. "ಇರಲಿ, ಮಾತಾಡದೆ ಏನು ಮಾಡುವುದು" ಎಂದು ಹೇಳಿ ಅವರು ಮಾತನ್ನು ಮುಂದುವರೆಸುತ್ತಿದ್ದರು.

ನಾವು ಅವರನ್ನು ಬೀಳ್ಕೊಂಡು ಹೊಸ್ತಿಲದಿಂದ ಹೊರಗೆ ಕಾಲಿಡುತ್ತಿದ್ದಂತೆಯೇ ಶ್ರೀಯವರ ಮಗಳು ಶಾರದಮ್ಮ 'ಮುಗಳಿ ಧಾರವಾಡಕರರೇ' ಎಂದು ಗಟ್ಟಿಯಾಗಿ ಕೂಗಿಕೊಂಡರು. ನಾವು ಒಳಗೆ ಹೋಗಿ ನೋಡುವುದರಲ್ಲಿಯೇ ಶ್ರೀಯವರು ಒರಗಿಕೊಂಡಿದ್ದರು. ಅದೇ ಪ್ರಸನ್ನ ಮುಖಮುದ್ರೆ, ಅದೇ ಭಾವ, ಅದೇ ಎಳೆನಗು, ಇನ್ನೂ ಮಾತನಾಡುತ್ತಿರುವರೇನೋ ಎಂಬ ಭಾವನೆ. ನಾವು ಮಾತನಾಡಿಸಿದರೆ ಮಾತನಾಡಲಿಲ್ಲ. ಕೈಕಾಲು ತಿಕ್ಕಿದೆವು. ಯಾವುದಕ್ಕೂ ಪ್ರತಿಕ್ರಿಯೆ ಇರಲಿಲ್ಲ. ಸಮೀಪದಲ್ಲಿಯೇ ಇರುತ್ತಿದ್ದ ಡಾ. ಕಬ್ಬೂರ ಮತ್ತು ಡಾ. ಕಮಲಾಪುರ ಅವರನ್ನು ಕರೆತರಲು ಇಬ್ಬರು ವಿದ್ಯಾರ್ಥಿಗಳನ್ನು ಸೈಕಲ್ ಮೇಲೆ ಕೊಟ್ಟು ಕಳಿಸಿದೆ. ನಾಲ್ಕೈದು ನಿಮಿಷಗಳಲ್ಲಿಯೇ ಡಾ. ಕಮಲಾಪುರ ಬಂದರು. ಶ್ರೀಯವರ ಕೈ ಮುಟ್ಟಿ ನೋಡಿದರು. ಡಾಕ್ಟರರ ಮುಖ ಮ್ಲಾನವಾಯಿತು. ನಾವಿಬ್ಬರೂ ಹೊರಗೆ ಹೋದೆವು. ನಾನು "ಏನು ಡಾಕ್ಟರೇ, ಏನಾಗಿದೆ" ಎಂದು ಕೇಳಿದೆ..........

"ಡಾ. ಕಬ್ಬೂರ ಅವರೂ ಬರಲಿ, ಬಂದ ಮೇಲೆಯೇ ಹೇಳೋಣವಂತೆ" ಅಂದರು. ಅಷ್ಟರಲ್ಲಿಯೇ ಡಾ. ಕಬ್ಬೂರ ಅವರೂ ಬಂದರು. ಅವರೂ ನೋಡಿದರು. ಅವರ ಮುಖವೂ ಮ್ಲಾನವಾಯಿತು. ಆಗಲೇ ಶ್ರೀಯವರ ಪ್ರಾಣಪಕ್ಷಿ ಹಾರಿಹೋಗಿತ್ತು. ಅವರು ಮುಂದಿನ ಕ್ರಿಯೆಗಳ ಬಗ್ಗೆ ಅವರ ಮಗಳನ್ನು, ಮಗನನ್ನು ಕೇಳೋಣ ಎಂದು ನನ್ನ ಕಿವಿಯಲ್ಲಿ ಹೇಳಿದರು. ದೇಹವನ್ನು ಬೆಂಗಳೂರಿಗೆ ಕಳಿಸಬೇಕೆ? ಅಥವಾ ಇಲ್ಲಿಯೇ ಧಾರವಾಡದಲ್ಲಿಯೇ ಸಂಸ್ಕಾರ ಮಾಡಬೇಕೆ? ಇಲ್ಲಿಯೇ ಸಂಸ್ಕಾರ ಮಾಡುವುದಾದರೆ ಶ್ರೀಯವರ ಆಪ್ತ-ಮಿತ್ರರಾರಾದರೂ ಬರಬೇಕೆ ಎಲ್ಲವನ್ನೂ ಕೇಳಿದೆವು. ಅವರ ಮಗಳು ಮತ್ತು ಮಗ ಅಷ್ಟೇ ಧೈರ್ಯದಿಂದ, ಸಮಾಧಾನದಿಂದ "ಇಲ್ಲ, ಇಲ್ಲಿಯೇ ಮುಗಿಸಿಬಿಡೋಣ. ಅಲ್ಲಿಂದ ಬರುವವರು ಯಾರೂ ಇಲ್ಲ" ಎಂದರು. ಇಷ್ಟನ್ನುವದರಲ್ಲಿಯೇ ಶ್ರೀಯವರು ವೈಕುಂಠವಾಸಿಗಳಾದ ಸುದ್ದಿ ದಳ್ಳುರಿಯಂತೆ ಊರ ತುಂಬೆಲ್ಲ ಹಬ್ಬಿತ್ತು. ಕರ್ನಾಟಕ ಕಾಲೇಜಿನ ಪ್ರೊ. ಕೋರಿಯಾ ಅಫೊನ್ಸೊ ಮೊದಲಾದ ಹಿರಿಯ ಪ್ರಾಧ್ಯಾಪಕರು ಬಂದು ಶ್ರೀಯವರ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವನ್ನು ಅರ್ಪಿಸಿದರು. ಊರಿನ ಪ್ರಮುಖರೂ, ಹುಬ್ಬಳ್ಳಿ, ಹಾವೇರಿ, ಲಕ್ಷ್ಮೇಶ್ವರ, ಶಿರಹಟ್ಟಿ ಮೊದಲಾದ ಕಡೆಯ ಪ್ರಮುಖರೂ ಅಂತ್ಯದರ್ಶನವನ್ನು ಪಡೆದರು. ವಿದ್ಯಾರ್ಥಿಗಳಂತೂ ಧಾರಾಕಾರವಾಗಿ ಕಣ್ಣೀರು ಸುರಿಸುತ್ತ, ಶ್ರೀಯವರ ದೇಹವನ್ನು ವೀಕ್ಷಿಸುತ್ತ ಅಚಲವಾಗಿ ನಿಂತಿದ್ದರು. ಕ್ಷಣಮಾತ್ರದಲ್ಲಿ, ವಿಕ್ಟೋರಿಯಾ ಹೈಸ್ಕೂಲ್, ಕರ್ನಾಟಕ ಹೈಸ್ಕೂಲ್, ಕೆ. ಇ. ಬೋರ್ಡ ಹೈಸ್ಕೂಲ್, ಪ್ರಾಥಮಿಕ ಶಾಲೆ ಮೊದಲಾದ ಸಂಸ್ಥೆಗಳ ವಿದ್ಯಾರ್ಥಿಗಳು, ಅಧ್ಯಾಪಕವೃಂದ, ಊರ ಹಿರಿಯ ನಾಗರಿಕರು, ಉತ್ತರ ಕರ್ನಾಟಕದ ಹಲಭಾಗಗಳ ಜನರು ಸಮುದ್ರ ನೆರೆದಂತೆ ನೆರೆದರು. ಕಾಲೇಜಿನ ಆವರಣದ ತುಂಬೆಲ್ಲ ಕಣ್ಣೀರು ಸುರಿಸುತ್ತಿರುವ ಮ್ಲಾನವದನಗಳೇ. ಶ್ರೀಯವರ ಪ್ರಸನ್ನಮುಖದ ಭೌತಿಕ ದೇಹವನ್ನು ಎಲ್ಲರ ದರ್ಶನಕ್ಕಾಗಿ ಅವರ ಮನೆಯ ಮುಂದಿನ ಮೊಗಸಾಲೆಯಲ್ಲಿ ಇಡಲಾಗಿತ್ತು. ಸಾಯಂಕಾಲ ಐದುಗಂಟೆಯ ಸಮಯಕ್ಕೆ ರಾಜೋಚಿತ ಮರ್ಯಾದೆಯೊಂದಿಗೆ, ಸೇವಾದಳದ ಸ್ವಯಂ ಸೇವಕರ ಗೌರವ ರಕ್ಷೆಯೊಡನೆ ಶ್ರೀಯವರ ಪಾರ್ಥಿವ ಶರೀರದ ಮೆರವಣಿಗೆ ರುದ್ರಭೂಮಿಯ ಕಡೆಗೆ ಸಾಗಿತು.

ಈಗ, ಶ್ರೀ ಕೇವಲ ಅವರ ಮನೆಯವರ ಸ್ವತ್ತಾಗಿರಲಿಲ್ಲ; ಸಮಗ್ರ ಧಾರವಾಡದ, ನಾಡಿನ, ಸ್ವತ್ತಾಗಿದ್ದರು. ೧೯೧೧ ರಲ್ಲಿ ತಮ್ಮ ಆಯುಷ್ಯದ ಇಪ್ಪತ್ತೇಳನೆಯ ವರ್ಷದಿಂದ ಶ್ರೀಯವರಿಗೆ ಒದಗಿದ್ದ ಧಾರವಾಡದ ನಂಟು ಅವರ ಜೀವನದ ಅರವತ್ತೆರಡನೆಯ ವರ್ಷದಲ್ಲಿ ಅವರನ್ನು ತನ್ನ ಗರ್ಭದಲ್ಲಿಯೇ ಲೀನ ಮಾಡಿಕೊಂಡಿತು. ೧೯೪೬ರ ಜನೆವರಿ ಐದರಂದು ಅವರ ಪಾರ್ಥಿವ ಶರೀರವನ್ನು ಶ್ರೀಗಂಧದ ಚಕ್ಕೆಗಳನ್ನು ಸುರುವಿ ಅಗ್ನಿನಾರಾಯಣನಿಗೆ ಸಮರ್ಪಿಸಲಾಯಿತು. ಆ ಪಾಂಡಿತ್ಯ, ಆ ಭವ್ಯ ಸುಂದರ ವ್ಯಕ್ತಿತ್ವ, ಆ ಎಳೆನಗು, ಆ ಭೋರ್ಗರೆವ ವಾಗ್ಮಿತೆ, ಆ

ಕಾವ್ಯ, ಆ ರಸಿಕತೆ, ಆ ಸ್ನೇಹ, ಆ ಶಿಷ್ಯವಾತ್ಸಲ್ಯ, ಆ ದರ್ಶನ, ಎಲ್ಲವೂ ಕ್ಷಣ ಮಾತ್ರದಲ್ಲಿ ಭೂತಕಾಲದ ವಿಷಯುಗಳಾಗಿದ್ದವು. ಮಾನಸಿಕವಾಗಿ, ದೈಹಿಕವಾಗಿ, ಉತ್ತರ ದಕ್ಷಿಣ ಕರ್ನಾಟಕದ ಸುಂದರ ಬಂಧುರ ಸಾಮರಸ್ಯವನ್ನು ಅಪೇಕ್ಷಿಸುತ್ತಿದ್ದ ಶ್ರೀಯವರು ಆ ಸಾಮರಸ್ಯದ ಪ್ರತೀಕವಾಗಿ, ಸಾಂಸ್ಕೃತಿಕ ರಾಯಭಾರಿಯಾಗಿ, ಹಳೆಯ ಮೈಸೂರಿನಲ್ಲಿ ಮೂಡಿ ಉತ್ತರ ಕರ್ನಾಟಕದವರೆಗೆ ಕೈ ಚಾಚಿದ ಸುವರ್ಣ ಮನೋಹರ ಮಳೆಬಿಲ್ಲ ಸೇತುವೆಯಾಗಿ, ಧಾರವಾಡದ ನೆಲದಲ್ಲಿ ತಮ್ಮ ಪಂಚ ಪ್ರಾಣಗಳನ್ನು ಅರ್ಪಿಸಿದರು. ಇಡೀ ಧಾರವಾಡವೇ 'ಹಾ' ಎಂದು ಮರುಗಿತು.

೩

ಶ್ರೀಯವರ ನಿಧನಾನಂತರ, ಕಾಲೇಜಿನ ವಾರಸುದಾರಿಕೆ ನನ್ನ ಅ-ಸಮರ್ಥ ಭುಜಗಳ ಮೇಲೆ ಕೆಲಕಾಲ ಬಿದ್ದಿತು. ಆಡಳಿತ ವರ್ಗದವರು ನನ್ನನ್ನು ತಾತ್ಪೂರ್ತಿಕ ಪ್ರಿನ್ಸಿಪಾಲನನ್ನಾಗಿ ನೇಮಿಸಿದರು. ನಾನು ಪ್ರಾಚಾರ್ಯನಾಗಿ ಕೆಲಸವಹಿಸಿಕೊಂಡ ಕೂಡಲೇ ಶ್ರೀಯವರಿಗೆ ಕೊನೆಯ ನಮನವಾಗಿ,ಅವರದೊಂದು ತೈಲ ಚಿತ್ರವನ್ನು ಕಾಲೇಜಿನ ಸಭಾಭವನದಲ್ಲಿ ಹಾಕುವ ವ್ಯವಸ್ಥೆ ಮಾಡಿದೆವು; ಶ್ರೀಯವರ ಹೆಸರಿನಲ್ಲಿ ಶ್ರೀಕಂಠಯ್ಯ ಸುವರ್ಣಪದಕದ ವ್ಯವಸ್ಥೆ ಮಾಡಿದೆವು. ಶ್ರೀಯವರ ಹೆಸರಿನಲ್ಲಿ ಕಾಲೇಜ ವಿದ್ಯಾರ್ಥಿಗಳಿಗಾಗಿ ಪ್ರಬಂಧ ಸ್ಪರ್ಧೆಯನ್ನೇರ್ಪಡಿಸಿದೆವು. ಮೂರು ನಾಲ್ಕು ವರ್ಷಕಾಲ ಜನೆವರಿ ೫ರಂದು ಎ. ಸೀ. ಮೂರ್ತಿರಾವ್ ಮೊದಲಾದ ಪಂಡಿತರ ಭಾಷಣಗಳ ಏರ್ಪಾಟು ಮಾಡಿದೆವು. ಕುರ್ತಕೋಟಿ, ಮೊಕಾಶಿ ಪುಣೇಕರ, ಗೋವಿಂದ ಕಣೇಕಲ್ ಮೊದಲಾದ ವಿದ್ಯಾರ್ಥಿಗಳ ಕವನ ಸಂಕಲನವನ್ನು. ಶಿವಪುತ್ರಪ್ಪ ಆನಾಡ ಅವರ ಆರ್ಥಿಕ ಸಹಾಯದಿಂದ ಪ್ರಕಟಿಸಿ, ಶ್ರೀಯವರ ಪದತಲದಲ್ಲಿ ಅದನ್ನು ಸಮರ್ಪಿಸಿದೆವು. ಅವರು ಕೊಟ್ಟ ಸ್ಫೂರ್ತಿಯನ್ನು ನೆನೆದುಕೊಂಡು ಕಾಲೇಜಿನ–ತೇರನ್ನು ಹಾಗೆಯೇ ಮುಂದೆ ಮುಂದೆ ಸಾಗಿಸಿಕೊಳ್ಳುತ್ತ ಬಂದೆವು. ಶ್ರೀಯವರ ಪ್ರಭಾವಮುದ್ರೆ ಎಳೆಯ ಮನಸ್ಸುಗಳ ಮೇಲೆ ಎಷ್ಟರ ಮಟ್ಟಿಗೆ ಆಗಿತ್ತೆಂಬುದನ್ನು ತಿಳಿಸಲು, ಆಗ ಅಂದರೆ ೧೯೪೬ ರಲ್ಲಿ, ಶ್ರೀಯವರ ವಿದ್ಯಾರ್ಥಿಗಳಾಗಿ ಇಂಟರಮೀಡಿಯೇಟ್ ವರ್ಗದಲ್ಲಿ ಓದುತ್ತಿದ್ದ ಶ್ರೀ ಗೋವಿಂದ ಕಣೇಕಲ್ ಹಾಗೂ ಶ್ರೀ ಶಂಕರ ಮೊಕಾಶಿ (ಪುಣೇಕರ) ಅವರು ಅಂದು ಬರೆದ ಕವನಗಳನ್ನು ಈ ಮುಂದೆ ಕೊಡುತ್ತಿದ್ದೇನೆ :

ಇದು ಶ್ರೀ ಗೋವಿಂದ ಕಣೇಕಲ್ ಇವರ ಕವಿತೆ

'ಶ್ರೀ'ಯವರಿಗೆ......

ಏಳು ಕನ್ನಡ 'ಶ್ರೀ'ಯೇ, ವಿದ್ಯೆಯ ಖನಿಯೇ, ಸ್ಫೂರ್ತಿಯ ಬುಗ್ಗೆಯೇ,
ಇರುಳು ಹಗಲೆನ್ನದಲೆ ದುಡಿದಿಹ ನಿಮಗೆ ಇಂತಹ ನಿದ್ದೆಯೇ,
ತಂದೆ ಏಳೈ ನಾಡನಾಯಕ, ಹಿಡಿದು ಕನ್ನಡ ಬಾವುಟ,
ಗೆಲ್ಗೆ ಕನ್ನಡ ಎಂದು ಘೋಷಿಸು ಇಡುಗೆ ನಾದವು ಬಾನ್‌ಮುಟ!

ಬೆಳಗಿನಿಂದಲಿ ಬೈಗುವರೆಗೂ ಸರ್ವಜನ ಸುಖಕಾಗಿಯೇ
ಮರೆತು ದಣಿವನು, ಬೆಳಗಿ ಇರುಳಲಿ ಸರಿವ ದಿನಕರನಂತೆಯೇ
ಮೊದಲಿನಿಂದಲಿ ಕೊನೆಯವರೆಗೂ ಕನ್ನಾಡಿನ ಕಣ್ವರೇ,
ನಾಡು—ನುಡಿಗಳ ಸೇವೆಗೈಯುತ, ನಗುತ ನಿದ್ರೆಗೆ ಸಂದಿರೇ

ಕನ್ನಡಾಂಬೆಯ ಕಂಠಹಾರದ 'ಶ್ರೀ' ರತ್ನವು ಕಳಚಿತೆ,
ಕನ್ನಡಾಕಾಶದಲಿ ಬೆಳಗಿದ ಶುಕ್ರ ಕಣ್ಮರೆಯಾಯಿತೇ
ಜನ್ನ ಮುಗಿಸುವ ಮೊದಲೆ ಏಕೀಕರಣ ದೀಕ್ಷಿತರಳಿದರೇ,
ಚಿನ್ನ ಕನ್ನಡ ಜೇನ ನುಲಿಯುವ ಮಧುರ ಕಂಠರು ಕಳೆದರೇ!

ಇಪದ ಹೊಂಗನಸುಗಳ ನನಸಾಗಿರಿಸೆ ಸಗ್ಗಕೆ ನಡೆದರೇ
ಕನ್ನಡಾಂಬೆಗೆ ಅಮೃತತರಲೇನಜ್ಜ ಮೇಲಕೆ ಜಿಗಿದರೆ?
ಬಾನಮಟ ಏರಿಸಲು ಬಾವುಟ ಬಾನಿನಾಚೆಗೆ ಸರಿದರೆ?
ಗರಳಗೊರಳನ ಕೊರಳಹಾರದ 'ರತ್ನ ಶ್ರೀ' ಯವರಾದರೆ?

ಆಂಗ್ಲ ಭಾಷಾಭ್ಯಾಸದಲ್ಲಿಯ ಅಮರ ಕೀರ್ತಿಯ ಪಡೆದಿರಿ
ಅವಳ ತೊಡಿಗೆಯ ಇವಳಿಗಿಡುತಲಿ ನುಡಿಗೆ ಹುಲುಸನು ತಂದಿರಿ.
ರಾಜಸೇವಾಸಕ್ತ, ದಾನಿಯೇ, ಮಾತುಗಾರರೆ, ಸಾಹಿತಿ,
ಕವಿ, ವಿಮರ್ಶಕ. ಮರೆಯಲಾಪೆವೆ ನಿಮ್ಮ ಮಂಗಳ ಮೂರುತಿ,

ಶರಣಸತ್ಯವ ಮರಣದಲ್ಲಿ ಕಾಣೆಂಬ ಅನುಭವ ಮಾತಿನ
ನೈಜ ತೋರಿತು ನಿಮ್ಮ ಮರಣದ ದಿವ್ಯ ಭವ್ಯ ನಿದರ್ಶನ,
ನಾಡು–ನುಡಿ ಹೊಂಗನಸ ಕಾಣುತ, ನಗುತ ನಿದ್ರೆಗೆ ಸಂದಿರಿ.
ಇಂಥ ಸುಖಮಯ, ದಿವ್ಯ ಮರಣವ, ಗುರುವೆ, ಶಿಷ್ಯಗೆ ನೀಡಿರಿ. (೬) ೧.

—ಇದು ೧೯೪೬ ರಲ್ಲಿ ಇಂಟರ ಮಿಡಿಯೇಟ ವರ್ಗದಲ್ಲಿ ಓದುತ್ತಿದ್ದ ಒಬ್ಬ ವಿದ್ಯಾರ್ಥಿ ಬರೆದ ಕವನ-ಶ್ರೀಯವರಿಗೆ ಸಲ್ಲಿಸಿದ ನಮನ. ಶ್ರೀ ವ್ಯಕ್ತಿತ್ವದ, ಕಾರ್ಯಸಾಧನೆಯ ಎಲ್ಲಫೈಲುಗಳ ಪ್ರಭಾವವನ್ನು ಈ ಕವಿತೆಯಲ್ಲಿ ಕಾಣುತ್ತೇವೆ.

ಇದರಂತೆಯೇ, ಇದೇ ಕಾಲಕ್ಕೆ, 'ಕನಸಿಗ' ಎಂಬ ಕಾವ್ಯನಾಮದಲ್ಲಿ ಶ್ರೀ ಶಂಕರ ಮೊಕಾಶಿ–ಪುಣೇಕರ ಅವರು ಬರೆದ ಈ ಕವನವನ್ನು ನೋಡಬಹುದು. ೨.

ಕನ್ನಡದ ತಂದೆಗೆ

ಮಿಂಚಿನಂದದಿ ನೀವು ಕೈಮೀರಿ ನಡೆದಿಹಿರಿ
ನಿರ್ವಾಣ ಪಥವನ್ನು ಹಿಡಿದು ಮುಂದೆ,
ಕೊಂಚ ಕರುಣೆಯು ಇಲ್ಲವೇನಯ್ಯ ಮಗುಗಳಲಿ
ಗುರುವರ್ಯ, ಯೋಗಿ, ಹೇ ಕನ್ನಡದ ತಂದೆ (೧)

ಮಗುದೊಮ್ಮೆ ನಿಮ್ಮ ನಗುಮೊಗವ ಕಾಣುವೆವೆಂಬ
ಹಗಲು ಗನಸುಗಳನ್ನು ಕಾಣುತಿರಲು
ಉದುರಿಹೋಯಿತು ಪರ್ಣ, ಮುದುರಿ ಹೋಯಿತು ಪುಷ್ಪ
ನೋಡ ನೋಡುತ ಸುತ್ತು ಬಟ್ಟ ಬಯಲು, (೨)

ಎನಿತೋ ವರುಷಗಳಿಂದ ಬೆಳಕು ನೀಡುತಲಿರುವ
ತಾರೆಯಿದು ಚಿರವಾಗಿ ಬಾಳಬಹುದು–
ಎನ್ನುತಿರೆ ಉದುರಿತ್ತೆ ಕಾಲನುದರದಲಿಂದು
–ಸುತ್ತು ಕಾಳ್ಗತ್ತಲೆಯೆ ಆಳಲಿಹುದು. (೩)

೧) ಗಾನಕೇಳಿ, ನಾಕವಿ ಸಂಘ, ೧೯೪೮, ಪು. ೫೨
೨) ಅದೇ, ಪು ೪, ೫

ಒಂದು ವರುಷದ ಸ್ನೇಹಬಂಧನದ ತಂದ್ರಿಯಲಿ
ಧನ್ಯರಾದೆವು ನಾವು ನಿಮ್ಮಡಿಯ ಬಳಿಗೆ,
ಜೀವಿತದ ವೈಭವದ ಸಪ್ತವರ್ಣವ ತೋರಿ
ಹೊಸದಾರಿ ನೀಡಿದಿರಿ ನಮ್ಮ ನಡೆವಳಿಗೆ. (೪)

ತೆರೆಯು ತಿರುಗಿತು, ನೀವು ಸ್ಥಿರವಾಗಿ ಉಳಿದಿರೈ
'ವಿಶ್ವಭಾರತಿ ಶರಣು' ಎಂದು ಘೋಷಿಸುತ,
ಕೊನೆಯ ಉಸುರಿನವರೆಗೂ 'ಋತವೊಂದೇ ಗೆಲ್ಲುವದು'
ಎಂಬ ಗೀತವೇ ನಿಮ್ಮ ಹೃದಯಗಾಥ (೫)

ಮನೆಯ ಅಂಗಳದಲ್ಲಿ ಮರಳಿ ಅರಳಿವೆಯೆರಡು
ಚೆಂಗುಲಾಬಿಗಳಿಂದು, ಕಂಪನೆರಚುತ್ತ
ಅವನು ಕಾಣುತ 'ದೇವಕೃಪೆ' ಯೆಂದು ಉಸಿರಿಡುವ
ಯೋಗಿವರ್ಯನು ಮಾತ್ರ ತೆರಳಿಹನು ಎತ್ತ. (೬)

೪

ಶ್ರೀಯವರನ್ನು ಕುರಿತು ಇಬ್ಬರು ವಿದ್ಯಾರ್ಥಿಗಳು ವ್ಯಕ್ತಮಾಡಿದ ಭಾವನೆಗಳಿವು. ಶ್ರೀಯವರಂತೆಯೇ ಸ್ನೇಹದ ಗಾಢ ಸೇತುವೆಯಾಗಿ ಉತ್ತರ ಕರ್ನಾಟಕ ಹಾಗೂ ಹಳೆಯ ಮೈಸೂರನ್ನು ಹೊಂದಿಸಿದವರು ದಿವಂಗತ ವಿ. ಸೀ ಯವರು. ಅವರೂ ಶ್ರೀಯವರ ನಿತಾಂತ ಶಿಷ್ಯರು. ಉತ್ತರ-ಕರ್ನಾಟಕವೂ ಸಹ ಅವರನ್ನು ಅಷ್ಟೇ ಆದರದಿಂದ, ಗೌರವದಿಂದ ವಾತ್ಸಲ್ಯದಿಂದ-ಕಂಡಿತು. ೧೯೩೧ ರಲ್ಲಿ ಕಾರವಾರದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಅವರು ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರು. ೧೯೫೪ ರಲ್ಲಿ ಕುಮಟೆಯವರು ಅವರನ್ನು ೩೬ ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರನ್ನಾಗಿ ಆಮಂತ್ರಿಸಿ ಸಂತೋಷಪಟ್ಟಿರು. ಅದೇ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದವರು ೧೯೬೩ ರಲ್ಲಿ ಅವರನ್ನು ತಮ್ಮ ಕಾಲೇಜಿನ ಪ್ರಿನ್ಸಿಪಾಲರಾಗಿ ಆಗಮಿಸಬೇಕಾಗಿ ಆಮಂತ್ರಿಸಿವರು. ಶ್ರೀಯವರು ೧೯೪೪ ರಲ್ಲಿ ಧಾರವಾಡಕ್ಕೆ ಬಂದಂತೆ, ವಿ.ಸೀ. ಯವರು ೧೯೬೩ ರಲ್ಲಿ ಹೊನ್ನಾವರಕ್ಕೆ ಬಂದು ಅಲ್ಲಿಯ ಕಾಲೇಜಿನ ಪ್ರಿನ್ಸಿಪಾಲರಾಗಿ ಎರಡು

ವರ್ಷ ಕಾಲ ಸೇವೆ ಸಲ್ಲಿಸಿದರು. ದಿ.ವಿ.ಸೀ ಯವರು ಉತ್ತರ ಕರ್ನಾಟಕದ ಜನರ ಭಾವನೆಗಳನ್ನು ಅಂತಃಕರಣವನ್ನು, ಪ್ರತ್ಯಕ್ಷವಾಗಿ ಬಲ್ಲವರು. ಅವರು ದಿವಂಗತ ಶ್ರೀಯವರ ಧಾರವಾಡ ವಾಸ್ತವ್ಯದ ಬಗ್ಗೆ ಹೇಳಿದ ಮಾತುಗಳು ಮಹತ್ವಪೂರ್ಣವಾಗಿವೆ. ವಿ. ಸೀ ಹೀಗೆ ಹೇಳುತ್ತಾರೆ.

"ಧಾರವಾಡಕ್ಕೆ ಅವರು ಹೋಗುವುದು ಅಲ್ಲಿನ ಅನೇಕರಿಗೆ ಅಷ್ಟೇನೂ ಸಂತೋಷವದ್ದಲ್ಲ, ಒಂದು ಕಾರಣ ಮೈಸೂರಿಂದ ಬೆಂಗಳೂರಿಗೆ ಬಂದದ್ದೇ ಅವರಿಗೆ ಹಿತವಾದ ಆಪ್ತವಾದ ಆವರಣ ದೊರೆಯದಿದ್ದುದು. ಅಲ್ಲಿ ಜನ ವಿಶ್ವಾಸದಲ್ಲಿ ಅವರಿಗೆ ತೋರಿಸಿದ ಗೌರವದಲ್ಲಿ, ಇಲ್ಲಿನ ಯಾರಿಗೂ ಕಡಿಮೆಯಾಗಲಿಲ್ಲ.... ಎನ್. ಎಸ್. ಸುಬ್ಬರಾಯರು ಕನ್ನಡ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಇಲ್ಲಿ ಕೈಗೊಂಡಿದ್ದರು. ಅವನ್ನು ಮುಂದುವರಿಸೋಣ: ವಿದ್ಯಾ ಇಲಾಖೆಯಲ್ಲೆಲ್ಲ ಕನ್ನಡ ಶ್ರದ್ಧೆ. ಅದಕ್ಕೆ ಸರಿಯಾದ ಪಾಠ ಕ್ರಮ, ಪುಸ್ತಕ ಪ್ರಪಂಚ ಬೆಳೆದು ಒಂದು ಹೊಸ ಸಾಹಿತ್ಯ ಮತ್ತು ಪ್ರಕಾರ ಬೇಗ ಇಲ್ಲಿ ಬೆಳೆಯಲಿ, ಶಕ್ಯವಾದರೆ ಮಾಡೋಣ (ಎಂದು ಅವರಿಗೆ ಇತ್ತು) ಆಗ ಆಗದಿದ್ದುದು ಅವರಲ್ಲಿ....ಕೆಲದಿನ ಅತೃಪ್ತಿಯನ್ನು ಉಂಟು ಮಾಡಿತ್ತು.ಎಲ್ಲಕ್ಕಿಂತ ಹೆಚ್ಚಾಗಿ ಅವರ ಮನಸ್ಸಿನಲ್ಲಿ ಧಾರವಾಡ ಸಂಬಂಧದಲ್ಲಿ ಇದ್ದುದು ತುಂಗಭದ್ರೆಯ ಆಚೆ ಕಡೆ ಬೊಂಬಾಯಿ–ಪೂನಾಗಳ ಪ್ರಭಾವದಿಂದ ಬೆಳೆದಿದ್ದ ಕಾಲೇಜ ಕನ್ನಡ ವಿದ್ಯಾರ್ಥಿಗಳ ಮನಸ್ಸು, ಇಲ್ಲಿ ತಾವು ಬೆಳೆಸಬೇಕೆಂದಿದ್ದು, ಬೆಳೆಸಲು ಯತ್ನಿಸಿದ್ದ ರೀತಿಗೆ, ಅನುವಾದರೆ, ಒಂದು ಬಗೆಯ ಮನಸ್ಸು ಪಾಠ ಪ್ರವಚನ, ಸಾಹಿತ್ಯದೃಷ್ಟಿ, ವಿಮರ್ಶೆಯ ಬೆಲೆಗಾಣ್ಕೆ ಅಲ್ಲಿಯೂ ಬೆಳೆಯಲಿ, ಇದು ಒಟ್ಟು ಒಂದು ದೇಶ, ಧಾರವಾಡವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಉತ್ತರ ಕರ್ನಾಟಕ ಪ್ರಾಂತದಲ್ಲೆಲ್ಲ ಸಾಹಿತ್ಯ ಸಂಸ್ಕೃತಿಗಳ ಏಕರೂಪವಾದ ಒಂದು ಮನಸ್ಸು ಬೆಳೆಸುವದಕ್ಕೆ ಯತ್ನಿಸೋಣ ಎಂದಿತ್ತು, ಇದು ಬಲವಾದ ಪ್ರೇರಣೆ, ನಮಗೆ ಒಂದೇ ಒಂದು ಅಳುಕು. ಅವರ ಆರೋಗ್ಯ. ರಕ್ತದಲ್ಲಿನ ಶರ್ಕರ ಭಾಗವ ವ್ಯಾಧಿಯಿಂದ ಅನುವಾಗಿರಲಿಲ್ಲ....ಅವರೇನೋ ಒಪ್ಪಿಕೊಂಡು ಹೋದರು, ಅಲ್ಲಿರುವಷ್ಟು ಕಾಲವೂ ಸ್ನೇಹಿತರೂ, ಸಹೃದಯರಾದ ಶಿಷ್ಯವರ್ಗವೂ ಬೆಳೆಯಿತಾದರೂ ಹೆಚ್ಚು ಕಾಲ ಅವರು ಇರುವದಾಗಲಿಲ್ಲ. ಯಾವ ಉದ್ದೇಶದಿಂದ ಅವರು ಅಲ್ಲಿಗೆ ಹೋದರೋ, ಅದು ನೆರವೇರುವುದಕ್ಕೆ ಕಾಲ ಬೇಕಿತ್ತು. ಕಾಲ ದೊರೆಯಲಿಲ್ಲ." ೧.

ನಿಜ; ಶ್ರೀಯವರ ಘನೋದ್ದೇಶ ಸಂಪೂರ್ಣವಾಗಿ ಫಲಪ್ರದವಾಗಲು ಸಾಕಷ್ಟು ಕಾಲಾವಕಾಶ ಬೇಕಿತ್ತು. ಆದರೆ ಅದಕ್ಕಾಗಿ ನಾವು ಆ ಅ-ಸಮಾಧಾನ ಪಟ್ಟುಕೊಳ್ಳುವ

---

೧. ಶ್ರೀ ಸಾಹಿತ್ಯ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೧೯೮೩ ಪು· ೪೮–೪೯.

ಕಾರಣವಿಲ್ಲ. ಇದ್ದ ಅಲ್ಪ ಕಾಲದಲ್ಲಿಯೇ ಅವರು ಉತ್ಕಟ ಚಿತ್ತದ ಸ್ಫೂರ್ತಿ, ಕನ್ನಡ ಪ್ರಜ್ಞೆ, ಅಖಂಡ ಕರ್ನಾಟಕ ಕಲ್ಪನೆ, ಕಾವ್ಯ ಮೀಮಾಂಸಾ ದೃಷ್ಟಿ, ವಿದ್ವತ್ತಿಗಾಗಿರಬೇಕಾದ ಪರಿಶ್ರಮ, ಸತತೋದ್ಯೋಗ ಪ್ರವೃತ್ತಿ ಎಲ್ಲಕ್ಕೂ ಹೆಚ್ಚು ಜೀವನವನ್ನು ಸಮಗ್ರವಾಗಿ ಕಾಣಬೇಕೆಂಬ ಶ್ರೀ-ಸಮನ್ವಯ ದೃಷ್ಟಿ,–ಉತ್ತರ ಕರ್ನಾಟಕದ ಬಾಂದಳದಲ್ಲಿ ದಿಗದಿಗಂತದಲ್ಲಿ ಮೂಡಿನಿಂತಿರುವ ನಾನಾವರ್ಣದ ಮಳೆಬಿಲ್ಲಿನಂತೆ ಪ್ರಶಾಂತವಾದ ಹೃದಯಾಹ್ಲಾದವನ್ನು ಕೊಡುತ್ತಿದೆ. ಇದಕ್ಕಾಗಿ ಧಾರವಾಡ ಅವರಿಗೆ ಎಂದೆಂದಿಗೂ ಕೃತಜ್ಞವಾಗಿದೆ.

ಶ್ರೀಕಂಠಯ್ಯನವರ ಕಂಠಶ್ರೀ

ಕೇಯೂರಾ ನವಿಭೂಷಯಂತಿ ಪುರುಷಂ, ಹಾರಾ ನ ಚಂದ್ರೋಜ್ವಲಾ,ನಸ್ನಾನಂ, ನವಿಲೇಪನಂ, ನಕುಸುಮಂ, ನಾಲಂಕೃತಾ ಮೂರ್ಧಜಾ, ವಾಣ್ಯೇಕಾ ಸಮಲಂಕರೋತಿ, ಪುರುಷಂ, ಯಾ ಸಂಸ್ಕೃತಾ ಧಾರ್ಯತೇ ಕ್ಷೀಯಂತೆ ಖಲು ಭೂಷಣಾನಿ ಸತತಮ್ ವಾಗ್ಭೂಷಣಮ್ ಭೂಷಣಮ್.

—ಎಂಬುದು ಆರ್ಯೋಕ್ತಿ. ಮನುಷ್ಯನಿಗೆ ಒಡವೆ ತೊಡವೆಗಳೆಲ್ಲ ಭೂಷಣವಲ್ಲ. ಅವನ ವಾಣಿಯೇ ಅವನಿಗೆ ಭೂಷಣ. ಈ ಮಾತು ಬಿ. ಎಂ. ಶ್ರೀಕಂಠಯ್ಯನವರನ್ನು ಉದ್ದೇಶಿಸಿಯೇ ಹೇಳಿದಂತಿದೆ. ಶ್ರೀಯವರು ನೋಡಲು ಸ್ಫುರದ್ರೂಪಿಗಳಿದ್ದಂತೆ, ಕೇಳಲು ಸಹ ವಾಕ್‌ಭೂಷಣವುಳ್ಳವರು. ಅವರ ಭಾಷಣವೆಂದರೆ ಭೂರಿ ಭೋಜನ. ಖೀರು, ಜಿಲೇಬಿ, ಲಡ್ಡು, ಬಾಸುಂದೆ, ಆಗೀಗ ಅಲ್ಲಿಲ್ಲಿ ವ್ಯಂಜನ ಪದಾರ್ಥ–ಎಲ್ಲವೂ ಕೂಡಿದ ಸಮೀಚೀನ ಭೋಜನ. ಅವರ ಭಾಷಣವನ್ನು ಕೇಳಿದವರು ಆ ರಸ ವರ್ಷವನ್ನು ಕಿವಿಯಿಂದ ಈಂಟಿ, ತಿಂದು, ತೃಪ್ತರಾಗಿ ತೇಗುತ್ತಿದ್ದರು. ಹುಟ್ಟಿ ಬಂದದ್ದಕ್ಕೆ ಜನ್ಮ ಸಾರ್ಥಕವಾಯಿತು ಎಂಬ ಧನ್ಯತಾ ಭಾವವನ್ನು ಹೊಂದುತ್ತಿದ್ದರು. ಕಣ್ಣು ತುಂಬಿದ ಬಳಿಕ ನೋಡಲಿಲ್ಲ, ಕಿವಿ ತುಂಬಿದ ಬಳಿಕ ಕೇಳಲಿಲ್ಲ, ಎನ್ನುವ ನಿರ್ವಿಕಲ್ಪ ಸಮಾಧಿ ಸ್ಥಿತಿಯನ್ನು ಶ್ರೋತೃಗಳು ಹೊಂದುತ್ತಿದ್ದರು. ವಿದ್ಯಾನಟೀ ನಾಟಕಂ ನಲಿಗೆ ಮತ್ಕಾವ್ಯಸ್ಥಲೀ ರಂಗದೊಳ್ ಎಂದು ನಾಗಚಂದ್ರ ಪ್ರಾರ್ಥಿಸಿದ. ಶ್ರೀಯವರ ಸಾಹಿತ್ಯಸೃಷ್ಟಿಯಲ್ಲಿಯಂತೆ, ಅವರ ನಾಲಗೆಯ ಮೇಲೂ ವಿದ್ಯಾನಟಿ ನಾಟ್ಯವಾಡುತ್ತಿದ್ದಳು. ರನ್ನ ಆದಿಕವಿ ಪಂಪನ ಬಗ್ಗೆ ಹೇಳುವಾಗ 'ಸುಭಗಕವಿ ಪಂಪನಿಂ ವಾಗ್ವಿಭವೋನ್ನತಿ ನೆಗಳ್ದುದು' ಎಂದು ಹೇಳಿದ. ಈ ವಾಗ್ವಿಭವೋನ್ನತಿ ಶ್ರೀಯವರಲ್ಲಿಯೂ ಅಷ್ಟೇ ವೈಭವಪೂರ್ಣವಾಗಿ ವಿರಾಜಿಸಿತು.

ಅವರ ಉಪನ್ಯಾಸಗಳನ್ನು ಕೇಳಿದ ಸಹಸ್ರಾರು ಶ್ರೋತೃಗಳು, ಅವರ ಶಿಷ್ಯರು, ಈ ಉಪನ್ಯಾಸಗಳ ಪ್ರಭಾವ ಪರಿಣಾಮಗಳನ್ನು ಸುಂದರವಾಗಿ ವರ್ಣಿಸಿದ್ದಾರೆ. ಹಿರಿಯರಾದ ಆಲೂರ ವೆಂಕಟರಾಯರು "ಶ್ರೀ ಕಂಠಯ್ಯನವರ ಕಂಠಶ್ರೀ ಇತರರಿಗಿಲ್ಲ" ಎಂದು ಹೇಳಿದರು. ಇದರ ಅಲ್ಪ ಮಾದರಿಯನ್ನು ಈಗಾಗಲೇ ವರ್ಣಿಸಲಾಗಿದೆ. ಶ್ರೀಯವರ ಶಿಷ್ಯರಾದ ವಿ. ಸೀ. ಯವರು :

" 'ಶ್ರೀ'ಯವರದು ಒಂದು 'ವಾಣಿ' –a Voice. 'ಶ್ರೀಕಂಠ' ಎಂಬುದು ಮಾತು. (ಅದನ್ನು) ಮಾತುಗಳಲ್ಲಿ ಹೇಗೆ ವಿವರಿಸುವದು? ಅದು ಕಿವಿಯಲ್ಲಿ ಸದಾ ಝೇಂಕರಿಸುತ್ತಿರಬೇಕು. ಅದು ಉರಿಯುವ,ಕಿಡಿ ಹಾರುವ,ಹೊಗೆಯುಗುಳುವ, ನಾಲಿಗೆ ಚಾಚಿ ನುಂಗುವ, ಸುಡು ಬೆಂಕಿಯಲ್ಲ; ಬಿಳಿ ಬೆಳಕು. ಆದರೂ ಕಾವಿಲ್ಲದಿರುವದಿಲ್ಲ. ಅಷ್ಟಾದರೂ ಅಲ್ಲಿ ಕಬ್ಬಿಣ ಕರಗಿಸುವ ಶಾಖ. ಅದನ್ನು ವಿಶ್ಲೇಷಿಸಿದರೆ ಬಾನ್ ಬಿಲ್ಲಿನ ಸಪ್ತವರ್ಣಗಳನ್ನು –ಅವರ ಮನಸ್ಸಿನ ಏಳು–ಎಪ್ಪತ್ತು ವರ್ಣಗಳನ್ನು ಕಾಣಬಹುದಿತ್ತು...." ಎಂದು ಹೇಳುತ್ತಾರೆ. ಇನ್ನೊಬ್ಬ ಹಿರಿಯ ಶಿಷ್ಯರಾದ ಪ್ರೊ. ಎಸ್. ವಿ. ರಂಗಣ್ಣ ಅವರು ಶ್ರೀಯವರ ವಾಗ್ಮಿತೆಯ ಬಗ್ಗೆ:

" 'ಶ್ರೀ'ಯವರು ವಾಗ್ಮಿಶ್ರೇಯುತರು, ವಾಕ್ಕೋವಿದರು, ವಾಗ್ವೈಭವಶಾಲಿಗಳು. ವಾಗ್ಮಿತೆಯಲ್ಲಿ ಅವರ ಐಹಿಕ ಸಾಹಸಗಳ ಚರಿತ್ರೆ ಅಡಗಿತ್ತು, ಅವರ ಆತ್ಮದ ಕುರುಹು ಪ್ರತಿಬಿಂಬಿಸಿತ್ತು... ಶ್ರೀಯವರು ಭಾಷಣವನ್ನು ಮಾಡುತ್ತಿರಲಿಲ್ಲ, ಭಾಷಣವನ್ನು ಬಾಳುತ್ತಿದ್ದರು. ಅವರದೊಂದು ಉಪನ್ಯಾಸವೆಂದರೆ ಕಿವಿಯಲ್ಲಿ ಕೇಳಲು ಮಾತ್ರ ಮಂದಿ ಹೋಗುತ್ತಿರಲಿಲ್ಲ; ಕಣ್ಣು ಕಿವಿ, ಚಿತ್ತ, ಹೃದಯ, ಮನಸ್ಸು, ಆತ್ಮವೆಲ್ಲಕ್ಕೂ ಹಬ್ಬ ಹೊಂದಿಸಿಕೊಳ್ಳಲು ಹಾತೊರೆಯುತ್ತಿದ್ದರು....ಅವರು ವಾಕ್‌ಚತುರರಾಗಿದ್ದುದರಿಂದ, ಅವರ ಒಂದೊಂದು ಭಾಷಣವೂ ಒಂದೊಂದು ಕಾವ್ಯ ಬಂಧ. ಸಂಗೀತ ಕೃತಿ, ಕಲಾಸೌಧವಾಗಿರುತ್ತಿತ್ತು. **ಅವರ ಭಾಷೆಗೆ ಮೆರವಣಿಗೆಯ ಗಜರಾಜ ಜಗ್ಗಿ ಹಾಕಿ, ಹೀಗೆ ಹಾಗೆ ಒಲೆದು, ಘಂಟೆಯ ಧ್ವನಿಯೊಡನೆ ಸಾಗುವ ಗತ್ತು, ಗಾಂಭೀರ್ಯ, ರಾಜವೈಖರಿ.** ಶ್ರೀಯವರು ಕುಮಾರವ್ಯಾಸನ ಹಾಗೆ ಪದಗಳೊಡನೆ. ಪದಗುಮ್ಫನಗಳೊಡನೆ. ಚಕ್ಕಂದವಾಡುತ್ತಿದ್ದರು. ಅವರಲ್ಲಿ ಸ್ವಾಭಾವಿಕವಾಗಿ, ಅಪ್ರಯಾಸವಾಗಿ, ಸುಂದರವಾಗಿ, ಫಲಪ್ರದವಾಗಿ, ಪ್ರಾಸ ಇರುತ್ತಿತ್ತು- ಭಾಷೆಗೆ ಭಾಷೆ ಹೊಯ್ಯುತ್ತಲೇ ಇರಬೇಕು, ರೀತಿಗೆ ರೀತಿ ನೆಯ್ಯುತ್ತಲೇ ಇರಬೇಕು. ಹೊಂದೊಡರೂ ತೊಡರಲ್ಲವೆ?....ಜೀವರಸವೂ ಉಂಟು. ಬರಿಯ ಭ್ರಾಂತಿಯ ಕಸವೂ ಉಂಟು. ಹಿತ್ತಾಳೆಯಿಂದ ಚಿನ್ನ ಕೆಟ್ಟಿತು; ಕಸದಿಂದ ರಸ ವಿಷವಾದೀತು" ೧

ಹೀಗೆಯೇ, ಈ ಪ್ರಶಸ್ತಿಯನ್ನು ಬೆಳೆಸುತ್ತಲೇ ಹೋಗಬಹುದು. ಶ್ರೀಯವರು ಕವಿತೆ ಬರೆದರು, ನಾಟಕ ಬರೆದರು, ವಿಮರ್ಶೆ ಬರೆದರು, ಸಂಶೋಧನ ಮಾಡಿ ಕನ್ನಡ

---

೧. ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ಕಾವ್ಯಾಲಯ, ಮೈಸೂರು, ೧೯೬೨. ಪು

ಛಂದಸ್ಸು, ಸಾಹಿತ್ಯ-ಚರಿತ್ರೆಗಳನ್ನು ವಿಶದಪಡಿಸಿದರು, ಮುಗ್ಗಿದ ಕನ್ನಡ ತೇರಿಗೆ ತಮ್ಮ ಭುಜ ಕೊಟ್ಟು ಕನ್ನಡದ ಕೀರ್ತಿ ಬೆಳೆಯುವಂತೆ ಮಾಡಿದರು, ಸಮಗ್ರ ಕನ್ನಡ ಜನಸಂಪದವೆಲ್ಲ ಒಂದು ಎನ್ನುವ ಆತ್ಮೀಯತೆಯನ್ನು ಬಿತ್ತಿ ಬೆಳೆಸಿದರು. ಹಾಗಿದ್ದರೆ, ಶ್ರೀ ಕವಿಯೇ, ನಾಟಕಕಾರರೇ, ಭಾಷಾಂತರಕಾರರೇ, ವಿಮರ್ಶಕರೇ, ಸಂಶೋಧಕರೇ, ಶ್ರೀ ಯಾರು? ಎಂದು ಕೇಳಿದರೆ, ತಟ್ಟನೆ ಉತ್ತರ ಕೊಡುವುದು ಕಠಿಣ. ಯಾಕೆಂದರೆ, ಶ್ರೀ ಇವೆಲ್ಲ ಇದ್ದೂ,ಅವರು ಅತ್ಯತಿಷ್ಠದ್ ದಶಾಂಗುಲಂ. ಇವನ್ನೆಲ್ಲವನ್ನೂ ಮೀರಿನಿಂತ ವ್ಯಕ್ತಿತ್ವವುಳ್ಳವರು. ಆ ವ್ಯಕ್ತಿತ್ವ ಅವರ ವಾಗ್ಝರಿಯಲ್ಲಿ, ಅವರ ಕಲಾಪೂರ್ಣ ಮಾತುಗಾರಿಕೆಯಲ್ಲಿ, ಅವರ ಬಣ್ಣಬಣ್ಣದ ವಾಗ್ಮಿತೆಯಲ್ಲಿ, ಅವರ ಗಂಭೀರ ಉಪನ್ಯಾಸಗಳಲ್ಲಿ ವ್ಯಕ್ತವಾಗುತ್ತಿತ್ತು. ಶ್ರೀ ತಮ್ಮ ಉಪನ್ಯಾಸಗಳ ಸುವರ್ಣ ತಂತುವಿನಿಂದ ಸಮಗ್ರ ಕನ್ನಡಿಗರೆಲ್ಲರನ್ನೂ ಒಂದು ಗೂಡಿಸಿದರು. ಮಾತಿನ ಮಂಟಪ ಕಟ್ಟಿ, ಅದರಲ್ಲಿ ಕನ್ನಡ ದೇವಿಯನ್ನು ಪ್ರತಿಷ್ಠಾಪಿಸಿ, ಜನಸಮ್ಮರ್ದವೆಲ್ಲ ಹುರಿಗೊಳ್ಳುವಂತೆ, ಆನಂದ ಪರವಶರಾಗುವಂತೆ ಮಾಡಿದರು. ಜನತೆಯೆಲ್ಲ ಅವರ ಭಾಷಣವನ್ನು ಕೇಳಿ, ಒಕ್ಕೊರಲಿನಿಂದ 'ಧನ್ಯೋಸ್ಮಿ' 'ಧನ್ಯೋಸ್ಮಿ' ಎನ್ನುವ ಹಾಗೆ ಅವರನ್ನು ನಗಿಸಿದರು, ನಲಿಸಿದರು, ಕೆರಳಿಸಿದರು, ತೃಪ್ತಿಗೊಳಿಸಿದರು,

ಶ್ರೀಯವರ ವ್ಯಕ್ತಿತ್ವ ಭಾಷಣಕ್ಕಾಗಿ ಹೇಳಿ ಮಾಡಿಸಿಟ್ಟಂಥ ವ್ಯಕ್ತಿತ್ವ. ಉಳಿದ ತಮ್ಮ ಕಾರ್ಯವಿಭಾಗಗಳಲ್ಲಿ ಬರೀ ಬೆರಳು ಮಾಡಿ ದಿಕ್ಕನ್ನು ಮಾತ್ರ ಸೂಚಿಸಿದ್ದರೆ, ಭಾಷಣಗಳನ್ನು ಮಾತ್ರ ತಮ್ಮ ಆಯುಷ್ಯದುದ್ದಕ್ಕೂ ಅನನ್ಯ ಸಾಧಾರಣವಾದ ಶ್ರದ್ಧೆಯಿಂದ, ಉತ್ಸಾಹದಿಂದ, ತಲ್ಲೀನತೆಯಿಂದ ಸಾಗಿಸಿಕೊಂಡು ಬಂದರು. ಅವರು ಚಲತ್ ಉಪನ್ಯಾಸಕರಾದರು. ಚೇತನ ಶಕ್ತಿಯಾದರು. ಅವರ ವ್ಯಕ್ತಿತ್ವ ಭಾಷಣಕ್ಕೆ ಹೇಳಿ ಮಾಡಿಸಿದಂತಹದೆಂದೆನಲ್ಲವೆ? ಹೌದು ; ಅತಿ ಎತ್ತರವೂ ಅಲ್ಲದ, ಕುಳ್ಳೂ ಅಲ್ಲದ ನಿಲುವು; ಅತಿ ಸ್ಥೂಲವೂ ಅಲ್ಲದ, ಕೃಶವೂ ಅಲ್ಲದ, ದೇಹಯಷ್ಟಿ: ಪ್ರಶಾಂತವಾದ ಪ್ರಫುಲ್ಲವಾದ, ಅಗಲವಾದ ಮುಖ, ಗೌರವರ್ಣ, ಆಗೀಗ ತುಟಿಯಲ್ಲಿ, ಕಣ್ಣಂಚಿನಲ್ಲಿ, ಮಿಂಚಿಹೋಗುತ್ತಿದ್ದ ತುಂಟು ನಗೆ. ತುಂಟು ಮಾತನ್ನು ಹೇಳುವಾಗ, ರಭಸದಿಂದ ವೇದಿಕೆಯ ಮೇಲೆ ಸುಳಿದಾಡುತ್ತಿದ್ದ ನಡಿಗೆ-ಇವೆಲ್ಲ ಅವರ ಭಾಷಣಗಳನ್ನು ಕೇಳಿದವರ (ಭಾಷಣಗಳನ್ನು ನೋಡಿದವರ ಎಂದೂ ಅನ್ನೋಣವೆ?) ಕಣ್ಣೆದುರಿಗೆ ಅಚ್ಚಳಿಯದೆ ಕಟ್ಟಿದಂತಿವೆ.

ಮಾತೂ, ಮಾತೂ, ಮಾತೂ, ಶ್ರೀಯವರಿಗೆ ಎಷ್ಟು ಮಾತಾಡಿದರೂ ತೃಪ್ತಿಯಿಲ್ಲ. ಮಾತು ಕ್ಲಾಸಿನ ಒಳಗೇ ಇರಲಿ, ಅಥವಾ ಹೊರಗೇ ಇರಲಿ, ಅವರ ಜ್ಞಾನದಾನ ಯಜ್ಞ ಅವಿರತವಾಗಿ ಸಾಗಿರುತ್ತಿತ್ತು. ಶ್ರಿಯಾ ದೇಯಂ, ಹ್ರಿಯಾ ದೇಯಂ ಎನ್ನುವ ಉಪನಿಷದ್ವಾಕ್ಯದಂತೆ,ಅವರು ಕೃಪಣರಾಗಿ ಯಾವ ಜ್ಞಾನವನ್ನೂ ಬಚ್ಚಿಟ್ಟುಕೊಳ್ಳುತ್ತಿರಲಿಲ್ಲ. ಡಿಗ್ಗೆ ಡಿಗ್ಗೆಯಾಗಿ, ರಾಶಿ ರಾಶಿಯಾಗಿ, ಜಲಪ್ರಪಾತವಾಗಿ

ತಮ್ಮ ಜ್ಞಾನವನ್ನು ಸೂಸುತ್ತಿದ್ದರು. ಅವು ಬರೀ ಅಬ್ಬರದ ಘೋರ್ಗರೆತವಲ್ಲ, ಸಪ್ತವರ್ಣದ ಕಾಮನ ಬಿಲ್ಲನ್ನು ಮೂಡಿಸಿಕೊಂಡು ಬಂದ ಗೇರುಸೊಪ್ಪೆಯ ಜಲಪಾತ.

ಅವರಿಗೆ ಸಾರ್ವಜನಿಕ ವೇದಿಕೆ ಮತ್ತು ಪಾಠಗಳ ವರ್ಗ ಒಂದೇ ಆಗಿದ್ದುವೆಂದು ಹೇಳಿದೆನಲ್ಲವೆ? ಅವರು ಧಾರವಾಡದ ಕೆ. ಇ. ಬೋರ್ಡ್ ಕಾಲೇಜಿನಲ್ಲಿ ಕಲಿಸುತ್ತಿದ್ದಾಗ ಷೇಕ್ಸ್‌ಪಿಯರನ ಮಹಾಕವಿಯ A Midsummer Nights Dream ಬೋಧಿಸುತ್ತಿದ್ದರು. ಅವರ ಪಾಠಕ್ರಮ, ಮೊದಲು ಒಂದು ಸಲ ಸಮಗ್ರ ಕೃತಿಯನ್ನು ಓದಿ ಬಿಡುವುದು. ಅವರು ಓದಿದರೇ ಸಾಕು. ವಿದ್ಯಾರ್ಥಿಗಳಿಗೆ ಅರ್ಥವಾಗಿ ಬಿಡುತ್ತಿತ್ತು. ಅಂಥ ಮೋಡಿ ಅವರದು. ಅಲಂ ಅತಿ ವಿಸ್ತರೇಣ. ಎರಡನೆಯ ಸಲ, ಮತ್ತೊಮ್ಮೆ ಓದಿ ತಮ್ಮ ವಿಮರ್ಶೆಯನ್ನು ಹೇಳುತ್ತಿದ್ದರು. ಮೂರನೆಯ ಸಲ, ಓದಿದಾಗ ಆ ಇಡೀ ಪಾಠ ಗಟ್ಟಿಗೊಳ್ಳುತ್ತಿತ್ತು. ಅವರು ಕ್ಲಾಸಿನಲ್ಲಿ ಕಲಿಸುತ್ತಿರಲಿಲ್ಲ. ನಾಟಕ ನಿರ್ಮಾಣ ಮಾಡುತ್ತಿದ್ದರು. ತಾವೇ ಆಬೆರಾನ್ ಆಗಿ, ಟೈಟೇನಿಯಂ ಆಗಿ, ಬಾಟಮ್ ಆಗಿ, ಆ ಸಾಲುಗಳನ್ನು ಹೇಳುತ್ತಿದ್ದರು. ಏಕಪಾತ್ರಾಭಿನಯ ಜೊತೆಗೆ, ಇಂಗ್ಲಿಷ್ ಸಾಲುಗಳನ್ನು ಓದುತ್ತಿದ್ದಂತೆಯೇ ಕನ್ನಡದಲ್ಲಿ ಅದರ ಪ್ರತಿನಿರ್ಮಾಣ, ಪ್ರತಿಸೃಷ್ಟಿ ಭಾಷಾಂತರ. ಹೀಗಾಗಿ, ಅವರ ಪಾಠ ಬರೀ ಬೋಧನೆಯಲ್ಲ, ಒಂದು ರಸಕ್ರಿಯೆ, ರಸಯಜ್ಞ. ಅವರು ಆಗ ಹೇಳಿದ ಭಾಷಾಂತರಗಳನ್ನು ಸಹ ವಿದ್ಯಾರ್ಥಿಗಳು ಬರೆದುಕೊಂಡಿದ್ದರೆ, ಎಷ್ಟು ಷೇಕ್ಸ್‌ಪಿಯರ್ ನಾಟಕಗಳು ಕನ್ನಡಕ್ಕೆ ಬರುತಿದ್ದವೋ ಏನೋ!

ಅದೂ ಅಲ್ಲದೆ, ಆ ವಿಷಯ ಹೇಳುವಾಗ, ಅದಕ್ಕೆ ಸಂಬಂಧಪಟ್ಟ ಅಥವಾ ದೂರದಿಂದ ಸಂಬಂಧವಾಗುವ ಅನೇಕ ಕಥೆಗಳನ್ನು, ಐತಿಹ್ಯಗಳ ಸನ್ನಿವೇಶಗಳನ್ನು ಹೇಳಬೇಕು, ಇಂಥ ಕೆಲವು ಸನ್ನಿವೇಶಗಳನ್ನು ವಿ. ಸೀ. ಯವರು 'ಶ್ರೀ ಸಾಹಿತ್ಯ'ದ ಪರಿಚಯ ಕಾಣಿಕೆಯಲ್ಲಿ ನಿರೂಪಿಸುತ್ತಾರೆ :

ಶ್ರೀಯವರು 'ಫಿಲೊಮಿಲಾ' (Philomela) ಪಾಠ ಹೇಳುವಾಗ, ಗ್ರೀಕ್ ಕಥೆಯನ್ನು ಹೇಳಿದರಂತೆ.

"ತ್ರೇಸಿನ ದೊರೆಯೊಬ್ಬನು ತನ್ನ ಹೆಂಡತಿಗೆ ತಿಳಿಯದಂತೆ, ನಾದುನಿಯನ್ನು ಮೋಹಿಸಿ, ಬೇಟೆಗೆ ಕರೆದುಕೊಂಡು ಹೋಗಿ, ಆಕೆಯನ್ನು ಕೆಡಿಸಿ, ಒಂದು ನೆಲಮನೆಗೆ ಒಯ್ದು, ಅಲ್ಲಿ ಅವಳನ್ನು ಸೆರೆಯಿಟ್ಟು, ತನ್ನಕ್ಕನಿಗೆ ದೂರು ಹೇಳಿಯಾಳೆಂದು ನಾಲಿಗೆ ಕಡಿಸಿ, ಹೆಂಡತಿಗೆ ಸುಳ್ಳುಪೊಳ್ಳು ಹೇಳಿ ದಾಟಿಕೊಂಡಿದ್ದನು. ಪರಿಚಯವಿದ್ದ ಒಬ್ಬಳು ಸೇವಕಿಯ ಮೂಲಕ ಆ ಹುಡುಗಿ ಒಂದು ಕಸೂತಿ ಹಾಕಿ, ತನ್ನ ಕಥೆ ಅಲ್ಲಿ ಚಿತ್ರಿತವಾಗುವಂತೆ ಮಾಡಿ, ಅಕ್ಕನಿಗೆ ಕಳಿಸಿದಳು. ಅಕ್ಕನಿಗೆ ಕ್ರೋಧವುಂಟಾಗಿ ತಾನು ಆ ಗಂಡನಿಗೆ ಹೆತ್ತಿದ್ದ ಮಗುವನ್ನು ಕತ್ತರಿಸಿ, ಅಡುಗೆ ಮಾಡಿ ಅವನಿಗೆ ಬಡಿಸುತ್ತಾಳೆ. ತಾಯಿಯ ಹೆಸರು ಪ್ರಾಕ್ನೆ, ಮಗನ ಹೆಸರು ಇಟಿಲಸ್. ದೇವತೆಗಳು ಈ ದುರ್ದೆಸೆಯನ್ನು ನೋಡಲಾರದೆ, ಬೇರೆ ಅನಾಹುತಗಳು ಸಂಭವಿಸಲಾಗದಂತೆ, ಗಂಡ, ಹೆಂಡತಿ, ನಾದುನಿ, ಮಗ

ಇವರನ್ನು ಹಕ್ಕಿಗಳಾಗಿ ರೂಪಾಂತರಗೊಳಿಸುತ್ತಾರೆ. ಸಾದುಸಿ ನೈಟಿಂಗೇಲ್ ಆಗುತ್ತಾಳೆ. ಒಡೆಯ ರಣಹದ್ದು. ಅದರ ಹಾಡೇ "The Sad Song of the Nightingale" ಎಂದು ಪಾಶ್ಚಾತ್ಯ ಸಾಹಿತ್ಯದಲ್ಲಿ ಪ್ರಖ್ಯಾತವಾದುದು, (ಆ ಪದ್ಯದಲ್ಲಿ ಬರುವ)

Eternal passion!
Eternal pain!

ಎಂಬ ಭಾಗವನ್ನು ಅವರು ಓದಿದ ರೀತಿ ಇಂದಿಗೂ ಹೊಸತಾಗಿದೆ.

And each half lives a hundred different lives
Light half believers of our casual creeds

(ಎಂಬುದನ್ನು ಹೇಳಿ)

Swallow, my sister, O, sister swallow
How can thine heart be full of the spring?

........ಎಂಬ ಸಾಲಿಗೆ ಬರುವಾಗ ಅವರ ಮುಖವನ್ನು ನೋಡಬೇಕಿತ್ತು! ಆ ಧ್ವನಿಯನ್ನು ಕೇಳಬೇಕಿತ್ತು ! !" ೧

ಈ ಭಾಗ ಶ್ರೀಯವರ ಪಾಠಕ್ಕೆ ತೀರ ಆವಶ್ಯಕವೆಂದೇನೂ ಇರಲಿಲ್ಲ. ಆದಕ್ಕೆ ಅವರಿಗೆ ಸಾಹಿತ್ಯದಲ್ಲಿಯ ರಸ ಸನ್ನಿವೇಶಗಳನ್ನು ಸವಿಯದೆ, ಅವುಗಳ ಬಗ್ಗೆ ಮೆಲುಕು ಹಾಕದೆ, ಅವುಗಳ ಬಗ್ಗೆ ಕಣ್ಣೀರ ಸುರಿಸದೆ, ಮುಂದೆ ಹೋಗಲು ಆಗುತ್ತಿರಲಿಲ್ಲ. ಆಗಲೆ ಹೇಳಿದೆನಲ್ಲವೆ? ಅವರ ಪಾಠ ಬರಿಯ ಪಾಠ ಬೋಧನೆಯಲ್ಲ; ಒಂದು ರಸಕ್ರಿಯೆ, ರಸಯಜ್ಞ ಎಂದು. ಬೋಧಕನಾದವ ಬರಿಯ ನಲ್ಲಿಯ ನೀರು ಬಿಟ್ಟಂತೆ, ಪಾಠ ವಿಷಯವನ್ನು ಶಿಷ್ಯರಿಗೆ ಹನಿಸಿದರೆ ಆಗದು; ಅದು ಬೇಸಗೆಯಲ್ಲಿಯ ಅರವಟ್ಟಿಗೆಯ ನೀರಿನಂತಾಗಬೇಕು. ಅದರಿಂದ ವಿದ್ಯಾರ್ಥಿಗಳು ಸ್ಫುರಣ ಹೊಂದಬೇಕು. ಪಾಠ ವಿಷಯಕ್ಕೆ ಪ್ರತಿಸ್ಪಂದಿಸಬೇಕು. ರಸಾಂತರಂಗಳಂ ಮುಟ್ಟಿ ರಂಜಿಸಲೇಬೇಕು.

ಯಾವನೇ ಕವಿಯ ವಿಷಯವಾಗಿ ಶ್ರೀಯವರು ಬೋಧನೆ ಮಾಡಲಿ, ಷೇಕ್ಸ್‌ಪಿಯರ್ ಇರಲಿ, ಮಿಲ್ಟನ್ ಇರಲಿ, ಬ್ರೌನಿಂಗ್ ಇರಲಿ, ಮ್ಯಾಥ್ಯು ಅರ್ನಾಲ್ಡ್ ಸಿರಲಿ ಅವರ ಬಗ್ಗೆ ಅಸ್ಪೃಶ್ಯವಾದ ಆಸಕ್ತಿ ಹುಟ್ಟುವಂತೆ, ಸ್ಫೂರ್ತಿ ಕುದುರುವಂತೆ ಪಾಠ ಹೇಳುವುದು ಅವರ ಪದ್ಧತಿ. ಅವರ ಶ್ರೀಕಂಠ ಯಾವ ಸನ್ನಿವೇಶಕ್ಕೂ ಸರಿಯಾಗಿ ಒಗ್ಗುತ್ತಿತ್ತು. ಶ್ರೀಯವರು

'Incident of the French Camp' ಎಂಬ ಕವನವನ್ನು ಪಾಠ ಮಾಡಿದ ಸನ್ನಿವೇಶದಲ್ಲಿ ವಿ. ಸೀ. ಯವರು ನೆನೆಸಿಕೊಳ್ಳುತ್ತಾರೆ.

---

೧ ಶ್ರೀ ಸಾಹಿತ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು-೧೯೮೩, ಪು ೧೯.

"...ನೆಪ್ರೋಲಿಯನ್ ಒಂದು ಕಡೆ, ಚಿಂತಾಮಗ್ನನಾಗಿ ಕುಳಿತಿದ್ದಾನೆ.

With neck out-thrust, you fancy how
Legs wide, arms locked behind,
As if to balance the prone brow,
Oppressive with its mind.

ಒಂದು ಯುದ್ಧದ ಪರಿಣಾಮವನ್ನು ಅರಿಯುವುದಕ್ಕಾಗಿ ಚಿಂತೆಯಲ್ಲಿದ್ದಾನೆ. ಒಬ್ಬ ಯುವಕವೀರ ಧಾವಿಸಿ ಬಂದು, ತಮಗೆ ಗೆಲುವು ಬಂದುದನ್ನು ಹೇಳುತ್ತಾನೆ. ನೆಪೋಲಿಯನಿಗೆ ಸಂತೋಷವೇನೊ ಆಯಿತು. ಉತ್ತರ ಕ್ಷಣದಲ್ಲಿಯೇ, ಆ ಹುಡುಗನ ಸ್ಥಿತಿಯನ್ನು ಕಂಡು, ತಾಯಿಪಕ್ಕಿಯು, ಮರಿಹಕ್ಕಿಯ ಗಾಯಗೊಂಡ ಸ್ಥಿತಿಯನ್ನು ನೋಡಿ, ಕನಿಕರ ಪಡುವಂತೆ

"you are wounded!"

ಎಂದು ಸಾಂತ್ವನದ ಮಾತುಗಳನ್ನು ಆಡತೊಡಗಿದಾಗ,

"Nay"
"I am killed, sire!" ಎಂದು ಆ ಹುಡುಗ ಮರುಕ್ಷಣದಲ್ಲಿ
And his Chief beside,
Smiling, the boy fell dead." ೧

ಇಂಥವು ನೂರಾರು!

ನಿಜ; ಇವನ್ನು ಪರೀಕ್ಷೆಯಲ್ಲಿ ಪ್ರಶ್ನೆಗಳನ್ನಾಗಿ ಕೇಳುವದಿಲ್ಲವೇನೊ ಸರಿ; ಆದರೆ ಇಂಥ ರಸಸನ್ನಿವೇಶಗಳನ್ನು ಬಿಟ್ಟು ಮುಂದೆ ಹೋಗುವುದು ಹೇಗೆ? What is this life worth, if we have no time to stand and stare? ನಿಂತು ವೀಕ್ಷಿಸುವ ವ್ಯವಧಾನ ನಿಮ್ಮಲ್ಲಿ ಇರದಿದ್ದರೆ, ಈ ಆಯುಷ್ಯವನ್ನಾದರೂ ತೆಗೆದುಕೊಂಡು ಏನು ಮಾಡಬೇಕು?

ಆದರೆ, ಹಲವರು ಪರೀಕ್ಷಾರ್ಥಿಗಳಿಗೆ ಶ್ರೀಯವರ ಈ ರೀತಿಯ ಬೋಧನೆ ಸೇರುತ್ತಿರಲಿಲ್ಲ. ಅಂಥ ಕೆಲವು ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾನಿಲಯದ ರೆಜಿಸ್ಟ್ರಾರರಿಗೆ ಕಾಗದವನ್ನು ಬರೆದು, ಬಿ. ಎಂ. ಶ್ರೀ. ಪರೀಕ್ಷೆಗಿರುವ ಪಾಠವನ್ನು ಬಿಟ್ಟು, ಏನೇನೋ ಹೇಳುತ್ತಾರೆ ಎಂದು ದೂರು ಹೇಳಿದರುತೆ. ಆ ಕಾಗದವನ್ನು ಶ್ರೀಯವರು ಕ್ಲಾಸಿನಲ್ಲಿ ಓದಿಹೇಳಿ "ಕಾಲೇಜಿನಲ್ಲಿ ನಾವು ಹುಡುಗರನ್ನು ಪಾಸ್ ಮಾಡಿ

---

೧ ಶ್ರೀ ಸಾಹಿತ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೮೩, ಪು ೧೭

ಸುವ ಯಂತ್ರಗಳಲ್ಲ; ನಾವು "Educators, not coaches" ೧ ಎಂದು ಹೇಳಿದರಂತೆ? ಇಂಥವರನ್ನು ಕಂಡೇ ನಮ್ಮ ಪ್ರಾಚೀನ ಕವಿಗಳು.

"ಅರಸಿಕೇಷು ಕವಿತ್ವನಿವೇದನಮ್ ಶಿರಸೆ ಮಾಲಿಖ, ಮಾಲಿಖ" ಎಂದು ದೇವರಲ್ಲಿ ಪ್ರಾರ್ಥಿಸಿಕೊಂಡಿರಬೇಕು.

ಕ್ಲಾಸುಗಳಲ್ಲಿಯ ಪಾಠದ ವಿಷಯವೇ ಇಷ್ಟು ರಮ್ಯವಾಗಿರುತ್ತಿದ್ದಾಗ, ಇನ್ನು ಶ್ರೀಯವರ ಸಾರ್ವಜನಿಕ ಉಪನ್ಯಾಸಗಳ ಬಗ್ಗೆ ಹೇಳಬೇಕೆ? ಅವರು ಗಂಟೆಗಟ್ಟಲೆ ಮಾತಾಡಿದರೂ, ಜನ ಕೂತು ಕೇಳಬೇಕೆನ್ನುತ್ತಿದ್ದರು. ಹಲವರು ಅವರ ಭಾಷಣಗಳ ಬಗ್ಗೆ "They have only beginings and no ends" ಎಂದು ಗೇಲಿ ಮಾಡಿದರೂ, ಸಹೃದಯದ ರಸಾಸ್ವಾದನೆಗೇನೂ ಕಡಿಮೆಯಿರಲಿಲ್ಲ. ವಾಣಿ ಕಾವ್ಯಮಯವಾಗಿ ಅವರ ಕಂಠದಿಂದ ಪ್ರವಹಿಸುತ್ತಿದ್ದಳು. ಕಾವ್ಯದ ನೂರಾರು ಮಳೆಬಿಲ್ಲುಗಳು ಏಕಕಾಲಕ್ಕೆ ಮೂಡಿ ನಿಲ್ಲುತ್ತಿದ್ದವು:

"(ಪ್ರಜಾಪ್ರತಿನಿಧಿಗಳು) ಜನತೆಯ ಕೆನೆ ಆಡಳಿತದ ಮೊನೆ"
"ಜನವಾಣಿ ಬೇರು, ಕವಿವಾಣಿ ಹೂವು"
"ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟು"

"........ಪಂಪನಿಂದ ನೆಲಕ್ಕೆ ಕಾಲೂರಿ, ಗಗನಕ್ಕೆ ಚಿಮ್ಮಿ, ಲಕ್ಷ್ಮೀಪತಿಯಲ್ಲಿ ಮತ್ತೆ ನೆಲ ಮುಟ್ಟಿ, ಬಣ್ಣ ಬಣ್ಣಗಳಿಂದ ಮಿನುಗುತ್ತಿರುವ ಕನ್ನಡ ಕಾವ್ಯಸೃಷ್ಟಿಯ ಕಾಮನಬಿಲ್ಲಿನಲ್ಲಿ ಈತನ (ಕುಮಾರವ್ಯಾಸನ) ನೆಲೆ ನಟ್ಟನಡು, ನೆತ್ತಿಯ ಮುಡಿ, ಹಳೆಯ, ಹೊಸ ಕನ್ನಡದ ತಲೆಯ ಕಿರೀಟ!"........ಹೀಗೆ, ಹತ್ತಾರು ದೃಷ್ಟಾಂತಗಳನ್ನು ಕೊಡಬಹುದು.

ಅದರಂತೆಯೇ, ಮಾತನಾಡುತ್ತಿರುವಾಗ, ನೂರಾರು ಬೆಳಕಿನ ಪುಂಜಗಳು, ಶಕ್ತಿಯ ಕೇಂದ್ರಗಳು, ವಾಕ್ಯರೂಪ ಧರಿಸಿ ಹೊರಬರುತ್ತಿದ್ದವು. ಶ್ರೀ ತಮ್ಮ ಭಾಷಣಗಳ ನಂದನವನದಲ್ಲಿ ಇಂಥ ನೂರಾರು ಮಿನುಗುವ ಚಿಕ್ಕೆಗಳನ್ನು ಬಿತ್ತಿದರು:

ಓದುವುದು ಆನಂದಕ್ಕೆ, ಇಲ್ಲ ಅರ್ಥಕ್ಕೆ.
ಮೇಲೆ ತೋಟ ಶೃಂಗಾರ, ಒಳಗೆ ಗೇಣಿಸೊಪ್ಪು.

ಸಂಸಾರವನ್ನು ತೊರೆದ ಸನ್ಯಾಸಿಯ ಕಥೆಯಾದರೂ ಸರಿಯೇ, ಒಂದು ರಾತ್ರಿ ಬೆಳದಿಂಗಳಲ್ಲಿ ಅಲೆತ, ಹಿಂದಿನ ದಿನನೀರಿನಲ್ಲಿ ಆಟ. ಎಂದರೆ ಎರಡು ಆಶ್ವಾಸ ಮಲಗಿ ಹೋಯಿತು ಆ ಕಡೆ.

---

೧ ಅದೇ ಪು ೧೩

ಬರೆಯುವ ಭಾಷೆಗೆ ಆಡುವ ಭಾಷೆಯೇ ಜನ್ಮಸ್ಥಾನ.

ಕವಿತ್ವದ ಮೇಲೆ ಕವಿತ್ವವಾಗಿ ನಮಗೆ ಅಜೀರ್ಣವಾಗಿದೆ; ಲಂಘನವೇ ಗುಣವೆಂದು ನಂಬಿದ್ದೇವೆ.

ನೆರೆದುನೆಯ ಮಕ್ಕಳು ಮನೆಯ ಮಕ್ಕಳಿಗಿಂತ ಮುದ್ದಾಗಿದ್ದರೆ, ಹೊಟ್ಟೆ ಉರಿದರೂ, ಅವರ ಚೆಲುವನ್ನು ಒಪ್ಪಿಕೊಳ್ಳೋಣ.

ಬನ್ನಿ ಜನ್ಮವನ್ನು ಜನರ ಬೋಧೆಗಾಗಿ ಸಮರ್ಪಣ ಮಾಡಿದ ಹೊಸ ಬಗೆಯ ದೀಕ್ಷಿತರಾಗಿ.

ನಾವು, ಕನ್ನಡಿಗರು, ಇಂದು ಸತ್ತವರನ್ನು ಎಬ್ಬಿಸುವದೇ ಅಲ್ಲ; ಬದುಕಿರುವವರನ್ನು ಎಚ್ಚರಗೊಳಿಸುವದಕ್ಕೆ ಹೊರಟಿರುವೆವು.

ಕನ್ನಡ ನಾಡಿಗೆ ಕನ್ನಡವೇ ಗತಿ, ಅನ್ಯಥಾ ಶರಣಂ ನಾಸ್ತಿ.

ಸಂಸ್ಕೃತದ ಹೆಂಡತಿ ಸಂಸ್ಕೃತಿ ಎನ್ನಬೇಡಿ.

ಸಾಹಿತ್ಯದಿಂದ ಲಕ್ಷಣ ಸೂತ್ರಗಳೇ ಹೊರತು, ಲಕ್ಷಣ ಸೂತ್ರಗಳಿಂದ ಸಾಹಿತ್ಯವಲ್ಲ.

ನಮ್ಮ ಮೈಯಲ್ಲಿ ಹುಟ್ಟಿದ ರೋಗ ನಮ್ಮದಾದರೂ ಕಳೆಯುತಕ್ಕ ವಿಷ; ಹೊರಗಿನ ಕಾಡಿನಿಂದ ತಂದ ಮೂಲಿಕೆ, ಹೊರಗಿನದಾದರೂ ರಕ್ತಗತವಾಗಬೇಕಾದ ಅಮೃತ.

—ಇಂಥ ನೂರಾರು ಚಿಕ್ಕೆಗಳು ಅವರ ಭಾಷಣಗಳಲ್ಲಿ ಮಿನುಗುತ್ತಿದ್ದವು. ಉಳಿದ ಇಂಥ ಮಿಂಚು ಮಾತುಗಳನ್ನು ಶ್ರೀ ಸೂಕ್ತಿಗಳು ಎಂಬ ಪರಿಶಿಷ್ಟದಲ್ಲಿ ಕೊಡಲಾಗಿದೆ.

ಶ್ರೀಯವರದು ಸಾಮಾನ್ಯವಾಗಿ ಗಂಭೀರ ಪ್ರಕೃತಿ. ಅವರ ಭಾಷಣಗಳಲ್ಲಿ ವಿನೋದಕ್ಕೆ ಹೆಚ್ಚಿನ ಸ್ಥಾನವಿಲ್ಲ. ಆಗೀಗ ಮಾತ್ರ ವಿನೋದ ಅಲ್ಲಲ್ಲಿ ಸೆಳೆಮಿಂಚಿನಂತೆ ರಥಳಥಿಸಿ ಹೋಗುವುದುಂಟುಃ

"(ರಾಜ ಮಂತ್ರಪ್ರವೀಣ ಮಾಧವರಾಯರು, ರಾಜ ಸೇವಾಸಕ್ತ ಎ. ವಿ. ರಾಮನಾಥನ್ ಅವರು) ನನ್ನನ್ನು ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಆದುಮಿ, ತಾವು ಮೇಲಕ್ಕೇರಿದರು! (ಇದನ್ನು ಹೇಳಿದ್ದು ರಾಜಮಂತ್ರ ಪ್ರವೀಣ ಮಾಧವರಾಯರು ಹಾಜರಿದ್ದ ಸಭೆಯಲ್ಲಿಯೇ!) ಹೀಗಾಗಿ, ನನ್ನ ಕಾರ್ಯಕ್ಷೇತ್ರ ಬೇರೆ ಆಯಿತು. ನನ್ನ ತಂದೆಯವರು ನನ್ನನ್ನು ಕುರಿತು, "ನೀನು ನನ್ನ ಹಾಗೆ ವಕೀಲಿವೃತ್ತಿಗೆ ಹೋಗಬೇಡ; ಅದು ನನಗೇ ಸಾಕು, ನೀನು ವೈದ್ಯನಾಗು" ಎಂದು ಹೇಳುತ್ತಿದ್ದರು. ವೈದ್ಯರ ಪವಿತ್ರವೃತ್ತಿಯೂ ನನಗೆ ಲಭಿಸಲಿಲ್ಲ. ಎಲ್ಲಾ ಕಡೆಯೂ ಸೋತವರು ಉಪಾಧ್ಯಾಯ ವೃತ್ತಿಗೆ ಬರುವರೆಂಬ ಲೋಕೋಕ್ತಿಯಂತೆ, ನಾನು ಕಡೆಗೆ ಉಪಾಧ್ಯಾಯನಾದೆ. ಕರುಣಾಳು ಬೆಳಕು ನನ್ನನ್ನು ನನ್ನ ಹೃದಯಕ್ಕೆ ಒಗ್ಗಿದ ಕೆಲಸಕ್ಕೇ

ತಂದು ಬಿಟ್ಟಿತು.-ಉಪಾಧ್ಯಾಯನಾಗಿ ಕನ್ನಡ ತಾಯಿಯ; ಕೃಪಾಕಟಾಕ್ಷಕ್ಕೆ ಪಾತ್ರನಾದೆ ಧನ್ಯನಾದೆ".

ಅಲ್ಲದೆ, ಅದೇ ಮಾತನ್ನೇ ಮುಂದುವರಿಸಿ, "ಹೌದು, ನಿವೃತ್ತನಾಗುತ್ತೇನೆ. ನನ್ನ ಹಿರಿಯರಿಂದ ಪಡೆದಿದ್ದ ಜ್ಞಾನದ ಪಂಜನ್ನು ಇದುವರೆಗೂ ನನ್ನ ಕೈಯಲ್ಲಾದ ಮಟ್ಟಿಗೆ ಹಿಡಿದಿದ್ದೆ...ನಿವೃತ್ತನಾದ ಮೇಲೂ ದೃಢಕಾಯವಿರುವ ವರೆಗೆ ನಾನು ಕನ್ನಡ ನಾಡನ್ನು ಇನ್ನೂ ಹೆಚ್ಚಾಗಿ ಸಂಚರಿಸಿ, ನಾಡಿನ ನಾನಾ ಭಾಗಗಳಲ್ಲಿನ **ಹೊಸ ಮಿತ್ರರ ಮನೆಗಳಿಗೆ ನುಗ್ಗಿ, ಊರುಗಳ ಸವಿ ಬಯಸುತ್ತಿದ್ದೇನೆ,** ಸರ್ವರ ಕರುಣದ ಶಿಶು ನಾನು, ನಾಡತೊತ್ತು." ಹೀಗೆ, ವಿನೋದ ಬರಬರುತ್ತಿದ್ದಂತೆಯೇ, ಅವರ ಭಾಷಣ ಗಳಲ್ಲಿ ಗಾಂಭೀರ್ಯ, ಒಂದು ತರಹದ ವಿಷಣ್ಣತೆ ಹಣಿಕೆ ಹಾಕುತ್ತಿದ್ದವು.

ಶ್ರೀಯವರು ಸಭೆ-ಸಮಾರಂಭಗಳನ್ನು, ಭಾಷಣಗಳನ್ನು ಕಡಿಮೆ ಮಾಡಿ, ಅದೇ ವೇಳೆಯನ್ನು ಇನ್ನೂ ಹೆಚ್ಚು **ಬರೆಯುವುದಕ್ಕೆ ವ್ಯಯಿಸಿದ್ದರೆ, ಅವರು ಮಾತ್ರ** ಮಾಡಬಹುದಾದಂಥ, ಸಾಹಿತ್ಯದ ಕೃಷಿಯನ್ನು ಮಾಡಿದ್ದರೆ, ಅವರೂ ಇನ್ನೂ ದೊಡ್ಡ ವರಾಗುತ್ತಿದ್ದರು. ನಾಡಿನ ಸಾರಸ್ವತ ಪ್ರಪಂಚವೂ ಇನ್ನೂ ಹೆಚ್ಚು ಶ್ರೀಮಂತವಾಗು ತ್ತಿತ್ತು ಎಂಬ ಅಭಿಪ್ರಾಯವೂ ಅನೇಕ ಸಲ ವ್ಯಕ್ತವಾಗಿದೆ. ಆದರೆ, ಈ ವಾಗ್ಮಿತೆಯೂ ಕೂಡ, ಶ್ರೀಯವರದೇ ಆದ ಸ್ವತ್ತಾಗಿತ್ತು. ಅವರು ಮಾತಾಡಿದ ಹಾಗೆ, ಅವರು ಕೆರಳಿ ಸಿದ ಹಾಗೆ, ಅವರು ಹುರಿದುಂಬಿಸಿದ ಹಾಗೆ, ಅವರು ಅನುಕಂಪಕ್ಕೆ ತಿರುಗಿಸಿದ ಹಾಗೆ, ಅವರು ಏಕಪ್ರಕಾರವಾಗಿ ಜ್ಞಾನಧಾರೆಯನ್ನು. ಆಕಾಶಾತ್ ಪತಿತಮ್ ತೋಯಮ್‌ದ ಹಾಗೆ, ಏಕಪ್ರಕಾರವಾಗಿ, ಬಡವ-ಬಲ್ಲಿದ ಎನ್ನದ ಹಾಗೆ, ಅಕ್ಷರಸ್ಥ-ಅನಕ್ಷರಸ್ಥ ಎನ್ನದ ಹಾಗೆ, ಒಂದೇ ಸಮನೆ ಹರಿಸಿದ ರೀತಿಯಲ್ಲಿ ಹರಿಸಬಲ್ಲವರು ಯಾರಿದ್ದರು? ಅವರ ಬರವಣಿಗೆಯಿಂದ ಓದುಬಲ್ಲ ಕೆಲವರು ಮಾತ್ರ ಬುದ್ಧಿಶ್ರೀಮಂತರಾಗುತ್ತಿದ್ದರು. ಆದರೆ, ಅವರ ಮಾತಿನಿಂದ ಅಖಂಡ ಜನಪದವೇ ಜ್ಞಾನ ಶ್ರೀಮಂತವಾಯಿತು.

ನಿಜ; ಅವರು ಇನ್ನೂ ಹೆಚ್ಚು ಬರೆದಿದ್ದರೆ? ಅದು 'ರೆ' ರಾಜ್ಯ. ಕಡಿಮೆಲೇಖನ, ಭಾಷಣಕಾರರಿಗೆ ಅಂಟಿಕೊಂಡು ಬಂದ ಶಾಪ. ಡಾ. ಜಾನ್ಸನ್ನರಿಗೆ ಹೀಗಾಯಿತು; ಮುದುವೀಡು ಕೃಷ್ಣರಾಯರಿಗೆ ಹೀಗಾಯಿತು; ಶ್ರೀಯವರಿಗೆ ಹೀಗಾಯಿತು. ಡಾ. ಜಾನ್ಸನ್ನನ ನಿತಾಂತ ಭಕ್ತನಾದ ಬಾಃಸ್‌ವೆಲ್ ಡಾ.ಜಾನ್ಸನ್ ಇನ್ನೂ ಹೆಚ್ಚು ಬರೆಯ ಬೇಕೆಂದು ಹಲುಬೇ ಹಲುಬಿದ. ಪೆದ್ದನ ಹಾಗೆ ಮಾತಾಡುತ್ತಿದ್ದ ಗೋಲ್ಡಸ್ಮಿಥ್, ಬಾಯಿ ಮುಚ್ಚಿಕೊಂಡು ಬರೆದೇ ಬರೆದ; ಬುದ್ಧಿವಂತನಾಗಿ ಬಾಯಿ ತೆಗೆದ ಜಾನ್ಸನ್ ಬಾಯಿ ಮುಚ್ಚಲೇ ಇಲ್ಲ. ಗೋಲ್ಡಿ wrote like an angel but talked like poor pall, ಆದರೆ ಭಾಷಣ ಜಲ ಲಿಪಿ. ಸಾಹಿತ್ಯ ಶಿಲಾನಿಕ್ಷಿಪ್ತಾಕ್ಷರ. ಇಂದು ಜಾನ್ಸನ್ನನಕಿಂತ ಗೋಲ್ಡಸ್ಮಿಥ್‌ನೇ ಸಾಹಿತ್ಯಾಭ್ಯಾಸಿಗಳಿಗೆ ಹೆಚ್ಚು ಪರಿಚಿತ...ಆಯಿತು; ಎರಡೂ ಒಂದೇ ಗುರಿಯ ಎರಡು ಭಿನ್ನ ಭಿನ್ನ ಮಾರ್ಗಗಳು. ಶ್ರೀಯವರ ಸ್ನೇಹಿತರು,

ಶಿಷ್ಯರು, ಪ್ರಶಿಷ್ಯರು ರಾಶಿರಾಶಿಯಾಗಿ ಸಾಹಿತ್ಯ ಸೃಷ್ಟಿ ಮಾಡುತ್ತಿದ್ದಾಗ, ಶ್ರೀ ಜನರಲ್ಲಿ ಒಂದಾಗಿ, ಜನಮನವನ್ನು ನೇರವಾಗಿ ನಲಿಸುವುದಕ್ಕಾಗಿ, ಪುಷ್ಟಿಗೊಳಿಸುವುದಕ್ಕಾಗಿ ಯತ್ನಿಸಿದರು. ಇದರಿಂದ ಜನತೆ ಸಂತುಷ್ಟಿ ಪಡೆಯಿತು; ಅದನ್ನು ನೋಡಿ ಅವರೂ ಸಂತೃಪ್ತರಾದರು. ಈ ಕುರಿತು ರಾಷ್ಟ್ರಕವಿ ಕುವೆಂಪು ಅವರು ಶ್ರೀಯವರ ಬಗ್ಗೆ ಪ್ರೀತಿ ಅಭಿಮಾನಗಳಿಂದ ಹೇಳಿದ ಮಾತುಗಳೇ ಯುಕ್ತವಾದ ಕಾಣಿಕೆಯೆಂದು ಕಾಣುತ್ತದೆ ಕುವೆಂಪು ಹೇಳಿದರು:

ಅದು ನಿಮ್ಮ ಳ್ಕರೆಯೆ ಪರಸಿತೆನ್ನಂ ಮೊದಲ್
ಇಂದು ರಾಮಾಯಣಕೆ ತಿರುಗಿ ಆ ಕೋಳಲಿನ ತೊದಲ್
ಕಾವ್ಯಗೈದಿದೆ ಬೃಹದ್ ಗಾನಮಂ. "ನನ್ನೊಡನೆ ಬಾ
ಕನ್ನಡದ ನಾಡನೆಳ್ಚರಿಸುವಾವೇಶಮಂ ತಾ
ವಾಙ್ಮಯ ತಪೋಬಲದಿ ಜಿಷ್ಣುತಟಿಚ್ಛಕ್ತಿ ತಾಂ
ಹೃದಯಗಹ್ವರದಲ್ಲಿ ಚಿಜ್ಜ್ಯೋತಿ ಪ್ರದೀಪಮಂ
ಪೊತ್ತಿಪೋಲ್ ಮಾಳ್ಪಂ ತವಿಸಿ ತಮಶ್ಶಾಪಮಂ"
ಇಂತೆನಿತ್ತೆನಿತ್ತೊ ನೀಂ ಪೇಳ್ದನ್ನ ಕರೆದೊಡಂ
ನಾಂ ಪೊರಮಟ್ಟೆನಿಲ್ಲೆನ್ನ ಪೊಕ್ಕ ವಲ್ಮೀಕದಿಂ.
"ನಿಮ್ಮ ಧರ್ಮಂ ನಿಮಗೆ ನನ್ನ ಧರ್ಮಂ ನನಗೆ
ಹಲವು ಬಟ್ಟೆಗಳಲ್ತೆ ಭಗವದಿಚ್ಛೆಯ ಮನೆಗೆ?
ಕೈಕೊಂಡ ರಸತಪಸ್ಸಿದ್ಧಿಯ ಅನಂತರಮೆ
ನೋಳ್ಪೆನ್. ಅದಕಿಂ ಮುನ್ನಮಾನ್ ಏಳ್ವುದೆಂತರಮೆ?"
ಎಂದೆನ್. ಅರಿತವರಲ್ತೆ? ಸೊಗಸುತೆಂದಿರಿ "ನಲ್!
ನಿನ್ನ ತಪಸ್ಸಿಯಿಂ ನಮಗಕ್ಕೆ ಸಿದ್ಧಿ! ಗೆಲ್!"
ಕುವೆಂಪು ಬರದೇ ಬರೆದರು; ಶ್ರೀ ಮಾತಾಡಿಯೇ ಆಡಿದರು.
ಹಲವು ಬಟ್ಟೆಗಳಲ್ತೆ ಭಗವದಿಚ್ಛೆಯ ಮನೆಗೆ!......

ಆದರೆ, ಇದರಿಂದ ಕನ್ನಡದ ಬರವಣಿಗೆಯ ಶೈಲಿಯೂ ಒಂದು ರೀತಿ ವೈಶಿಷ್ಟ್ಯಪೂರ್ಣವಾಯಿತೆಂದು ಹೇಳಬಹುದು. ಶ್ರೀ ಹಾಗೂ ಮುದವೀಡು ಕನ್ನಡದ ಬರವಣಿಗೆಯ ಶೈಲಿಗೆ ವಾಗ್ಮಿತೆಯ ಶೈಲಿಯನ್ನು ಕಾಣಿಕೆಯಾಗಿ ಕೊಟ್ಟರು. ಮುದವೀಡು ಕೃಷ್ಣರಾಯರ ವಾಗ್ಮಿತೆಯ ಬಗ್ಗೆ ಪ್ರೊ. ಕೆ. ಸಂಪದ್ಗಿರಿರಾಯರು ಹೀಗೆ ಹೇಳುತ್ತಾರೆ.

"....(Mudhavedkar) was among the early band who carried the message of Gandhi into Mysore. He had attended the first session of the Kannada Sahitya Parishat at Bangalore in 1915. Most of the speeches in the Conference pleading for the encouragement of Kannada were delivered in English! At the end of the session, when Krishnarao Mudhvedkar rose to express thanks to the Reception Committee on behalf of the representatives of Dharwar, he held forth in his sonorous, grandiloquent style in Kannada. Sri. H. V. Nanjundayya, the first Vice Chancellor of Mysore University, who was present, was so impressed that he hailed him as Surendranath Banerjee of Karnatak. When Mudhvedkar started a long sentence with its tiers of phrases, one watched with suspense and admiration not unmixed with anxiety, its mounting architecture wondering how he would end it. But, really if ever, was he at a loss for the right words to lead up to a fitting climax; rarely did he allow a sentence to slide down into bathos, a peril that always besets a grandiloquent speaker." 1

ಮುದವೀಡು ಅವರ ಭಾಷಣದ ಶೈಲಿಯ ಬರಹದ ರೀತಿ ಇದು: "ಧಾರವಾಡ-ನನ್ನ ಅಚ್ಚುಮೆಚ್ಚಿನ ಧಾರವಾಡ-ಚಿಕ್ಕಂದಿನಲ್ಲಿ ನಾನು ಚಿಣಿಕೋಲು ಚೆಂಡು ಬೊಗರಿಗಳನ್ನಾಡುತ್ತ ನಲಿದಾಡಿದ ಧಾರವಾಡ-ಇಲ್ಲಿ ಆ ಕಾಲದಲ್ಲಿ ನಡೆಯುತ್ತಿದ್ದ ಸಭೆ ಪರಿಷತ್ತುಗಳಲ್ಲೆಲ್ಲ ಮರಾಠಿ ಭಾಷೆಯ ಭಾಷಣಗಳ ಸುರಿಮಳೆಯು ಕೇಸರಿಡುತ್ತಿದ್ದ ಧಾರವಾಡ-ಇಂದು ಹೊಸಗನ್ನಡದ ವೈಸಿರಿಯು ತುಂಬಾ ಬೆಳೆಯುತ್ತ ನಡೆದಿರುವ ಈ ಹೊಸಗಾಲದಲ್ಲಿ, ಕನ್ನಡನಾಡಿನ ಬಡಗು ಸೀಮೆಯಲ್ಲೆಲ್ಲ ಕನ್ನಡ ಸಂಸ್ಕೃತಿಯ ಗಂಡು ಮೆಟ್ಟೆಂಬ ಹೆಸರು ಹೊಂದಿದೆ, ಕನ್ನಡ ಸರಸತಿಯ ನಿಲುದಾಣವೆಂಬ ಕೀರ್ತಿ ವೆತ್ತಿದೆ."

ವಾಗ್ಮಿತೆಯಲ್ಲಿ ಅನೇಕ ವಿಧ. ಬೇಂದ್ರೆಯವರದು ಮಾತಿನ ಮಲಕು, ಮಿಂಚಿನ

1 Karnataka Darshana, 1955, p 511

ಗೊಂಚಲು; ಶ್ರೀರಂಗರದು ಕೊಂಕುನುಡಿ; ಕುಡುಗೋಲು, ಗೋಕಾಕರದು ಸಮುದ್ರ ಘೋಷ; ಅನಕೃ ಮಂಜುಳ ಸಲಿಲ, ಮಲ್ಲಿಗೆ ಮಂಟಪ; ರಾಜರತ್ನಂ ಸಿಡಿಲ ಮೊಳಗು; ಮುದವೀಡು ಸಿಂಹಗರ್ಜನೆ; ಬಿ. ಎಂ. ಶ್ರೀ. ಚರ್ಚದ ಆರ್ಗನ್ ನಿನಾದ, ಬಾನ ಮೊಳಗು. ಪಾಂಡಿತ್ಯ, ಲಾಲಿತ್ಯ ಕೂಡಿಯೇ ಅವರಲ್ಲಿ ಉಯ್ಯಾಲೆ ಆಡುತ್ತಿದ್ದವು.

ಈ ವಾಗ್ಮಿತೆ, ಶ್ರೀ ಅವರ ಬರವಣಿಗೆಯ ಮೇಲೆಯೂ ಪ್ರಭಾವ ಬೀರಿತು. ಅವರ ಮುನ್ನುಡಿಗಳನ್ನು. ಲಿಖಿತ ಭಾಷಣಗಳನ್ನು ಓದುವಾಗ, ಅಲ್ಲಿ ಕಂಡುಬರುವ ಉತ್ಸಾಹ, ಆವೇಶ. ಚಿತ್ರಕ ಶಕ್ತಿ ಇವನ್ನು ಗಮನಿಸಿದಾಗ, ಸ್ವತಃ ಬಿ. ಎಂ. ಶ್ರೀ. ಯವರೇ ನಮ್ಮೆದುರು ನಿಂತು ಮಾತನಾಡುತ್ತಿರುವರೇನೋ ಎಂದೇ ಭಾಸವಾಗುತ್ತದೆ. ಉದಾಹರಣೆಗೆ, ಕುಮಾರವ್ಯಾಸ ಪ್ರಶಸ್ತಿಗೆ ಶ್ರೀಯವರು ಬರೆದ ಈ ಮುನ್ನುಡಿಯನ್ನು ನೋಡಬಹುದು :

"ನಾರಾಣಪ್ಪನ ನೋಟ, ಕುಮಾರವ್ಯಾಸನ ದರ್ಶನ, ಭಕ್ತಿಯ ಆವೇಶ ಬೇರೆ, ಸೀರೆ ಸೆಳೆವದ್ದೂ ಸೆಳೆದದ್ದೇ : ಉಂಡು ತೇಗಿ, ಹೊಟ್ಟೆ ನೀವಿದ್ದೂ ನೀವಿದ್ದೇ; ದೇವ ಬಂದಾ–ನಮ್ಮ ಓಹೋಹೋ! ಏಳನೆಯ ಸ್ವರ್ಗ! ಪರಮೇ ವ್ಯೋಮನ್!! ಕಿವಿ ಹೊಗುವುದೇ ತಡ ಪರವಶ! ಕೊಚ್ಚುವ ಪ್ರವಾಹ. ಇಂದಿಗೂ ನಮ್ಮ ಕರುಳಿನಿಂದ ಬಂದು ನಾಲಗೆಯಲ್ಲಿ ನಲಿಯುವ ಕನ್ನಡ! ಆ ಮಾತು, ಆ ಶೈಲಿ, ಆ ಮಾತ್ರೆಗಳ ವಿನ್ಯಾಸ, ಭಾವ, ರಸ, ಮೈಮರೆತ!....ಯಾವ ಮಹಾಭಾರತ ಕ್ಷಾತ್ರವೇದವಾಗಿದ್ದು, ಬ್ರಾಹ್ಮೀ ಭಾರತವಾಯಿತೋ, ಯಾವ ವೀರಗಾಯಕನ ಹೃದಯದಿಂದ ಬ್ರಹ್ಮವಿಶ್ವನಾದ ಪರಮಾತ್ಮನು ಮೂಡಿ ಐಕ್ಯವಾದನೋ,ಆ ಎರಡೂ ಕವಿಗಳ,ಋಷಿಗಳ, ಬ್ರಹ್ಮಚಾರಿಗಳ, ಆನಂದ ಪರವಶರ, ಸಾಯುಜ್ಯ ಸುಖಿಗಳ,ಇಹಲೋಕ ಪರಲೋಕ ದ್ವೈತಕ್ಕೆ ಮೀರಿದ ಅತಿ ವರ್ಣಾಶ್ರಮಿಗಳ ಪಂಕ್ತಿ ಕುಮಾರವ್ಯಾಸ. ಧರ್ಮಕ್ಷೇತ್ರೇ ಕುರುಕ್ಷೇತ್ರೇ –ಎರಡು ರಣಾಂಗಣದಲ್ಲಿಯೂ ಹೋರಾಟವಾದಾಗ, ಮಾಮಕಾಃ ಪಾಂಡವಾಃ– ಆಸುರಿ, ದೈವಿ–ಇಬ್ಬರೂ ಕಿಮಕುರ್ವತ-ಏನು ಮಾಡಿದರು, ಏನು ಮಾಡಬೇಕು: ಯಾರಲ್ಲಿ ಮೊರೆಹೋಗಬೇಕು? ಯಾರು ಸಾರಥಿಗಳು ಮನೋರಥಕ್ಕೆ, ಸಂದೇಹದಲ್ಲಿ, ದೌರ್ಬಲ್ಯದಲ್ಲಿ? ಅರಿಕೇಸರಿಯೊ? ಅಸುರಾರಿಯೊ? ಮಾಮೇಕಂ, ಮಮ ಪ್ರಾಣಾಹಿ, ಧರ್ಮಸಂಸ್ಥಾಪನಾರ್ಥಾಯ, ಪ್ರಿಯೋಸಿ ಮೇ, ಯುಧ್ಯಸ್ವ, ಮಯಿಸನ್ಯಸ್ಯ....... ಕುಮಾರವ್ಯಾಸನ ತಂತು ಇದು. ಕೃಷ್ಣಪರಮಾತ್ಮನ ಲೀಲೆ, ಭಕ್ತವತ್ಸಲತೆ, ಪ್ರೇಮದ ಸಲಿಗೆ,–ಮಾಯಾವಿ, ಜೋಕೆ, ಕೈ ಬಿಟ್ಟು ಬಿಟ್ಟವನಲ್ಲ; ಹಿಡಿದು ಹಿಡಿದವನಲ್ಲ; ಅಹಂಕಾರ ಮುಸುಕೀತು ಜೋಕೆ-ದಾಸ್ಯ, ಕೈಂಕರ್ಯ, ಧೈರ್ಯ, ವೀರ್ಯ, ಒಂದು ಮಾತಿನಲ್ಲಿ ಭಕ್ತಿ ಇದು" ೧

ಅದ್ಭುತ ಬರವಣಿಗೆ! ಈ ವಾಗ್ಜಲಪ್ರಪಾತದ ಸೌಂದರ್ಯಕ್ಕೆ ಮಾರು ಹೋಗದವರಾರು! ಪರವಶರಾಗದವರಾರು!

---

೧ ಕುಮಾರವ್ಯಾಸ ಪ್ರಶಸ್ತಿ, ಮಹಾರಾಜಾ ಕಾಲೇಜು, ಮೈಸೂರು ೧೯೪೦, ಪು ೧೮-೧೧

ಅಥವಾ, ಈ ಸಂಭಾಷಣೆಯ ಬರಹವನ್ನು ನೋಡಿ. (ಇದರ ಸಲೀಲತೆಯನ್ನು ಗಮನಿಸಿ. ಇದನ್ನು ಸ್ವಲ್ಪ ಲಂಬಿಸಿ, ಉದ್ಧರಿಸಲು ದಯವಿಟ್ಟು ಅನುಮತಿಯನ್ನು ಕೊಡಬೇಕೆಂದು ಕೋರುತ್ತೇನೆ):

"ಕನ್ನಡ ನಾಡಿನ ಹೂಗಳೋ! ಮೈಸೂರಿನ ಕೋಟೆಯಲ್ಲಿ ನಾವು ಹುಡುಗರಾಗಿದ್ದಾಗ ನೋಡಿದ್ದ ಹೂವಿನಂಗಡಿ ಸಾಲು. ಈಗಲೂ ಯಾವ ಹಳ್ಳಿ ಯಾವ ಊರಲ್ಲಾದರೂ ಚೆಲುವೆಯರು ಕಟ್ಟಿಮಾರುವ, ಬಿಡಿತೋರುವ, ಮುಡಿ ಹೇರುವ, ಅರಳುಗಳು! ತಡೆಯಿರಿ, ಪಂಪನನ್ನು ಕೇಳುವ, ಎಲ್ಲೋ ಉತ್ತರ ದೇಶದಲ್ಲಿ ಯಾವನೋ ಭರತನಂತೆ, ತನ್ನ ಮೇಳದಾಕೆಗಳ ಕೂಡ ಯಾವುದೋ ವನವನ್ನು ಹೊಕ್ಕನಂತೆ, ಹಿಮದ ಬೆಟ್ಟದ ತಪ್ಪಲಲ್ಲಿ! ಎಲಾ ಪಂಪ, ನಿಜ ಹೇಳು-ನಿಜ ಹೇಳಿದರೂ ಒಪ್ಪುತ್ತೇವೆ-ಸುಳ್ಳು ಹೇಳಿದರೂ ಒಪ್ಪುತ್ತೇವೆ-ಮಾಟಗಾರ ನೀನು, ಆಟಗಾರ ನೀನು: ಕನ್ನಡ ನಾಡಿನ ಹೂವುಗಳನ್ನು ಎದೆಯಲ್ಲಿ ಹುದುಗಿಸಿಕೊಂಡು, ನಾಲಗೆಯ ತುದಿಯಲ್ಲಿ ಉತ್ತರ ದೇಶವೆಂದು ಹೊರಳಿಸುತ್ತಿಲ್ಲವೇನಯ್ಯಾ ನೀನು-ಹೇಳು, ಹೇಳು, ಬಲ್ಲೆವು ನಾವು.

ಕೊಳಗಳ, ಮರಗಳ, ಲತೆಗಳ
ಫಳಪ್ರಸೂನಂಗಳೊದವಿನೊಳ್ ಪಕ್ಷಿಗಣಂ–
ಗಳ ಪುದುವಿನೊಳ್ ಆರುಂ ಋತು
ಗಳ ಚೆಲ್ವಂ ಕಾಣಲಾದುದಾ ನಂದನದೊಳ್.

ಆಗಲಿ, ಆಗಲಿ, ಮುಂದೆ–

ಪಸುರ್ ನನೆಯೊಳಿಡಿದ ಮಲ್ಲಿಗೆ-

ಹಸುರು ಮೊಗ್ಗೊ, ಇಡಿದಿದೆಯೋ, ಆಗಲಿ, ಮುಂದೆ?

ನನೆಯಿಂ
ಮುಸುಕಿದ, ತಳಿರಂ ಪೇರಿದ
ಹೊಸ ಮಾವುಗಳಿಂ ಬಸಂತಮೆಸೆದಪುದಿದಿರೊಳ್.

ಹಾಗೆ ಬಾ, ಕನ್ನಡ ನುಡಿಗಳು ಬರಲಿ-ಹುರುಳಾದ, ತಿರುಳಾದ, ಇಂಪಾದ, ಸೊಂಪಾದ, ತಾಯಾದ, (ಅಂದರೇನು?) ತವರಾದ, ನಮ್ಮ ಕನ್ನಡ ನುಡಿಗಳು ಬರಲಿ-ನೀನಲ್ಲದೆ ಯಾರಣ್ಣ ಕನ್ನಡಕ್ಕೊಡೆಯಾ? ಸುರಿ, ನಿನ್ನ ಬೊಕ್ಕಸವನ್ನ!

ಪಾದರಿ ಪೂತುವು ತೋರಿದು
ಮಾದುವು ಮಲ್ಲಿಗೆಗಳ್, ಎಯ್ದೆ ಪಣ್ತುವು ಮಾವು

ಏನಣ್ಣಾ, ಮಾವೂ ಮಲ್ಲಿಗೆ: ಮಲ್ಲಿಗೆ ಮಾವು ಅಲ್ಲಿಗೇ ಬರಬೇಕೊ ನೀನು ಬಳಸಿಕೊಂಡು, ನೆನಸಿಕೊಂಡು?

ತಳಿರ್ಗೊಂಬಿನೊಳ್ ಊಳ್ವ ಕೋಕಿಳಕುಳಂ-ಆಯ್ತು, ಕೋಗಿಲೆ; ಪೂಗೊಂಬಿನೊಳ್ ಆಡುತಿರ್ಪಳಿವೃಂದಂ-ಓಹೋ, ದುಂಬಿ!-ತುರುಗಿರ್ದ ಬಲ್ಮಿಡಿಯ ತೂಗುಗೊಂಬಿನೊಳ್ ಪಾಯ್ದು ಬಂದುಳಿಸುತಿರ್ಪ ಶುಕಾಳಿ-ಗಿಳಿ-ತಮ್ಮ ಬೆಸಮಂ ತಂತಮ್ಮ ಠಾಣಾಂಕಂರಂಗಳೊಳಿರ್ದಂಗಜ ತಂತ್ರದಂತೆಸೆವಿನಂ ಚೆಲ್ವಾದುವಿಮ್ಮಾವುಗಳ್,-ತಳಿರ್ಗೊಂಬು-ಕೋಗಿಲೆ; ಪುಗೊಂಬು-ದುಂಬಿ; ತೂಗುಂಗೊಂಬು-ಗಿಳಿ; ತಮ್ಮ ತಮ್ಮ ಠಾಣಗಳಲ್ಲಿ ಮನ್ಮಥನ ಕೆಲಸವನ್ನು ತಾವು ತಾವು ನಡೆಸುತ್ತಿವೆಯೋ ಇಮ್ಮಾವಿನಲ್ಲಿ? ಬೇರೆ ಮರಗಳಿಲ್ಲವೋ ಇವಕ್ಕೆ?

ತಳಿರೊಳ್ ನೀನೆ ಬೆಡಂಗನೈ, ನನೆಗಳೊಳ್ ನೀನೆ ನೀರನೈ, ಪುಷ್ಪಸಂ-
ಕುಳದೊಳ್ ನೀನೆ ವಿಳಾಸಿಯೈ, ಮಿಡಿಗಳೊಳ್ ನೀನೆ ಚೆಲ್ವನೈ, ಪಣ್ತ ಪ-
ಣ್ಗಳಿನೋವೊ ಪೆರತೇನೋ ನೀನೆ ಭುವನಕ್ಕಾರಾಧ್ಯನೈ, ಭೃಂಗಕೋ
ಕಿಳಕೀರ ಪ್ರಿಯ, ಚೂತರಾಜ, ತರುಗಳ್ ನಿನ್ನಂತೆ ಚೆನ್ನಂಗಳೇ?

ವಹವ್ವಾ! ಮಹಾಕವಿ,ನೀನೆ, ಬೆಡಂಗನೈ ನೀನೆ ನೀರನೈ, ನೀನೆ ವಿಳಾಸಿಯೈ, ನೀನೆ ಚೆಲ್ವನೈ, ನೀನೆ ಭುವನಕ್ಕಾರಾಧ್ಯನೈ, ಕರ್ನಾಟಕ-ಸೌಂದರ್ಯ ಪ್ರಿಯ, ಕವಿರಾಜ, ಕವಿತಾಗುಣಾರ್ಣವ, ಕವಿಗಳ್ ನಿನ್ನಂತೆ ಚೆನ್ನಂಗಳೇ!" ೧

ಶ್ರೀಯವರು ಪಂಪನ ಬಗ್ಗೆ ಉದ್ಗರಿಸಿದಂತೆಯೇ ನಾವೂ ಶ್ರೀ, ನೀನೆ ಬೆಡಂಗನೈ, ನೀನೆ ವಾಗ್ಮಿಯೈ, ನೀನೆ ವಾಗ್ ವಿಭವೋನ್ನತನೈ,ನೀನೆ ಗುಣಾರ್ಣವನೈ, ಕರ್ನಾಟಕಣ್ವ, ಕರ್ನಾಟಕ ಕಣ್ಣೇ-ಎಂದು ಉದ್ಗಾರ ತೆಗೆಯಬೇಕೆನಿಸುತ್ತದೆ. ಎಲ್ಲಿಂದ ತರಬೇಕು ಇಂಥ ವಾಗ್ಮಿತೆಯ ಶೈಲಿಯನ್ನ!!

---

೧ ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ಕಾವ್ಯಾಲಯ, ಮೈಸೂರು, ೧೯೬೦, ಪು ೨೪೦-೨೪೧

ಇಂಗ್ಲಿಷ್ ಗೀತೆಗಳು

ಬಿ. ಎಂ. ಶ್ರೀಕಂಠಯ್ಯನವರು ಕನ್ನಡಕ್ಕೆ ಮಾಡಿದ ಪರಮೋಪಕಾರವೆಂದರೆ ಇಂಗ್ಲಿಷಿನಿಂದ ಕನ್ನಡಕ್ಕೆ ರೂಪಾಂತರಿಸಿದ 'ಇಂಗ್ಲಿಷ್ ಗೀತೆಗಳು.' ಈ ಕೆಲಸವನ್ನು ಇಂಗ್ಲಿಷ್ ಮತ್ತು ಕನ್ನಡಗಳಲ್ಲಿ ಸರಿಸಮಾನವಾದ ಸಾಮರ್ಥ್ಯವನ್ನು ಹೊಂದಿದ್ದ ಶ್ರೀಕಂಠಯ್ಯನವರಂಥವರೇ ಮಾಡಲು ಸಾಧ್ಯವಾಗಿದ್ದಿತು.

ಶ್ರೀಕಂಠಯ್ಯನವರ ಈ ಪುಸ್ತಕ ಸನ್ ೧೯೨೧ ರಲ್ಲಿ ಪ್ರಕಟವಾಗುವವರೆಗೆ ಕನ್ನಡ ಕಾವ್ಯವನಿತೆ ಪ್ರಾಸಾಲಂಕಾರಗಳ ಭಾರದಲ್ಲಿಯೇ ತಗ್ಗಿ ಹೋಗಿದ್ದಳು. ಇಂಥ ಪ್ರಾಸಾಲಂಕಾರಗಳು ಸಮರ್ಥರಾದ ಕವಿಗಳ ಕೈಯಲ್ಲಿ ಭೂಷಣಪ್ರಾಯಗವಾಗಿದ್ದರೆ, ಅಸಮರ್ಥರ ಕೈಯಲ್ಲಿ ಕೇವಲ ಕಂದಾಚಾರದ ವಿಷಯಗಳಾಗಿದ್ದುವು. ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ಹಾಗೂ ೨೦ ರ ಆದಿಭಾಗದಲ್ಲಿ ಕವಿತಾ ರಚನೆ ಮಾಡಿದ ಹಲವಾರು ಕವಿಗಳಿಗೆ ಹೊಸ ಹೊಸ ಕಾವ್ಯವಿಷಯಗಳ ಪರಿಕಲ್ಪನೆಯೇನೋ ಬಂದಿದ್ದಿತು. ಆದರೆ, ಅಂಥ ವಿಷಯಗಳು ವಾಹಕವಾಗಿ ಅವರು ಉಪಯೋಗಿಸಿದ ಮಾಧ್ಯಮ ಪುನಃ ಹಳೆಯ ಖ್ಯಾತ ವೃತ್ತಗಳು ಇಲ್ಲವೆ ಷಟ್ಪದಿಗಳು ಅಥವಾ ಮಾಲಿನಿ ಮೊದಲಾದ ಛಂದಸ್ಸುಗಳು.

ಹೊಸ ಹೊಸ ವಿಷಯುಗಳನ್ನು ಆಯ್ದುಕೊಂಡ ಹಲವಾರು ಕವಿಗಳು ಹಳೆಯ ರೀತಿಯ ಬರವಣಿಗೆಗೇ ಮಾರುಹೋದದ್ದಕ್ಕೆ ದೃಷ್ಟಾಂತವಾಗಿ ಹಲವು ಕವಿತೆಗಳನ್ನು ಹೇಳಬಹುದು. ಕ್ರಿ. ಶ. ೧೯೧೮ ರ ಸುಮಾರಿಗೇ ಚಾಲ್ತಿಯಲ್ಲಿ ಬಂದಿದ್ದ ಸೈಕಲ್ಲನ್ನು ಇಪ್ಪತ್ತು ರೌಪ್ಯವ ಕೊಟ್ಟುಕೊಂಡಿದ್ದ ಒಬ್ಬ ವ್ಯಕ್ತಿ ಅದನ್ನು ಹೇಗೆ ನಡೆಸಿದನೆಂಬುದನ್ನು ಸಿದ್ಧೇಶ್ವರ ಮಳೀಮಠ ಎಂಬವರು ಹೀಗೆ ವರ್ಣಿಸಿದ್ದಾರೆಃ

ಬಲುಭಯದಿ ಸತ್ತಿರುವ ನರಗಳ
ಸೆಳೆದು ಬಿಗಿದನು, ಕಚ್ಚಿದವಡೆಯ
ಉಲುಕದುಸುರನು, ಬಿಡದಲೆದೆಯನು ಗಟ್ಟಿಪಿಡಿದಿಹನು
ನಿಲದೆ ಗಣ ಗಣ ಗಂಟೆ ಹೊಡೆಯುತ
ಪಲವು ಕುತ್ತನು ದಾಂಟಿ ಗುಡ್ಡದ
ಪೊಳಲ ಹೊರಗಿರ್ಪಿಳುಕಲಿನ ಮಾರ್ಗದಲಿ ನಡೆತಂದ ೧

ಶಾಲಾ ಮಾಸ್ತರರ ಸಂಬಳ ಕಡಿಮೆಯೆಂದು ಪ್ರತ್ಯೇಕವಾಗಿ ಹೇಳಬೇಕಾಗಿಯೇ ಇಲ್ಲ. ಅದರಲ್ಲಿಯೂ ಪ್ರಥಮ ಮಹಾಯುದ್ಧದ ಕಾಲದಲ್ಲಿ ಧಾರಣೆಗಳು ಉರಿದೇಳುತ್ತಿರುವ ಪ್ರಸಂಗ. ಇಂಥ ಸಮಯದಲ್ಲಿ ಫಕೀರಯ್ಯ ಬ. ಇಂಡಿ ಎನ್ನುವವರು 'ಬಡ ಶಿಕ್ಷಕನ ಬೇಡಿಕೆ' ಎಂಬ ಕವಿತೆಯನ್ನು ಬರೆದರು, ಅದು ಪ್ರಾಥಮಿಕ ಶಾಲಾ ಶಿಕ್ಷಕರ ದುರವಸ್ಥೆಯನ್ನು ಚೆನ್ನಾಗಿ ಚಿತ್ರಿಸುವ ಪದ್ಯ;

ನಿಲಯದಲಿ ನಾವೈವರಿರುವೆವು–ತಲಬು ದೊರೆವುದು ಮೂರುವರಹವು,
ಬಳಲುತಿರ್ಪೆನು ಕರುಣಿಸೈ ದೇವೇಶ ಜಗದೀಶಾ,
ಮಳೆಯು ಪೋದುದು ದಯವತೋರದೆ, ಹೊಲಗಳೆಲ್ಲವು ಬೀಳುಬಿದ್ದವು,
ಬೆಲೆಯು ಹೆಚ್ಚಿತು, ಕಾಳುಕಡಿಗಳನೆಂತು ಕೊಳ್ಳುವುದು?
ಹರಕು ಬಟ್ಟೆಯ ಹೊದೆಯಲಾರೆನು, ಧರಿಸಲಾರೆನು ಮಲಿನವಸ್ತ್ರವ
ಮರುಗುತಿಹೆ ನಾಸಿದರದೆಶೆಯಿಂ ದಿವಸದಿವಸಕ್ಕೆ
ಭರದಿನೊಡವೆಯು ಬೆಲೆಯು ಬೆಳೆವುದು, ತರಲಿ ನಾನಿನ್ನೆಲ್ಲಿ ದುಡ್ಡ
ನ್ನರಿವೆಗಳ ಕೊಳ್ಳಲ್ಕೆ ತಿಳಿಯದದೆನಗೆ ಜಗದೀಶಾ,

ಆದ್ದರಿಂದ, ದೇವರಲ್ಲಿ ಕವಿಯ ಪ್ರಾರ್ಥನೆಯೆಂದರೆ—

ಭರದೆ ನಡೆದಿಪ ಯುದ್ಧಮುಗಿಸೈ, ದುರುಳ ವೈರಿಗೆ ಮರಣವೀಯೈ
ಬರದ ಬಾಧೆಯನೀಗಿಸೈ–ನುತಿಸುವೆನು ದೇವೇಶಾ
ಕರುಣ ಭರಿತನೆ, ಪರಮಚರಿತನೆ, ಇರದೆಯಧ್ಯಾಪಕರ ತಲಬನು
ತ್ವರೆಯೊಳಿಮ್ಮಡಿ ಮಾಳ್ಪ ಮನವನ್ನೀವುದೊಡೆಯರ್ಗೆ ೨

ಮೇಲಿನ ಪದ್ಯಗಳಲ್ಲಿ ಕಾವ್ಯ ವಿಷಯವು ಹೊಸದಾಗಿದ್ದರೂ, ಬಂಧ ಹಳೆಯದು ದ್ವಿತೀಯಾಕ್ಷರ ಪ್ರಾಸ ತಪ್ಪದು.

೧ ಪ್ರಭಾತಃ ಸಪ್ಟಂಬರ, ೧೯೧೮, ಪು ೧೧-೧೨
೨ ಪ್ರಭಾತ, ಮೇ ೧೯೧೯, ಪು ೪೬

ದಿ. ಶಾಂತಕವಿಗಳೂ (೧೮೫೬-೧೯೨೧) ಹೊಸ ಹೊಸ ವಿಷಯಗಳ ಬಗ್ಗೆ, ಕನ್ನಡದ ಅಭಿಮಾನದ ಬಗ್ಗೆ,ಸುಂದರವಾದ ಉಪಮೆ, ರೂಪಕಗಳಿಂದ ಕೂಡಿದ ಕಾವ್ಯ ರಚನೆ ಮಾಡಿದರು. ಅವರು ಬರೆದ 'ಬೇಡಲು ಕನ್ನಡ-ದಾಸಯ್ಯ ಬಂದಿಹ, ಸೀಡಿರಮ್ಮಾ ತಡಮಾಡದಲೇ' ಎಂಬ ಪದ್ಯವನ್ನು ಬಿ.ಎಂ. ಶ್ರೀ ಯವರು ಮೆಚ್ಚಿಕೊಂಡು, 'ಕನ್ನಡದ ಬಾವುಟ'ದಲ್ಲಿ ಸೇರ್ಪಡೆ ಮಾಡಿದರು. ಶರಷಟ್ಪದಿಯ ಪ್ರಭೇದವನ್ನು ಉಪಯೋಗಿಸಿದ್ದರಿಂದ ಶಾಂತಕವಿಗಳ ಬಂಧ ಹೊಸದೆನಿಸಿದರೂ, ಅವರಲ್ಲಿಯೂ ಪ್ರಾಸ ಇಲ್ಲದೆ ಇಲ್ಲ.

ಕಾವ್ಯಾನಂದ ಪುಣೇಕರ ಅವರು (೧೮೭೦-೧೯೨೯) ಪ್ರಾಸಬದ್ಧವಾಗಿ ಕಾವ್ಯ ರಚನೆ ಮಾಡಿದ್ದರೂ, ಪ್ರಾಸವಿಲ್ಲದೆಯೂ ಹಲವು ಕವಿತೆಗಳನ್ನು ಬರೆದರು. ಹೀಗೆ ೧೯೧೮ರ ಮೊದಲೇ ಪ್ರಾಸತ್ಯಾಗ ಮಾಡಿದ ಬಗ್ಗೆ ಕಾವ್ಯಾನಂದರ ಈ ಕೆಳಗಿನ ಪದ್ಯವನ್ನು ನೋಡಬಹುದುಃ

ಅಪ್ಪಾ ಜಾತರಿ, ಧೋತರೋ? ಮಗನೆ ಈ ಊರಲ್ಲಿಯೇ ಇಲ್ಲವು.
ಎಲ್ಲಾ ಗೊತ್ತಿದೆ ಬಲ್ಲೆ, ಪೇಟೆಗೆ ನಡೀ, ಮಲ್ಲಪ್ಪನಲ್ಲಿಲ್ಲವೇ?
ಅಪ್ಪಾ ಸಕ್ಕರಿಕಡ್ಡಿಯೇ? ಮಗಳೇ ಜಂತಾದಾವು ನಮ್ಮಪ್ಪಗೆ!
ತಾಸೇ ಸಪ್ಪಳವಾಗೆ, ಪೋಗೆ ಹುಡುಗರ್, ಹಾ ನಿಟ್ಟುಸಿರ್ ಬಿಟ್ಟರು॥

ಆದ್ದರಿಂದ ಕಾವ್ಯಾನಂದರ ಬಗ್ಗೆ ವಲ್ಲಭ ಮಹಲಿಂಗ ತಟ್ಟಿಯವರು

ಪ್ರಾಸತ್ರಾಸಕೆ ತೊಡಕದೆ
ದೇಶದೊಳೀಗಿರ್ದ ಕನ್ನಡದ ನುಡಿಬಿಡದೆ।
ಮೋಸದಿ ಕದಿಯದೆ ಪರಪದ
ಮೀಸಲ ಕಲ್ಪನೆಯನೀವ ಕಾವ್ಯಾನಂದಂ॥

—ಎಂದು ಬರೆದರು.

ಆದರೆ, ಇವೆಲ್ಲ ಸಮಯಸ್ಫೂರ್ತ ಪ್ರಯತ್ನಗಳು ಮಾತ್ರ. ಈ ಹೊಸ ಪ್ರಯೋಗಗಳನ್ನು, ಬಿಟ್ಟೂ ಬಿಡದೆ ಮುಂದುವರಿಸಿಕೊಂಡು ಹೋಗಬೇಕೆಂಬ ಸತತ ಪರಿಶ್ರಮ ಈ ಕವಿಗಳಲ್ಲಿ ಕಂಡು ಬರಲಿಲ್ಲ.

ಬಿ. ಎಂ. ಶ್ರೀಯವರ ಸಮಸಮಾನವಾಗಿಯೋ, ಅಥವಾ ಅದಕ್ಕೂ ಕೆಲಕಾಲ ಮೊದಲೋ, ಇಂಗ್ಲಿಷ್ ಭಾಷೆಯ ಕವನಗಳನ್ನು ತಿಳಿಯಾದ ಕನ್ನಡದ ನುಡಿಯಲ್ಲಿ ಭಾಷಾಂತರಿಸಿದವರು ದಿ. ಹಟ್ಟಿಯಂಗಡಿ ನಾರಾಯಣರಾಯರು. ನಾರಾಯಣ ಪರಮೇಶ್ವರ ಹಟ್ಟಿಯಂಗಡಿಯವರು (೧೮೬೩- ೧೯೨೧) ಆಂಗ್ಲಭಾಷಾ ವಿಶಾರದರು, ಕನ್ನಡದಲ್ಲಿಯೂ ಸಂಶೋಧಕರು. ಅವರು ಮುಂಬಯಿಯ 'ಇಂಡಿಯನ್ ಸ್ಪೆಕ್ಟೇಟರ್' ಎಂಬ

ಆಂಗ್ಲ ಪತ್ರಿಕೆಯ ಸಂಪಾದಕರಾಗಿದ್ದರು. 'ಈಸ್ಟ ಆ್ಯಂಡ ವೆಸ್ಟ' ಹಾಗು ಸುಪ್ರಸಿದ್ಧ 'ಟೈಮ್ಸ ಆಫ್ ಇಂಡಿಯಾ' ಪತ್ರಿಕೆಗಳಲ್ಲಿಯೂ ಅನೇಕ ಲೇಖನಗಳನ್ನು ಬರೆಯುತ್ತಿದ್ದರು. ಅವರು ಇಂಗ್ಲಿಷದಿಂದ ಕನ್ನಡಕ್ಕೆ ಅನುವಾದ ಮಾಡಿದ ಅನೇಕ ಕವನಗಳು ಧಾರವಾಡದ'ವಾಗ್ಭೂಷಣ'ಪತ್ರಿಕೆಯ ೧೯೧೪ರ ಮಾರ್ಚ ಸಂಚಿಕೆಯಲ್ಲಿ'ಆಂಗ್ಲ ಕವಿತಾಸಾರ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಪನಾಕೃತ'ಆಂಗ್ಲ ಕವಿತಾಸಾರ' ಎಂಬ ಪುಸ್ತಕವನ್ನು ತಾವು ನೋಡಿದ್ದಾಗಿಯೂ,"ನಾನು ನೋಡಿದ ಪ್ರತಿಯಲ್ಲಿ ಮುಂಭಾಗದ ರಕ್ಷಾಪತ್ರ ನಷ್ಟವಾಗಿರುವದರಿಂದ ಯಾವ ವರ್ಷ ಇದು ಅಚ್ಚಾಯಿತೆಂದು ವಿವರಿಸಿ ಹೇಳಲು ಅಶಕ್ಯವಾಗಿದೆಯೆಂದೂ."“ಈ ಪುಸ್ತಕ ಫೂಲ್ಸ್ ಕ್ಯಾಪ್ ಪ್ರೋಡಮ್ರ(?)ಪತ್ರದ ಆಕಾರದ ೨೨ ಪುಟಗಳುಳ್ಳ"ದ್ದಾಗಿತ್ತೆಂದೂ ದಿ.ತೀನಂ ಶ್ರೀಕಂಠಯ್ಯನವರು ಹೇಳುತ್ತಾರೆ. ೧ ಈ ಪುಸ್ತಕ ನಮಗೆ ನೋಡಲು ದೊರಕಲಿಲ್ಲ. ಆದರೆ, 'ಆಂಗ್ಲ ಕವಿತಾಸಾರ' ಎಂಬ ಈ ಹೆಸರಿನಲ್ಲಿ 'ವಾಗ್ಭೂಷಣ' ದಲ್ಲಿ ಪ್ರಕಟವಾದ ಕವನಗಳನ್ನು ಮಾತ್ರ ನೋಡಿದ್ದೇನೆ. ಆದರೆ, ಹಟ್ಟಿಯಂಗಡಿಯವರ 'ಆಂಗ್ಲ ಕವಿತಾವಳಿ' ಎಂಬ ೨೨ ಪುಟದ ಪುಸ್ತಕ ಪುತ್ತೂರಿನ 'ಸದಾನಂದ ಕೋ- ಆಪರೇಟಿವ್' ಮುದ್ರಣಾಲಯದಲ್ಲಿ ಸನ್ ೧೯೧೯ ರಲ್ಲಿ ಪ್ರಕಟವಾಯಿತು. ಈ ಪ್ರಯತ್ನದ ಬಗ್ಗೆ ಆ ಕಾಲಕ್ಕೇ ಪರಿಷತ್ ಪತ್ರಿಕೆ ಹೀಗೆ ಬರೆದಿದೆ "ಇಂಗ್ಲಿಷಿನಲ್ಲಿ ಪಾಂಡಿತ್ಯ ಪಡೆದಿದ್ದರೂ, ಈ ಮಹಾಶಯರು ಅನೇಕ ವರುಷಗಳಿಂದ ತಮ್ಮ ಮಾತೃಭಾಷೆಗೆ ಹೆಚ್ಚಾದ ಗಮನಕೊಟ್ಟು, ಈಗಲೂ, ತಮ್ಮ ಇತರ ಕಾರ್ಯಗಳ ಮಧ್ಯ, ಆ ಭಾಷೆಯಲ್ಲಿ ಹೊಸ ರೀತಿಯ ಕವಿತೆಗಳನ್ನು ಬಹಳ ಸರಸವಾಗಿ ಮಾಡುವಷ್ಟು ಶಕ್ತಿಯನ್ನೂ, ಉತ್ಸಾಹವನ್ನೂ ತೋರ್ಪಡಿಸುತ್ತಿರುವದು ಎಷ್ಟು ಶ್ಲಾಘ್ಯವಾಗಿರುವುದು!"

ನಾರಾಯಣರಾಯರು ಲಾಂಗ್‌ಫೆಲೊನ ಕವಿತೆಯನ್ನು ಈ ರೀತಿ ಭಾಷಾಂತರಿಸಿದ್ದಾರೆ :

ಜಗದ ರಣರಂಗದಲ್ಲಿ ಜೀವಿತದ ಪಾಳ್ಯದಲಿ,
ಮೃಗಪಶುಗಳಂತಿರದೆ, ಕಲಿಯಾಗಿ ಹೋರಾಡು.
ಮುಗಿದ ಕಾಲವೆ ತೀರಿಹೋದುದನು ಮಾಗಿಸಲಿ,
ಬಗೆದದರ ಚಿಂತೆಯದು ನಿನಗೇಕೆ ನೋಡು.

ಕೀಟ್ಸ ಕವಿಯ ಕವಿತೆಯೊಂದನ್ನು

ನೋಡಿದುದ ನೋಡಿದರೆ ಮೋಹಿಸುವ ಕಣ್ಣೆಲ್ಲಿ?
ಬಾಡದಂತಹ ಕದಪು ದಂತ ಮೌಕ್ತಿಕವೆಲ್ಲಿ?
ಕೇಳಿದುದ ಕೇಳಿದರೆ ಸವಿಮಾತಿಗಿಂಪೆಲ್ಲಿ?
ಹೇಳಿದುದ ಹೇಳಿದ್ದರೆ ಕಥೆಯ ರಂಜನವೆಲ್ಲಿ?

---

೧ ಇಂಗ್ಲಿಷ್ ಗೀತೆಗಳು, ಪ್ರಥಮ ವಿಶ್ವಕನ್ನಡದ ಸಮ್ಮೇಳನ ಸಾಹಿತ್ಯಮಾಲೆ, ೧೯೮೩ ಪು. xxi

ಸರ್ ಹೆನ್ರಿ ವಾಟನ್ ಅವರ 'Character of Happy Life' ಎಂಬುದನ್ನು

ಪರರ ತುಷ್ಟಿಗೆ ದಣಿಯದವನ ಸುಖಿಕೆಣೆಯೆಲ್ಲಿ?
ಸರಲಭಾವದ ಕವಚದಂತೆ ರಕ್ಷಣವೆಲ್ಲಿ?
ಸತ್ಯಶೀಲತೆ ನಿತ್ಯಸುಖಿಗೆ ಬಲು ಜಾಣತನ
ನರರ ಭಣಿತದ ಭೀತಿಯೆಂಬ ಸಂಕಟವಿಲ್ಲ.

ಎಂದು ನಾರಾಯಣರಾಯರುಭಾಷಾಂತರಿಸಿದ್ದರೆ, ಅದನ್ನೇ ಬಿ. ಎಂ. ಶ್ರೀಯವರು;

ಏನು ಸುಖಿಯೋ ತಾನು ಹುಟ್ಟಿನಲಿ ಕಲಿಕೆಯಲಿ
ಇನ್ನೊಬ್ಬನಿಚ್ಛೆಯನು ದುಡಿಯದಿರುವವನು!
ಒಳ್ಳಿತನು ಬಗೆವುದೇ ತನ್ನ ಕಾಯುವ ಯಂತ್ರ,
ನಿಜದ ನಡತೆಯೆ ತಂತ್ರ ತನಗೆನಿಸಿದವನು!

ಸಾರಾಂಶ : ಹನಾ ಮತ್ತು ಶ್ರೀ ಸಮೀಪ ಸಮೀಪವಾಗಿಯೇ ಭಾಷಾಂತರ ಕಾರ್ಯವನ್ನು ನಡೆಸಿದರು. ಆದರೆ, ಒಬ್ಬರೊಬ್ಬರ ವಿಷಯವಾಗಿ ಪರಸ್ಪರರಿಗೆ ಗೊತ್ತಿದ್ದಂತೆ ಕಾಣುವುದಿಲ್ಲ. ಹನಾ ಅವರಲ್ಲಿ ಸಹ ಹೊಸಗನ್ನಡದ ತಿಳಿಮಾತುಗಳು ಕಂಡು ಬಂದರೂ, ಇನ್ನೂ ಪ್ರಾಸದ ಅವಶೇಷ ಉಳಿದಿದೆ.

೨

ಬಿ. ಎಂ. ಶ್ರೀ ಅವರ 'ಇಂಗ್ಲಿಷ್ ಗೀತೆಗಳು' ಹೊಸಗನ್ನಡ ವಸಂತಮಾಸದ ಪ್ರಥಮ ಕೋಗಿಲೆಯಾಯಿತು. ಈ ಕೋಕಿಲೆಯ ಕೂಜನವನ್ನು ಕೇಳಿದ ಮೇಲೆ ಅನೇಕ ಕವಿಗಳು ಇದೇ ಧ್ವನಿಯಲ್ಲಿ ಹಾಡತೊಡಗಿದರು. ಕರ್ನಾಟಕ ಹಾಡುವ ಹಕ್ಕಿಗಳ ಗೂಡಾಯಿತು. ಹೊಸ ಛಂದ, ಹೊಸ ಬಂಧ, ತಿಳಿನುಡಿ, ಪ್ರಾಸರಾಹಿತ್ಯ ಸಲೀಲತೆ– ಇವು ಇಂಗ್ಲಿಷ್ ಗೀತೆಗಳ ಪ್ರಮುಖ ಲಕ್ಷಣಗಳಾದುವು.ಇಂಗ್ಲಿಷ್ ಕಾವ್ಯಸಾಮ್ರಾಜ್ಯದಿಂದ ತಮಗೆ ಆಕರ್ಷಕವೆಂದು ಕಂಡುಬಂದ ಕವನಗಳನ್ನು ಶ್ರೀಯವರು ಹೆಕ್ಕಿ ತೆಗೆದು, ಅವುಗಳನ್ನು ಭಾಷಾಂತರಿಸಿದರು ಎನ್ನುವುದಕ್ಕಿಂತ ಎಷ್ಟೋ ಸಲ ಭಾರತದ, ಕನ್ನಡದ, ಜಾಯಮಾನಕ್ಕೆ ಅನುಗುಣವಾಗುವಂತೆ ರೂಪಾಂತರಿಸಿದರು. ಈ ರಸಕ್ರಿಯೆಯಲ್ಲಿ ಎಷ್ಟೋ ರೂಪಾಂತರಗಳು ಮೂಲದ ಕವನಗಳಿಗಿಂತ ಹೆಚ್ಚಿನ ಬಂಧುರತೆಯನ್ನು ಪಡೆದುವು. ಕೆಲಕೆಲವಂತೂ, ಇವು ಸ್ವೋಪಜ್ಞ ಕೃತಿಗಳೇನೋ ಎಂಬಂತೆಯೇ ರಾರಾಜಿಸಿದುವು. ೧

೧ ಶ್ರೀಯವರ 'ಇಂಗ್ಲಿಷ್ ಗೀತೆಗಳು' ಪುಸ್ತಕದ ಬಗ್ಗೆ ೧೯೪೧ ರಷ್ಟು ಹಿಂದೆಯೇ ದ.ರಾ.ಬೇಂದ್ರೆಯವರು 'ಸಂಭಾವನೆ' ಸಂಪುಟದಲ್ಲಿಯೂ, ದಿ. ತೀ ನಂ ಶ್ರೀಕಂಠಯ್ಯನವರು ೧೯೫೨ ರಲ್ಲಿಯೂ, ಎ. ಎನ್. ಮೂರ್ತಿರಾಯರು ಬಿ. ಎಂ. ಶ್ರೀಕಂಠಯ್ಯ ಎಂಬ ಪುಸ್ತಕ

ಪ್ರೊ ಎ. ಎನ್. ಮೂರ್ತಿರಾವ್ ಅವರು ಹೇಳಿದಂತೆ "'ಇಂಗ್ಲಿಷ್ ಗೀತೆಗಳು' ತನ್ನ ಸ್ವಂತ ಉತ್ಕೃಷ್ಟತೆಯಿಂದಾಗಿ, ಬಹುಶಃ ಅದಕ್ಕಿಂತ ಹೆಚ್ಚಾಗಿ ಐತಿಹಾಸಿಕ ಕಾರಣಗಳಿಂದಾಗಿ, ನಮ್ಮ ಸಾಹಿತ್ಯದಲ್ಲಿ ಒಂದು ಮೈಲಿಗಲ್ಲು ಎನ್ನಿಸಿಕೊಂಡು ಸ್ಥಿರವಾಗಿ ನಿಲ್ಲುತ್ತದೆ. ಅದು ಪ್ರಕಟವಾಗಿ ರಾತ್ರಿ ಕಳೆದು ಬೆಳಗಾಯಿತು ಎನ್ನುವುದರೊಳಗೆ ಕರ್ನಾಟಕದ ಎಲ್ಲ ಕಡೆಗಳಿಂದಲೂ ಕಾವ್ಯಗಾನ ಕೇಳಿ ಬರಲಾರಂಭಿಸಿತು. ಕವಿಗಳು ಅದುವರೆಗೆ ಕಾಣದಿದ್ದ ಹೊಸದೊಂದು ಪ್ರಪಂಚವೇ ಅವರ ಕಣ್ಣಮುಂದೆ ತೆರೆದಂತಾಯಿತು. ಮಂಜಾಗಿದ್ದ ಕಣ್ಣುಗಳೂ, ಮಂದವಾಗಿದ್ದ ಕಿವಿಗಳೂ, ಹಠಾತ್ತಾಗಿ ಹೊಸ ಚೈತನ್ಯ ಪಡೆದುಕೊಂಡವು. ಮಾವಿನ ಚಿಗುರು, ಕೋಗಿಲೆಯ ಹಾಡು, ಕರಿಮೋಡದ ಹಿನ್ನೆಲೆಯ ಮೇಲೆ ಮೃದುವಾಗಿ ಬೀಸಿ ಪುಲಕವೆಬ್ಬಿಸುವ ಗಾಳಿ-ಇವೆಲ್ಲ ಮಿತಿಯರಿಯದೆ, ಔಚಿತ್ಯವರಿಯದೆ, ಎರವು ತಂದು ಕಾವ್ಯದ ಮೇಲೆ ಹೇರಿದ ಒಡವೆಯಾಗಿರುವುದನ್ನು ಬಿಟ್ಟು, ಕಣ್ಣು ಕಿವಿಗಳ ನಿಜವಾದ ಅನುಭವವಾದವು. ಹೊಲದಲ್ಲಿ ಬೆವರುಸುರಿಸುತ್ತ ದುಡಿಯುವ ರೈತ; ಬಟ್ಟಲುಗಣ್ಣು ಬಿಟ್ಟುಕೊಂಡು ಪಟಾಕಿಹೂಬಾಣಗಳನ್ನು ಹಾರಿಸಿ ನಲಿಯುವ ಮಗು; ಅಂಗಳದಲ್ಲಿಯ ಹಿರಿಯ ಹೂವು; ಅರೆಕ್ಷಣ ಮನಸ್ಸಿನಲ್ಲಿ ಸುಳಿದು ಮಾಯವಾದ ಹರ್ಷ ಅಥವಾ ದುಗುಡ; ನಾವೇ ಅರಿಯದ, ನಾಮರೂಪಗಳಿಲ್ಲದ, ಮಾತಿಗೆ ಸಿಕ್ಕದ, ಯಾವುದೋ ಬಯಕೆ; ನಕ್ಷತ್ರವನ್ನು ಹಿಡಿಯಲು ಕೈಚಾಚಿ ಹಾರುವ ಮಹತ್ವಾಕಾಂಕ್ಷೆ-ಯಾವುದು ಬೇಕಾದರೂ ಕಾವ್ಯಕ್ಕೆ ವಿಷಯವಾಗಬಹುದು ಎಂಬ ರಹಸ್ಯ ಇದ್ದಕ್ಕಿದ್ದ ಹಾಗೆಯೇ ಬಯಲಾಯಿತು......ಕವಿಯಾಗಬೇಕಾದರೆ ಪಂಡಿತನೂ ಆಗಬೇಕಾದ್ದು ಅನಿವಾರ್ಯವಲ್ಲ ಎಂಬುದನ್ನು ಎಲ್ಲರೂ ಮನಗಂಡರು." ೨

ಪೂಜ್ಯ ಪಾಸ್ತಿಯವರು ಹೇಳಿದ ಹಾಗೆ :

............ಕನ್ನಡದೊಳಿಂದಾವಾವ
ಕಲಕಂಠ ಕೇಳುತಿದೆ ಅದರ ಗಾನದೊಳೆಲ್ಲ
ತೋರುತಿದೆ ನೀವು ತೆರೆದಾ ನವ್ಯ ಅಕ್ಷುಲ್ಲ
ಧೀರಗತಿ, ಸುವಿಶಾಲ ವಿಶ್ವವಿಸ್ತರ ಭಾವ.
ನುಡಿದು ಕಲಿಸಿದಿರಿ; ನುಡಿಯದೆ ಮತ್ತೆ ಕಲಿಸಿದಿರಿ;

ದಲ್ಲಿಯೂ (ಪು ೩೫-೪೩), ಡಿ. ವಿ. ಜಿ. ಯವರು 'ಶ್ರೀ ಸಾಹಿತ್ಯ'ದ ಪರಿಚಯ ಕಾಣಿಕೆಯಲ್ಲಿಯೂ (ಪು ೨೦-೨೬), ಡಾ. ಪ್ರಧಾನ ಗುರುದತ್ತರು 'ಬಿ. ಎಂ. ಶ್ರೀ. ಅವರ ಬದುಕು-ಬರಹ' ಸಂಕಲನದಲ್ಲಿ ವಿಶ್ಲೇಷಣಾತ್ಮಕವಾಗಿ 'ಬಿ. ಎಂ. ಶ್ರೀಕಂಠಯ್ಯನವರು' ಎಂಬ ಲೇಖನದಲ್ಲಿಯೂ, ಹಾಗೂ ಇನ್ನೂ ಇತರರೂ ಈ ಜನಪ್ರಿಯ ಸಂಕಲನದ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

೨ ಬಿ. ಎಂ. ಶ್ರೀಕಂಠಯ್ಯ, ಎ. ಎನ್. ಮೂರ್ತಿರಾವ್, ಕನ್ನಡಸಾಹಿತ್ಯ ಪರಿಷತ್ತು, ೧೯೮೨ ಪು ೪೧

ದುಡಿದು ಕಲಿಸಿದಿರಿ; ಮನದರಕೆಗಳನೆಚ್ಚರಿಸಿ
ಎಳೆಯರೆದೆಯಲಿ ಹಾಡುವಾಸೆಯನು ಸುಳಿಸಿದಿರಿ.
ಒಂದೊಂದು ವೇಳೆ ನಿಮ್ಮನು ಕುರಿತು ಮಚ್ಚರಿಸಿ
ನುಡಿಯುವರು ಕೆಲವು ಸೋದರರು; ಅವರೂ ಮುಂದೆ
ತಿಳಿಯುವರು ಕನ್ನಡಕೆ ಕಣ್ವ ಮುನಿ ನೀವೆಂದು. ೧

'ಸಂಭಾವನೆ' ಯಲ್ಲಿ 'ಇಂಗ್ಲಿಷ್ ಗೀತಗಳು' ಬಗ್ಗೆ ಬರೆಯುವಾಗ ವರಕವಿ ಬೇಂದ್ರೆಯವರು "'ಇಂಗ್ಲಿಷ್ ಗೀತೆಗಳು' ಒಬ್ಬ ಸಾಹಿತ್ಯ ಸಾಧಕನನ್ನಲ್ಲ, ಸಾಹಿತ್ಯಸಿದ್ಧನನ್ನು ಪ್ರಕಾಶಗೊಳಿಸಿದವು. ಅದರಲ್ಲಿ ಪ್ರಯೋಗಕ್ಕಿಂತ ಪರಿಣತಿಯ ಲಕ್ಷಣಗಳು ಹೆಚ್ಚಾಗಿವೆ. ಇಲ್ಲಿಯ ಕಾವ್ಯರಸದಲ್ಲಿ ಇವರ ಜೀವಗಸವು ಬೆರೆತು ಆದ ಹೊಸ ರಸಾಯನಕ್ಕೆ ಬೇರೊಂದು ರುಚಿಯೇ ಬಂದಿದೆ....ಈ ಸಂಗ್ರಹವು 'ಶ್ರೀ'ಯವರ ಕೃತಿಯಾಗಿ, ಹೊಸ ಕವನಗಳಿಗೆ ಮಾರ್ಗದರ್ಶಕವಾಗಿ, ತರುಣರ ಮೆಚ್ಚಿಗೆಯದಾಗಿ, ಭಾವಗೀತೆಗಳ ಭಾಷಾಂತರಕ್ಕೊಂದು ಕೈಪಿಡಿಯಾಗಿ, ಅಕ್ಲಿಷ್ಟ ಪ್ರಸನ್ನ ಕಾವ್ಯ ಶೈಲಿಗೆ ಮಾದರಿಯಾಗಿ ನಿಲ್ಲುವದು. ಹೊಸ ಕವನಗಳ ಓಂಕಾರದಲ್ಲಿ 'ಶ್ರೀ'ಯವರ ಈ ಶ್ರೀಕಾರವು ನಿತ್ಯನವೀನವಾಗಿ ಉಳಿಯಲಿ" ಎಂದು ಹೇಳಿದ್ದಾರೆ.

೩

'ಇಂಗ್ಲಿಷ್ ಗೀತೆಗಳು' ಪ್ರಥಮ ಸಲ ಪ್ರಕಟವಾದದ್ದು ಸನ್ ೧೯೨೧ ರಲ್ಲಿ. ಇದಕ್ಕೂ ಮೊದಲು ಇದರಲ್ಲಿಯ ಹಲವು ಕವನಗಳು 'ವಿದ್ಯಾದಾಯಿನಿ'ಯಲ್ಲಿ ೧೯೧೯ ರಲ್ಲಿ ಪ್ರಕಟವಾಗಿದ್ದವು. ಅನಂತರ ೧೯೨೧ ರಲ್ಲಿಯೂ, ಹಾಗು 'ಕರ್ನಾಟಕ ಜನಜೀವನ' ಪತ್ರಿಕೆಯಲ್ಲಿ ೧೯೨೪ ರಲ್ಲಿಯೂ ಪ್ರಕಟಗೊಂಡವು. ಸ್ವತಃ ಕವಿಗಳೇ ಹೇಳಿಕೊಂಡಂತೆ,ಈ ಸಂಗ್ರಹದಲ್ಲಿ "ವಿಶ್ವಕವಿತಾವಿಷಯಗಳಾದ ಯುದ್ಧ, ಪ್ರೇಮ, ಮರಣ, ದೇಶಭಕ್ತಿ, ದೈವಭಕ್ತಿ, ಪ್ರಕೃತಿ ಸೌಂದರ್ಯ, ಮಾನವ ಜನ್ಮದ ಸುಖದುಃಖಗಳು,ರಾಗದ್ವೇಷಗಳು, ಪುರುಷಾರ್ಥಗಳು, ಜನ್ಮಾಂತರದ ದರ್ಶನಗಳು" ಮುಂತಾದವುಗಳ ಅಭಿವ್ಯಕ್ತಿಯಿದೆ. ಇಲ್ಲಿ ಒಟ್ಟು ಅರವತ್ತು ಕವನಗಳಿವೆ. ಇವನ್ನು ಕವಿಗಳ ಮೇರೆಗೆ ವಿಭಜಿಸಬೇಕಾದರೆ– ಷೆಲ್ಲಿಯ ೯, ಬರ್ನ್ಸನ ೭, ವರ್ಡ್ಸ್‌ವರ್ಥ್‌ನ ೫, ಬ್ರೌನಿಂಗ್, ಟೆನಿಸನ್ ಮತ್ತು ಸ್ಕಾಟರ ತಲಾ ಮೂರು ಮೂರು, ಷೇಕ್ಸ್‌ಪಿಯರ್, ಸದೆ, ಕೌಪರ್, ಕ್ಯಾಂಬೆಲ್ ಮತ್ತು ಬೈರನ್ನರ ಎರಡೆರಡು, ಕ್ಲಫ್, ಕೋಲರಿಜ್, ಹಾರ್ಟ್‌ಕೋಲ್‌ರಿಜ್, ಥಾಮ್ಸನ್, ಲೇಡಿ ನಾರ್ಟನ್ ನ್ಯಾಷ್, ನ್ಯೂಮನ್, ಲೇಡಿ ನೊರನ್, ಬಾರ್ಬಲ್ಡ್, ಬೆಡ್ಡೋಸ್, ರಾಸೆಟ್, ಲ್ಯಾಂಡರ್ ಲ್ಯಾಂಬ್, ಲೇಡಿ ಲಿಂಡ್ಸೆ, ವಾಟಸ್, ವೂಲ್ಫ್, ಹುಡ್, ಹೆನ್ಲೆ, ಇವರ ಕವನಗಳು ಒಂದೊಂದು, ೨ ಅನಾಮಿಕ,೩ ಶ್ರೀಸ್ವರಚಿತ ಕವನಗಳಿವೆ.ಕಾವ್ಯವಸ್ತುವಿನ ದೃಷ್ಟಿಯಿಂದ

---

೧ ಮಲಾರ; ಶ್ರೀನಿವಾಸ ಪು ೮೩

ವಿಭಜಿಸಿದರೆ, ಈ ಸಂಕಲನದಲ್ಲಿ– "ದೇಶಭಕ್ತಿಯನ್ನು ಕುರಿತು ಹದಿನೈದು, ಪ್ರಕೃತಿ ಸೌಂದರ್ಯವನ್ನು ಕುರಿತು ಆರು, ತಾತ್ವಿಕವಾದುವು ಹನ್ನೆರಡು, ಉಳಿದ ಮೂವತ್ತು ಪ್ರಣಯಪ್ರಪಂಚಕ್ಕೆ ಸೇರಿದುವು." ಈ ಕವಿಗಳ ಆಯ್ಕೆಯನ್ನು ನೋಡಿದರೆ, Ineffectual angel beating in the void his luminous wings invain ಎಂದು ವರ್ಣಿಸಲ್ಪಟ್ಟ ಷೆಲ್ಲಿ ಕವಿಗೇ ಒಂಬತ್ತರ ಸಿಂಹಪಾಲು ಹೋಗುತ್ತದೆ. ಪ್ರಣಯ ಕವನಗಳಿಗೆ ಮೂವತ್ತರಷ್ಟು ಭಾಗ ಹೋಗುತ್ತದೆ.

ಈ ಸಂಗ್ರಹದ ಮೂಲಕ ಶ್ರೀಕಂಠಯ್ಯನವರು ಕನ್ನಡದ ಕವಿಗಡಣಕ್ಕೆ ಹೊಸ ಹಸಿರು ಭೂಮಿಯನ್ನು ತೋರಿಸಿದರು: ಹೊಸ ಹುಲ್ಲುಗದ್ದೆಗಳನ್ನು ಕಣ್ಣೆದುರು ತರಿಸಿದರು; ಹೊಸ ಗಂಧರ್ವಲೋಕ ಕಣ್ಣೆದುರು ಕಟ್ಟುವಂತೆ ಮಾಡಿದರು. ಹೊಸ ಕಾವ್ಯದ ಸೃಷ್ಟಾರರಾಗಿ ಹೊಸ ಛಂದ, ಹೊಸಬಂಧ,ಹೊಸ ತಿಳಿನುಡಿ,ಕನ್ನಡದಲ್ಲಿ ಕಾಲಿಡುವಂತೆ ಮಾಡಿದರು, ಇಲ್ಲಿಯ ಅನೇಕ ಕವನಗಳು ಭಾಷಾಂತರಿತವೆಂದು ಹೇಳದಿದ್ದರೆ, ಅವು ಸ್ವೋಪಜ್ಞ ಕೃತಿಗಳೇ ಏನೋ ಅನ್ನುವಷ್ಟು ಸಲೀಲವಾಗಿ ಲೀಲಾಜಾಲವಾಗಿ ರಚಿತವಾಗಿವೆ.

ಉದಾಹರಣೆಗೆ ನ್ಯೂಮನ್ ಕವಿಯ Lead, Kindly Light ಎಂಬ ಕವನ ಶ್ರೀಯವರ ಕೈಯಲ್ಲಿ ವಿಶ್ವವ್ಯಾಪಕ ಪ್ರಾರ್ಥನಾಗೀತವಾಯಿತು :

ಕರುಣಾಳು, ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ,
    ಕೈಹಿಡಿದು ನಡೆಸೆನ್ನನು,
ಇರುಳು ಕತ್ತಲೆಯ ಗವಿ; ಮನೆ ದೂರ; ಕನಿಕರಿಸಿ
    ಕೈಹಿಡಿದು ನಡೆಸೆನ್ನನು.......

ಇಷ್ಟು ದಿನ ಸಲಹಿರುವೆ ಮೂರ್ಖನನು; ಮುಂದೆಯೂ
    ಕೈಹಿಡಿದು ನಡೆಸದಿಹೆಯಾ?
ಕಷ್ಟದಡವಿಯ ಕಳೆದು, ಬೆಟ್ಟಹೊಳೆಗಳ ಹಾದು,
    ಇರುಳನ್ನು ನೂಕದಿಹೆಯಾ?

ಇಲ್ಲಿಯ ಯಾಚನೆ ಎಂಥ ಬೆಳಕಿನ ಹೃದಯವನ್ನೂ ಕರಗಿಸದಿರದು.ಅದರಂತೆಯೇ 'ಕಾರಿಹೆಗ್ಗಡೆಯ ಮಗಳು' 'ಕನಕಾಂಗಿ' 'ಮುದಿಯ ರಾಮಗೌಡ' ಮೊದಲಾದ ಕವನಗಳಲ್ಲಿ ಮೂಲದ ಕವನಗಳಲ್ಲಿಯಕಿಂತ ಭಾವ ಹೆಚ್ಚು ಸ್ಪಷ್ಟವಾಗಿ, ಸುಭಗವಾಗಿ, ಹೃದಯಸ್ಪರ್ಶಿಯಾಗಿ ಹೊರಹೊಮ್ಮಿದೆ :

ಮರಳು, ಮರಳು, ಮಗಳೆ ಎಂದ
    ಮೊರೆವ ಕಾಯಲ ಗಂಟಲಿಂದ;
ಮರೆತೆ, ಒಪ್ಪಿದೆ, ನಿನ್ನ ನಲ್ಲನ,
    ಮರಳು ಕಂದಾ ಎಂದನು....

ಮರಳಬಹುದೆ? ಹೋಗಬಹುದೆ?
　　ಕರೆಯ ತೆರೆಯುಪ್ಪಳಿಸಿ ಹೊಯ್ದು
ಹೊರಳಿಹೋದವು ಮಗಳ ಮೇಲೆ
　　ಕೊರಗಿನಲಿ ಅವನುಳಿದನು.

(ಕಾರಿಹೆಗ್ಗಡೆಯ ಮಗಳು)

ಅಥವಾ,
ಭಾವಗಳು, ರಾಗಗಳು, ಬಗೆಬಗೆಯ ಭೋಗಗಳು,
　　ಆವಾವುವಲೆಯುವವು ಮನುಜನೆದೆಯ
ಕಾಮರಾಯಂಗೆಲ್ಲ ಕುಲ ಪುರೋಹಿತರಾಗಿ
　　ಹೋಮಾಗ್ನಿಯನು ಬೀಸಿ ಕೆರಳಿಸುವವು

(ಕನಕಾಂಗಿ)

ಕೆನ್ನೆಯಲಿ ಕೆಂಪು ಬಿಳುಪನು ಸುಳಿಸಿ ಕೇಳಿದಳು,
　　ಕಣ್ಣ ನಾಚಿಕೆಪಟ್ಟು, ನೆಲದಲಿಟ್ಟು;
ತನ್ನ ಮುಖವನು ಬಿಡದೆ ನಾ ನೋಡದಿರಲಾರೆ–
　　ನೆನ್ನುವುದ ತಾನೆಲ್ಲ ಬಲ್ಲಳವಳು......
ಒಂದು ಕಡೆ ಅದು ಮೋಹ; ಒಂದು ಕಡೆ ಸಂದೇಹ;
　　ಒಂದು ಕಡೆ ಲಜ್ಜೆಯೇ ಬಲ್ಲ ಬೆಡಗು:
ಕಣ್ಣಿನಲಿ ಕಾಣದೆಯೆ, ಸೋಂಕಿನಿಂದಲೆ ತಿಳಿಯು–
　　ಲೆನ್ನ ಹೃದಯದ ಪದರನೆಂಬ ಚದುರು.

ಸಾಮಾನ್ಯ ಇಂಗ್ಲಿಷ್ ಓದುಗನಿಗೆ ಮೂಲದಲ್ಲಿ ಅ–ಸ್ಪಷ್ಟವಾಗುವ Auld Robin Gray, ಶ್ರೀಕಂಠಯ್ಯನವರಲ್ಲಿ ದ್ರಾಕ್ಷಾಪಾಕದಷ್ಟು ಸುಲಲಿತವಾಗಿದೆ:

I gang like a ghaist, and I carena to spin
I daurna think on Jamie, for that wad be sin;
But I'll do my best a gude wife ay to be,
For auld Robin Gray he is kind unto me.

ಈಗ ಇದರ ಕನ್ನಡಾನುವಾದವನ್ನು ನೋಡಿ:

ಗಾಳಿಯಾಗಿ ಸುಳಿಯುತಿರುವೆ–ಮನೆಯ ಕೆಲಸ ಅಕ್ಕರಿಲ್ಲ.
ಚಾಮನನು ನೆನೆಯುವುದು ಪಾಪ; ಎಷ್ಟೊ ತಡೆಯುವೆ ಮನಸನು.
ಒಳ್ಳೆ ಗರತಿಯಾಗಿ ಬದುಕಲು ಎದೆಯನೆಷ್ಟೊ ಗಟ್ಟಿ ಮಾಡುವೆ,
ರಾಮುಗೌಡನ ಪ್ರೀತಿನಂಬಿಕೆಗೆಂತು ದ್ರೋಹವ ಬಗೆವೆನು!

(ಮುದಿಯ ರಾಮುಗೌಡ)

"ರಾವುತರ ದಾಳಿ" ಮೂಲದ ಲಯವನ್ನೇ ಕಾಯ್ದುಕೊಂಡು ಬಂದಿದೆ.

ಹರಿದಾರಿ, ಹರಿದಾರಿ
    ಹರಿದಾರಿ ಮುಂದೆ,
ಮೃತ್ಯುವಿನ ಪಂಜರಕೆ
    ನುಗ್ಗಿದರು ಮುಂದೆ.
"ನುಗ್ಗಿ ಮುಂದಕೆ, ಕುದುರೆ!
    ಕೊಚ್ಚಿ ಗುಂಡನು!" ಎಂದ
ಆರ್‍ನೂರು ರಾವುತರು
    ಮೃತ್ಯುವಿನ ಪಂಜರಕೆ
    ನುಗ್ಗಿದರು ಮುಂದೆ!
ಅವರ ಬಲಗಡೆ ಗುಂಡು,
ಅವರ ಎಡಗಡೆ ಗುಂಡು,
ಅವರ ಮುಂಗಡೆ ಗುಂಡು
    ಕಾರಿದುವು ಚೀರಿ
ಸಿಡಿಮದ್ದು ಚೆರೆ ಬಿದ್ದು
ಜಗ್ಗದೆಯೆ ನುಗ್ಗಿದರು
ಮೃತ್ಯುವಿನ ದಾಡೆಯಲಿ
ನರಕದುರಿಬಾಯಿಯಲಿ.
ಆರ್‍ನೂರು ರಾವುತರು
    ನುಗ್ಗಿದರು ತೂರಿ
cannons to the right of them
cannons to the left
cannons infront

ಹಾಗೆಯೇ,

ವಸಂತ ಬಂದ, ಋತುಗಳ ರಾಜ ತಾ ಬಂದ,
ಚಿಗುರನು ತಂದ, ಹೆಣ್ಗಳ ಕುಣಿಸುತ ನಿಂದ,
ಚಳಿಯನು ಕೊಂದ, ಹಕ್ಕಿಗಳುಲಿಗಳೆ ಚೆಂದ,
    ಕೂವೂ, ಜಗ್ ಜಗ್, ಪುವ್ವೀ, ಟೂವಿಟ್ಟವೂ!.......

Spring, the sweet spring, is the year's pleasent king;
then blooms each thing, then maids dance in a ring,

Cold doth not sting, the pretty birds do sing,

Cuckoo, jug,-jug, pu-we, to-witta-woo!

ಇಂಗ್ಲಂಡದ ಹೊಲ-ಗದ್ದೆಗಳು, 'ಡೇಸಿ' ಹೂವುಗಳು, ಬಿಸಿಲುಕಾಯಿಸುವ ವಯಸ್ಸಾದ ಗೃಹಿಣಿಯರು, 'ಇಂಗ್ಲಿಷ್ ಗೀತೆಗಳ'ಲ್ಲಿ ಶುದ್ಧ ಕರ್ನಾಟಕದ ಮಾವು, ಮಲ್ಲಿಗೆ, ಜನಗಳ ಜಾತ್ರೆಯ ಗುಂಪಿಗೆ ಎಡೆಮಾಡಿಕೊಡುತ್ತಾರೆ :

ಮಾವಿನ ಸೊಂಪು, ಮಲ್ಲಿಗೆ ಬಯಲೆಲ್ಲ ಕಂಪು,
ಗಾಳಿಯ ತಂಪು, ಜನಗಳ ಜಾತ್ರೆಯ ಗುಂಪು,
ಕಿವಿಗಳಿಗಿಂಪು, ಹಕ್ಕಿಗಳುಲುಹಿನ ಪೆಂಪು,
ಕೂವು, ಜಗ್ ಜಗ್, ಪುವ್ವೀ, ಟೂವಿಟ್ಟವೂ!
ಬಂಧ ವಸಂತ-ನಮ್ಮಾ
ರಾಜ ವಸಂತ !

ಮೂಲದ ಕವನದಲ್ಲಿರದ ಕೊನೆಯೆರಡು ಸಾಲುಗಳು-

ಬಂದ ವಸಂತ-ನಮ್ಮಾ
ರಾಜ ವಸಂತ!

ಕವಿತೆಯ ಇಡೀ ಪರಿಣಾಮವನ್ನು ಪರಿಪೂರ್ಣಗೊಳಿಸುತ್ತವೆ. ಭೂ-ವನಕುಸುಮಿಸಿ, ಪುಲುಕಿಸಿ, ಮಲಕಿಸಿ, ಬರುವ ವಸಂತ, ರಾಜ ವಸಂತನಾಗದೆ ಮತ್ತೇನು?

ಹೀಗೆಯೇ, ಅನೇಕ ಕವನಗಳ ಉದಾಹರಣೆಗಳನ್ನು ಕೊಡಬಹುದು. ಥಾಮಸ್ ಹುಡ್ ಅವರು ಬರೆದ The Bridge of Sighs ಎನ್ನುವ ಕವಿತೆಯನ್ನು ಶ್ರೀಯವರು 'ದುಃಖ ಸೇತು' ಎಂಬ ಹೆಸರಿನಲ್ಲಿ ಭಾಷಾಂತರಿಸಿದ್ದಾರೆ. 'ದುಃಖಸೇತು' ಕರುಣಾರಸದ ಒಂದು ಮಡುವು. ಇದನ್ನು ಓದಿ ಕಂಬನಿ ಸುರಿಸದಿರುವ ವ್ಯಕ್ತಿ ನಿಜವಾಗಿಯೂ ಕಲ್ಲೆದೆಯುವನಾಗಿರಬೇಕು. ಒಬ್ಬ ಕಾಮುಕನ ಆಮಿಷಕ್ಕೆ ಒಳಗಾಗಿ ನೀತಿಚ್ಯುತಳಾದ ಎಳೆಯ ಕನ್ಯೆಯೊಬ್ಬಳು ಅವನಿಂದ ವಂಚಿತಳಾಗಿ ನದಿಗೆ ಧುಮುಕಿದ್ದೇ ಇದರ ವಸ್ತು. ಹಾಗೆ ಧುಮುಕಿದ ಆ ಯುವತಿಯ ಕಳೇವರವನ್ನು ನದಿಯ ದಂಡೆಯ ಮೇಲೆ ಹಾಕಿದಾಗ ಕವಿ ತೆಗೆದ ಉದ್ಗಾರಗಳು'ದುಃಖಸೇಶು'ವಿನಲ್ಲಿ ಮಡುಗಟ್ಟಿ ನಿಂತಿವೆ;

ಅನಾಥೆ ಇವಳಿನ್ನೊಬ್ಬ
ಳೀ ಜನ್ಮ ರೋಷಿ,
ವೇಧೆಯನು ತಾಳದೆಯೆ
ಮುಳುಗಿದಳು ಹೊಳೆಗೆ.
ಮೆಲ್ಲಗಿವಳನು ಮುಟ್ಟು
ಮರುಗಿ ಹಿಡಿದೆತ್ತು,

ಏನು ಕೋಮಲಕಾಯ!
ಹೊಳಪು ಹೊಸ ಪ್ರಾಯ !

ಈ ಹುಡುಗಿ ಯಾರು? ಇವಳ ಹೆಸರೇನು? ಇವಳು ಆತ್ಮಹತ್ಯೆ ಮಾಡಿಕೊಳ್ಳದಂತೆ ತಡೆಯಲು ಇವಳ ಹತ್ತಿರದವರಾರೂ ಇರಲಿಲ್ಲವೆ? ತಂದೆ ಇರಲಿಲ್ಲವೆ? ತಾಯಿ ಇರಲಿಲ್ಲವೆ? ಅಕ್ಕ-ತಂಗಿಯರು? ಅಣ್ಣ ತಮ್ಮಂದಿರು? ಯಾರೂ ಇರಲಿಲ್ಲವೆ!

ತುಂಬಿದೀ ಊರಲ್ಲಿ
ಮನೆ ಇವಳಿಗಿಲ್ಲ
ತುಂಬಿದೀ ಜನದಲ್ಲಿ
ನೆರೆ ಇವಳಿಗಿಲ್ಲ
ಅನಾಥೆ, ಹಾ ದಿಕ್ಕಿಲ್ಲ
ಮರಣವೇ ಶರಣು ೧

ಆ ಗಂಡಸು, ಈ ಹೆಂಗಸು–ಇಬ್ಬರೂ ಒಟ್ಟಾಗಿಯೇ ಆ ಪಾಪದ ಫಲವನ್ನು ಅನುಭವಿಸಬೇಕಾಗಿದ್ದಾಗ, ಗಾಳಿಸೂದ ಅವ ಜಾರಿ ಹೋದ; ಕ್ಷೇತ್ರಳಾದ ಇವಳು ಮರುಗಬೇಕಯಿತು. ಸ್ವಲ್ಪ ಛಳಿಯೆಂದರೆ ನಡುಗುವ ಈ ತರುಣಿ, ಬೆಚ್ಚಿದಳೆ? ನಡುಗಿದಳೆ? ಹೆದರಿದಳೆ ಹೊಳೆಗೆ?-ಎಲ್ಲಾದರೂ ಸರಿಯೆ, ಈ ಲೋಕ ಬೇಡೆಂದು ಹಾರಿದಳು ನೆಗೆದು. ಹಾರಿದಳು, ಮುಳುಗಿದಳು, ತೇಲಿದಳು, ಕೊಚ್ಚಿದಳು, ಕೊರೆವ ಹೊಳೆ

---

೧ ನಿರಿಹಿಡಿದು, ನಡುವೇರಿ, ತೊದಲು ಮಾತನು ಬೀರಿ, ಕೊರಗನಗಿಸಲು ಬಲ್ಲ ಮಗುವಿಲ್ಲವೇನೋ?—ಎಂಬ ಸಾಲುಗಳು ಯಥಾರ್ಥವಾಗಿಯೇ ಚರ್ಚಾಸ್ಪದವಾಗಿವೆ. ಈ ಸಾಲುಗಳು "ಕರುಣರಸದ ಮಿನುಗನ್ನು ಹೆಚ್ಚಿಸಿವೆ." ಎಂದು ತೀ ನಂ ಶ್ರೀಕಂಠಯ್ಯನವರೆಂದರೆ, ಈ ಸಾಲುಗಳು "ಮೂಲದ ಧ್ವನಿಗೆ ಕೊಂಚ ಕುಂದನ್ನೇ ತರುವವು ಎಂಬ ಭಾವನೆ ಬರುತ್ತದೆ. ಹೆಣ್ಣು ಯಾವನೋ ಒಬ್ಬ ಕಾಮಿಯ ಬಲೆಗೆ ಸಿಕ್ಕಿ ಮೋಸಹೋಗಿದ್ದಾಳೆ. ತನ್ನ ಪಾಪದ ಫಲವಾದ ಅವಮಾನವನ್ನು ತಡೆಯಲಾರದೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಅವಳ ಪಾಪದ ಬಗ್ಗೆ ನಾವು ಮಾತನಾಡುವದು ಸಲ್ಲದು. ದೇವರೆ ಅವಳನ್ನು ಕ್ಷಮಿಸಲೆನ್ನುವ ಧ್ವನಿ ಮೂಲದಲ್ಲಿದೆ. ಮಗುವಿದ್ದಿದ್ದರೆ ಎಂಬ ಯೋಚನೆಯಿಂದ ಈ ಧ್ವನಿ ಕುಗ್ಗುವದೆಂಬುದು ಸ್ಪಷ್ಟ" ಎಂದು ಎಸ್. ಅನಂತನಾರಾಯಣ ಅವರು ಹೇಳುತ್ತಾರೆ. ಈ ಎರಡನೆಯ ಅಭಿಪ್ರಾಯವೇ ಸರಿಯೆಂದು ಕಾಣುತ್ತದೆ. ಮಗುವಿನ ಪ್ರಸ್ತಾಪ ಮೂಲ ಕವಿತೆಯಲ್ಲಿಲ್ಲ. ಅಲ್ಲದೆ, ಒಬ್ಬ ಅಮಾಯಕ ಎಳೆಯ ಹೆಣ್ಣು, ಯಾವನೋ ವಂಚಕನ ಕೈಗೆ ಸಿಕ್ಕಿ, ನೀತಿಭ್ರಷ್ಟಳಾಗಿ, ತನ್ನ ಸೋಲಿಗಾಗಿ ತನ್ನಲ್ಲಿಯೇ ಕುದಿಕುದಿದು, ಯಾರ ಮುಂದೂ ಹೇಳದೆ, ಯಾರ ಮುಂದೂ ಹೇಳಲಾರದೆ, ತನ್ನನ್ನೇ ತಾನು ಬಲಿದಾನವನ್ನಾಗಿ ಕೊಡುವ ವರ್ಣನೆಯಲ್ಲಿ ಬರುವ ಕಾರುಣ್ಯ, ಅವಳು ಒಂದು ಮಗುವನ್ನು ಪಡೆಯುವಷ್ಟು ಕಾಲ, ಅವನ ಕೂಡ ಬಾಳ್ವೆ ಮಾಡಿದ್ದಳು ಎಂಬುದು ಧ್ವನಿತವಾಗುವದರಲ್ಲಿ ಬರುವುದಿಲ್ಲ.

ಯೊಳಗೆ. ಅನಾಥೆ, ಹಾ, ದಿಕ್ಕಿಲ್ಲ, ಮರಣವೇ ಶರಣು! ಈಗ, ಕವಿಯ ರೋಷ ಕುದಿದೇಳುತ್ತದೆ. ಆ ವಿಷಯಲಂಪಟನನ್ನು, ಆ ವಂಚಕನನ್ನು, ಆ ಘಾತಕಿಯನ್ನು ಆ ಪಾಪಿಯನ್ನು, ಕುರಿತು ಕವಿ :

ಎಲವೊ, ಕಾಮುಕ, ಕಟುಕ,....
ಎಲ್ಲಿ ಬೆಚ್ಚಗೆ ಮಲಗಿ
ಸಲ್ಲಾಪ ಮಾಡುತಿಹೆ
ಈಗ ಬಾ, ನೋಡು ಬಾ,
ಇವಳೊಡನೆ ಮುಳುಗು ಬಾ, ಪಾಪಿ

—ಎಂದು ಆಕ್ರೋಶ ಮಾಡುತ್ತಾನೆ. (ದಿವಂಗತ ಪಂಜೆಮಂಗೇಶರಾಯರು ಒಂದು ಸಲ ಈ ಕವನವನ್ನು ಪೂರ್ತಿ ಹೇಳಿ, ಈ ಸಾಲುಗಳನ್ನು ಹೇಳಿದಾಗ, ಸಭೆಯಲ್ಲಿದ್ದ ಒಬ್ಬ ವ್ಯಕ್ತಿ "ಇಲ್ಲ, ಸ್ವಾಮಿ, ನಾನು ಅವಳ ಕೈ ಬಿಡುವುದಿಲ್ಲ" ಎಂದು ಕೂಗಿಕೊಂಡ ನಂತೆ. ಸಭೆಯನಂತರ ವಿಚಾರಿಸಲಾಗಿ, ತಾನೂ ಒಲಿದ ಹೆಣ್ಣೊಬ್ಬಳಿಗೆ ಹೀಗೆಯೇ ಅನ್ಯಾಯ ಮಾಡಿದ್ದನೆಂದೂ ಇನ್ನು ಮುಂದೆ ಅವಳ ಕೈಯನ್ನು ಎಂದಿಗೂ ಬಿಡುವದಿಲ್ಲ ವೆಂದು ಆ ವ್ಯಕ್ತಿ ಹೇಳಿದನೆಂದೂ ಉಲ್ಲಿಖಿತವಾಗಿದೆ. ಇದು ಈ ಕವನದ ಉತ್ಕಟ ಕಾರುಣ್ಯರಸದ ಪರಿಣಾಮ, ಸಾಹಿತ್ಯ ಸಂಸ್ಕಾರದ ಫಲ!!) ಈ ಇಡೀ ಕವನದ ಭಾವ ಶ್ರೀಕಂಠಯ್ಯನವರ ಮನಸ್ಸಿನ ಕುಲುಮೆಯಲ್ಲಿ ಕುದಿಸುದಿದು, ಪರಿಪಾಕಗೊಂಡು, ಹೊರಹೊಮ್ಮಿದೆ. ಇದು ಭಾಷಾಂತರ ಅಥವಾ ರೂಪಾಂತರ ಅನ್ನುವುದಕ್ಕಿಂತ ಒಂದು ಸ್ವೋಪಜ್ಞಕೃತಿಯೇ ಅನ್ನುವ ಹಾಗೆ ಕವಿಯ ರಸಾವೇಶ ಹೊರಹೊಮ್ಮಿದೆ...ಇಬ್ಬರೂ ಕೂಡಿ ಮಾಡಿದ ನೀತಿಚ್ಯುತಿಗಾಗಿ ಒಬ್ಬಳಂತೂ ತನ್ನ ಬಾಳಿನ ದಂಡವನ್ನೇ ತೆತ್ತು ದಾಯ್ತು. ಲೋಕದ ರೀತಿಯೇ ಹೀಗೆ. ಲೋಕದಲ್ಲಿ ಸಂಸ್ಕೃತಿಯ ಉದಾರ ಮನೋ ಭಾವದಕಿಂತ, ತಪ್ಪು-ದಂಡನೆಗಳ ಲೆಕ್ಕಾಚಾರದ ವ್ಯವಹಾರವೇ ಹೆಚ್ಚಾಗಿ ನಡೆದಿರುತ್ತದೆ. ದೇವರ ಲೆಕ್ಕ ಏನಿದೆಯೋ ಏನೋ ನಮಗೆ ಗೊತ್ತಿಲ್ಲ. ಆದರೆ, ದೇವರ ಹೆಸರಿನಲ್ಲಿ ಅವನ ಪೂಜಾರಿಗಳಾದ ನಾವು ವಿಧಿಸುವ ದಂಡನೆ ಅಮಾನುಷವಾಗಿದೆ. ಹಾಗೆ ನೋಡಿದರೆ, ಯಾರ ಕಪಾಟುಗಳಲ್ಲಿ ಅಸ್ಥಿಪಂಜರಗಳಿಲ್ಲ? ಕುಂಬಳಕಾಯಿ ಕಳ್ಳ ಎಂದರೆ ತಮ್ಮ ತಮ್ಮ ಹೆಗಲು ಮುಟ್ಟಿ ನೋಡಿಕೊಳ್ಳದವರಾರುಂಟು? ಅಂತೆಯೇ, ಮೂಲದಲ್ಲಿ ಅಷ್ಟು ಸ್ಪಷ್ಟವಾಗಿರದ ಈ ಭಾವವನ್ನು ಶ್ರೀಕಂಠಯ್ಯನವರು ಈ ರೂಪಾಂತರದಲ್ಲಿ ಪ್ರೋಜ್ವಲವಾಗಿ ವ್ಯಕ್ತಪಡಿಸಿದ್ದಾರೆ :

ಮುಂದ ಬಲ್ಲವರಾರು?
ಇಂದಾಯ್ತು ಶಾಂತಿ,
ದೇವ ಮಾಡುವುದಿರಲಿ

ನಾವು ಮಾಡುವ ಹಿಂಸೆ,
ಅದೆ ನರಕ ಹಿಂಸೆ!!

'ದುಃಖಸೇತು' ಮೂಲದ ತಳಪಾಯದ ಮೇಲೆ ಕಟ್ಟಿದ ಸ್ವಂತದ ಸುಂದರ ಕಟ್ಟಡ. ಕಾರುಣ್ಯ ಕೋಡಿವರಿದು ನಿಂತ ಜಲಾಶಯ.

ಇಂಗ್ಲಿಷ್ ಗೀತೆಗಳಲ್ಲಿಯ ಕಾವ್ಯರಸದಲ್ಲಿ ಶ್ರೀಕಂಠಯ್ಯನವರ ಜೀವರಸವು ಬೆರೆತು ಆದ ಹೊಸ ರಸಾಯನಕ್ಕೆ ಬೇರೊಂದು ರುಚಿಯೇ ಬಂದಿದೆ–ಎಂದು ವರಕವಿ ಬೇಂದ್ರೆಯವರು ಹೇಳಿದರಲ್ಲವೆ. ಅದನ್ನು ಶ್ರೀಯವರು ರೂಪಾಂತರಿಸಿದ 'ಹಳೆಯ ಪಳಕೆಯ ಮುಖಗಳು' ಎಂಬ ಕವಿತೆಯಲ್ಲಿ ಸ್ಪಷ್ಟವಾಗಿ ಕಾಣುತ್ತೇವೆ. ಈ ಕವಿತೆ ಚಾರ್ಲ್ಸ್ ಲ್ಯಾಂಬ್ ಅವರು ಬರೆದ Old Familiar Faces ಎಂಬುದರ ಅನುವಾದ.

ಕಂದ ಜಿದ್ದೆಯ ಎಂದು ಮುದ್ದಿಸಿ ನನಗೆ ಮರುಗುವರಿದ್ದರು,
ಅಂದಿನೋದಿನ ಸುಖದ ದಿನದಲಿ ಜತೆಗೆ ಕುಣಿಯುವರಿದ್ದರು.
ಎಲ್ಲ ಎಲ್ಲಾ ಮಾಯವಾದುವು ಪಳೆಯಪಳಕೆಯ ಮುಖಗಳು.

ಪರಿಸೆನೋಟವೊ, ಹೊಳೆಯಲೂಟವೊ; ಬಯಲಿನಾಟವೊ, ಪಾಟವೋ,
ಇರುಳು ಮುಸುಕಿಯು ಮನೆಯ ನೆನೆಯದ ನಮ್ಮ ಲಗ್ಗೆಯ ಕೂಟವೋ;
ಎಲ್ಲ, ಎಲ್ಲಾ ಮಾಯವಾದವು ಹಳೆಯ ಪಳಕೆಯ ಮುಖಗಳು.

ಇಲ್ಲಿಯ ವರೆಗೇನೋ ಸರಿ; ಇದರ ಮುಂದಿನ ಸಾಲು ಲ್ಯಾಂಬ್‌ನಲ್ಲಿ ಹೀಗೆ ಬರುತ್ತವೆ;

I loved a Love once, fairest among women:
Closed are her doors on me, I must not see her-
All, all are gone, the old familiar faces.

ಇದರ ಅನುವಾದವನ್ನು ಶ್ರೀಯವರು ಹೇಗೆ ಮಾಡಿದ್ದಾರೆ ನೋಡೋಣ:

ಹರಸಿ ಪಡೆದೆನು ಹೆಣ್ಣನೊಂದನು–ಹೇಳಲರಿಯೆನು ಹಿತವನು;
ಉರಿದು ಹೋದಳು, ಬೂದಿಯಾದಳು, ಹಿಡಿವುದಿನ್ನೆಲ್ಲವಳನು;
ಎಲ್ಲ, ಎಲ್ಲಾ ಮಾಯವಾದುವು ಹಳೆಯ ಪಳಕೆಯ ಮುಖಗಳು,

Closed are her doors on me, I must not see her ಎಂಬ ಸಾಲು ಉರಿದು ಹೋದಳು, ಬೂದಿಯಾದಳು ಹಿಡಿವುದಿನ್ನೆಲ್ಲವಳನು ಎಂದು ಏಕೆ ಭಾಷಾಂತರಿತವಾಗಬೇಕು? ನಮಗೆ ಗೊತ್ತಿದ್ದ ಮೇರೆಗೆ ವೃದ್ಧ ಬ್ರಹ್ಮಚಾರಿಯಾಗಿದ್ದ ಲ್ಯಾಂಬ್ ಯುವಕನಾಗಿದ್ದಾಗ, ಎಲಿಸ್ ವಿಂಟರ್‌ಟನ್ ಎಂಬವಳನ್ನು ಮದುವೆಯಾಗಬೇಕೆಂದು ಮಾಡಿದ್ದ. ಆ ಚೆಲುವೆಯೂ ಕೂಡ ಇವನನ್ನು ಪ್ರೀತಿಸಿದಳು. ಇಬ್ಬರಲ್ಲಿಯೂ ಅನ್ಯೋನ್ಯ ಸಖ್ಯ ಬೆಳೆಯಿತು, ಆದರೆ, ಯಾರೋ ಒಬ್ಬರು

ಈ ಗಾಢಪ್ರೇಮಕ್ಕೆ ಬಿಸಿನೀರೆರೆದರು: ತತ್ಪರಿಣಾಮವಾಗಿ ಈ ಈರ್ವರ ನಡುವಿನ ಪ್ರೇಮವಲ್ಲರಿ ಕಮರಿ ಹೋಯಿತು. ಲ್ಯಾಂಬನೆಡೆಗೆ ಆಕರ್ಷಿತಳಾಗಿದ್ದ ಎಲಿಸ್‌ಳ ಕಿವಿಯಲ್ಲಿ ಯಾರೋ ಲ್ಯಾಂಬ್ ಮನೆತನದಲ್ಲಿ ಹುಚ್ಚಿದೆಯೆಂದೂ, ಅದರ ಬಗ್ಗೆ ಅವಳು ಜಾ ಗ ರೂ ಕ ಳಾ ಗಿ ರ ಬೇ ಕೆಂ ದೂ ಉಸುರಿದರು. ಇದರಿಂದಾಗಿ, ಲ್ಯಾಂಬನ ಬಗೆಗಿದ್ದ ಎಲಿಸ್‌ಳ ಪ್ರೇಮ ಹಿಮ್ಮೆಟ್ಟಿತು. ಎಲಿಸ್, ಲ್ಯಾಂಬನನ್ನು ಬಿಟ್ಟು, ಬರ್ಟ್ರಮ್ ಎಂಬ ಪುಸ್ತಕ ವ್ಯಾಪಾರಿಯನ್ನು ಮದುವೆಯಾದಳು. ಎಲಿಸ್‌ಳೇನೋ ಲ್ಯಾಂಬನನ್ನು ಮರೆತಳು; ಆದರೆ, ಲ್ಯಾಂಬ್ ಮಾತ್ರ ಕೊನೆಯವರೆಗೂ ಎಲಿಸ್‌ಳನ್ನು ಮರೆಯಲಿಲ್ಲ. ಅಷ್ಟೇ ಅಲ್ಲ; ವಯಸ್ಸಾದ ಮೇಲೆಯೂ ಸಹ ಲ್ಯಾಂಬ್ ಅವಳ ಮನೆಯ ಸುತ್ತ ಪ್ರದಕ್ಷಿಣೆ ಹಾಕುತ್ತಿದ್ದನಂತೆ. ಒಂದು ವೇಳೆ ಲ್ಯಾಂಬ್, ಎಲಿಸ್‌ಳನ್ನು ಮದುವೆಯಾಗಿದ್ದರೆ?.......ಅದು 'ರೆ' ರಾಜ್ಯ. ಅವರ ಸಂತತಿಯಾಗಿ ಹುಟ್ಟಿದ ಮಕ್ಕಳು ಲ್ಯಾಂಬನ ಕೂಡ ಸಂತೋಷದಿಂದ ಕಾಲ ಕಳೆಯಬಹುದಿತ್ತು. ದೇವರು ಆ ರೀತಿ ಬಯಸಿರಲಿಲ್ಲ. ಮಕ್ಕಳಾಗಿದ್ದರೆ?– ಈ 'ರೆ' ರಾಜ್ಯದ ಕಥೆಯೇ ಲ್ಯಾಂಬನ 'ಕನಸಿನ ಮಕ್ಕಳು' ಎಂಬ ಕಾರುಣ್ಯಪೂರ್ಣ ಪ್ರಬಂಧದ ವಿಷಯವಾಗಿದೆ. ಲ್ಯಾಂಬನ ಕಾಲಸುತ್ತ ನುಸುಳುತ್ತಿದ್ದ ಆ ಕನಸಿನ ಮಕ್ಕಳು, ಲ್ಯಾಂಬ್ ಅವನ್ನು ಹಿಡಿಯ ಹೋದಾಗ "We are neither of Alice, nor of thee, nor are we children at all. Children of Alice call Bertram father. We are nothing less than nothing" ಎಂದು ಸಾರಿ ಬಯಲಲ್ಲಿ ಬಯಲಾಗಿ ಹೋಗುತ್ತವೆ.... ಲ್ಯಾಂಬನ ಮುಖದ ಮೇಲೆ ಹೊಡೆದಂತೆ ಎಲಿಸ್ ಬಾಗಿಲು ಹಾಕಿದಳು. Closed are her doors on me, I must not see her. ಇದು ಲ್ಯಾಂಬನ ಕಥೆ, ವ್ಯಥೆ.... ಶ್ರೀಯವರಿಗೂ ಈ ರೀತಿಯಲ್ಲದಿದ್ದರೂ, ಇನ್ನೊಂದು ರೀತಿಯಲ್ಲಿ ದೈವ ಮೋಸ ಮಾಡಿತು. ಶ್ರೀಕಂಠಯ್ಯನವರು ದೇವಮ್ಮನವರನ್ನು ಮದುವೆಯಾದದ್ದು ೧೯೦೪ ರಲ್ಲಿ. ಅಂದರೆ ಆಗ ಅವರಿಗೆ ೨೦ ವರ್ಷ ವಯಸ್ಸು. ಶ್ರೀಕಂಠಯ್ಯನವರು ೩೦-೩೧ ವರ್ಷದವರಿದ್ದಾಗ ಅವರ ಹೆಂಡತಿ ತೀರಿಕೊಂಡರು, ಅಂದರೆ ೧೯೧೪-೧೫ರ ಸುಮಾರಿಗೆ ಇರಬಹುದು. ಈಗಾಗಲೇ ಶ್ರೀಕಂಠಯ್ಯನವರು ಇಂಗ್ಲಿಷ್ ಭಾಷೆಯಿಂದ ಕವಿತೆಗಳನ್ನು ಅನುವಾದ ಮಾಡಲು ಪ್ರಾರಂಭಿಸಿದ್ದರು, ಅಂತೆಯೇ ಏನೋ, ಮೂಲದಲ್ಲಿ ಪರಿತ್ಯಜಿಸಿದ ಯುವತಿ ಅನುವಾದದಲ್ಲಿ 'ಉರಿದು ಹೋದಳು, ಬೂದಿಯಾದಳು, ಹಿಡಿವುದಿನ್ನೆಲ್ಲವಳನು' ಆಗುತ್ತಾಳೆ. ಅದಕ್ಕಾಗಿಯೇ ಈ ಸಂಕಲನದ ಅರಿಕೆಯ ಮೊದಲ ಸಾಲೇ ಈ ಕಾರುಣ್ಯಮಯ ವಾಕ್ಯದಿಂದ ಪ್ರಾರಂಭವಾಗುತ್ತದೆ."ಯಾರ ಸಂತೋಷಕ್ಕಾಗಿ ಮೊದಲು ನಾನು ಈ ಗೀತಗಳನ್ನು ಬರೆದೆನೋ ಆ ಕಣ್ಣುಗಳು ಬೇಗ ಮುಚ್ಚಿಹೋಗಿ, ಕೆಲವು ವರ್ಷ ಗ್ರಂಥ ನನ್ನಲ್ಲಿಯೇ ಉಳಿದುಕೊಂಡಿತು"ಮೂಲದ ಕಾವ್ಯರಸದ ಕೂಡ,

ಅನುವಾದಕರ ಆತ್ಮಾನುಭವವೂ ಕೂಡಿಕೊಂಡು, ಹೊಸ ಸೃಷ್ಟಿಯನ್ನೇ ನಿರ್ಮಾಣ ಮಾಡುತ್ತದೆ......

ಹೀಗೆ, 'ಇಂಗ್ಲಿಷ್ ಗೀತೆಗಳು' ಎಂದರೆ ಮೂಲದ ರಸಾನುಭವವನ್ನು ಸ್ವಂತವಾಗಿ ಅರಗಿಸಿಕೊಂಡು, ಅದಕ್ಕೆ ಭಾರತದ, ಕರ್ನಾಟಕದ, ದೀಕ್ಷೆಯನ್ನು ಕೊಟ್ಟು, ಕಪಿ ಹೃದಯ ಸುಂದರವಾಗಿ ಮೂಡಿಸಿದ ಅನುಭವ-ಲೋಕ, ಅದರಲ್ಲಿ ಹತ್ತಾರು ಸುಂದರ ಬಣ್ಣಗಳನ್ನು ಕಾಣುತ್ತೇವೆ. ಅಂತೆಯೇ, ಈ ಗೀತೆಗಳನ್ನು ಓದಿವಾಗ, ಸ್ವೋಪಜ್ಞ, ಕೃತಿಗಳನ್ನೇ ಓದುತ್ತಿದ್ದೇವೇನೋ ಎಂಬಂತೆ ಭಾವನೆಯಾಗುತ್ತದೆ. ●

ಅಶ್ವತ್ಥಾಮನ್

ಅಸುಪ್ತಸೇನೆಗೆ ಸಾಲ್ವನೊರ್ವನೆ ಗಡಂ, ರುದ್ರಾವತಾರಂ ಗಡಂ
ನೊಸಲೊಳ್ ಕಣ್ ಗಡಮೆಂದು ನಚ್ಚಿಪೊರೆದೆಂ, ತಾನಕ್ಕೆ ತಮ್ಮಮ್ಮನ–
ಕ್ಕಿಸಲಂಬಂ ತಿರುವಾಯ್ಗೆ ತಂದರಿವರೇ, ತಮ್ಮಿರ್ವರುಂ ಕಯ್ದುವಂ
ಬಿಸುಟರ್ ಜೋಳದ ಪಾಳಿಯಂ ಬಗೆದರಿಲ್ಲಾ ದ್ರೌಣಿಯುಂ ದ್ರೋಣನುಂ॥

—ಎಂದು ಕವಿರನ್ನನ 'ಸಾಹಸಭೀಮವಿಜಯ' ದಲ್ಲಿ ಆಕ್ಷೇಪಣೆಗೊಳಗಾದ ದ್ರೋಣ; ಅಶ್ವತ್ಥಾಮರೂ ಒಂದು ವಿಧದಲ್ಲಿ ಕರ್ಣನಷ್ಟೇ ಕಾರುಣ್ಯಕ್ಕೆ ಒಳಗಾಗಬೇಕಾದವರು. ಅಶ್ವತ್ಥಾಮ ಸ್ವತಃ ಶೂರನಾಗಿದ್ದರೂ, ರುದ್ರಾವತಾರನಾಗಿದ್ದರೂ, ಸ್ವಾಮಿಭಕ್ತನಾಗಿದ್ದರೂ, ಅವನಿಗೆ ಕೌರವಸೇನೆಯ ಸೈನ್ಯಾಧಿಪತ್ಯದ ಅವಕಾಶ ಸಿಗುವುದು ಹಿರಿಯರಾದ ಭೀಷ್ಮ, ದ್ರೋಣ, ಮೊದಲಾದವರ ಸರತಿ ಮುಗಿದ ಮೇಲೆ; ಶಲ್ಯ, ಕರ್ಣ, ದುರ್ಯೋಧನರ ಸರತಿಯೂ ಮುಗಿದ ಮೇಲೆ ಕೊನೆಯ ದಿವಸ ಮಾತ್ರ. ಅಶ್ವತ್ಥಾಮನಿಗೆ ದೊರೆತದ್ದು ದಿವಾಳಿಯೆದ್ದ ಸಾಮ್ರಾಜ್ಯದ ಆಧಿಪತ್ಯ, ಅಷ್ಟನ್ನುವದರಲ್ಲಿಯೇ ಕೌರವಸೇನೆಯೆಲ್ಲ ಹತವೇ ಆಗಿತ್ತು, ವೀರಾಧೀವೀರರು ವೀರಸ್ವರ್ಗವನ್ನು ಪಡೆದಿದ್ದರು. ಸ್ವತಃ ಕುರುಪತಿಯೇ, ತೊಡೆಯುಡಿದು, ಮುಕುಟಭಂಗವಾಗಿ ಕುರುಭೂಮಿಯಲ್ಲಿ ನರಳುತ್ತ ಒರಗಿದ್ದನು. ಹಾವು ಎಷ್ಟೇ ಸವೆದರೂ ವಿಷವನ್ನು ಕಳೆದುಕೊಳ್ಳದಂತೆ, ಅವನಲ್ಲಿ ಈಗಲಾದರೂ ಉಳಿದದ್ದು ಕೇವಲ ಪಾಂಡವದ್ವೇಷ ಮಾತ್ರ. ಇಂಥ ಕಾಲಕ್ಕೆ ಅಶ್ವತ್ಥಾಮ ಕೌರವಸೇನೆಯ ಅಧಿಪತಿಯಾದ. ಕಾವ್ಯಶಕ್ತಿಯಿದ್ದ ಯಾವ ಬರೆಹಗಾರನಿಗೂ ಇಂಥ ಸನ್ನಿವೇಶ, ಕಾವ್ಯರಚನೆಗೆ ಒಂದು ಸದವಕಾಶ. ಶ್ರೀಯವರೂ 'ಅಶ್ವತಾಮನ್' ದಲ್ಲಿ ಇದೇ ಅವಕಾಶವನ್ನು ಉಪಯೋಗಿಸಿಕೊಂಡರು.

ಈ ವಿಷಯವನ್ನು ನಾಟಕ ವಸ್ತುವಾಗಿ ಆಯ್ಕೆ ಮಾಡಿಕೊಳ್ಳುವ ಮೊದಲೇ

ಶ್ರೀಕಂಠಯ್ಯನವರ ಮನಸ್ಸು ಹಲವಾರು ಪ್ರಭಾವಗಳಿಗೆ ಒಳಗಾಗಿತ್ತು. ಒಂದು ಕಡೆಗೆ ಭಾರತೀಯ ಪರಂಪರೆಯ ಮಹಾಭಾರತ, ಇನ್ನೊಂದು ಕಡೆಗೆ ಅವರು ವ್ಯಾಸಂಗ ಮಾಡಿದ್ದ ಪಾಶ್ಚಿಮಾತ್ಯ ಗ್ರೀಕ್ ನಾಟಕಗಳ ಪ್ರಭಾವ, ಇವೆರಡರ ಜೊತೆಗೆ ಅವರ ಸ್ವಂತ ಜೀವನಾನುಭವ....ಮನುಷ್ಯನ ಜೀವನದಲ್ಲಿ ದೈವಪ್ರಧಾನವೊ....? ಪುರುಷ ಪ್ರಯತ್ನಪ್ರಧಾನವೊ?....ಪುರುಷ ಪ್ರಯತ್ನ ಸ್ವಾಭಿಮಾನಗಳು, ದೈವವನ್ನು ಎದುರು ಹಾಕಿಕೊಂಡು ನಿಲ್ಲಬಹುದೆ? ಈ ವಿಚಾರಗಳೆಲ್ಲ ಶ್ರೀಯವರ ಮನಸ್ಸಿನ ಕುಲುಮೆಯಲ್ಲಿ ಕುದಿಗೊಳ್ಳುತ್ತಿರಬಹುದು. ಇದೆಲ್ಲದರ ಸಮಷ್ಟಿ ಪರಿಣಾಮವೇ 'ಅಶ್ವತ್ಥಾಮನ್' ನಾಟಕ. ಪ್ರಸ್ತುತ ಪ್ರಬಂಧದಲ್ಲಿ, ಅಶ್ವತ್ಥಾಮನ್ ನಾಟಕದಲ್ಲಿ ಕಂಡುಬರುವ ಕನ್ನಡಪ್ರೇಮ, ಕಾವ್ಯಾಂಶ. ನಾಟಕೀಯತೆ ಮೊದಲಾದ ಶೈಲಿಗಳ ಬಗ್ಗೆ ವಿವರಿಸದೆ, ಅಶ್ವತ್ಥಾಮನ ದುರಂತ ಯಾವ ರೀತಿ ನಡೆಯಿತು, ಅದಕ್ಕೆ ಕಾರಣವೇನು ಎಂಬುದನ್ನು ವಿವರಿಸಲಾಗಿದೆ.

'ಅಶ್ವತ್ಥಾಮನ್' ರಚಿತವಾದದ್ದು ೧೯೨೯ರಲ್ಲಿ. ಅದರ ಪ್ರಥಮ ಪ್ರಯೋಗ ಹಾಗೂ ಪ್ರಕಟನೆಗಳು ಅದೇ ವರ್ಷದಲ್ಲಿಯೇ ನೆರವೇರಿದುವು. ಈ ನಾಟಕದ ಪ್ರಯೋಗವಾದಂದಿನಿಂದ ಹಲವು ಜನಃ "ಅಶ್ವತ್ಥಾಮನ್ ನಾಟಕದಷ್ಟು ಉತ್ತಮ ನಾಟಕ ಕನ್ನಡ ಸಾಹಿತ್ಯದಲ್ಲಿ ಈವರೆಗೆ ಬಂದಿಲ್ಲ. ಅದರ ವಿಷಯ, ರೀತಿ, ರಚನೆ, ದೃಷ್ಟಿಗಳಲ್ಲಿರುವ ವಿಶೇಷತೆಯನ್ನು ಗಮನಿಸಿದರೆ, ಅದನ್ನು ನಿರ್ಮಾಣ ಮಾಡಿದವರ ಹಿರಿಮೆಯೂ ಕ್ರಿಯಾಚೈತನ್ಯವೂ ಎಷ್ಟು ಅದ್ಭುತವೆಂದು ಗೊತ್ತಾಗುತ್ತದೆ" ಎಂದು ಅಭಿಪ್ರಾಯ ವ್ಯಕ್ತಮಾಡಿದರೆ, ಇನ್ನೂ ಹಲವು ಜನ 'ಅಶ್ವತ್ಥಾಮನ್,' ಮಹಾಭಾರತ ಹಾಗೂ 'ಏಜಾಕ್ಸ್'ನಾಟಕಗಳ ಕಲಸು ಮೇಲೋಗರ, ಅದು ಭಾರತೀಯ ಪರಂಪರೆಗೆ ಒಡ್ಡಿದ ಒಂದು ಆಘಾತ, ಎಂಬ ರೀತಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ಎರಡೂ ಅಭಿಪ್ರಾಯಗಳಲ್ಲಿ ಸತ್ಯಾಂಶವಿಲ್ಲದೆ ಇಲ್ಲ. ಗ್ರೀಕ್ ನಾಟಕಕಾರ ಸೊಫೊಕ್ಲಿಸನ 'ಏಜಾಕ್ಸ' ನಾಟಕದಿಂದ ಪ್ರಭಾವಿತರಾಗಿದ್ದ ಶ್ರೀಯವರು ಅಲ್ಲಿಯ ದುರಂತ ಕಲ್ಪನೆಯನ್ನು, ನಮ್ಮ ಪರಂಪರೆಯ ಕಥೆಗೆ ಅಳವಡಿಸಿ ಹೇಳಲು ಪ್ರಯತ್ನ ಮಾಡಿದರು. ಹಾಗಿದ್ದರೆ ಶ್ರೀಯವರು ಮಾಡಿಕೊಂಡ ಮಾರ್ಪಾಡುಗಳು ಯಾವುವು ಎಂಬುದನ್ನು ಗಮನಿಸಬೇಕು.

ಭಾರತೀಯ ಪರಂಪರೆಯಲ್ಲಿ ಅಶ್ವತ್ಥಾಮ ಚಿರಂಜೀವಿ. ನಾವು ಚಿಕ್ಕವರಿದ್ದಾಗಿನಿಂದಲೂ ಕಂಠಪಾಠ ಮಾಡಿದ ಶ್ಲೋಕ ನಮ್ಮ ಮನಸ್ಸಿನಿಂದ ಹಾರಿಹೋಗದು :

> ಅಶ್ವತ್ಥಾಮಾ ಬಲಿರ್ವ್ಯಾಸಃ ಹನೂಮಾಂಶ್ಚ ವಿಭೀಷಣಃ
> ಕೃಪಃ ಪರಶುರಾಮಶ್ಚ ಸಪ್ತೈತೇ ಚಿರಜೀವಿನಃ ॥

ಅಶ್ವತ್ಥಾಮ ಚಿರಜೀವಿ ಎಂಬ ವಿಚಾರ ಬರಿಯ ಕಲ್ಪನೆ ಮಾತ್ರವಲ್ಲ ಈ ವಿಚಾರ

ಕನ್ನಡಿಗರಲ್ಲಿಯಂತೂ ಜೀವಂತ ನಂಬುಗೆ. ಪಂಕ್ತಿಯಲ್ಲಿ ಊಟಕ್ಕೆ ಕುಳಿತುಕೊಳ್ಳುವಾಗ, ಹೊಡೆದಾಡುತ್ತಿದ್ದ ಒಬ್ಬ ಬಾಲಕನಿಗೆ 'ಎಂಥ ಹಟಮಾರಿ ದುರ್ಯೋಧನನಾಗಿರುವಿ' ಅಂದದ್ದಕ್ಕೆ, ಅದೇ ಪಂಕ್ತಿಯಲ್ಲಿ ಕುಳಿತಿದ್ದ ವೃದ್ಧರೊಬ್ಬರು, ದುರ್ಯೋಧನನಿಗೆ ಕಲಿಯುಗದಲ್ಲಿ ಕೂಡ ಆದ ಅಪಚಾರಕ್ಕೆ ಮನನೊಂದು, ಕಣ್ಣೀರ್ ಸುರಿಸಿ, ಪಂಕ್ತಿಯಿಂದ ಎದ್ದುಹೋದರಂತೆ. ಹಾಗೆ ಎದ್ದವರೇ ಅಶ್ವತ್ಥಾಮ ಎಂದು ಐತಿಹ್ಯ, ದ್ವಾಪರದಿಂದ ಕಲಿಯುಗದವರೆಗೆ ಬದುಕಿ ಬಂದ ಪರಮ ಜ್ಞಾನಿಗಳು, ಚಿರಂಜೀವಿಗಳು. ಅವರನ್ನು ಹಿಂಬಾಲಿಸಿ, ಅವರಿಂದ ಆಶೀರ್ವಾದ ಪಡೆದೇ ನಾರಣಪ್ಪ ಕುಮಾರವ್ಯಾಸ ಭಾರತ ರಚಿಸಿದ. ಇಂಥ ಅಶ್ವತ್ಥಾಮ, ಶ್ರೀಅವರ ನಾಟಕದಲ್ಲಿ ಸಾಯುತ್ತಾನೆ. ಇದು ಸರಿಯೆ? ೧ ಇದನ್ನು ದಕ್ಕಿಸಿಕೊಳ್ಳಲು ಮನಸ್ಸು ಸಿದ್ಧವಾಗುತ್ತದೆಯೇ? ಅಷ್ಟೇ ಅಲ್ಲ; ಅವ ಸಾಯುವುದು ಕೂಡ, ಯುದ್ಧದಲ್ಲಿ ಹೋರಾಡಿ ವೀರಮರಣವನ್ನು ಐದುವುದರಿಂದಲ್ಲ; ತನ್ನ ಖಡ್ಗದ ಮೇಲೆ ಬಿದ್ದು, ಆತ್ಮಹತ್ಯೆ ಮಾಡಿಕೊಳ್ಳುವುದರಿಂದ. (ಆದರೂ ಮಹಾಭಾರತದಲ್ಲಿಯು ಸಹ ಅವನ ಮಸ್ತಕದಿಂದ ದಿವ್ಯಮಣಿಯನ್ನು ಕಿತ್ತುಕೊಂಡು, ಅವ ೩೦೦೦ ವರ್ಷ ಅಲೆಯುವಂತೆಮಾಡುವುದೂ ಒಂದು ತರಹದ ಸಾವೇ) "ಅಶ್ವತ್ಥಾಮನ ಬ್ರಾಹ್ಮಣ್ಯವೂ, ಗೌರವವೂ, ಮಣಿಯು ಹೋಗಿ, ಅವನ ದೇಹಮಾತ್ರ ಉಳಿದಿದೆ" (ವಚನ ಭಾರತ; ಪು ೩೫೮)

ಎರಡನೆಯದಾಗಿ : ಮಹಾಭಾರತದ ಅಶ್ವತ್ಥಾಮ ನೈಷ್ಠಿಕ ಬ್ರಹ್ಮಚಾರಿ, ಅ-ವಿವಾಹಿತ. ಶ್ರೀಅವರ ನಾಟಕದಲ್ಲಿ ಅವನಿಗೆ ಮದುವೆಯಾಗಿದೆ, ಅಷ್ಟೇ ಅಲ್ಲದೆ, ರುದ್ರಶಕ್ತಿ ಎಂಬ ಮಗನೂ ಇದ್ದಾನೆ.

ಮೂರದೆಯದಾಗಿ : ಭಾರತದ ಅಶ್ವತ್ಥಾಮನನ್ನು ಪಾಲಿಸಿ, ಪೋಷಿಸಿದವರು,

---

೧ ತಮ್ಮ ವೈಯಕ್ತಿಕ ಜೀವನದಲ್ಲಿಯ ನೋವುಗಳ ಬಗ್ಗೆ ಮಾತಾಡುವಾಗ, ಶ್ರೀಅವರು ಒಂದು ಸಲ ಬಾಗಿಲುಕೋಟೆಯಲ್ಲಿ, "ಚಿರಂಜೀವಿ ಅಶ್ವತ್ಥಾಮನನ್ನು ಕೊಂದಿದ್ದರಿಂದಲೇ ನನಗೆ ಅಂಥ ಸಂತಾನ ಸೌಖ್ಯ ಸಿಗಲಿಲ್ಲವೇನೋ!'' ಎಂದು ಉದ್ಗಾರ ತೆಗೆದರೆಂದು ನನ್ನ ಮಿತ್ರರೊಬ್ಬರು ಹೇಳುತ್ತಾರೆ. ಇದು ಭಾವುಕತನವಾಗಿರಬಹುದಾದರೂ, ಈ ಮಾರ್ಪಾಡಿನ ಬಗ್ಗೆ ಅವರಿಗೂ ವಿಚಾರವಿದ್ದವೇನೋ!? ಇನ್ನೊಂದು ಅಭಿಪ್ರಾಯ 'ಅಶ್ವತ್ಥಾಮನ್' ಬರೆದು ಮುಗಿಸಿದ ನಂತರ ತಾವು ಬಹಳ ತೊಳಲಾಡಿದ ಸಂಗತಿಯನ್ನು ಶ್ರೀಯವರೇ ಧಾರವಾಡದಲ್ಲಿಯ ಒಂದು ಸಭೆಯಲ್ಲಿ ತಾವೇ ವಿವರಿಸಿದರು. (ಇದು ಒಂದೆಡೆಮುದ್ರಣವನ್ನು ಕಂಡಿದೆ) ಗ್ರೀಕ್ ನಾಟಕದಲ್ಲಿಯ ರೌದ್ರತೆಯನ್ನು ದುರಂತದ ಚಿತ್ರಣವನ್ನು ಮತ್ತಷ್ಟು ದಷ್ಪವಾಗಿಸಲು ತಾವು ಅಶ್ವತ್ಥಾಮನನ್ನು ಚಿರಂಜೀವಿ ಪಟ್ಟದಿಂದ ಉರುಳಿಸಿ ಯಮಪಾಶಕ್ಕೆ ಬಲಿಕೊಟ್ಟುದಾಗಿ ಒಪ್ಪಿಕೊಳ್ಳುತ್ತ, ನಾಟಕ ಬರೆದು ಮುಗಿಸಿದನಂತರ, ಈ ಅಪಚಾರ ಅನ್ಯಾಯಕ್ಕಾಗಿ ಪ್ರಾಯಶ್ಚಿತವೊ ಏನೊ ಎಂಬಂತೆ ಎರಡು ತಿಂಗಳು ವಿಷಮ ಜ್ವರದಿಂದ ಬಳಲಿದುದಾಗಿಯೂ ತಿಳಿಸಿದರು. ಈ ಬಳಲಿಕೆಯ ಪ್ರಾಯಶ್ಚಿತ್ತದ ನಂತರ ತಮ್ಮ ದುಗುಡ ಕಳೆಯಿತೆಂದೂ ಅವರು ಹೇಳಿದರು'' ಶ್ರೀ ಸ್ಮರಣೆ, ಜೆ. ಎಸ್. ಎಸ್. ಕಾಲೇಜು, ಧಾರವಾಡ. ೧೯೮೪, ಪು ೧೧೫

ಅವನ ತಂದೆ ಆಚಾರ್ಯ ದ್ರೋಣನು ಹಾಗು ತಾಯಿ ಕೃಪಿ, ಇಳಿ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ಅಶ್ವತ್ಥಾಮನನ್ನು ಪಾಲಿಸಿ, ಪೋಷಿಸಿದವಳು ಅವನ ಅಜ್ಜಿ ಭಾರ್ಗವಿ.

ನಾಲ್ಕನೆಯದಾಗಿ : ಅಶ್ವತ್ಥಾಮ ಬಿದ್ದು ಸಾಯುವ ಖಡ್ಗ, ಅವನಿಗೆ ಬಂದದ್ದು ಅಭಿಮನ್ಯುವಿನಿಂದ. ಇದಕ್ಕೆ ಮೂಲದಲ್ಲಿ ಯಾವ ಆಧಾರವೂ ಇಲ್ಲ.

ಐದನೆಯದಾಗಿ : ಅಶ್ವತ್ಥಾಮನ ಶವಸಂಸ್ಕಾರ ಮಾಡಬೇಕಾದವನು ಏಕಲವ್ಯ. ಆದರೆ, ಮಹಾಭಾರತದಲ್ಲಿ ಏಕಲವ್ಯ ಎಷ್ಟೋ ಮೊದಲೇ ತೀರಿಕೊಂಡಿದ್ದಾನೆ. ಹಲವಾರು ಜನರ ಕಲ್ಪನೆಯಲ್ಲಿ ಕೃಷ್ಣ ಪರಮ ಆತ್ಮ, ಸರ್ವೋತ್ತಮ. ಪರತಮ. ನ ಮಾಧವ ಸಮೋ ದೇವಃ. ಆದರೆ, ಇಲ್ಲಿ ಅವನ ಚಿತ್ರಣ ಬೇರೆಯಾಗಿಯೇ ಬಂದಿದೆ ಈ ಮಾರ್ಪಾಡಿನ ಬಗ್ಗೆ ಪ್ರೊ. ಎ. ಎನ್. ಮೂರ್ತಿರಾಯರು ಹೇಳಿದ ಮಾತುಗಳು ಗಮನಾರ್ಹವಾಗಿವೆ :

"ಉಳಿದವರಲ್ಲಿ ನಮ್ಮನ್ನು ಹೆಚ್ಚು ಆಕರ್ಷಿಸುವ ವ್ಯಕ್ತಿಯೆಂದರೆ, ಕೃಷ್ಣ. ಮಹಾಭಾರತದ ಕೃಷ್ಣ ದೇವರ ಅವತಾರ ಎನ್ನುವವರಿದ್ದಾರೆ, ಅವತಾರವಲ್ಲ ಎನ್ನುವವರೂ ಇದ್ದಾರೆ. ಅದು ಹೇಗಾದರೂ ಇರಲಿ, ಇವನು ದೇವರ ಅವತಾರ ಎನ್ನಿಸುವಂಥ ಔನ್ನತ್ಯ ಅವನಲ್ಲಿದೆ. ಇಲ್ಲಾದರೋ ಶ್ರೀಕಂಠಯ್ಯನವರು ಅವನನ್ನು 'ಇವನು ಮಾನವನ ಇತಿಮಿತಿಗಳಿಗೆ ಒಳಪಟ್ಟವನು' ಎನ್ನಿಸುವಂತೆ ಚಿತ್ರಿಸಲು ಶ್ರಮವಹಿಸಿದಂತೆ ಕಾಣುತ್ತದೆ, ಹಾಗೆ ಚಿತ್ರಿಸಲು ಅವರಿಗೆ ಹಕ್ಕಿಲ್ಲ ಎನ್ನುವಂತಿಲ್ಲ. ಆದರೆ, ಯಾವ ಮತ ಕೃಷ್ಣನನ್ನು ದೇವರು ಎಂದು ನಂಬಿದೆಯೋ, ಅದು ಭಾರತದಲ್ಲಿ ಇನ್ನೂ ಜೀವಂತವಾಗಿರುವ ಮತ. (ಪುರಾತನ ಗ್ರೀಕರ ಮತ ಹೀಗೆ ಜೀವಂತವಾಗಿಲ್ಲ.) ಕೋಟಿಗಟ್ಟಲೆ ಜನ 'ಆ ಹೆಸರನ್ನು ಉಚ್ಚರಿಸಿದರೆ ಸಾಕು, ಜನ್ಮ ಸಾರ್ಥಕವಾಗುತ್ತದೆ' ಎಂದು ನಂಬಿದ್ದಾರೆ. ಆದ್ದರಿಂದ, ಇಲ್ಲಿಯ ವಾತಾವರಣದಲ್ಲಿ, ನಮ್ಮ ನಾಟಕದಲ್ಲಿನ ಕೃಷ್ಣ ಆಡುವ ಕೆಲವು ಮಾತುಗಳು. ಅವನು ದೇವರಲ್ಲ ಎನ್ನುವವರಿಗೂ ಕೂಡ ಸ್ವಲ್ಪ ವಿಚಿತ್ರವಾಗಿ ಕಾಣುತ್ತವೆ. ಅವನಿಗೆ ಅಶ್ವತ್ಥಾಮನು 'ಅರಿಯ ಪಗೆ'– ಗೆಲ್ಲಲಸಾಧ್ಯವಾದ ಶತ್ರು. ಅವನ (ಕೃಷ್ಣನ) ಬಾಳೂ ನಮ್ಮೆಲ್ಲರ ಬಾಳಿನಂತೆ ಅಶಾಶ್ವತ.

ಇಂದವನ್, ನಾಳೆ ನಾನ್. ಏನ್ ಪಾಡೊ ಆಳ್ ಬಾಳ್!
ಬೀಸುವ ಬಯಲ್ಗಾಳಿ, ಪರಿದಡಂಗುವ ನೆಳಲ್!
ಓ ಮಿತ್ರ, ನಾನುಮ್ ಇಂತಾಗೆನೇ ಒಂದು ದಿನಂ ! !

ಇಂಥ ಪಂಕ್ತಿಗಳು ಅವನ ಮಾನವತೆಯನ್ನು ಒತ್ತಿ ಹೇಳುತ್ತವೆ. ಶ್ರೀ ಕಂಠಯ್ಯನವರು

ಈ ಪಾತ್ರಕ್ಕೆ ಬೇರೆ ಯಾವುದಾದರೂ ಹೆಸರನ್ನು (ವಿದುರನ ಹೆಸರನ್ನು?) ಕೊಟ್ಟಿದ್ದರೆ ಚೆನ್ನಾಗಿತ್ತು." ೧

ಆರನೆಯದಾಗಿ : ದ್ರೋಣಾಶ್ವತ್ಥಾಮರೆಲ್ಲ ಕನ್ನಡ ನಾಡಿನವರು-ಬನವಾಸಿ ಸೀಮೆಯವರು. ಅವರು ತಮ್ಮ ಬೇಡಪಡೆಯೊಂದಿಗೆ ಉತ್ತರಾಪಥದ ಕುರುನಾಡಿಗೆ ಕೌರವಸೇವೆಗಾಗಿ ಹೋಗುತ್ತಾರೆ. ಅವರಲ್ಲಿ ಕನ್ನಡನಾಡಿನ ಬಗೆಗಿನ ಪ್ರಜ್ಞೆ, ಅಭಿಮಾನಗಳು ಇನ್ನೂ ತುಂಬಾ ಉಜ್ವಲವಾಗಿವೆ........

ಇದೇನೋ ಸರಿಯೇ; ಯಾಕಂದರೆ, ಅಯೋಧ್ಯೆಯ ಅರಸನಾದ ಹರಿಶ್ಚಂದ್ರ ರಾಘವಾಂಕನ ಕಾವ್ಯದಲ್ಲಿ ಕನ್ನಡನಾಡಿನ ಹಂಪೆಗೆ ಬರಲಿಲ್ಲವೆ? ತುಂಗಭದ್ರಾ ನದಿಯನ್ನು ಮೆಚ್ಚಿಕೊಳ್ಳಲಿಲ್ಲವೆ?

ಆದರೆ, ಇದೇ ಸಮರ್ಥನೆಯನ್ನು ಶ್ರೀ ಅವರು ಮಾಡಿಕೊಂಡ ಇತರ ಮಾರ್ಪಾಡುಗಳ ಬಗ್ಗೆ ಹೇಳುವುದು ಕಠಿಣವಾಗುತ್ತದೆ. ಯಾವುವೇ ನಂಬುಗೆಗಳು ಜೀವಂತವಾಗಿದ್ದ ಪಕ್ಷದಲ್ಲಿ, ಅವನ್ನು ಸಹಜವಾಗಿ ಅಲುಗಾಡಿಸುವದು ಕಠಿಣ. 'ಅಶ್ವತ್ಥಾಮನ್' ನಾಟಕದಲ್ಲಿ ಶ್ರೀ ಅವರು ಅಂಥ ಸಾಹಸಕ್ಕೆ ಕೈ ಹಾಕಿದ್ದಾರೆ. ಆ ಪ್ರಯತ್ನ ಎಷ್ಟರ ಮಟ್ಟಿಗೆ ಯಶಸ್ವಿಯಾಯಿತು ಎಂಬುದು ಸಂದೇಹಾಸ್ಪದ. ಅರ್ಥಾತ್, ಯಾವನೇ ಲೇಖಕ ತನ್ನ ಮೂಲ ಆಕರಗಳೊಡನೆ ಎಷ್ಟರ ಮಟ್ಟಿನ ಸ್ವಾತಂತ್ರ್ಯವನ್ನು ವಹಿಸಬಹುದು ಎಂಬ ಮೂಲಭೂತವಾದ ಪ್ರಶ್ನೆಯನ್ನು ನಾವು ಎದುರಿಸಲೇಬೇಕಾಗುತ್ತದೆ. ೨ ಇನ್ನೊಂದು ಮಾತಿನಲ್ಲಿ ಇದೇ ವಿಚಾರವನ್ನು ಹೇಳಬೇಕೆಂದರೆ, ಶ್ರೀಯವರ 'ಅಶ್ವತ್ಥಾಮನ್' ದಲ್ಲಿ ರೂಪಾಂತರಕ್ಕೆ ಪ್ರಯತ್ನಿಸದೆ, ಭಾಷಾಂತರ ಮಾಡಿದ್ದರೆ ಹೆಚ್ಚು ಚೆನ್ನಾಗಿ ಆಗುತ್ತಿತ್ತೇನೋ ಎನಿಸುತ್ತದೆ. ಅವರ ಮುಂದಿನ ನಾಟಕ 'ಪಾರಸಿಕರು' ಭಾಷಾಂತರವಾಗಿದೆ.

೨

ಶ್ರೀಯವರು ಹೀಗೆ ಮಾರ್ಪಾಡುಗಳನ್ನು ಮಾಡಿಕೊಳ್ಳಲು ಕಾರಣವೇನು?

---

೧. ಬಿ. ಎಂ. ಶ್ರೀಕಂಠಯ್ಯ: ಎ. ಎನ್. ಮೂರ್ತಿರಾವ್, ಕನ್ನಡ ಸಾಹಿತ್ಯಪರಿಷತ್ತು ೧೯೮೨, ಪು ೮೪

೨ "ಸಾಹಿತ್ಯ ನಿರ್ಮಾಣದಲ್ಲಿ ವಸ್ತುವಿನ ಆಯ್ಕೆಗೂ ಸನ್ನಿವೇಶವನ್ನು ಮೂಡಿಸುವ ರೀತಿಗೂ ಕೃತಿಕಾರನಿಗೆ ಎಂದಿಗೂ ಧಾರಾಳ ಉಂಟು. ಒಲಿದರೂ ಒಲಿಯಬಹುದು, ಬಿಡುವವರು ಬಿಡಬಹುದು." ಎಂದು ಪ್ರೊ. ವಿ. ಸೀತಾರಾಮಯ್ಯ ಅವರು ಹೇಳುತ್ತಾರೆ. ('ಅಶ್ವತ್ಥಾಮನ್' ಶಾರದಾ ಮಂದಿರ, ಮೈಸೂರು, ೧೯೬೮, ಪು vii) ಈ ಅಭಿಪ್ರಾಯ ಮೇಲೆ ವಿವರಿಸಿದ ಪ್ರಶ್ನೆಗೆ ಉತ್ತರವಾಗುವುದಿಲ್ಲ. ವಸ್ತುವಿನ ಆಯ್ಕೆ ಹಾಗೂ ಮೂಡಿಸುವ ರೀತಿಯಲ್ಲಿ ಧಾರಾಳವಿದೆಯೇ ಹೊರತು, ವಸ್ತುವನ್ನು ಬೇಕಾದ ಹಾಗೆ ಬದಲಿಸುವುದರಲ್ಲಿ ಧಾರಾಳ ಇರಲಾರದು. ಇದ್ದ ಶಿಲೆಯಲ್ಲಿ ಅಡಗಿದ್ದ ಮೂರ್ತಿಯನ್ನು ಕಂಡರಿಸುವುದರಲ್ಲೇ ಕಲೆ ಇದೆ.

ಇದಕ್ಕೆ ಅವರ ಗ್ರೀಕ್ ಸಾಹಿತ್ಯಾಭ್ಯಾಸವೇ ಕಾರಣ. ಅವರು **ಸೊಫೊಕ್ಲಿಸ್**, ಈಸ್ಕಿಲಸ್, ಯುರಿಪಿಡೀಸ್ ಮೊದಲಾದ ಮಹಾಸಾಹಿತಿಗಳ ಕೃತಿಗಳನ್ನು ಆರ್ದ್ರವಾಗಿ ಓದಿದ್ದರು. ಅದರಲ್ಲಿಯೂ ಸೊಫೊಕ್ಲಿಸ್‌ನ 'ಏಜಾಕ್ಸ' ಅವರ ಮನಸ್ಸನ್ನು ಬಲವಾಗಿ ಹಿಡಿದಿದ್ದಿತು. ಅದರಲ್ಲಿ ಬರುವ ದುರಂತ ನಾಯಕನ ಕಲ್ಪನೆ ಅವರ ಮನಸ್ಸಿನ ಮೇಲೆ ಅಚ್ಚಳಿಯದೆ ಉಳಿದಿತ್ತು. ಅಂಥದೊಂದು ನಾಟಕ ಕನ್ನಡಕ್ಕೆ ಬೇಕೆಂದು ಅವರಿಗೆ ಅನಿಸಿರಬೇಕು.

ಹಾಗಾದರೆ, ಸೊಫೊಕ್ಲಿಸನ 'ಏಜಾಕ್ಸ' ದಲ್ಲಿ ಈ ಕಥೆ ಹೇಗೆ ಬರುತ್ತದೆ ನೋಡೋಣ :

ಗ್ರೀಕ್ ಶೂರರಲ್ಲಿ **ಅಕಿಲೀಸ್‌ನನ್ನು** ಬಿಟ್ಟರೆ, **ಏಜಾಕ್ಸನಷ್ಟು** ಶಕ್ತಿವಂತರು ಮತ್ತಾರೂ ಇರಲಿಲ್ಲ. ಅಕಿಲೀಸನ ನಂತರದ ಹೆಸರು ಏಜಾಕ್ಸನದೇ. ಹೀಗಿರಲಾಗಿ, ಅಕಿಲೀಸ್ ತೀರಿಕೊಂಡ ನಂತರ ಅವನ ಚಿಲಕತ್ತು ಸ್ವಾಭಾವಿಕವಾಗಿ ಏಜಾಕ್ಸನಿಗೇ ಬರಬೇಕಾಗಿತ್ತು. ಆದರೆ, ಹಿರಿಯರೆಲ್ಲ ಕೂಡಿ, ಅವನ್ನು **ಒಡಿಸ್ಯೂಸನಿಗೆ** ಕೊಟ್ಟು ಬಿಟ್ಟರು. ಇದರಿಂದ ಕ್ರುದ್ಧನಾದ ಏಜಾಕ್ಸ ಆ ನಾಯಕರನ್ನು ಹಾಗೂ ಒಡಿಸ್ಯೂಸನನ್ನು ನಾಶಮಾಡಿಬಿಡಬೇಕೆಂದು ಆಲೋಚಿಸಿದ. ಆದರೆ, **ಪಲ್ಲಸ್ ಅಥೀನೆ** ದೇವತೆ ಏಜಾಕ್ಸನಿಗೆ ಬುದ್ಧಿಭ್ರಮಣವಾಗುವಂತೆ ಮಾಡಿದಳು. ತತ್‌ಪರಿಣಾಮವಾಗಿ ಆ ವಿಕಾರದಲ್ಲಿ ಅವನು ಪಾಳೆಯದಲ್ಲಿದ್ದ ಕುರಿ ಮೊದಲಾದ ಪ್ರಾಣಿಗಳನ್ನು, ತನ್ನ ವೈರಿಗಳೆಂದೇ ಬಗೆದು ಕೊಂದು ಹಾಕಿಬಿಟ್ಟ. ಅವನಿಗೆ ಬುದ್ಧಿ ತಿಳಿದಾಗ, ತಾನು ಮಾಡಿದ ಹೇಯ ಕೃತ್ಯದ ಬಗ್ಗೆ ಅರಿವಾಯಿತು. ಇಂಥ ವೀರಾಧಿವೀರನೆನಿಸಿಕೊಂಡವನು ಹುಚ್ಚನ ಹಾಗೆ ಕುರಿ ಮೊದಲಾದ ಪ್ರಾಣಿಗಳನ್ನು ವೈರಿಗಳೆಂದು ಬಗೆದು ಕೊಂದು ಹಾಕುವದೆಂದರೇನು? ತಾನು ಜನರ ತಿರಸ್ಕಾರ ಹಾಗೂ ಅವಹೇಳನಕ್ಕೆ ಗುರಿಯಾದೆನಲ್ಲ ಎಂದು ವಿಷಣ್ಣನಾಗಿ ಆತ್ಮಹತ್ಯೆಗೆ ಮುಂದಾದ. ಅಥೆನಾಳ ಕೋಪ ಆ ದಿವಸದ ಮಟ್ಟಿಗಷ್ಟೇ ಇತ್ತು. ಮರುದಿವಸ ಏಜಾಕ್ಸ ಪುನಃ ಎಂದಿನಂತೆಯೇ ಇರಬಹುದಾಗಿತ್ತು. ಇದೆಲ್ಲ ಅರಿತ **ಕಾಲ್ಕಾಸ್** ಏಜಾಕ್ಸನ ಮಲತಮ್ಮ **ಟ್ಯೂಸರನಿಗೆ** ಇದನ್ನೆಲ್ಲ ಹೇಳಿದ್ದರಿಂದ, ಅವನು ಏಜಾಕ್ಸನ ದಾಸಿ ಹಾಗೂ ಪ್ರೇಯಸಿಯಾಗಿದ್ದ **ಟೆಕ್‌ಮೆಸಳಿಗೂ**, ಏಜಾಕ್ಸನ ಜೊತೆಗಿದ್ದ ನಾವಿಕರಿಗೂ, ತಾನು ಬರುವವರೆಗೆ ಏಜಾಕ್ಸನನ್ನು ಜಾಗರೂಕವಾಗಿ ಕಾಯಬೇಕೆಂದು ಹೇಳಿದ್ದ. ಆದರೆ, ಅಷ್ಟನ್ನುವದರಲ್ಲಿಯೇ ಏಜಾಕ್ಸ ಎಲ್ಲರ ಕಣ್ಣು ತಪ್ಪಿಸಿ ಆತ್ಮಹತ್ಯೆ ಮಾಡಿಕೊಂಡಿದ್ದ. (ಮೂಲ ಭಾರತ ಕಥೆಗೆ ಅ. ೪ ನೋಡಿ)

ಇದು ಗ್ರೀಕ್ ಕಥೆ, ಮಹಾಭಾರತದಲ್ಲಿ ಅಶ್ವತ್ಥಾಮನ ಕಥೆ ಹೆಚ್ಚಾಗಿ ಸೌಪ್ತಿಕ ಪರ್ವದಲ್ಲಿ ಬರುತ್ತದೆ. ಮೇಲೆ ವಿವರಿಸಿದ ಕಥೆಯಲ್ಲಿಯೇ ನಾವು ಕೆಲವು ಸಾದೃಶ್ಯಗಳನ್ನೇನೋ ನೋಡುತ್ತೇವೆ. ಏಜಾಕ್ಸ ವೈರಿಗಳೆಂದು ಕುರಿ ಮೊದಲಾದ ಪ್ರಾಣಿಗಳನ್ನು ಕೊಂದುಹಾಕಿದ ಹಾಗೆ ಮಹಾಭಾರತದ ಅಶ್ವತ್ಥಾಮ ಪಾಂಡವರೇ ಎಂದು ಭಾವಿಸಿ

ಉಪಪಾಂಡವರ ತಲೆಯನ್ನು ಕತ್ತರಿಸಿ ತಂದು, ದುರ್ಯೋಧನನೆದುರು "ಕೊಳ್ ನಿನ್ನ ನೆಚ್ಚಿನ ಪಾಂಡವರ ತಲೆಗಳಿವೆ" ಎಂದು ಬಿಸಾಕುತ್ತಾನೆ. ಗ್ರೀಕ್ ಕಥೆಯಲ್ಲಿ ಅಥೀನೆಯಿಂದ ಬುದ್ಧಿಭ್ರಮಣವಾಗಿದ್ದರೆ, ಭಾರತದಲ್ಲಿ ಕ್ರೋಧ ಹಾಗು ಶೋಕಗಳಿಂದ ಬುದ್ಧಿ ನಷ್ಟವಾಗಿದೆ. ಬಲರಾಮ ತೀರ್ಥಯಾತ್ರೆಯಿಂದ ಮರಳಿ ಬರುವವರೆಗೆ ಜೀವದಿಂದಿರಬೇಕೆಂದು ಹೇಳಿದ್ದು ದುರ್ಯೋಧನನಿಗೆ. ಮರುದಿವಸದಿಂದ ದುರ್ಯೋಧನ ಪುನಃ ಅಜೇಯ. ಆದರೆ ಇಲ್ಲಿ ಹಾಗೆ ಉಳಿಸಬೇಕೆಂದು ಮಾಡಿದ್ದು ಅಶ್ವತ್ಥಾಮನನ್ನು. ಅಶ್ವತ್ಥಾಮ ಏಜಾಕ್ಸನ ಹಾಗೆ ದೈವವಿಹೀನ. ಪ್ರತಿಕೂಲದೈವಿ. ಈ ಸಾದೃಶ್ಯದ ಜಾಡನ್ನು ಹಿಡಿದು ಶ್ರೀಯವರು 'ಅಶ್ವತ್ಥಾಮನ್' ನಾಟಕ ರಚಿಸಿದರು. ಅಲ್ಲಿಯ **ಏಜಾಕ್ಸ** ಇಲ್ಲಿ ಅಶ್ವತ್ಥಾಮನಾದ: **ಟ್ಯೂಸರ್, ಏಕಲವ್ಯ**; ಅಲ್ಲಿ ಸಾಲಮಿಸ್‌ದಿಂದ ಬಂದ **ನಾವಿಕರು** ಮೇಳದವರಾದರೆ, ಇಲ್ಲಿ ಬನವಾಸಿಯಿಂದ ಬಂದ **ಬೇಡರು** ಮೇಳದವರಾಗುತ್ತಾರೆ; ಏಜಾಕ್ಸನಿಗೆ **ಯುರಿಸಾಕೀಸ್** ಎಂಬ ಮಗನಿದ್ದರೆ, ಇಲ್ಲಿ ಅಶ್ವತ್ಥಾಮನಿಗೆ **ರುದ್ರಶಕ್ತಿ** ಎಂಬ ಮಗ ಹುಟ್ಟಿಕೊಳ್ಳಬೇಕಾಗುತ್ತದೆ; ಏಜಾಕ್ಸನ ದಾಸಿ ಪ್ರೇಯಸಿಯಾಗಿದ್ದ **ಟೆಕ್‌ಮೆಸಳ** ಸ್ಥಾನವನ್ನು, ಅಶ್ವತ್ಥಾಮನ ಅಜ್ಜಿ **ಭಾರ್ಗವಿ** ಸಲಹುವಾಕೆಯಾಗಿ ತುಂಬಿಕೊಳ್ಳಬೇಕಾಗುತ್ತದೆ; **ಓಡಿಸ್ಯೂಸ್ ಕೃಷ್ಣನಾದರೆ, ಅಥೀನೆ ದೇವತೆ,** ರುದ್ರನಿಗೆ ಸ್ಥಾನ ಮಾಡಿಕೊಡಬೇಕಾಗುತ್ತದೆ. ಇದು 'ಅಶ್ವತ್ಥಾಮನ್'ದ ಚೌಕಟ್ಟು.

೩

ಶ್ರೀಯವರು ಮಾಡಿಕೊಂಡ ಮಾರ್ಪಾಡುಗಳ ವಿಷಯವೇನೇ ಇರಲಿ, ಒಂದು ಸಲ ಅವರು ಆ ವಸ್ತುವನ್ನು, ಆ ರೀತಿ ಆಯ್ಕೆ ಮಾಡಿಕೊಂಡ ಮೇಲೆ ಅದನ್ನು ಹೇಗೆ ವಿಸ್ತರಿಸಿದ್ದಾರೆ, ಹೇಗೆ ಕಥೆ ಬೆಳೆಸಿದ್ದಾರೆ. ಯಾವ ಜೀವನ ಸಂದೇಶ ಕೊಡಬೇಕೆಂದು ಬಯಸಿದ್ದಾರೆ, ಯಾವ ರೀತಿ ಪಾತ್ರಗಳನ್ನು ಕಂಡರಿಸಿದ್ದಾರೆ, ಪೋಷಿಸಿದ್ದಾರೆ, ಯಾವ ಶೈಲಿಯಲ್ಲಿ ಇದು ನಮ್ಮ ಹೃದಯಕ್ಕೆ ಮುಟ್ಟುವಂತೆ ಮಾಡಿದ್ದಾರೆ-ಎಂಬುವು ಈಗ ಮುಖ್ಯಪ್ರಶ್ನೆ. ಕವಿ ತಾನು ಆಯ್ದುಕೊಂಡ ಭಿತ್ತಿಯಲ್ಲಿ ಯಾವ ರೀತಿಯ ಕುಸುರು-ಕೆಲಸವನ್ನು ಮಾಡಿದ್ದಾನೆ ಎಂಬುದರ ಮೇಲೆ ಅವನ ಯಶಾಪಯಶಗಳು ಪ್ರತಿಭೆ-ನಿಂತಿವೆ. ಪ್ರಸ್ತುತ ಪ್ರಬಂಧದಲ್ಲಿ ಈ ನಾಟಕದ ಮೂಲಕ ಶ್ರೀಯವರು ಯಾವ ಜೀವನ ಸಂದೇಶ ಕೊಡಬೇಕೆಂದು ಮಾಡಿದ್ದಾರೆ ಎಂಬುದನ್ನು ಗಮನಿಸೋಣ.

ಈ ರೀತಿ ನೋಡಿದಾಗ, ಅಶ್ವತ್ಥಾಮನ್ ಒಂದು ಅದ್ಭುತ ಕಲಾಕೃತಿ. ಮನುಷ್ಯನಲ್ಲಿ ಎಷ್ಟೇ ಪ್ರತಿಭೆಯಿರಲಿ, ಸಾಹಸವಿರಲಿ, ಸತ್ವವಿರಲಿ, ಚಾರಿತ್ರ್ಯವಿರಲಿ, ಸಂಪನ್ನತೆಯಿರಲಿ, ಅವನು ದೈವ-ಹೀನನಾದನೆಂದರೆ, ಕ್ಷೀಣೇ ಪುಣ್ಯೇ ನೆಲಕ್ಕಿಳಿ-ಯುತ್ತಾನೆ ಅಧೋಗತಿ ಹೊಂದುತ್ತಾನೆ...ಅಶ್ವತ್ಥಾಮ ಅಂಥ ಶೂರ, ಕಲಿಗಳೊಳ್

ಕಲಿ, ವೀರಾಧಿವೀರ, ರುದ್ರಾವತಾರ, ರುದ್ರನೊಳ್ ಪೋರ್ದವ, ಆಚಾರ್ಯಸುತನಾಗಿ ಧರ್ಮವನ್ನು ಅರಿತವ, ಸ್ವಾಮಿಭಕ್ತ. ಸ್ವತಃ ಶ್ರೀಕೃಷ್ಣನೇ ಅಶ್ವತ್ಥಾಮನ ಬಗ್ಗೆ ಭೀಮಸೇನನಿಗೆ ಹೇಳಿದಂತೆ,

ದ್ವೇಷವಮ್ ಎನಿತಿರ್ದೊಡಂ, ತುಳಿಯದಿರ್ ಧರ್ಮಮನ್.
ದ್ವೇಷಿಸಿದನ್ ಎನ್ನನ್ ಇವನ್–ಎನಗೆ ಬದ್ಧದ್ವೇಷಿ–
ಆದೊಡಂ ಗೌರವಂದೋರುವೆನ್, **ಕಲಿಗಳೊಳ್**
ಕಲಿ ಎಂದು ಸಾರುವೆನ್. ಅಭಿಮನ್ಯು, ಅವನ್ ಒರ್ವನ್.
ಇವನ್ ಒರ್ವನ್,–**ಬೆಂಕೆಗಳ್–ಸಿಡಿಲ ಮರಿಗಳ್–ರುದ್ರ**
–ನಂಶಗಳ್–

ಸ್ವಾಮಿಭಕ್ತನಾದ ಅಶ್ವತ್ಥಾಮನಿಗೆ ತನ್ನ ದೊರೆಯಾದ ದುರ್ಯೋಧನನಿಗೆ ಉಂಟಾದ ದೀನಾವಸ್ಥೆಯನ್ನು ಕಂಡು, ಮನಸ್ಸು ಕರಗುತ್ತದೆ, ರೋಷ ಕುದಿದೇಳುತ್ತದೆ. ತನ್ನ ದೊರೆಗೆ, ಈದೊರೆಯ ಅವಸ್ಥೆಯನ್ನು ಉಂಟುಮಾಡಿದವರನ್ನು ಸವರಿಹಾಕಿ ಬಿಡಬೇಕೆಂದು ಮನಸ್ಸಾಗುತ್ತದೆ. ಇದೆಲ್ಲ ಸ್ವಾಭಾವಿಕ. ಆದರೆ ಇದರಲ್ಲಿ ಒಂದು ಮಾತ್ರ ಚಿಕ್ಕ ತಪ್ಪು ಘಟಿಸುತ್ತದೆ. ಅಶ್ವತ್ಥಾಮ ತನ್ನ ಪೌರುಷಬಲವನ್ನೇ ಹೆಚ್ಚು ನೆಚ್ಚುತ್ತಾನೆಯೇ ಹೊರತು, ಈವರೆಗೆ ತನ್ನನ್ನು ರಕ್ಷಿಸಿದ, ನಡೆಸಿಕೊಂಡು ಬಂದ, ದೈವೀಶಕ್ತಿಯನ್ನು, ರುದ್ರಶಕ್ತಿಯನ್ನು, ಉಪೇಕ್ಷಿಸುತ್ತಾನೆ. ಒರೆಯಿಂದ ತನ್ನ ಇರ್ಬಾಯ ಖಡ್ಗವನ್ನು ಹೊರತೆಗೆದು, ಪಾಂಡವರ ಪಾಳ್ಯಕ್ಕೆ ನುಗ್ಗುತ್ತಿರುವಾಗ ರುದ್ರದೇವ ಪ್ರತ್ಯಕ್ಷನಾಗಿ, "ಪ್ರಿಯವೀರ, ದಾಳಿ ಏನ್? ವರಮ್ ಆವುದೀವೆನ್" ಎಂದು ತಾನಾಗಿಯೇ ಕೇಳಿದಾಗ, "ಪಾಂಡವರ ಲೋಕಕೆನ್ನಿನ್ ಪ್ರಳಯಮ್" ಎಂದು ಘೋಷಿಸುತ್ತಾನೆ. "ಕೆಲರ್ ಉಳಿದು" ಎಂದು ರುದ್ರಹೇಳಿದರೆ,. ತನ್ನ ಸ್ವ–ಸಾಮರ್ಥ್ಯವನ್ನೇ ನೆಚ್ಚಿದ ಅಶ್ವತ್ಥಾಮ :

"ನೋಡುತಿರು ನೋಡುತಿರು, ಎಲೆ ರುದ್ರ, ದೂರದೊಳ್
ನೋಡುತಿರು, ವೀರ್ಯಂ ಮಾನುಷಮ್ ಅದೆಂತಿರ್ಕುಮ್
ಎಂಬುದನ್"

—ಎಂದು ಉಗ್ಘಡಿಸುತ್ತಾನೆ. ಅಷ್ಟೇ ಅಲ್ಲ. ರುದ್ರ ಹೇಳಿದ ಹಾಗೆ—

"ಮದಿಸಿ ತಾನ್ ನಕ್ಕನ್; ಆನ್ ನಕ್ಕೆನ್"

—ಎಂಥ ಭಯಂ–ಕರ ಸಾಲುಗಳಿವು! ಅಶ್ವತ್ಥಾಮ ಸ್ವಪೌರುಷವನ್ನು ನೆಚ್ಚಿ ಮದಿಸಿ ತಾನ್ ನಕ್ಕರೆ, ಪರಮಜ್ಞಾನಿಯಾದ ರುದ್ರ ತಾನೂ ನಗುತ್ತಾನೆ.

ಎರಡೂ ನಗೆಗಳೇನೋ ನಿಜ; ಆದರೆ, ಒಂದು ಸ್ವ-ಪರಾಕ್ರಮವನ್ನು ನೆಚ್ಚಿಕೊಂಡಿದ್ದ ಹುಚ್ಚ ನಗು, ಮತ್ತ ನಗು; ಇನ್ನೊಂದು ಪ್ರಪಂಚದ ಆದಿ-ಅಂತ್ಯಗಳನ್ನು

ಬಲ್ಲ ಸರ್ವಜ್ಞ, ಸರ್ವಶಕ್ತ, ಸರ್ವವ್ಯಾಪಿ ರುದ್ರಪರಮಾತ್ಮನ ಉಪಹಾಸ. ನಗು. **ಆನ್ ನಕ್ಕೆನ್.** ದೈವವೇ ಮನುಷ್ಯನನ್ನು ಕಂಡು ನಕ್ಕಮೇಲೆ, ಅವನಿಗೆ ಉಳಿಗಾಲವೆಲ್ಲಿ? ....ಅದಕ್ಕಾಗಿ, ರುದ್ರ ಅಶ್ವತ್ಥಾಮನಿಗೆ ಮಾಯೆಯನ್ನು ಬೀಸಿ, ಅವನನ್ನು ಸೈನ್ಯದ ಹೊರಭಾಗಕ್ಕೆ ತಂದು ಬಿಡುತ್ತಾನೆ, ಕ್ರೋಧಾವಿಷ್ಟನಾದ ಅಶ್ವತ್ಥಾಮ, ತುಪ್ಪಳು ತರಿವಂತೆ ತರಿಯುತ್ತಾನೆ, ಕಡಿಯುತ್ತಾನೆ, ಕೊರೆಯುತ್ತಾನೆ, ಸವರುತ್ತಾನೆ, ಮದಿಸಿ ನಗುತ್ತಾನೆ, ಗಹಗಹಿಸುತ್ತಾನೆ. ಆದರೆ, ತಾನು ತರಿದುದು ಯಾರನ್ನು, ಏನನ್ನು ಎಂಬ ಪರಿಜ್ಞಾನವೇ ಅವನಲ್ಲಿ ಉಳಿದಿರುವುದಿಲ್ಲ,

ಆಹ! ಏನ್ ಆರ್ಭಟಂ! ಆಹ, ಏನ್ ಚೀತ್ಕಾರಂ! ಏನ್
ಕೊಲ್ವಗರ್ವಂ!....ಮೇಲ್ವಿಳ್ದು ತುರುಗಳನ್ ತರಿದನ್.
ಎಳ್ಚಟ್ಟೆ ಪೆಣ್ಗಳನ್ ಪೋಳ್ದನ್. ದಾದಿಬಳಿ ಪಸುಳೆಯನ್
ಬಾಳ್‌ಮೊನೆಗೆ ಚುರ್ಚಿದನ್, ಬರ್ಚಿದನ್, ಕೊಯ್ದನ್...ಆಹ!
ಧೃಷ್ಟದ್ಯುಮ್ನ, ಗುರವನ್ (ಆಚಾರ್ಯದ್ರೋಣನನ್) ಇಂತಲ್ತೆ
ಕೊರೆದು ಪುಣ್ಯಂಗೊಂಡೆ,

ಎಂದೊಂದು **ಕುದುರೆಯುನ್** ಕೊರಲೌಂಕಿ ಕೊರೆದನ್. ಎಲ್ಲದಕ್ಕೂ ಹೆಚ್ಚು, ಅಶ್ವತ್ಥಾಮನ ಪರಮವೈರಿಗಳು ಭೀಮಸೇನ ಮತ್ತು ಕಪಟನಾಟಕ ಸೂತ್ರಧಾರಿ ಕೃಷ್ಣ. ಅವರನ್ನು ಕೊಂದ ಬಗೆ ಹೇಗೆ?...ಆನೆಯೊಂದನ್ ತಳ್ಳಿ, ಭೀಮಸೇನಂ ಗೆತ್ತು, **ರಾಕ್ಷಸಾ, ದೈತ್ಯಾ,** ಕೌರವೇಂದ್ರನ ಬಿಳ್ದ ಚಕ್ರವರ್ತಿಯ ಮುಡಿಯನ್ ಒದೆದ ಕಾಲ್ ಎಲ್ಲಿ, ತೋರು, ಎಂದು ಅದರ ಕಾಲ್ ಮುರಿದು, ಬಲ್ವೆಣನನ್, ಒದೆದೊದೆದು ಬಿಸುಟನ್, ಕಡೆಗೆ ಎಲ್ಲರನ್ ಕೊಂದೆನ್ ಎಂದೆಣಿಸಿ **ಕೌಂಕುಳೊಳ್ ಕುರಿಯೊಂದನ್ ಇರುಕಿ, ಬಾ ಕೃಷ್ಣ, ಯುದ್ಧಮನ್ ಪೊತ್ತಿಸಿದ ಮಾಯಾವಿ,** ಫಲಮನ್ ಉಣ್, ಬಾರ....ಎನುತೆ ಬೀಡಿಂಗುಯ್ದು ಹಿಂಸಿಸುತ್ತಿರ್ಪನ್—ಎಂಥ ಹುಚ್ಚು! ಎಂಥ ಮತ್ತು!! ಮದಿಸಿ ತಾನ್ ನಕ್ಕನ್, ಆನ್ ನಕ್ಕೆನ್....ಇಷ್ಟಕ್ಕೂ ಸಾಲದೆಂಬಂತೆ ರುದ್ರ ಆಶ್ವತ್ಥಾಮನನ್ನು ತನ್ನ ಬಿಡಾರದಿಂದ ಹೊರ ಕರೆದು, ಅವನ ಅಪಮಾನಕಾರಕ ಸ್ಥಿತಿಯನ್ನು ಕೃಷ್ಣನಿಗೆ ತೋರಬೇಕೆಂದಿದ್ದಾನೆ. ಅದೂ ಕರೆಯುವಲ್ಲಿ ವ್ಯಂಗ್ಯವೆಂಥದು!! "ಬಾರ, ಬೀರರ ಬೀರ, (ಕುರಿ ಕೊಂದವ ಬೀರ), ದೈವಮನ್ ಲೆಕ್ಕಿಸದ ರುದ್ರಾವತಾರ" ಎಂದು ಕರೆಯುತ್ತಾನೆ. ಅಶ್ವತ್ಥಾಮನ ಮತ್ತು ಇನ್ನೂ ತಿಳಿದಿಲ್ಲ. ಎರಡನೆಯ ಸಲ ಕರೆದಾಗ, ಹೊರಬಂದ ಅಶ್ವತ್ಥಾಮನಿಗೆ-ಎಲ್ಲ ಪಾಂಡವರನ್ನೂ ಕೊಂದು ಹಾಕಿ **ದೆಯಾ ವೀರ,** ಇನ್ನವರು ಹುಟ್ಟರೇ ಎಂದು ಕೇಳಿ, ಎಲ್ಲದಕಿಂತ ಹೆಚ್ಚು—

...ಆ ಪಾಂಡವರ್ ಪ್ರಾಣಮ್ ಎಂದಿರ್ದನೇ

ಅವನ ಗತಿ ಏನಾಯ್ತು? ಕೈ ನುಣ್ಚಿಕೊಂಡನೋ?

ಎಂದುಕೊಳ್ಳುತ್ತಾನೆ. ಅದಕ್ಕೆ ಅಶ್ವತ್ಥಾಮ–ಏನಾದನ್, ಆ ಗುಳ್ಳೆನರಿ ಎಂದು **ಕೇಳ್ದೆಯಾ? ಆಹ! ಒಳಗಿರ್ಪನ್!** ಸಮಿಯು ಸೆರೆ ಸಮಿಯು ಸೆರೆ ನನಗೆ. ಅವನನ್ ಈಗಳೆ ಕೊಲ್ಲೆನ್ ಎನ್ನ ದೊರೆ, ಎನ್ನ ಗೂಡಾರದ ಕಂಬಕ್ಕೆ ಬಿಗಿದು (ಬಿಗಿದೂ), ಈ ಚಮ್ಮಟಿಗೆ ಸುಲಿದು, **ಬೆನ್ ಪಸುರ್ಗಟ್ಟ**...(ರುದ್ರ – ಪಾಪ ರಾಸಕ್ರೀಡೆಯಾಡುತ್ತಿರ್ಪನ್ ಪೆಣ್ದಿರೊಳ್) ಇಂತೆ ಸಾಯುವೇಳ್ಕುಂ ಆ ತಂತ್ರಿ-ಎಂದು ತಾನು ಬಗಲಲ್ಲಿ ತಂದ ಕುರಿಯನ್ನು ಪುನಃ ಗೂಡಾರಕ್ಕೆ ಒಯ್ದು ಹಿಂಸಿಸಬೇಕೆನ್ನುತ್ತಾನೆ. ಕೃಷ್ಣನಂಥ ಪಾಪಿಷ್ಠ ತಂತ್ರಿಗೆ, ಸಕೃದ್ ಮರಣ ಸಲುವಲ್ಲ; ಅವನನ್ನು ಹಿಂಸಿಸಿ, ಹಿಂಸಿಸಿ, ಅವನ ರಕ್ತ ಹಸಿ ಹಸಿ ನೆಲಕ್ಕೆ ಬೀಳುವ ಹಾಗೆ ಅವನನ್ನು ಕೊಲ್ಲಬೇಕು. ಆದರೆ, ಅಶ್ವತ್ಥಾಮ ಕೊಲ್ಲುತ್ತಿರುವದೇನನ್ನು? ಬಗಲಲ್ಲಿ ಹಿಡಿದುಕೊಂಡ ಹುಚ್ಚು ಕುರಿಮರಿಯನ್ನು. ಪಾಪ! ಅಶ್ವತ್ಥಾಮನಿಂದ ಘಟಿಸಿದ ಅಲ್ಪ ತಪ್ಪಿಗೆ, ಇದು ಎಂಥ ಘೋರ ದಂಡನೆ? More sinned against than sinning....ಆದರೂ, ಆ ಮುಗ್ಧ ಜೀವಿ ಅಶ್ವತ್ಥಾಮ:

ಒಂದನ್ ಎರೆವೆನ್ ರುದ್ರ, ಇಂದಿನವೊಲ್ ಪಗಲುಂ
ಕೈಬಿಡದೆ ಕಾಪಾಡು–

ಎಂದು ರುದ್ರನನ್ನು ಕೇಳುವಲ್ಲಿ ದೈವದುರ್ವಿಲಾಸವಿದೆ; ನಾಟಕೀಯ ವ್ಯಂಗ್ಯವಿದೆ. (dramatic irony).[೧]

ಅಶ್ವತ್ಥಾಮನ ಈ ಕರುಣಾಪೂರ್ಣ ಸ್ಥಿತಿಯನ್ನು ಕಂಡ ರುದ್ರನು ಸಹ "ಏನ್ ಪಿರಿದು, ನೋಡಿದೆಯ, ದೈವಬಲಂ, ಎಲೆ ಕೃಷ್ಣ, ಆರ್ ಇರ್ದರ್ ಈತನಿನ್ ಜ್ಞಾನಿಯುಂ ಶೂರನುಂ" ಎಂದು ಉದ್ಗಾರ ತೆಗೆಯುತ್ತಾನೆ. ದೈವದ ವ್ಯಾಘ್ರನಖದಲ್ಲಿ ಸಿಕ್ಕ

---

೧ ರನ್ನನಲ್ಲಿ-ಸ್ವಾಮಿಭಕ್ತನಾದ ಅಶ್ವತ್ಥಾಮ ಕ್ರುದ್ಧನಾಗಿ ಪ್ರಪಂಚವನ್ನು ನಿಷ್ಪಾಂಡವವನ್ನಾಗಿ ಮಾಡುತ್ತೇನೆಂದು ಬಗೆದು ಪಾಂಡವ ಸೂನುಗಳ ತಲೆಯನ್ನು ತರಿದು, ಕೊಳ್ ನಿನ್ನ ನೆಚ್ಚಿನ ಪಾಂಡವರ ತಲೆಗಳಿವೆ ಎಂದು ಇಟ್ಟಾಗ ಅದನ್ನು ನೋಡಿದ ದುರ್ಯೋಧನ —ಇದು ಪವನಜನ ಆಸ್ಯಮಲ್ತು ಇದು: ಅವನ ಆನನಮ್ ಇಪ್ಪೊಡೆ ಮಟ್ಟಮ್ ಇರ್ದುದೆ ನೋಡುವುದೆ ಮಾದೀಯುವಕ್ತ್ರಮುಂ ಎಂದು ಹೇಳಿ ಅಶ್ವತ್ಥಾಮನ ಬುದ್ಧಿಭ್ರಂಶತೆಯನ್ನು ಕಂಡು ಮರಿಗಿ—

ಪರಮೇಶ್ವರಾವತಾರನೆ
ಪರಮಜ್ಞಾನಿಯೆ, ವಿವೇಕವಿಕಳರವೊಲ್ ಬಾ-
ಲರ ತಲೆಯನರಿದು ತಂದೆಯೊ
ದೊರೆಕೊಂಡುದು ನಿನಗೆ ಪಾತಕಂ ಬಾಲವಧಂ॥

ಎಂದು ಹೇಳುತ್ತಾನೆ. ಶ್ರೀಯುವರ ಅಶ್ವತ್ಥಾಮನೋ ಅದಕ್ಕೂ ಒಂದು ಹೆಜ್ಜೆ ಮುಂದು ಹೋಗಿ ಬಾಲವಧೆ, ಸ್ತ್ರೀವಧೆ, ಪ್ರಾಣಿವಧೆ ಎಲ್ಲವನ್ನೂ ಮಾಡುತ್ತಾನೆ. ಇದು ಹೆಚ್ಚು ಕರುಣಾಜನಕ ಚಿತ್ರ ! !

ಮನುಷ್ಯನ ಬಾಳೇ ಹೀಗೆ. ನಖ ಬಿಡುತ್ತದೆ, ಮತ್ತೆ ಹೊಡೆಯುತ್ತದೆ. ಹೊಡೆಹೊಡೆದು ಹಿಂಸಿಸಿ ಕೊಲ್ಲುತ್ತದೆ. ಸ್ವತಃ ಕೃಷ್ಣನಿಗೂ ಸಹ ಅಶ್ವತ್ಥಾಮನ ಈ ಸ್ಥಿತಿಯನ್ನು ಕಂಡು ಕನಿಕರ ಉಂಟಾಗುತ್ತದೆ.–ಅವನ ಗತಿಯುಂ ಕಂಡು, ಎನ್ನ ಪಗೆಯಾದೊಡಂ, ವಿಧಿವಶದೆ ಕಾಲ್ ತೊಡರ್ದು ಬಿಳ್ದಂಗೆ ಮರುಗುವೆನ್–ಎಂದು ಹೇಳಿ, ದೈವಮಾನುಷ ಸಂಬಂಧವೇ ಹೀಗೆಂದು ಸಾರುತ್ತಾನೆ–ಇಂದವನ್, ನಾಳೆ ನಾನ್; **ಏನ್ ಪಾಡೊ ಆಳ ಬಾಳ್! ಬೀಸುವ ಬಯಲ್‌ಗಾಳಿ, ಪರಿದಡಂಗುವ ನೆಳಲ್**-ಮನುಷ್ಯನ ಜೀವನ ಬೀಸುವ ಗಾಳಿ; ಅಳಿಯುವ ನೆರಳು! ರುದ್ರ ಹೇಳಿಬಿಡುತ್ತಾನೆ- ದೈವದೊಳ್ ಸೊರ್ಕುನುಡಿ ನುಡಿಯದಿರ್, ಕೊರ್ಬದಿರ್–ನಿನಗೊರ್ಮೆ ಸಿರಿಯೆನಿತು, ಬಲಮೆನಿತು, ಕಯ್ಯೆನಿತು ನಡೆದೊಡಂ,

ಒಂದು ಪಗಲ್ ಎತ್ತುವುದು, ಒಂದು ಪಗಲ್ ಉರುಳಿಪುದು,

ಮಾನುಷಮನ್ ಎಲ್ಲಮನ್. **ನೀತಿಯರಿದು ನೆಗಳ್ವರ್ಗೆ**

ದೇವರ್ಕಳ್ ಒಸೆದಪರ್-ಮುರಿದಪರ್ ಮಿಕ್ಕರನ್

ಹೀಗೆ, ದೈವದ ಹೊಡೆತಕ್ಕೆ ಒಳಗಾದವ ಅಶ್ವತ್ಥಾಮ, ರಾತ್ರಿಯ ಪ್ರಾಕೃತಿಕ ಕಾವಳದಲ್ಲಿ, ದೈವೀ ಶಾಪದ ಮಾನಸಿಕ ಕಾವಳದಲ್ಲಿ, ಈ ದುರ್ಧರ ಘಟನೆ ನಡೆದು ಹೋಗುತ್ತದೆ. ಉಡಾಳ ಮಕ್ಕಳು, ತಮ್ಮ ಆಟಕ್ಕಾಗಿ ನೊಣಗಳನ್ನು ಹಿಂಸಿಸುವಂತೆ, ದೈವ ಅಶ್ವತ್ಥಾಮನನ್ನು ಹಿಂಸಿಸುತ್ತದೆ. ಮೇಳದವರಿಗೆ, ಭಾರ್ಗವಿಗೆ, ಇವನ ಪೊಲ್ಲ ಕೆಲಸ ಗೊತ್ತಾಗಿ, ಅಯ್ಯೋ! ವೀರಾಧಿವೀರ ಅಶ್ವತ್ಥಾಮ ಕೀರ್ತಿಯ ಕೊರಲನ್ನು ಮುರಿದನಲ್ಲ, ಯೋಧನಾಗುವ ಬದಲು ಪಶುಗಳನ್ನು ಕೊಂದ ಕಟುಕನಾದನಲ್ಲ ಎನಿಸುತ್ತದೆ.... ರುದ್ರ ಬೀಸಿದ ಮಾಯೆ ಹರಿದಾಗ, ಮನಸ್ಸು ತಿಳಿಗೊಂಡು ಸ್ತಿಮಿತವಾದಾಗ, ಕದಡಿದ ನೀರು ತಿಳಿಯಾದಾಗ, ಎಲ್ಲವನ್ನೂ ಅರಿತ ಅಶ್ವತ್ಥಾಮ, ತನ್ನ ಹೇಯ ಕಾರ್ಯಕ್ಕಾಗಿ ತಾನೇ ಪಶ್ಚಾತ್ತಾಪ ಪಡುತ್ತಾನೆ. ಇದಕ್ಕೆ ಪರಿಹಾರವೇನು? ಪಾಪಕ್ಷಾಲನ ಮಾರ್ಗ ಯಾವುದು?.... ಸ್ವಂತ ತೋಳಬಲದ ವಿಶ್ವಾಸದಲ್ಲಿ, ದೈವವನ್ನು ತಿರುಗಿಹಾಕಿಕೊಂಡರೆ ಮನುಷ್ಯನಿಗೆ ಎಂಥ ದುರ್ದೆಸೆ ಒದಗುತ್ತದೆ ಎಂಬುದು ಈ ನಾಟಕದ **ಮೊದಲ** ಸಂದೇಶ.

ಎರಡನೆಯದಾಗಿ, ಸಾವು ಯಾವಾಗಲೂ ಸಾವಲ್ಲ. ಅದು ನೊಂದ ಜೀವದ ವಿಮೋಚನೆಯೂ ಆಗಬಹುದು. ಪ್ರಸ್ತುತ, ಅಶ್ವತ್ಥಾಮ ಏನು ಮಾಡಿದರೂ, ಯಾವ ಸಾಗರದ ಎಷ್ಟು ನೀರಿನಿಂದ ತನ್ನ ಕೈಯನ್ನು ತೊಳೆದುಕೊಂಡರೂ, ಅದಕ್ಕಂಟಿದ ಕಾಳಿಮೆಯನ್ನು ತೆಗೆದು ಹಾಕಲಾರ. ಅವನು ಬಾನವರ, ಮಾನವರ, ಕಣ್ಣಲ್ಲಿ ನಗೆಗೀಡಾಗಿದ್ದಾನೆ. ಪಶುಗಳಲ್ಲಿ ಪಶುವಾಗಿದ್ದಾನೆ. ಆದ್ದರಿಂದ ಈ ಕುರುಭೂಮಿಯನ್ನಾದರೂ ಬಿಟ್ಟು, ತವರು ನಾಡಿಗೆ ಹೋಗಬೇಕೆಂದರೆ,

(— ಎಂಥ ನಾಡು ಅದು !

ಓವೊ, ಕನ್ನಡದ ನಾಡೇ
ಮುನ್ನೀರ ಮೊಳಂಗು ಕರೆನಾಡೇ,
ಮಲೆನಾಡೇ, ಪೊನಲ್‌ನಾಡೆ, ಬಯಲ ಪೊನ್‌ನಾಡೇ)

–ಅಲ್ಲಿಯೂ ಹೋಗಲು ಸಾಧ್ಯವಿಲ್ಲ. ತನ್ನ ಶೌರ್ಯ ಪರಾಕ್ರಮಗಳ ಮೂಲಕ ಇಂತಪ್ಪನ್ ಇಲ್ಲಮ್ ಎಂದಾದವ, ಈಗ, ಇಂತಪ್ಪಮ್ ಇಲ್ಲಮೆಂದೇ ಆಗಿದ್ದಾನೆ ಪುಡಿಯೊಳಗೆ ಪುಡಿಯಪುಡಿ, ನಾಣನುಡಿ!! ಪಿತೃವಿಹೀನನಾಗಿಯೂ ತಾಯ್ನಾಡಿಗೆ ಮರ ಲಾರ. ಎಂಥ ವೀರ! ಎಂಥ ತಂದೆಯ ಮಗ!! ತಂದೆ ದ್ರೋಣ "ಪೂಜ್ಯರೊಳ್ ಪೂಜ್ಯನ್, ರಾಜಗುರು, ಧರ್ಮರುಚಿ, ಶಿಷ್ಯಶತಭಕ್ತನ್, ಯೋಧಾಗ್ರಗಣ್ಯನ್ ಬ್ರಹ್ಮಜ್ಞರೊಳ್ ತಾನೆ ಬ್ರಹ್ಮನ್, ಸೌಮ್ಯನ್, —ಇಂತವನ್ ಜಗಮೆರಗೆ ನೆಗಳ್ದನ್" ಇಂಥವರ ಮಗನಾಗಿ ತನಗೆ ಈ ಗತಿಯೇ? ಅಂದಿಗೂ ತನ್ನ ಬಾಳು ಹೀಗೆಯೇ ಆಯಿ ತಲ್ಲ! ತಾನು ಇಷ್ಟು ಕಲಿತನವನ್ನು ತೋರಿದರೂ ಇಷ್ಟು ಸ್ವಾಮಿ ಭಕ್ತಿಯನ್ನು ಮೆರೆದರೂ ಒಡೆಯ ದುರ್ಯೋಧನನಿಗೆ "ಅನಲ್ತು ಮೊದಲೊಳ್ಮೆ, ಕರ್ಣನ್. ಸೇನಾಧಿಪತ್ಯವೇ ಕರ್ಣನ್; ಶೃಂಗಾರಮೇ ಕರ್ಣನ್; ಎಂಜಲ್, ಎಂಜಲ್ ನನಗೆ ಸಿಡುಕಂಗೆ"... ಈಗ ತಾನು ತಂದೆಯನ್ನು ಕಳೆದುಕೊಂಡು ಕ್ಷಾತ್ರವನ್ನು ಮಾರಿದವನಾಗಿ, ಅಪಮಾನಿತನಾಗಿ, ಅಂಜುಗುಳಿಯಾಗಿ, ತವರು ನಾಡಿಗೆ ಹೋಗುವುದಕ್ಕಿಂತ ಪ್ರಾಣವನ್ನೇ ಬಿಡುವುದು ಒಳ್ಳೆಯದು. ಸಂಭಾವಿತಸ್ಯ ಚ ಅಪಕೀರ್ತಿಃ ಮರಣಾದ್ ಅತಿರಿಚ್ಯತೇ. ನಮ್ಮ ಶಾಸನ ಗಳು ಹೇಳುವ ಹಾಗೆ,

ವರಂ ತೇಜಸ್ವಿನೋ ಮೃತ್ಯುಃ
ನತು ಮಾನಾವಖಂಡನಮ್
ಮೃತ್ಯುಃ ತದ್ ಕ್ಷಣಿಕಂ ದುಃಖಂ
ಮಾನಭಂಗಮ್ ತು ದಿನೇದಿನೇ॥

ಆದ್ದರಿಂದ ಸಾಹಸಮನ್ ಏನಾನುಮ್ ಒಂದೆಸಗಿ, **ಮಗನ್ ಅರಿಯ ಕಲಿಯೆಂ, ಎರ್ದೆಯುರ್ಕಿನ್** ತಾನ್ ಅಳಿದನೆಂಬುದನ್ ತೋರಲೆವೇಳ್ಕುಮ್ ಎಮ್ಮ ಯ್ಯಂಗೆ ಗುರುಗೆ –ಎಂದು ನಿಶ್ಚಯಿಸುತ್ತಾನೆ. ಅವನ ಮನಸ್ಸು ಈಗ ಗಟ್ಟಿಯಾಗಿದೆ. ಮರಣವೇ ಮಹಾನವಮಿಯುವಗೆ....ಹುಚ್ಚಾಗಿ, ಮಬ್ಬಾಗಿ ಕಲಿಯಾಗಿ, **ಕೊನೆಗೆ ಹೇಡಿ** ಯಾಗಿಯಾದರೂ, ಎಲ್ಲಿಯಾದರೂ ಬಾಳಪ್ಪ, ಮಗು, ಎಂದು ಅಜ್ಜ ಭಾರ್ಗವಿ ಹೇಳಿದ ಮಾತು ಅವನ ಕಿವಿಯಲ್ಲಿ ಹೋಗುವುದೇ ಇಲ್ಲ. **ತಕ್ಕನ್ ತಕ್ಕವೊಲ್ ಬಾಳ್ದಪನ್, ತಕ್ಕವೊಲ್ ಸತ್ತಪಂ.** ತನ್ನ ಕಲಿತನ, ಸ್ಥೈರ್ಯ, ದೃಢನಿಶ್ಚಯಗಳನ್ನು ತನ್ನ ಚಿಕ್ಕ ಮಗು ರುದ್ರಶಕ್ತಿಯೂ ಕಲಿಯಬೇಕೆಂದು ಅವನನ್ನು ಕರೆಸಿ,

'ಬಾ ರುದ್ರಶಕ್ತಿ, ಪಿಡಿ, ಈ ಬಿಲ್ಲನ್, ಅಂಬುಮನ್......ಈ ಪಿರಿಯ ದೇವತೆಗಳಿನ್ ಬಂದುದಿದು–ಪರಶುರಾಮುನದು, ದ್ರೋಣನದು, ನಿನ್ನ ತಂದೆಯದು–**ಮೆಲ್ಲಯ್ಯಗಳಿನ್** ಪಿಡಿದು ಈ ದಿವ್ಯಧನುವನ್....ಆಹ! ಎಲ್ಲಿ?....ಪೂಡು,....ಪೂಡು ಒಂದಂಬನ್...ಇಂತಿಂತು...ನಲ್ಲದಹ! ನಲ್ಲದು! ! ಗೆಲ್! ಗೆಲ್!–ಎಂದು ಆ ಪುಟ್ಟ ಮಗುವಿಗೆ ಧನುರ್ವಿದ್ಯೆ ಹೇಳಿ, ಕೊನೆಗೆ ಆಶೀರ್ವದಿಸುತ್ತಾನೆ :

ತಂದೆಯಿನ್, ಕಂದ, ಮೇಲಾಗು ಅದೃಷ್ಟದೊಳ್!
ಮಿಕ್ಕೆಲ್ಲ ನಡತೆಯೊಳವನ್ ಅವನಂತೆ ಆಗು!
ಪಳಿ ತೊಡದ ಪಿರಿಯ ಪೆಸರಾಗು! !

ದೇವತೆಗಳಿಗೂ ತನಗೂ ಇದ್ದ ಋಣ ಹರಿದುಹೋಯಿತೆಂದು ಆತ್ಮಾರ್ಪಣೆಗೆ ಸಿದ್ಧನಾಗುತ್ತಾನೆ, ಇಲ್ಲ ತಪಸ್ಸಿನಿಂದ ನಿನ್ನ ಪಾಪ–ಕ್ಷಾಲನೆ ಮಾಡಿಕೋ, ನಿನ್ನ ನಾಡಿನ ತವರಿನ **ಅಡವಿನೆಳಲಲ್ಲಿ ತಪಸ್ಸು ಮಾಡಿ, ಮುರಿದ ರೆಕ್ಕೆಯ ಆತ್ಮವನ್ನು** ಸಂತೈಸು–ಎಂದು ಹೇಳಿದ್ದಕ್ಕೆ,

ತಪಂ! ಏನ್ ತಪಂ? ಏತರ್ಕೆ? ಆರ್ಗೆ?
ಬಾಳ್ ಬರಿಯದಾದಂದು, ಸಾವುತಾನ್ ಪೂರ್ಣಂ

—ಎಂದು ಹೇಳಿ, ಅಭಿಮನ್ಯು ತನಗೆ ಕೊಟ್ಟಿದ್ದ ಖಡ್ಗದ ಮೇಲೆ ಬಿದ್ದು ತನ್ನ ಪ್ರಾಣ ಬಿಡುತ್ತಾನೆ. ನೊಂದ ಜೀವ ತಣ್ಣಗಾಗುತ್ತದೆ, ಇಷ್ಟರ ಮಟ್ಟಿಗೆ ಅಪಮಾನದಿಂದ ದಹ್ಯಮಾನವಾದ ಮನಸ್ಸಿನವಗೆ ಬದುಕೆಂಬುದೆಲ್ಲಿದೆ? ಬಾಳ್ ಬರಿದಾದವನಿಗೆ ಬದುಕೆಲ್ಲಿ? ಯಾರೂ ಅವನನ್ನು ಉಳಿಸಲಾರರು, ಉಳಿಸಬಾರದು. ಬದುಕೇ ಮರಣ ಯಾತನೆಯಾದಾಗ ಮರಣವೇ ವಿಮೋಚನೆಯಾಗುತ್ತದೆ....ತನ್ನ ಹೆಣ್ಣುಮಕ್ಕಳಿಂದ ಅಪಮಾನಿತನಾಗಿ, ಪರಿತ್ಯಕ್ತನಾಗಿ, ಪಡಬಾರದ ಕಷ್ಟಗಳನ್ನೆಲ್ಲ ಪಟ್ಟು ಮೃತ್ಯುವನ್ನು ಆಹ್ವಾನಿಸುತ್ತಿದ್ದ ವೃದ್ಧ ಲಿಯರ್ ದೊರೆಗೆ, ಷೇಕ್ಸಪಿಯರ್ ನಾಟಕದಲ್ಲಿ, ಎಡ್ಗರ್ ಎನ್ನುವವ, "ಎಚ್ಚರಾಗು ದೊರೆಯೆ, ಎಚ್ಚರಾಗು" ಎಂದಾಗ, ಕೆಂಟ್ ಎನ್ನುವವ ಹೇಳಿದ ಮಾತುಗಳು ಮನನೀಯವಾಗಿವೆ :

Vex not his ghost, O let him pass! he hates him
That would upon the rack of this tough world
Stretch him out longer.

ಅಪಮಾನದ ಬದುಕಿನ ಮುಳ್ಳು ಹಾಸುಗೆಯ ಮೇಲೆ ವ್ಯಕ್ತಿಯನ್ನು ಎಳೆದೆಳೆದು ಬದುಕಿಸಲು ಯತ್ನಿಸುವುದಕ್ಕಿಂತ, ಅವನಿಗೆ ಸಾಯಗೊಡುವುದೇ ಒಳ್ಳೆಯದು. Better dead, than dying. ಸಾವಿನಲ್ಲಾದರೂ, ಆ ವ್ಯಕ್ತಿಗೆ ಸುಖ ಸಿಗಬಹುದೇನೊ! ಷೆಲ್ಲಿಕವಿ ಹೇಳಿದ ಹಾಗೆ :

Life, like a dome of many colored glass
Stains the white radiance of Eternity
Until Death tramples it to fragments-Die,
If thou would'st be with that
Which thou dos't seek.

ನೀನು ಯಾವುದನ್ನು ಬಯಸುತ್ತಿರುವೆಯೋ ಅದು ನಿನಗೆ ಮರಣದಲ್ಲಾದರೂ ದೊರಕುವುದಾದರೆ, ಅಪಮಾನಿತ ಬಾಳುವೆಗಿಂತ, ಆ ಮರಣವೇ ಲೇಸು. ಶ್ರೀಕಂಠಯ್ಯನವರು ಇದನ್ನೂ ಒಂದು ಸಂದೇಶವಾಗಿ ಹೇಳಬೇಕೆಂದರೇನೊ!

೪

ಒಂದರ್ಥದಲ್ಲಿ ಅಶ್ವತ್ಥಾಮನ್ ನಾಟಕ ೭೭೪ನೆಯ ಸಾಲಿಗೇ ಮುಗಿದು ಹೋಯಿತು. ವೀರಾಧಿವೀರ, ಸ್ವಾಮಿಭಕ್ತ ಅಶ್ವತ್ಥಾಮ ಅವಮಾನ ಜರ್ಝರಿತನಾಗಿ ಆತ್ಮಾರ್ಪಣೆ ಮಾಡಿದಾಗಲೇ, ನಾಟಕ ಪರಿಣಾಮಶಿಖರವನ್ನು ಮುಟ್ಟಿಬಿಟ್ಟಿತು. ಅಂಥ ವೀರ ಮೃತಿಹೊಂದಿದ ಮೇಲೆ, ಅವನ ಶವಸಂಸ್ಕಾರದ ವಿಚಾರವೇನು, ಅವನಿಗಾಗಿ ಗಾಡಿ ಕಟ್ಟಬೇಕೆ, ಜಾತ್ರೆ ಮಾಡಬೇಕೆ– ಎಂಬುದೆಲ್ಲ ಅ-ಮುಖ್ಯವಾದ ವಿಷಯಗಳು. ಹುಲಿಯೇ ಬಿದ್ದಮೇಲೆ, ಅದನ್ನು ಹಾಗೆಯೇ ಹೂಳಬೇಕೆ, ಬೆಂಡುಭತ್ತಾಸ ಹಾರಿಸಿ, ಮೆರವಣಿಗೆ ಮಾಡಿ ಹೂಳಬೇಕೆ ಎಂಬವು ಪ್ರಧಾನ ವಿಷಯಗಳಾಗುವುದಿಲ್ಲ. ಹೀಗಿದ್ದೂ ಶ್ರೀಯವರು ಈ ನಾಟಕವನ್ನು ಏಕೆ ಮುಂದು ಎಳೆದುಕೊಂಡು ಹೋದರು? ಆದ ಪರಿಣಾಮ ಕೆಲಮಟ್ಟಿಗೆ ಮಸಳಿಸುವ ಹಾಗೆ ಏಕೆ ಮಾಡಿದರು?...ಇದಕ್ಕೆ ಬಹುಶಃ ಎರಡು ಕಾರಣಗಳಿರಬಹುದು.

ಒಂದು: ರನ್ನನ ಗದಾಯುದ್ಧದಲ್ಲಿ ಭೀಮಸೇನ ಕೌರವನಿಗೆ ತೋರಿದ ಪ್ರತೀಕಾರ ಶ್ರೀಯವರ ಮನಸ್ಸಿನಲ್ಲಿ ಇನ್ನೂ ಅಚ್ಚಳಿಯದೆ ಉಳಿದಿದೆ. ಊರುಗಳನುಡಿವೆ, ನೊದೆವೆಮ್ ಕೌರವ ಪರಿವೃಢನ ಮುಕುಟಮುಮ್. ಊರು ಭಂಗವಾದಮೇಲೆ, ಮುಕುಟ ಭಂಗವೂ ಆಗಲೇಬೇಕಲ್ಲವೇ? ಅಲ್ಲಿ ಹಾಗೆ ಆಗಿದೆ; ಅಂದಮೇಲೆ, ಅದೇ ಭೀಮಸೇನನ ಕಾಲು ಅಶ್ವತ್ಥಾಮನಿಗೂ ತನ್ನ ಸವಿ ತೋರಿಸುತ್ತೇನೆ ಎಂಬ ಲವಲವಿಕೆ ವ್ಯಕ್ತ ಮಾಡಬೇಕು.

ಎರಡು : ಅದಕ್ಕೂ ಹೆಚ್ಚು ಜಗತ್ತಿನಲ್ಲೆಲ್ಲ ಈಗ ನಡೆಯುತ್ತಿರುವುದೇನು? ಯಾರ ಯಾರೋ ದ್ವೇಷ, ಯಾರ ಯಾರೋ ಅಹಮಹಮಿಕೆ, ಯಾರ ಯಾರನ್ನೊ ಆಹುತಿ ತೆಗೆದುಕೊಳ್ಳುತ್ತಿದೆ. ಎಲ್ಲಿಯೋ ಹಾರಿದ ಕಿಡಿ, ದ್ವೇಷಾಗ್ನಿಯಾಗಿ, ಕ್ರೋಧಾಗ್ನಿಯಾಗಿ, ಇಡೀ ಪ್ರಪಂಚವನ್ನೇ ಸುಡುತ್ತಿದೆಯಲ್ಲ,

ಇದೆಲ್ಲಕ್ಕೂ ಅರ್ಥವೇನು? ಇದರ ಉಪಶಮನ ಹೇಗೆ? ಈ ವಿಚಾರ ಅವರ ಮನಸ್ಸಿನಲ್ಲಿ ತಾಕಲಾಡುತ್ತಿರಬೇಕು. ದ್ವೇಷದಿಂದ ದ್ವೇಷವನ್ನು ಗೆಲ್ಲಲು ಸಾಧ್ಯವೆ? ಕೋಪದ, ಉದ್ವಿಗ್ನತೆಯ, ವಿನಾಶದ, ಯುದ್ಧಕ್ಕೆ ಕೊನೆ ಎಲ್ಲಿ? ಎಲ್ಲಿಯೋ ಬಿದ್ದ ಕಿಡಿ, ಸಮಸ್ತ ಭಾರತವನ್ನೇ ತನ್ನ ಕೆನ್ನಾಲಿಗೆಯಿಂದ ನೆಕ್ಕಿತು. ಯುದ್ಧದೇವತೆಯ ಆರಾಧನೆಗಾಗಿ, ಅನೇಕ ವೀರಾಧಿವೀರರು ಮಾರಣಬಲಿಯಾದರು. ಭಾರತ ಭಾರತಮವಾಯ್ತು; ಮಹಾ ರುದ್ರ ಭಾರತವಾಯ್ತು. ಈ ಭಾರತ ಯುದ್ಧದ ಉಗಮ ಎಲ್ಲಿ ಆಯಿತು? ದ್ರೋಣ, ತನ್ನ ಸಹಪಾಠಿಯಾದ ದ್ರುಪದನಿಗೆ ಮರೆಯದಿರಣ್ಣ, ಆಮುಂ ನೀಮುಂ ಒಡನೆ ಓದಿದೆ ವೆಂಬುದಮ್ ಎಂಬುದರಿಂದ ಪ್ರಾರಂಭವಾಯಿತೆ? ಅಥವಾ ಬೆಂಕಿಯಲ್ಲಿ ಹುಟ್ಟಿದ ಅಗ್ನಿ ಕನ್ಯೆ ದ್ರೌಪದಿ ಈ ಪ್ರಖರಾಗ್ನಿಗೆಲ್ಲ ಕಾರಣಳಾದಳೆ? ರನ್ನನೇನೋ ಹಾಗೆ ಹೇಳು ತ್ತಾನೆ: ಅವನು ವರ್ಣಿಸಿದ ದ್ರೌಪದಿಯ ಕೇಶಪಾಶವೇದರೆಃ

ಇದರೊಳ್ ಮೂರ್ಧಾಭಿಷಿಕ್ತರ್; ಮಣಿಮಕುಟಧರರ್, ಕೃಷ್ಣಬಾಹಾಬಳಾಗ್ರ್ಯರ್ ।
ಕದನಪ್ರೋಚ್ಚಂಡ ದಂಡಕ್ರಮವಿಜಿತರಿಪುಕ್ಷತ್ರಿಯರ್, ವೀರಲಕ್ಷ್ಮೀ ।
ಸದನರ್ ಸೋಮಾಮೃತಾಸ್ವಾದನಶುಚಿವದನರ್, ಮುನ್ನಮ್ ಅಳ್ಕಾಡಿದರ್, ನೋ
ಡ, ಇದು ನಿನ್ನೀ ಕೇಶಪಾಶಂ ಕುರುಕುಲಪತಿಗಾಯ್ತಲ್ತೆ ಕೀನಾಶಪಾಶಂ ॥*

ಏನೇ ಆಗಲಿ;ಸಾವಿರಾರು ವರ್ಷಗಳಿಂದ ನಡೆದುಬಂದ ಈ ಯುದ್ಧದ ಪಾಶವೀಕ್ರಮ ಇನ್ನೂ ನಿಂತಿಲ್ಲ, ಯುದ್ಧಗಳು ಮುಗಿದರೂ, ಯುದ್ಧಭಾವನೆ ಮಾಯವಾಗಿಲ್ಲ. ಒಂದು ನುಡಿ, ಒಂದು ಕಿಡಿಯಿಂದ ಪ್ರಾರಂಭವಾವ ಮನಸ್ತಾಪ ಕೊನೆಗೆ ಕಾಳ್ಗಿಚ್ಚಾಗುತ್ತದೆ.ತಲೆ ಗಳುರುಳುತ್ತವೆ, ರುಂಡಗಳು ಹಾರುತ್ತವೆ, ರಕ್ತ, ಪ್ರವಾಹ ಪ್ರವಾಹವಾಗಿ ನದಿ ನದಿ ಯಾಗಿ,ಸಾಗರವಾಗಿಪ್ರವಹಿಸುತ್ತದೆ.ಮೊದಲಗಿತ್ತಿಯಂತೆ ಮೆರೆಯುತ್ತಿರುವ ಭೂದೇವಿ, ಸಾಗರಸಾಗರದಷ್ಟು ರಕ್ತವನ್ನು ಕುಡಿದರೂ, ಇನ್ನೂ ಬೇಕು, ಇನ್ನೂ ಬೇಕು ಎಂದು ಕಿರುಚುತ್ತಿದ್ದಾಳೆ. ಈ ನಾಟಕದ ಮೇಳದವರು ಹೇಳಿದ ಹಾಗೆ :

ಮಾಡಿದವನ್ ಆರ್ ಮೊದಲ್ ಯುದ್ಧಮನ್
ಕೂಡಿರ್ಪರೊಳ್ ಕಲಹಮ್ ಒಡ್ಡಿದನ್.
ಓ ಪೊಲ್ಲ ಯುದ್ಧಮೇ, ಎಂದು ನಿಲ್ವಯ್?
ಓ ತಾಯಿ ಶಾಂತಿಯೇ, ಎಂದು ಗೆಲ್ವಯ್?

ಯುದ್ಧ, ಸರ್ಪದುರಿಪಲ್ಲು. ಅಂಥ ಉರಿಪಲ್ಲುಗಳನ್ನು ಬಿತ್ತಿದರೆ, ಬೆಳೆಯುವವು

---

* ಆದಿಕವಿ ಪಂಪ ಇದಕ್ಕೂ ಸ್ಪಷ್ಟವಾಗಿ ಹೀಗೆ ಹೇಳುತ್ತಾನೆ :
ಇದರೊಳ್ ಶ್ವೇತಾತಪತ್ರ ಸ್ಥಗಿತ ದಶದಿಶಾಮಂಡಲಂ ರಾಜಚಕ್ರಂ ।
ಪುದಿದಳ್ಕಾಡಿತ್ತಡಂಗಿತ್ತಿದರೊಳೆ ಕುರುರಾಜಾನ್ವಯಂ ಮತ್ಪ್ರತಾಪ
ಕ್ಕಿದರಿಂದಂ ನೋಡಗರ್ವುರ್ವಿದುದಿದುವೆ ಮಹಾಭಾರತಕ್ಕಾದಿಯಾಯ್ತ
ಬ್ಬದಳಂಕ್ಷೀ ಪೇಳ ಸಾಮಾನ್ಯಮೆ, ಬಗೆಯೆ, ಭವತ್ಕೇಶಪಾಶಪ್ರಪಂಚಂ॥

ಮತ್ತೆ ಉರಿಪಲ್ಲಗಳೇ. ಆದ್ದರಿಂದ, ಯುದ್ಧವನ್ನು ಪ್ರಾರಂಭಿಸಿದವನನ್ನೇ ಹುಗಿಯ ಬೇಕು-

ಪೇರಾಳಕಿಕ್ಕರೇ ನರಕದೊಳ್ ಗಿಡಿದು,
ಯುದ್ಧಮನ್ ನೆಲಕೆ ಬಿತ್ತಿದ ಪರಮಪಾಪಿಯನ್ !
ಸರ್ಪದುರಿ ಪಲ್ಗಳನ್, ಬಿತ್ತಿದಾ ಪಾಪಿಯನ್............
ಆ ಪಾಪಿ ಕಿಡಿಸಿದನ್ ಚೆಲ್ವಾದ ಬಾಳ್ಕೆಯನ್
ಆಟ ಪಾಟಂಗಳನ್, ಪಲಸಿರಿಯ ಮಾಳ್ಕೆಯನ್...........
ಕರ್ಮಮ್ ಈ ಪರಿ ಮರಿಗೆ ಮರಿ ಇಕ್ಕುರ್ತಿರ್ಕುಂ

ಅಶ್ವತ್ಥಾಮ ಈ ಯುದ್ಧಚಕ್ರದಲ್ಲಿ ಸಿಕ್ಕು ನುಚ್ಚುನುರಿಯಾದ ಒಬ್ಬ ಜ್ಞಾನಿ; ಒಬ್ಬ ವೀರ. ಈ ಯುದ್ಧಚಕ್ರದ ಚಲನೆ ನಿಲ್ಲಬೇಕಾದರೆ, ಇನ್ನೂ ಎಷ್ಟು ಜನ ಕರ್ಣಾಶ್ವತ್ಥಾಮರು ತಮ್ಮ ಪವಿತ್ರ ರಕ್ತವನ್ನು ಭೂಮಿಗೆ ಸುರಿಸಬೇಕೊ! ಬಾಳಿನಲ್ಲಿ ಸೌಹಾರ್ದ ಸೌಮನಸ್ಯವನ್ನು ಬಯಸಿದ ಶ್ರೀಯವರು ಯುದ್ಧದ ನಿರರ್ಥಕತೆಯನ್ನು ಸಾರುವುದೂ ಒಂದು ಉದ್ದೇಶವಾಗಿರಬೇಕು. ನಾವೂ ಮೇಳದವರ ಹಾಗೆ, ಕೃಷ್ಣನಲ್ಲಿ ಪ್ರಾರ್ಥಿಸುವುದು :

ಶಾಂತಿಯನು ಕಲಿಸು ಬಾ, ನಿಲಿಸು ಬಾ ತಂದೆ,
ಭಾರತದೆ ಶಾಂತಿಯನು ನಿಲಿಸು ಬಾ ತಂದೆ.

ಯಾಕಂದರೆ,

ಕಳೆಯಂಗೆ ಸೋಲ್ವುದೆ ಜಯಂ
ಕ್ಷಮೆಯೆ ತಾನ್ ಜಯಂ
ಕ್ರೋಧಮನ್ ತುಳಿದಿಟ್ಟು
ಬಲ್ವಿಡಿದು ಧರ್ಮಮನ್
ಬಗೆಯೊಡನೆ ಪೋರಾಡುವುದೆ ಜಯಂ!!

‘ಅಶ್ವತ್ಥಾಮನ್’ದ ಕನ್ನಡ ಹಿನ್ನೆಲೆ, ಕಾವ್ಯಾಂಶ ಇತ್ಯಾದಿ

ಮಹಾಭಾರತಯುದ್ಧ ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ನಡೆದಿದ್ದರೂ, ಕೌರವ-ಪಾಂಡವರು ಉತ್ತರಾಪಥದವರೇ ಆಗಿದ್ದರೂ, ಶ್ರೀಯವರ ‘ಅಶ್ವತ್ಥಾಮನ್’ ನಾಟಕದ ದ್ರೋಣಾಶ್ವತ್ಥಾಮರು ಕನ್ನಡ ನೆಲದವರು, ಬನವಾಸಿಯವರು. ಅವರು ತಮ್ಮ ಬೇಡಪಡೆಯ ಮೇಳದವರೊಂದಿಗೆ ಕುರುಸೇವೆಗಾಗಿ ಉತ್ತರಾಪಥಕ್ಕೆ ಹೋಗಿರುತ್ತಾರೆ. ಅಲ್ಲಿದ್ದರೂ ಸಹ, ಅವರ ಮನಸ್ಸು, ‘ಗಾನದಲಿ, ಎಡರಿನಲಿ’ ನೆನೆಯುವುದು ಬನವಾಸಿಯನ್ನೇ. ಕಾವ್ಯದಲ್ಲಿ ಬನವಾಸಿ ಸ್ಥಿರವಾಗಿ ಪ್ರತಿಷ್ಠಾಪಿತವಾಗಿದೆ. ವಿಜಯಯಾತ್ರೆಗಾಗಿ ಹೊರಟ ಪಂಪನ ಅರ್ಜುನ ದಕ್ಷಿಣಾಪಥದಲ್ಲಿ ಬನವಾಸಿಗೆ ಬಂದು ಅದರ ಸೌಂದರ್ಯಕ್ಕೆ ಮಾರುಹೋಗುತ್ತಾನೆ :

ಸೊಗಯಿಸಿ ಬಂದ ಮಾಮರನೆ, ತಳ್ತೆಲೆವಳ್ಳಿಯೆ ಪೂತಜಾತಿ ಸಂ–
ಪಗೆಯೆ, ಕುಕಿಲ್ವ ಕೋಗಿಲೆಯೆ, ಪಾಡುವ ತುಂಬಿಯೆ, ನಲ್ಲರೊಳ್ಮೊಗಂ
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ, ನೋಳ್ಪೊಡಾವ ಬೆ–
ಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿ ದೇಶದೊಳ್ ॥

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ–
ಳ್ಗಾಗರಮಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿದೇಶದೊಳ್॥

ಅರಂಕುಸವಿಟ್ಟರೂ ಅವನ ಮನಸ್ಸು ಬನವಾಸಿದೇಶವನ್ನೇ ನೆನೆಯುತ್ತದೆ. ರಾಘವಾಂಕನ ಹರಿಶ್ಚಂದ್ರ ಹೇಮಕೂಟಕ್ಕೆ ಬಂದು ತುಂಗಭದ್ರೆಗೆ ನಮಸ್ಕರಿಸುತ್ತಾನೆ.

ಶ್ರೀಯವರಿಗೂ ಸಹ ಮೈಸೂರಿನಂತೆಯೇ, ಉತ್ತರ ದಕ್ಷಿಣ ಕನ್ನಡಗಳು ಅಚ್ಚು ಮೆಚ್ಚು. ಅದರಲ್ಲಿಯೂ ಬನವಾಸಿ ಪ್ರಾಣಪದಕ. ಶ್ರೀಕಂಠಯ್ಯನವರಿಗೆ ಏಕೀಕೃತ ಕರ್ನಾಟಕ ಬರಿಯ ನಕಾಶೆಯ ಅಕ್ಷರವಾಗಿರಲಿಲ್ಲ; ಅದು ಸಜೀವ ಚೈತನ್ಯಶಕ್ತಿಯಾಗಿತ್ತು. ಕರ್ನಾಟಕದ ಎಲ್ಲ ಭಾಗಗಳ ಬಗೆಗೆ ಅವರಲ್ಲಿದ್ದ ಅಭಿಮಾನ ಬರಿಯ 'touch and go' ಅಲ್ಲ. ಅದು ನಿಜವಾದ ಅಂತಃಕರಣ, ಪ್ರೀತಿ, ಅಭಿಮಾನ. ಧಾರವಾಡದಿಂದ ಪ್ರಕಟಿತವಾದ 'ಅಭಿನವ ಪಂಪ'ಗ್ರಂಥಕ್ಕೆ (೧೯೩೪) ಮುನ್ನುಡಿ ಬರೆಯುವಾಗ ಅವರು ಹೇಳುತ್ತಾರೆ–"ನಾಗಚಂದ್ರಕವಿ (ಇವ ವಿಜಾಪುರದವ) ಕನ್ನಡವಲ್ಲಿ ನನ್ನ ಮೊದಲನೆಯ ಒಲುಮೆ; ಧಾರವಾಡನಗರದಲ್ಲಿ ನನ್ನ ಕನ್ನಡ ತೊಳಲಿನ ಮೊದಲನೆಯ ಮಾತು" (ಇದು ಅವರು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಡಿಸೆಂಬರ್ ೧೯೧೧ ರಂದು ಮಾಡಿದ ಭಾಷಣವನ್ನು ಸೂಚಿಸುತ್ತದೆ.)

ಶ್ರೀಯವರು ಕನ್ನಡದೇವಿಯ ಸಮಗ್ರ ಚಿತ್ರವನ್ನು ಕಂಡದ್ದು ಉತ್ತರದ ಹಂಪೆಯಲ್ಲಿ-ಷಟ್ ಸಾಂವತ್ಸರಿಕ ಉತ್ಸವದ ಸಮಾರಂಭದ ಕಾಲದಲ್ಲಿ. ಹೀಗಾಗಿ ಉತ್ತರ ಕರ್ನಾಟಕ, ಉತ್ತರ–ದಕ್ಷಿಣ ಕನ್ನಡಗಳು ಅವರಿಗೆ ಅನೇಕ ಸಲ ಸ್ಫೂರ್ತಿಯನ್ನು ಒದಗಿಸಿವೆ. ಬಳಸಿ ಬಂದೆನು ಸುತ್ತ ಕನ್ನಡದ ನಾಡುಗಳ ಸಿರಿಯ ನೋಡುತ್ತ, ತಾಯಡಿಯ ಹುಡಿಯ ತಲೆಗಾನುತ್ತ, ಹರಕೆಯ ಪವಿತ್ರ ಯಾತ್ರೆಯಲಿ. ಏನು ಚೆಲುವಿನ ನಾಡು ಚೆಲುವ ಕನ್ನಡ ನಾಡು! ಕನ್ನಡದ ನಾಡು! ಏನು ಚಿನ್ನದ ನಾಡು! ನನ್ನೊಲುಮೆಯಾ ನಾಡು! ಕನ್ನಡದ ನಾಡು!!

ಉತ್ತರ-ದಕ್ಷಿಣ ಕನ್ನಡ! ಓಹೊ! ಏನು ಸೌಂದರ್ಯ ಪಾವಿತ್ರ್ಯಗಳ ಬೀಡು!!

ಚೆಲುವು ಕಣಿ ಕಾರ್ವಾರವೆದೆ ತುಂಬಿ, ಗೋಕರ್ಣದಲಿ ಮಿಂದು, ಸಂದು,
ಉಡುಪಿಯಲಿ ಕೃಷ್ಣಂಗೆ ಕೈಮುಗಿದು, ಮಂಗಳೂರಿನ ಹಿರಿಯನಂಟರಲಿ ನಿಂದು,
ಚಾರ್ಮಾಡಿ ಘಾಟಿಯನು ಬಳಬಳಸಿ ಮೇಲೇರಿ ಬಂದವನು ಕಂಡೆ, ಕಂಡೆ!
ಮೇಲೆ ತಿಳಿಯಾಕಾಶ, ಸುತ್ತಲೂ ಬೆಟ್ಟಸಾಲ್-ತೋಳ ತೆಕ್ಕೆಯಲಿ
ಕಣಿವೆಯೇರುವ ಕಾಡು, ದಟ್ಟಡವಿ, ಒಮ್ಮೊಮ್ಮೆ ಹಕ್ಕಿಗಳ ಹಾಡು!

ಇಲ್ಲಿಯೇ, ಅವರಿಗೆ ಕನ್ನಡ ತಾಯಿಯ ಪ್ರಥಮ ದರ್ಶನವಾದದ್ದು- ಅಂತೆಯೇ, 'ಅಶ್ವತ್ಥಾಮನ್' ನಾಟಕದ ಅಶ್ವತ್ಥಾಮ ತನ್ನ ತಾಯ್ನಾಡಿನಲ್ಲಿ ತನ್ನ ಕಣ್ಣು ಮುಚ್ಚಬೇಕೆಂದು ಬಯಸಿದಾಗ, ಅಲ್ಲಿಗೆ ಹೋಗುವ ಭಾಗ್ಯ ತನಗಿಲ್ಲವಲ್ಲಾ ಎಂದು ಪರಿತಪಿಸುತ್ತಾನೆ. ಸರ್ವವಿಧದಲ್ಲಿಯೂ ಹತನಾದ ಅಶ್ವತ್ಥಾಮನಗೆ ಕೊನೆಗೆ ತನ್ನ ತಾಯ್ನಾಡಿನಲ್ಲಿ ಪ್ರಾಣಬಿಡುವ ಪುಣ್ಯವೂ ಇಲ್ಲದಾಗಿದೆ :

ಓವೊ, ಕನ್ನಡ ನಾಡೇ,
ಮುನ್ನೀರ ಮೊಳಂಗು ಕರೆನಾಡೇ,

ಮಲೆನಾಡೆ, ಪೊನಲ್‌ನಾಡೆ, ಬಯಲ ಪೊನ್‌ನಾಡೇ,

ಪಲಕಾಲಮ್ ಆನ್ ಅಗಲ್ದಿರ್ದ್ದನ್.

ಅಲ್ಲಿ ಕಣ್ಮುಚ್ಚಲೆಂದಿರ್ದೆನ್.

ಇಲ್ಲಮೆನಗಾ ಪುಣ್ಯಂ, ಓ ಚೆಲ್ವು ನಾಡೇ!

ಎಂದು ಹಲಬುತ್ತಾನೆ. ಅವನ ಅಜ್ಜಿ ಭಾರ್ಗವಿಗೂ ಸಹ ಈ ಕನ್ನಡನಾಡಿನ ಬಗ್ಗೆ ಅಷ್ಟೇ ಮಮತೆ. ನೀನು ಸುಮ್ಮನೆ ವ್ಯಥೆಪಡಬೇಡ. ಮರಳಿ ನಮ್ಮ ದೇಶಕ್ಕೆ ಹೊಗೋಣ "ತವರಡವಿನೆಳಲೊಳ್ ಸಮರುವಂ ಮುರಿದೆರಕೆಯಾತ್ಮಮನ್, ತಪಮೆಸಗಿ" ಎಂದು ಅವನನ್ನು ಕೇಳಿಕೊಳ್ಳುತ್ತಾಳೆ. ಅಶ್ವತ್ಥಾಮನ ಪಡೆಯ ಮೇಳದವರಿಗೂ ಸಹ ಬನವಾಸಿ ಅಂದರೆ ಅಷ್ಟು ಪ್ರೀತಿ :

ಚೆಲ್ವಿನ ನೆಲೆ; ಕಣ್ಗಳ ಬಲೆ, **ಸುಖದೊರತೆಯು ಬನವಾಸೀ,**

ಬಳೆದಲೆದಾ ಕಾನ್ ಮಲೆಗಳನ್ ಆನ್ ಮರೆವೆನೆ ಬನವಾಸೀ!

ಭಾರತದೀ ಸುಳಿಗಾಳಿಗೆ ಸಿಲ್ಕುತೆ ನಾನ್ ತರಗಾದೆನ್;

ಪೆರೆ ತುಂಬುತೆ, ಪೆರೆ ತೇಯುತೆ, ಮನೆಗಾಣದೆ ಬಡವಾದೆನ್;

ನಿನ್ನನೆ ನೆನೆನೆನೆದೋ ತಾಯ್ ಪಂಬಲಿಸುವ ನೋವೊಂದೇ!

ಇನ್ನೆನಗೇನ್ ಆಸೆಗಳೋ, ಪಾರ್ವುದು ನಾನ್ ಸಾವೊಂದೇ!

* *

ಪೆರ್ಮೆಯ ನೆಲೆ, ಪಡುಗಡಲಲೆ, **ಸುಖನೊರಚುವ ಬನವಾಸಿ,**

ನೀನ್ ಕಳಿಪಿದ ಪೇರಾಳ್ಗಳ್ ಅದೇನಾದರ್ ಬನವಾಸೀ,

ಖಡ್ಗದ ಮೇಲೆ ಬಿದ್ದು ದೇಹತ್ಯಾಗವನ್ನು ಮಾಡುವ ಕಾಲಕ್ಕೂ ಕೂಡ, ಅಶ್ವತ್ಥಾಮ ನೆನೆಯುವುದು ಕನ್ನಡನಾಡನ್ನು. ಬನವಾಸಿಯನ್ನುಃ

ಓ ಬೆಳಕೆ, ಓಪುಣ್ಯ ಭೂಮಿಯೇ, ಕನ್ನಡವೇ, ಎನ್ನ ತಾಯ್ನಾಡೆ,

ನೆಲನ್ ಅರಿವ ಬನವಾಸಿ, ತೆಂಗುಗರಿ ಕೊಡೆಯಿರ್ಪ ಕಡಲುಲಿಯ ಮುಸಿಯೋ,

ಒಡನಾಡಿ ಪಸಂಗಳೆ, ಕರೆಗಳೆ, ಪೊನಲ್ಗಳೇ, ಓ ಪಸುರ ಬಯಲೆ,

ಬೀಳ್ಕೊಡಿಂ, ಬೀಳ್ಕೊಡಿಂ, ಎನಗೆ ಜೀವಾನಂದವ್ ಆಗಿರ್ದರ್' ಎಲ್ಲರ್,

ಬೀಳ್ಕೊಡಿಂ, ಹೋಗಿ ಬರ್ಪೆನ್.

ಏನು ಸಮ್ಮೋಹನ ಶಕ್ತಿ ಬನವಾಸಿಯದು! ಶ್ರೀಕಂಠಯ್ಯನವರು ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಸ್ಥಾನವನ್ನು ತೆರವು ಮಾಡುವ ಕಾಲಕ್ಕೂ ಸಹ ಕಾರುಣ್ಯ ಪೂರ್ಣವಾಗಿ ಹೇಳಿದ್ದು : ಬೀಳ್ಕೊಡಿಂ, ಬೀಳ್ಕೊಡಿಂ, ಎನಗೆ ಜೀವಾನಂದಮ್

ಆಗಿರ್ದರ್ ಎಲ್ಲರ್–ಎಂದೇ. ರೋಮ್ ನಗರ ಪಾಶ್ಚಿಮಾತ್ಯ ಕವಿಗಳ ಆತ್ಮಾಕರ್ಷಣೆಯ ಸ್ಥಾನವಾಗಿತ್ತಂತೆ, ಷೆಲಿ, ಬೈರನ್, ಕೀಟ್ಸ್–ಎಲ್ಲ ಕವಿಗಳೂ ಅದರ ವರ್ಣಣೆಮಾಡಿದ್ದೇ ಮಾಡಿದ್ದು. ಹಾಗೆಯೇ. ಅನೇಕ ಕನ್ನಡ ಕವಿಗಳಿಗೆ, ಸುಖದೊರತೆಯ, ಸುಖಮೆಳಚುವ ತೆಂಗುಗರೆ ಕೊಡೆಯಿರ್ವ, ಕಡಲುಲಿಯ ಮನೆ, ಆಹ್ಲಾದಕರವಾದುದು. ವರಕವಿ ಬೇಂದ್ರೆಯವರ ಈ ಮೆಲ್ಲುಲಿ ಸಹ, ಬನವಾಸಿಯಷ್ಟೇ ಮೋಹಕವಾಗಿದೆ :

ಏಲಾವನ ಲವಲೀಬನ, ಲವಂಗಬನಗಳಲಿ,
ನಾಗಲತಾಸಂಕುಲ ಬನವಾಸಿಯ ಜನಗಳಲಿ
ಲೀಲಾಂದೋಲಿತ ದೋಲಾಲಲನಾಮಣಿಗಳಲಿ—

ಏಲಾಪದ, ಲೀಲಾಪದ ಆಲಾಪದ ಸರಣಿ
ಸಖಿ ಸಖಿಯರ ಮೇಳಾಪದೆ ತೆರೆದಿರೆ ಎದೆಭರಣಿ
ಆಲಿಸುತಿವೆ, ಮಾಲಿಸುತಿವೆ, ಹರಿಣದ ಜತೆ ಹರಿಣಿ,

ಓ ಇಣನಮಾ, ಅಂಜ್ಞಂ ಓಂ ಯಂ, ಸಂ ಝಂ ಎಂಬಾ
ಅಂಬಾಗರೆವುದು ಪಾಣಿಯ ವೀಣೆಯು ಬಾಯ್ತುಂಬಾ
ಬಾ ಅಮ್ಮಾ, ಅಮ್ಮಾ ಬಾ, ಬಾರೌ ಜಗದಂಬಾ,

ಉಸಿರುಸಿರಲಿ ಸರಿವರಿದೂ ಊದೂಡುತ ನಲಿದು
ದನಿಯೋ ನದಿಯೊಲು ಚಲಿಸಿತು ಕೊಂಕೊಂಕೆನೆ ಒಲಿದು
ಅಲೆಯಾಯಿತು, ಬಲೆಯಾಯಿತು, ಜಗದಗಲಕೆ ಸೆಳೆದು.

ವಾಹವ್ವಾ ಬನವಾಸೀ, ಏನು ಮೆಚ್ಚುಗೆ ನಿನಗೆ ಕವಿಗಡಣದಿಂದ! ಆದಿಕವಿ ಪಂಪನಿಂದ ಶ್ರೀ ಅಂಬಿಕಾತನಯದತ್ತರ ವರೆಗೂ ಮುಕ್ತಕಂಠದ ಪ್ರಶಂಸೆ ಗಳಿಸಿದ ನೀನೇ ಧನ್ಯೆ!!

೨

'ಅಶ್ವತ್ಥಾಮನ್'ದಲ್ಲಿ ವ್ಯಕ್ತವಾದ ಕನ್ನಡದ, ಬನವಾಸಿಯ,' ಅಭಿಮಾನ, ಈ ರೀತಿಯದಾಗಿದ್ದರೆ, ಈ ನಾಟಕದಲ್ಲಿ ಅನೇಕ ಸಾಹಿತ್ಯಾಂಶಗಳನ್ನು ಕಾಣುತ್ತೇವೆ.

'ಅಶ್ವತ್ಥಾಮನ್' ನಾಟಕ. ನಾಟಕ ದೃಶ್ಯ–ಕಾವ್ಯ. ಅದರಲ್ಲಿ ಕಾವ್ಯಗುಣ ಇರಬಹುದು. ಆದರೆ, ದೃಶ್ಯಗುಣವೂ ಸಂಭಾಷಣೆಯ ಸೊಗಸೂ ಅಷ್ಟೇ ಮಟ್ಟಿನದಿರಬೇಕು. ಇಂಥ ಸಂಭಾಷಣಾ ಸೊಗಸನ್ನು, ನಾಟಕೀಯ ವ್ಯಂಗ್ಯವನ್ನೂ, ನಾವು ಈ ನಾಟಕದಲ್ಲಿ ಅನೇಕ ಕಡೆಗೆ ಕಾಣುತ್ತೇವೆ.

ಕೃಷ್ಣನಿಗೆ ಅಶ್ವತ್ಥಾಮನ ಸ್ಥಿತಿಯನ್ನು ತೋರಿಸಬೇಕೆಂದು ರುದ್ರ ಅಶ್ವತ್ಥಾಮನನ್ನು ಕರೆಯುವ ರೀತಿಯಲ್ಲಿ ನಾಟಕೀಯ ವ್ಯಂಗ್ಯವಿದೆ (Dramatic irony). ಪಾಪ, ಅವನನ್ನು ಅಷ್ಟು ಮೂರ್ಖನನ್ನಾಗಿ ಮಾಡಿ. ರುದ್ರ ಕರೆಯುವುದು ಈ ರೀತಿ :

ಬಾರ, ಬೀರರ ಬೀರ, ದೈವಮನ್ ಲೆಕ್ಕಿಸದ ರುದ್ರಾವತಾರ! ಅವನ ಹಿರಿಮೆಯನ್ನೆಲ್ಲ, ನೆಲಕ್ಕೆ ಕೆಡವಿ, ಹುಡಿಯಲ್ಲಿ ಹೊರಳಾಡುವಂತೆ ಮಾಡಿದ ರುದ್ರ ಹೇಳುವುದು— ಇಂದಿದೇನ್ ಇನಿತೊಂದು **ಮಿತ್ರನೊಳ್** ಅನಾದರಂ?

ಪಾಪ! ಅಶ್ವತ್ಥಾಮ, ಕೃಷ್ಣನೆಂದೇ ಭಾವಿಸಿ ಕುರಿಯನ್ನು ಕವುಂಕಳಲ್ಲಿ ಹಿಡಿದುಕೊಂಡು, ಹುಚ್ಚನ ಹಾಗೆ, ಭೂತಸಂಚಾರವಾದವನ ಹಾಗೆ, ನಗುನಗುತ್ತ ತನ್ನ ಬಿಡಾರದಿಂದ "ಗೆಲುವು! ಗೆಲುವು ಗೆಲುವೋ ರುದ್ರ!" ಎನ್ನುತ್ತ ಹೊರಬರುತ್ತಾನೆ. ಬಿದ್ದವನನ್ನೇ ಇರಿಯುನ ರೀತಿಯಲ್ಲಿ, ರುದ್ರ ಪುನಃ "ಹಾಗಾದರೆ, ಭೀಮಾರ್ಜುನರೆಲ್ಲ ಸತ್ತರೆ? ಇನ್ನು ಹುಟ್ಟಲಾರರೆ? ಅದಿರಲಿ! ....

ಆ ಪಾಂಡವರ್ ಪ್ರಾಣಮ್ ಎಂದಿರ್ದನೇ

ಅವನ ಗತಿ ಏನಾಯ್ತು? ಕೈ ನುಣ್ಣಕೊಂಡನೋ?" ಎಂದು ಕೇಳುತ್ತಾನೆ. ಬಿದ್ದವನಿಗೆ ಮತ್ತಷ್ಟು ಹುಚ್ಚು ಹಿಡಿಯುವ ಹಾಗೆ ಮಾಡುತ್ತಾನೆ.

ಏನಾದನ್ ಆ ಗುಳ್ಳೆನರಿ ಎಂದು ಕೇಳ್ದಿಯಾ?
ರುದ್ರ : ಅಪ್ಪುದು ಆ ಕೃಷ್ಣನ್. ನಿಮಗೆಲ್ಲಮ್ ಇರಿವ ಮುಳ್.
ಅಹ್! ಒಳಗಿರ್ಪನ್! ಸವಿಯಸೆರೆ, ಸವಿಯ ಸೆರೆ ಎನಗೆ.

ಅವನ ಈಗಳೆ ಕೊಲ್ಲೆನ್ **ಎನ್ನ ದೊರೆ**

ರುದ್ರ : ಏನ್ ಮಾಳ್ಡೆ?...........

ಅ : ಎನ್ನ ಗೂಡಾರದ ಕಂಬಕ್ಕೆ ಬಿಗಿದು–

ರುದ್ರನ್ : ಬಿಗಿದು...........

(ಇಲ್ಲಿ ನಾಟಕೀಯವಾದ ಸಂಭಾಷಣಾ ಸೊಗಸನ್ನು ಗಮನಿಸಬೇಕು ಬಿಗಿದು ....)

ಅ : ಈ ಚಮ್ಮಟಿಗೆ ಸುಲಿದು, ಬೆನ್ ಪಸುರ್ಗಟ್ಟಿ......

ರು : ಪಾಪ, ರಾಸಕ್ರೀಡೆಯಾಡುವೊನ್ ಪೆಣ್ದಿರೊಳ್!

(ಎಂಥ ಕ್ರೂರವಾದ ವಿನೋದವಿದು!! ಯಾರಿಗಾದರೂ ಬೇಕಾದಂಥ ಹಿಂಸೆಯನ್ನು ಮಾಡಬಹುದು ಅಶ್ವತ್ಥಾಮಾ! ಆದರೆ, ಪಾಪ ಕೃಷ್ಣನಿಗೆ ಹೀಗೆ ಹಿಂಸೆ ಮಾಡುವುದೆ! ಹೆಣ್ಣುಮಕ್ಕಳ ಕೂಡ ರಾಸಕ್ರೀಡೆಯಾಡುವ ಮೆತ್ತಗಿನ ಮನುಷ್ಯನಿಗೆ? ರಾಸಕ್ರೀಡೆ ಆಡುತ್ತಾನೋ?....)

ಅ : ಆಡಿಪೆನ್, ಆಡಿಪೇನ್ ನೀರ್ ಕೇಳೆ, ಪೊಯ್ದು ಪೊಯ್ದು, ಪಾಡಿಪೆನ್.

ರು : ಬೇಡ, ಹಿಂಸಿಸಬೇಡ, ಆ ಬಡವು ಗೋಪನನ್.

ಅ : ಮತ್ತೇನೆ ಕೇಳ್, ರುದ್ರ, ಕೊಟ್ಟಪೆನ್, ಇದೊಂದಿಲ್ಲ.
ಇಂತೆ ಸಾಯಲ್ ವೇಳ್ಕುಂ ಆ ತಂತ್ರಿ,
ರು : ...ನಲಿ, ಪೊಯ್ಯು....ನಲಿ ಪೋಗು, ನಲಿ....

ಏನನ್ನು ಕೊಚ್ಚಿ ಅಶ್ವತ್ಥಾಮ ನಲಿಯಬೇಕು? ಕೃಷ್ಣನನ್ನಲ್ಲ, ಹುಚ್ಚು ಕುರಿಮರಿಯನ್ನು!! ಬೀಡಾರಕ್ಕೆ ಮರಳುವ ಅಶ್ವತ್ಥಾಮ ರುದ್ರನಲ್ಲಿ ಪ್ರಾರ್ಥಿಸುವುದೇನು?

ಒಂದನ್ ಎರೆವೆನ್, ರುದ್ರ,

ಇಂದಿನವೊಲ್ ಏಗಳುಂ ಕಯ್ಬಿಡದೆ ಕಾಪಾಡು.

ಎಂಥ ಕ್ರೂರ ನಾಟಕೀಯ ವ್ಯಂಗ್ಯ! ಕೇವಲ ಸ್ವಲ್ಪ ತಪ್ಪಿಗಾಗಿ ಇಂಥ ಘೋರ ಶಿಕ್ಷೆಗೆ ಗುರಿಯಾದವ, ಆ ಶಿಕ್ಷೆಗೆ ಗುರಿಮಾಡಿದವನನ್ನು

ಇಂದಿನವೊಲ್ ಏಗಳುಂ ಕಯ್ಬಿಡದೆ ಕಾಪಾಡು–

ಎಂದು ಪ್ರಾರ್ಥಿಸುತ್ತಾನೆ. ದೈವವೇ ಮುನಿದರೆ, ದೈವವೇ ತಮಾಷೆಮಾಡಲು ಪ್ರಾರಂಭಿಸಿದರೆ, ಬಾರಿಪರಾರ್. ಮುನ್ನೀರ್ ಬೆನ್ನೀರ್ ಎನೆ ಅಣ್ಣ, ಆರಿಸಲ್ ತಣ್ಣೀರ್ ಒಳವೆ? ಕಾವರೆ ಕಣೆಗೊಂಡರೆ ಹೇಗೆ?

ಹಾಗೆಯೇ, ಅಶ್ವತ್ಥಾಮ ತನ್ನ ಮಗ ರುದ್ರಶಕ್ತಿಯನ್ನು ಕರೆದು ಅವನಿಗೆ ಬಿಲ್ಲವಿದ್ಯೆಯನ್ನು ಬೋಧಿಸಿ, ಅವನನ್ನು ಆಶೀರ್ವದಿಸುವಲ್ಲಿ ಕಾರುಣ್ಯವಿದೆ. ನಾಟಕೀಯ ಗುಣವಿದೆ.

—ಬಾ ರುದ್ರಶಕ್ತಿ, ಪಿಡಿ, ಈ ಬಿಲ್ಲನ್ ಅಂಬುಮನ್...ಪಿರಿಯ ದೇವತೆಗಳಿಂ ಬಂದುದಿದು-ಪರಶುರಾಮನದು-ದ್ರೋಣನದು-**ನಿನ್ನತಂದೆಯುದು–ಮೆಲ್ಲಗೆ ಯ್ಗಳಿನ್** ಪಿಡಿಯ ಈ ದಿವ್ಯಧನುವನ್–ಆಹ, ಎಲ್ಲಿ? .... ಪೂಡು .... ಒಂದಂಬನ್.... ಇಂತಿಂತು....ನಲ್ಲದಹ! ನಲ್ಲದು!! ಗೆಲ್! ಗೆಲ್!!–ತಂದೆಯಿನ್ ಕಂದ, ಮೇಲಾಗು ಅದೃಷ್ಟದೊಳ್; ಮಿಕ್ಕೆಲ್ಲ ನಡತೆಯೊಳ್ ಅವನಂತೆ ಆಗು. ಪಳಿತೊಡದ ಪಿರಿಯ ಪೆಸರಾಗು, ಏನ್ ಸುಖಮ್, ಏನ್ ಶಾಂತಿ, ಮುಖದೊಳ್,

೩

ಕಾವ್ಯ ಮತ್ತು ನಾಟ್ಯಗುಣ ಸಾಹಿತ್ಯಕೃತಿಯಲ್ಲಿ ಸಮ್ಮಿಳಿತವಾಗಿರುವುದು ಕಷ್ಟಸಾಧ್ಯ. 'ಅಶ್ವತ್ಥಾಮನ್'ದಲ್ಲಿ ಕಾವ್ಯ ಮತ್ತು ನಾಟ್ಯಗುಣ ಎರಡೂ ಸುಂದರವಾಗಿ ಸಮ್ಮಿಳಿತವಾಗಿವೆ, ಈ ನಾಟಕದಲ್ಲಿ ಬರುವ ಕಾವ್ಯಾಂಶವುಳ್ಳ ಅನೇಕ ಸಾಲುಗಳನ್ನು ತತ್ವ ಬೋಧಕವಾದ ವಾಕ್ಯಗಳನ್ನು ಉದಾಹರಿಸಬಹುದು :

—ಮದಿಸಿತಾನ್ ನಕ್ಕಾನ್, ಆನ್ ನಕ್ಕೆನ್,
—ಏನ್ ಪಾಡೊ ಆಳ ಬಾಳ್! ಬೀಸುವ ಬಯಲ್‌ಗಾಳಿ, ಪರಿದಡುಗುವ ನೆಳಲ್!

—(ದೈವಂ) ಒಂದು ಪಗಲ್ ಎತ್ತುವುದು, ಒಂದು ಪಗಲ್ ಉರುಳಿಪುದು.
—ಮಿತಿಯರಿದು ನೆಗಳ್ವರ್ಗೆ ಒಸೆದಪರ್-ಮುರಿದಪರ್ ಮಿಕ್ಕರನ್!
—ಕೀರ್ತಿಯನ್, ಒರ್ಮೆಯೆ ಕೊರಲನ್ ಮುರಿದನ್.
—ಮರ್ದಲ್ತು ಪೊಲೆಗೆ ಪೊಲೆ.
—ದೈವಂ ತಪ್ಪಾಗಿ ನಡಸುವೊಡೆ, ಕಲಿ ಎಡಪುವನ್, ಪೇಡಿಯುಂ ಬದುಕುವನ್.
—ತಕ್ಕನ್ ತಕ್ಕವೊಲ್ ಬಾಳ್ದಪನ್, ತಕ್ಕವೊಲ್ ಸತ್ತಪನ್.
—ತಂದೆಯಿನ್, ಕಂದ, ಮೇಲಾಗು ಅದೃಷ್ಟದೊಳ್!
—ಅರಿಯಮೆಯೇ ಸುಖಂ.
—ಅಳ್ಕೆ ಪೆಣ್,
—ದೇವತೆಗಮ್ ಎನಗಮ್ ಇರ್ದ ಋಣಂ ಪರಿದು ಪೋಯ್ತು....
—ಬಾಳ್ ಬರಿಯದಾದಂದು, ಸಾವು ತಾನ್ ಪೂರ್ಣಂ.
—ಪಗೆಯ ಮೆಚ್ಚೊಂದು ಮೆಚ್ಚಲ್ತು.
—ಮನುಜಂಗೆ ಸ್ನೇಹವೆಂಬುದು ಪುಸಿಯ ನಚ್ಚು.
—ದೇವತೆಯ ಬಲಮ್ ಇರ್ದೊಡಯ್ಯ, ಪೇಡಿಯುಂ ಗೆಲ್ದಪನ್
—ಅಶ್ವತ್ಥಾಮನ್ ಇರ್ದ ಮೊನೆ ಮುರಿಯದು.
—ಆಳಾಗಿ ಪುಟ್ಟಿ, ಆಳ್ಗೆ ಮೀರಿದ ಪೆರ್ಮೆ ಬಗೆ....
—ಪ್ರಾರ್ಥಿಪುದು ಸಾವರ್ಗೆ ಧರ್ಮಂ.
—ಪಿಳ್ಳೆಪೆಸರಿಲ್ಲಾಯ್ತು ಕೌರವಕುಲಶ್ರೀ.
—ಬಲಿಯಾಯ್ತು ಭಾರತಕೆ ತಂದೆಮಕ್ಕಳ ಬರ್ದುಕು.
—ಸತ್ತರೊಳ್ ಪುರುಡಿಸುವ ಶೂರರ್ ಇರ್ಪರ್ ಕೆಲರ್.
—ನುಡಿಯಿಸಲ್ ಬಲ್ಲಂಗೆ ಬಿಲ್ಲೊಂದು, ಮೇಣ್ ಬೀಣೆಯೊಂದು.
—ಬಡಪಾರ್ವರೊಳ್ ಬೆಳೆದು ಬಾಯಬಡಿವುದನ್ ಕಲ್ತೆ.
—ಓ ಪೊಲ್ಲ ಯುದ್ಧಮೇ, ಎಂದು ನಿಲ್ವಯ್?
—ಓ ತಾಯೆ ಶಾಂತಿಯೇ, ಎಂದು ಗೆಲ್ವಯ್?
—ಕರ್ಮಮ್ ಈಪರಿ ಮರಿಗೆ ಮರಿ ಇಕ್ಕುತಿರ್ಕುಂ
ಕ್ಷಮೆಯಿಂದೆ ಸಮೆಯದಿರೆ ಮರುಕೊಳಿಸುತಿರ್ಕುಂ.
—ದ್ವೇಷಮ್ ಎನಿತಿರ್ದೊಡಂ ತುಳಿಯದಿರು ಧರ್ಮಮನ್.
—ಕಲಿ ಸಾಯೆ, ಪಗೆಗಳುಂ ಪೊಗಳ್ವುದು ಶೀಲಂ.
—ಕೆಳೆಯಂಗೆ ಸೋಲ್ವುದೆ ಜಯಂ, ಕ್ಷಮೆಯೆ ತಾನ್ ಜಯಂ.

ಮೇಲಿನ ಎಲ್ಲ ವಾಕ್ಯಗಳಲ್ಲಿ ಎಂಥ ಉದಾತ್ತ ಬೋಧೆ ಅಡಗಿದೆ ಎಂಬುದನ್ನು ಕಾಣುತ್ತೇವೆ.

'ಅಶ್ವತ್ಥಾಮನ್' ನಾಟಕದಲ್ಲಿ ಕಂಡುಬರುವ ಕಾವ್ಯಾಂಶಕ್ಕಾಗಿ ಈ ಕೆಳಗಿನ ಉದಾಹರಣೆಗಳನ್ನು ಕೊಡಬಹುದು :

—ತವರಡವಿ ನೆಳಲೊಳ್ ಸಮರುವಂ, ಮುರಿದೆರಕೆಯಾತ್ಮಮನ್.

—ಕೊರೆಪಲ್ಲ ಕುಳಿರ ಹೇಮಂತನ್ ಪೊಳ್ತು ಬರೆ, ಮುಪ್ಪಾಗಿ,
ಎಳಚಿಗುರ ಚೈತ್ರಂಗೆ ಬಳಿವಿಟ್ಟು ಪೋಕುಂ.
ಕಾರ್ ಮುಸುಕು ರಾತ್ರಿ ಬೆಳ್ಗುದುರೆಗಳ ಸೂರ್ಯಂಗೆ ಬೆನ್ನಿತ್ತು ಸರಿಗುಂ.

—ಪೇರಾಳಕಿಕ್ಕರೇ, ನರಕದೊಳ್ ಗಿಡಿದು, ಯುದ್ಧಮನ್ ನೆಲಕೆ ಬಿತ್ತಿದ
ಪರಮ ಪಾಪಿಯನ್! ಸರ್ಪದುರಿಪಲ್ಗಳನ್ ಬಿತ್ತಿದ ಪಾಪಿಯನ್!
ಆ ಪಾಪಿ ಕಿಡಿಸಿದನ್ ಚೆಲ್ವಾದ ಬಾಳ್ಕೆಯನ್
ಆಟ ಪಾಟಂಗಳನ್, ಪಲಸಿರಿಯ ಮಾಳ್ಕೆಯನ್.

—ಮೇಳದವರು ಹಾಡಿದ–

ಹೋ ಆನಂದಂ! ಪೇರಾನಂದಂ!
ನಗೆವಾ ಕುಣಿವಾ ಮಿಗುವಾನಂದಂ!

ಓ ಶಿವ, ಬಾರಯ್
ಓ ಶಿವ, ಬಾರಯ್

ಬೆಳ್ಳಿಯ ಬೆಟ್ಟದ ಕೋಡಿನ ಬೀಡಿನ್
ತೆಂಕಣ ನಾಡಿನ ಕೋಯಿಲ್ ಕೋಡಿನ್
ಒಂದೇ ನೆಗೆತಂ ನೆಗೆಯುತ ಬಾರಯ್.......

ಲೋಕಂ ಪುಟ್ಟಲ್, ಲೋಕಂ ಸಾಯಲ್
ದೇವತೆಗಳ ಗುಣಮೆಲ್ಲಂ ಪಾಯಲ್

ಎಂಬ ಭಾಗವು ಈಗಾಗಲೇ, ಒಂದು ಪ್ರತ್ಯೇಕ ಕವನವೇ ಎಂಬಂತೆ ಪ್ರಚಲಿತವಾಗಿದೆ ಜನಪ್ರಿಯವಾಗಿದೆ,

ಕೇವಲ ೧೨ ಪುಟಗಳ ಈ ಚಿಕ್ಕ ಪುಸ್ತಕದಲ್ಲಿ ಇಂಥ ಉದಾತ್ತವಾದ ಜೀವನ ತತ್ವವನ್ನು, ಇಂಥ ಅದ್ಭುತವಾದ ಪಾತ್ರಸೃಷ್ಟಿಯನ್ನು, ಸುಂದರವಾದ ನಾಟಕೀಯತೆಯನ್ನು, ನಾಟಕೀಯ ವ್ಯಂಗ್ಯವನ್ನು, ಸುಲಲಿತವಾದ ಚಿತ್ರಪೂರ್ಣವಾದ ಕಾವ್ಯಾಂಶವನ್ನು ಕೊಟ್ಟ ಬಿ. ಎಂ. ಶ್ರೀಯವರನ್ನು ಕನ್ನಡ ಜನತೆ ಕೃತಜ್ಞತೆಯಿಂದ ನೆನೆಯಬೇಕು, ನೆನೆಯುತ್ತಿದೆ. ●

ಪರಿನಿರ್ವಾಣ



ಬಿ. ಎಂ. ಶ್ರೀಯವರ ಅಂತ್ಯದರ್ಶನ
(ಧಾರವಾಡ, ೫-೧-೧೯೪೬)

ಶ್ರೀ ಅವರ ಕೊನೆಯ ನಿಮಿಷಗಳು *

"ಋತವೊಂದೆ ಗೆಲ್ಲುವದು, ಅನೃತವಲ್ತು;
ಅಮೃತಮೆನೆ ವಿದ್ಯೆಯೆ; ಅವಿದ್ಯೆಯಲ್ತು;
ವಿಶ್ವಭಾರತಿ ಶರಣು, ಕಿರುತೀರ್ಥವಲ್ತು".

—ಶುಕ್ರಗೀತೆ

ದಿವಂಗತ ಪ್ರಿನ್ಸಿಪಲ್ ಶ್ರೀಕಂಠಯ್ಯನವರ ಜೀವಂತಧ್ವನಿಯನ್ನು ಕೊನೆಯ ವರೆಗೂ ಕೇಳಿ, ಅವರ ತುಂಬು ಆಶೀರ್ವಾದವನ್ನು ಶಿರದಲ್ಲಿ ಧರಿಸುವ ಪುಣ್ಯ ಪ್ರೊ. ಮುಗಳಿ ಅವರ ಮತ್ತು ನನ್ನದಾಗಿತ್ತು.

ಆ ಶನಿವಾರ (ತಾ॥ ೫-೧-೧೯೪೬) ಮುಕ್ಕಾಲು ಗಂಟೆಯವರೆಗೂ ಶ್ರೀಯವರು ಮಾತನಾಡಿದರೂ, ಎಲ್ಲಿಯೂ ಅವರ ಧ್ವನಿ ಕುಂದಲಿಲ್ಲ; ಉತ್ಸಾಹ ಕಡಿಮೆಯಾಗಲಿಲ್ಲ. ಎಂದಿನಂತೆ ಅವರದೇ ಮಾತಿನ ಪ್ರಮುಖ ಪಾತ್ರ. ಅದೇ ಆ ಗಾಂಭೀರ್ಯ, ಅದೇ ಅಂತಃಕರಣ, ಅದೇ ತೇಜಸ್ಸು, ಅದೇ ಹೃದಯಂಸ್ಪರ್ಶಿಯಾದ ಜೇನುನುಡಿ. ಆ ಕಂಠಶ್ರೀ ಇನ್ನೂ ಕಿವಿಯಲ್ಲಿ ಕಟ್ಟಿದಂತಿದೆ.

ನಾವು ಅವರಲ್ಲಿ ಹೋದಾಗ 'ಶ್ರೀ' ಅವರು ಮಂಚದ ಮೇಲೆ ಒರಗಿಕೊಂಡಿದ್ದರು. ಆ ಕಡೆಗೆ ಶ್ರೀಮನ್ಮಹಾರಾಜರವರ ಭಾವಚಿತ್ರ, ಎದುರಿಗೆ ಕನ್ನಡನಾಡಿನ ಭೂಪಟ,

---

* ಈ ಗ್ರಂಥದ ಪುಟ ೧೫ ರಿಂದ ೪೦ ರಲ್ಲಿ ಬರುವ ಲೇಖವನ್ನು ಬರೆದದ್ದು ಡಿಸೆಂಬರ್ ೧೯೪೩ರಲ್ಲಿ. ಪ್ರಸ್ತುತ ಲೇಖವನ್ನು ಬರೆದದ್ದು ೧೯೪೬ರಲ್ಲಿ. ಇದು ಆಗ ಕಣ್ಣೆದುರಿಗಿರಲಿಲ್ಲ. ಹೀಗಾಗಿ, ಅಲ್ಲಲ್ಲಿ ಅಲ್ಪ ವ್ಯತ್ಯಾಸಗಳು ಕಂಡು ಬರುತ್ತವೆ. ಆ ಕಾಲಕ್ಕೇ ಇದನ್ನು ಬರೆದದ್ದರಿಂದ ಇಲ್ಲಿಯ ವಿವರ ಹೆಚ್ಚು ಅಧಿಕೃತ.

ಈಚೆ ಶುಚಿಸ್ಮಿತ ಭಗವಾನ್ ಬುದ್ಧದೇವನ ಸುಂದರ ವಿಗ್ರಹ ಎಂದಿನಂತೆ ಶೋಭಿಸುತ್ತಿದ್ದವು.

ನಾವು ಹೋದ ಕ್ಷಣ ಎಂದಿನಂತೆ ಅದೇ ಆತ್ಮೀಯತೆಯಿಂದ ಶ್ರೀ ಪ್ರಾರಂಭಿಸಿದರು.

ಶ್ರೀ—ಅದೇ ತಾವೆಲ್ಲ ಮದರಾಸಿಗೆ ಹೋಗಿರಬಹುದು ಅಂತ ತಿಳಿದಿದ್ದೆ. ದಿನಾಲು ಪೇಪರಿನಲ್ಲಿ ನೋಡ್ತಾ ಇದ್ದೆ.ಬೇಂದ್ರೆ ಅವರ ಹೆಸರು ಮಾತ್ರ ಕಂಡು ಬಂತು. ತಾವು ಹೋಗಿರಲಿಲ್ಲ ಅಂತ ಈಗ ತಿಳಿಯಿತು. ಗೋಕಾಕನೂ ಹೋಗಿರಲಿಲ್ಲವೊ?

(ಗೋಕಾಕರ ವಿಷಯ ಮಾತಾಡುವಾಗ ಶ್ರೀಯವರು ಯಾವಾಗಲೂ ಆತ್ಮೀಯತೆಯ ಏಕವಚನದಲ್ಲಿ ಹೇಳುತ್ತಿದ್ದರು. ಎಷ್ಟೋ ಸಲ ಅವರ ಅಂತಃಕರಣ ತುಂಬಿ ಬಂದುದೂ ಉಂಟು)

ಮುಗಳಿ– ಇಲ್ಲ.

ಶ್ರೀ–ಅದೇ ಆಗಿರಲಿಕ್ಕಿಲ್ಲ; ನನಗೂ ಹೈದರಾಬಾದಿಗೆ ಬಾ ಅಂತ ಮೂರು ನಾಲ್ಕು ಸಲ ಬರೆದಿದ್ದ.... ಎಲ್ಲಿ?....ನನ್ನ ಪ್ರಕೃತಿ....ನಾನು ಎಷ್ಟು ಯತ್ನ ಮಾಡಿದರೂ ಸಾಧ್ಯವಾಗುವುದಿಲ್ಲ. ಅದಕ್ಕೆ ಕ್ಷಮಿಸಿಬಿಡು ಅಪ್ಪ ಅಂತ ಬರೆದಿದ್ದೆ. ಅಷ್ಟೆಲ್ಲ ಓಡಾಡಿಕೊಂಡು ಬರುವುದು ಈಗ ಎಲ್ಲಿ ಸಾಧ್ಯ?

ಮು– ತಮಗೂ ಈ ನಾಡಹಬ್ಬದ ಓಡಾಟ ಹೆಚ್ಚಾಗಿರಬೇಕು...............

ಶ್ರೀ– ಹಾಗೇನೂ ಇಲ್ಲ; I stood the exertion quite one and a half months. ಇಷ್ಟೇ, ಅದರಿಂದ ಸಾಹಿತ್ಯ ಸಮ್ಮೇಳನ ಅದು ಸಾಧ್ಯವಾಗಲಿಲ್ಲ.

ಮು– ಹೌದು.

ಶ್ರೀ– ಸಮ್ಮೇಲನ ಒಂದು ಈ ಸಲ ತೀರ ಒಳ್ಳೆಯದಾಯಿತು. ಮಾಸ್ತಿ ಮತ್ತೆ ಬಂದರು. ಅದು ತುಂಬಾ ಸಂತೋಷದ ವಿಷಯ....nonliterary ಜನ ಅಲ್ಲಿ ಸರಿ ಅಲ್ಲ. ಅಂಥಲ್ಲಿ ಓದಿದವರು ಬೇಕು. ಮಾಸ್ತಿ ಪುನಃ ಬಂದದ್ದು ಬಹಳ ಸಂತೋಷ.

ಮು–ಹೌದು. ಅವರೂ ಒಪ್ಪಿಕೊಂಡದ್ದು ತೀರ ಒಳ್ಳೆಯದಾಯಿತು. ಅವರೂ ಬೇಜಾರುಗೊಂಡಿದ್ದರೆ ತೀರ ಕಠಿಣವಾಗುತ್ತಿತ್ತು.

ಶ್ರೀ–ಸರಿಯೇ; ರೇವಣ್ಣ ಕೋಶಾಧ್ಯಕ್ಷ ಅಂತ ಕಾಣುತ್ತೆ...ಎಲ್ಲ ಒಳ್ಳೆಯದಾಯಿತು. ನಮ್ಮ ನಾಡು ಬೆಳೆಯಬೇಕು; ನೋಡಿ, ನಮ್ಮ ಜನ ಇನ್ನೂ ಎಷ್ಟೋ ವಿಷಯ ಕಲಿಯಬೇಕು. ನಮ್ಮಲ್ಲಿದ್ದ ಲೋಪಗಳನ್ನೇ ನೋಡ್ತಾರೆ ವಿನಾ merits ಕಾಣೋಕಿಲ್ಲ. ಅವುಗಳನ್ನೇ ದೊಡ್ಡದು ಮಾಡಿ ಹತ್ತು ಜನರೆದುರಿಗೆ ಅಂದು ಬಿಡುತಾರೆ. ಇದರಲ್ಲಿ ಯಾವ ಪುರುಷಾರ್ಥ?

ನಾನು ಇಲ್ಲಿ ಬಂದದ್ದೂ ಹೀಗೇನೇ. ನಾನಿಲ್ಲಿ ಬಂದದ್ದರಿಂದ ನಿಮಗೆಲ್ಲ ಆನಂದ ವಷ್ಟೇ?...

ಮು–ಅಯ್ಯೊ! ಎಂಥಮಾತು! ತಮ್ಮಂಥ ಹಿರಿಯರು ಬಂದದ್ದು ಕಡಿಮೆ ಮಾತೇ? ಇಷ್ಟೇ ತಮ್ಮ ಆಶೀರ್ವಾದ ಫಲಿಸಬೇಕು....

ಶ್ರೀ–ಅದೇ; ನಾನೂ ಇಲ್ಲಿ ಮೊದಲು ಬರೀ ಒಂದು ವರುಷ ಇರೋಣ ಅಂತ ಬಂದಿದ್ದೆ. ಆದರೆ ಈಗ ಕೆಲವು ದಿವಸ ಇಲ್ಲಿಯೇ ನಿಲ್ಲಬೇಕು ಎನಿಸುತ್ತೆ.

ಮು–ತಮಗೆ ಧಾರವಾಡದ ಹವೆ ಸ್ವಲ್ಪ ಸೆಕೆ ಎನಿಸಬಹುದು.

ಶ್ರೀ–ಹಾಗೇನೂ ಇಲ್ಲ....ಹೋದ ಸಲ ನೋಡಿ; ಇಲ್ಲೇ ಇದ್ದೆ. ಸ್ವಲ್ಪ heat ಅಷ್ಟೇ!....Oh! Dharwar climate has agreed to my health very well.....ನಾನೂ ನೋಡಿ, ನಾಳೆ ಸೋಮವಾರದಿಂದ ಕ್ಲಾಸು ತೆಗೆದು ಕೊಳ್ಳೋಣ ಎಂದೆ. ಡಾಕ್ಟರರು ಬೇಡ ಅಂದರು. No; I must speak to my students on Monday;........I will. ಈ ಹೊತ್ತು ಡಾ. ಕಬ್ಬೂರ ಬರ್ತೇನಿ ಅಂತ ಹೇಳಿದ್ದಾರೆ.

ಮು–ಏನು ಇಷ್ಟು ಅವಸರ? ಇನ್ನೂ ಸ್ವಲ್ಪ ಆರಾಮು ತೆಗೆದುಕೊಳ್ಳಬಹು ದಲ್ಲ?

ಶ್ರೀ–No; I am quite hale and hearty. I should not play truant. ಈಗ ಯಾವ troubles ಇಲ್ಲ, ಏನೋ ಸ್ವಲ್ಪ ಅಲ್ಲಲ್ಲಿ....ಸಾಗುತ್ತೆ, ಏನಾದರೂ old rickety machine. ಸ್ವಲ್ಪ ಆಗಾಗ oiling ಆದರೆ ಸಾಕು, ಪುನಃ ಸಾಗುತ್ತೆ.

ಮು–....

ಶ್ರೀ–....ಆದರೂ ವಿದ್ಯಾರ್ಥಿಗಳು ನೋಡಿ, ಇಂಗ್ಲಿಷ್ ಪ್ರೀತಿ ಕಡಮೆ. ನನಗೆ ಹಾಗೆ ಹೇಳಿಯೂ ಬಿಟ್ಟರು. ಅವರಿಗೆ Seminar ಬೇಕಿಲ್ಲ. Association ಮನಸ್ಸು ಹಿಡಿಯದು....Have I come here only to act as a clerk?—to see records and see that payments are made in time?....I came here because I had love of my literature. ಅದು ಇಲ್ಲದಿದ್ದರೆ ಇಲ್ಲಿ ನನ್ನದೇನು ಕೆಲಸ? A head clerk can run the college....you know things ಅಷ್ಟೇ....

ಮು–ಅದೇ ನನ್ನ ಪುಸ್ತಕದ ಬಗ್ಗೆ........

ಶ್ರೀ–ಹೌದು; ಅದೇ ಮಾತು ಹೇಳೋಣ ಅಂತಿದ್ದೆ. ಮಾತು ನುಸುಳಿಕೊಂಡು

ಸ್ವತಃ ತಾವು, ಹಾಗೇ ಬಂತು ನೋಡಿ....ಅವೇ ನನಗೆ ಹೇಳಿದರು. ಈಗ ೯೬ ಪುಟ ಕಳಿಸಿದ್ದಾರೆ, ನೋಡಿದ್ದೇನೆ. proof mistakes ತುಂಬಾ ಉಳಿದಿವೆ, ಹಾಗೆ ಇರಬಾರದು ನೋಡಿ.(ಶ್ರೀ ಅವರ ಧ್ವನಿಯಲ್ಲಿ ಹಿರಿತನದ, ಅಧಿಕಾರದ, ಗಾಂಭೀರ್ಯ ತುಂಬಿದ್ದವು.)

ಮು—ಸ್ವಲ್ಪ ಅವಸರವಾಯಿತು. ನನ್ನಲ್ಲಿ ತರಿಸಿ proof ನೋಡುವುದೂ ಅಂದರೆ, ತಡವಾಗಬಹುದು ಅಂತ....

ಶ್ರೀ—ಅದು ಹಾಗೆ ಆಗಬಾರದು ನೋಡಿ. ಪುಸ್ತಕದಲ್ಲಿ ಹಾಗೆ mistakes ಉಳಿಯಕೂಡದು. ಅದರಲ್ಲಿಯೂ ಈ ಕ್ಲಾಸಿಕಲ್ works ಇನಲ್ಲಿ ಒಂದು ಕೂಡ ಉಳಿಯಬಾರದು. ಗಂಭೀರ ಪುಸ್ತಕಗಳನ್ನು ಹಾಗೆ ಮುದ್ರಿಸಿದರೆ ಹೇಗೆ? ಅದರಲ್ಲಿಯೂ ನಾವು ಅವನ್ನ ನೋಡಬೇಕು.

(ತಪ್ಪಿತಸ್ಥರನ್ನು ದಾರಿಗೆ ತರುವ ರೀತಿ ಇದ್ದಿತು ಆ ವಾಣಿಯಲ್ಲಿ).

ಮು—ತಾವು ಮೊದಲಿನಿಂದಲೂ ಗದಾಯುದ್ಧದ close student. ತಮ್ಮ ಆಶೀರ್ವಾದ ಈ ಪುಸ್ತಕಕ್ಕಿರಬೇಕು ಅಂತ.

ಶ್ರೀ—ಓ! ನಾನೇನು ವಿಶೇಷ ಬರೆಯುವುದಿದೆ? ತಾವು ಈಗ closer studentಉ. ನನ್ನ ಕಾಲ ಬೇರೆ. ತಾವೆಲ್ಲ ಕನ್ನಡ ಕಲಿಸುವ ಸೌಭಾಗ್ಯ ಉಳ್ಳವರು. ತಮ್ಮ ಹಾಗೆ ನನಗೆ ಹೇಗೆ ಬಂದೀತು? ...ಒಂದು ವಿಷಯ ನೋಡಿ ಮುಗಳಿ. ಈ ರೀತಿ ನೋಡಿದರೆ, I must frankly state it now. ನಾವೆಲ್ಲ ಮಾಡಿದ ಕನ್ನಡದ ಕೆಲಸ ಒಂದು ರೀತಿ ಎಡಗೈಯಿಂದದು—lefthanded work. ಯಾಕೆಂದರೆ, I had to keep up my prestige with other English Professors ಆದ್ದರಿಂದ as an Indian against Englishmen ಪ್ರತಿ ಹೊಸ ಪುಸ್ತಕ ದಿನಾಲು ಓದಬೇಕಿತ್ತು.ಎಲ್ಲಾ ವಿಷಯ ಅಷ್ಟೇ ಅನ್ನಿ. ಹೀಗಾಗಿ I could not devote my all to Kannada studies....ಶಾರದಾ, ಮುಗಳಿ ಬಂದಿದಾರೆ ಏನು ಕೊಡತೀಯಮ್ಮಾ (ಎಂದು ಬಾಗಿಲಲ್ಲಿ ನಿಂತಿದ್ದ ಶಾರದಮ್ಮನವರನ್ನು ಕೇಳಿದರು. Teaಗೆ ಇಟ್ಟಿದ್ದೇನೆ, ಕೊಡುತ್ತೇನೆ, ಎಂದು ಅವರು ಹೇಳಿದರು.)

ಶ್ರೀ—ಆ ಏನು ಇನ್ನೂ ಇಟ್ಟಿದೀಯಾ? ಹಾಗಾದರೆ ಎಂದು ಬರುವದು ನಾಷ್ಟ ತಾನೆ? (ನಾವೆಲ್ಲರೂ ನಕ್ಕೆವು. ತಾವೂ ನಕ್ಕರು. ವೇಳೆ ೨-೩೫ ಆದ್ದರಿಂದ ನಾವು ಹೊರಡಬಹುದೆಂದು ಪ್ರೊ॥ ಮುಗಳಿ ಅವರ ಕಡೆಗೆ ನಾನು ನೋಡಿದೆ. ಅಷ್ಟರಲ್ಲಿ ಚಹ ತಿನಿಸು ಮೇಜಿನ ಮೇಲೆ ಸಿದ್ಧವಾಗಿದ್ದವು. ನಾವು ತೆಗೆದುಕೊಳ್ಳುತ್ತಿರುವಾಗಲೇ ಶ್ರೀ ಅವರು ಪ್ರಾರಂಭಿಸಿದರು, ಮಾತು ಕಾಂಗ್ರೆಸಿನ ಕಡೆಗೆ ಹೊರಟಿತು.)

ಶ್ರೀ– ಕಾಂಗ್ರೆಸ್ಸಿನಲ್ಲಿ ಎಲ್ಲವೂ ಸಮ್ಮತವಾಗದು. rank and file ಇದೆ ನೋಡಿ. ಎಷ್ಟೋ ವಿಷಯ ನಾವು ನಿರ್ದಾಕ್ಷಿಣ್ಯವಾಗಿ ಹೇಳಲೇಬೇಕು. ವಿದ್ಯಾರ್ಥಿಗಳಿಗೂ ಎಷ್ಟೋ ವಿಷಯ ತಿಳಿಯಬೇಕು. ಮೊನ್ನೆ ನಮ್ಮ ಕಾಲೇಜಿನಲ್ಲೇ ನಡೆದ ವಿಷಯ. ಆ ಸಮಾರಂಭಕ್ಕೆ ಕಾಲೇಜ ಧ್ವಜ ಹಚ್ಚಲಾಗಿತ್ತು. ಸಭೆಯ ಒಂದು ನಿಮಿಷ ಮೊದಲು ಬಂದು ಒಬ್ಬ ವಿದ್ಯಾರ್ಥಿ ಹೇಳ್ತಾನೆ : ಇಲ್ಲಿ ಇದನ್ನು ತೆಗೆದು ಕಾಂಗ್ರೆಸ್ ಧ್ವಜ ಹಾರಿಸಬೇಕೆಂದು....ಮಾತು ಎಲ್ಲಿಗೆ ಬಂತು ನೋಡಿ. we love all flags. ಆದರೆ institutional love ಇಲ್ಲವೇ ಇಲ್ಲವೇ? ಒಂದನ್ನು ತೆಗೆದು ಮತ್ತೊಂದೇಕೆ? I love my institution most, ದೇಶದ ಮಾನ ಗೌರವ ಅದಕ್ಕೂ ಇರಬೇಕು. You ask Prof. Dharwadkar how he had to manage the whole thing. ನಮ್ಮಲ್ಲಿ ಬಂದಿರುವ ವಿಷಯವೂ ಅಷ್ಟೇ. People who do not know us, who do not know our problems-ಬರ್ತಾರೆ; ಏನಾದರೂ ಹೇಳಿ ಹೋಗಿಬಿಡ್ತಾರೆ. Young minds should not be twisted that way. ಮೊನ್ನೆ ಪಟ್ಟಾಭಿ ಮಾತೂ ಅಷ್ಟೇ. I have talked the matter up and down the country. ಬರಿಯ Fascist ರೀತಿ ಪ್ರಯೋಜನವಿಲ್ಲ. ನಮ್ಮ ತೋಟದಲ್ಲಿ ಕಳೆ ತುಂಬಿದಾಗ, ನಮ್ಮ ತಾಯಿ ದೈನ್ಯದಲ್ಲಿದ್ದಾಗ, ನಮ್ಮ ಜನ ನರಳುತ್ತಿರುವಾಗ, ಹೆರವರ ತೋಟದ ಗೊಡವೆ ನಮಗೇಕೆ? ಸಮದೃಷ್ಟಿ, ತೂಕ, ಬೇಕು. ನಾಲ್ಕು ಜನ ನನ್ನ ಮಾತು ಮೆಚ್ಚಲಿಲ್ಲ. ಆದರೆ ನಾನು ಸತ್ಯ ಹೇಳಲೇಬೇಕು. ನನ್ನನ್ನು ಅನೇಕ ಜನ ಟೀಕಿಸಿದರು—ಆದರೆ, I must have liberty of my own opinion, I must have my place under the sun. ಜನ ಲೆಕ್ಕಿಸಲಿಲ್ಲ. ಆದರೆ ಈ values ಕೊನೆ ವರೆಗೆ ನಿಲ್ಲದು ನೋಡಿ...

ಶ್ರೀ ಅವರು ಇನ್ನೂ ಮಾತಾಡುವವರಲ್ಲಿದ್ದರು. ಆದರೆ ವೇಳೆ ೨–೪೨ ಆದದ್ದರಿಂದ ನಾವು ಹೊರಡುವದಾಗಿ ನಮಸ್ಕರಿಸಿ ನಾವು ಹೊರಟೆವು. 'ಸೋಮವಾರ ಕ್ಲಾಸ್ ಲಕ್ಷದಲ್ಲಿರಲಿ' ಎಂದರು. ನಾನು ವಿದ್ಯಾರ್ಥಿಗಳಿಗೆ ತಿಳಿಸುವುದಾಗಿ ಹೇಳಿ ಮುಂದು ಹೊರಟೆ, ಮುಗಳಿ ಅವರೂ ಎದ್ದು ನಮಸ್ಕರಿಸಲು ಹೊರಟರು. ಶ್ರೀ ಅವರು ಅವರಿಗೆ ಹಾಗೆ ಮಾಡಗೊಡದೆ, ತಾವೇ ಸ್ವಲ್ಪ ಸರಿದು ಕೈ ಕುಲುಕಿ 'ಹೋಗಿ ಬನ್ನಿ ಮುಗಳಿ, ಹೋಗಿ ಬನ್ನಿ; ತಾವು ಬಂದದ್ದು ತುಂಬಾ ಸಂತೋಷ. ಹೋಗಿ ಬನ್ನಿ ಅಪ್ಪಾ, ತುಂಬಾ ಸಂತೋಷ' ಎಂದು ಬೀಳ್ಕೊಂಡು ಮಲಗಿದರು. ಅಮ್ಮಾ ಎಂದು ಶಾಲು ಸರಿಪಡಿಸಿಕೊಂಡದ್ದು ಕೇಳಿಸಿತು.ನಾವು ೧೫–೨೦ ಹೆಜ್ಜೆ ಬರುವುದರಲ್ಲಿಯೇ ಶಾರದಮ್ಮನವರ ಧ್ವನಿ ಕೇಳಿಸಿತು. "ಮುಗಳಿಯವರೇ, ಧಾರವಾಡಕರರೇ ತೀವ್ರ...ಬನ್ನಿ" ಎಂದು. ನಾವು ಧಾವಿಸಿ ಹೋದೆವು. ಶ್ರೀ ಅವರು ಮಲಗಿದಂತಿತ್ತು. ಈಗ ಅರೆಕ್ಷಣದ ಹಿಂದೆ ತುಂಬು ಹೃದಯದ

ಸಂತೋಷದಿಂದ ಬೀಳ್ಕೊಂಡ ಶ್ರೀ ಅವರು ಹೀಗೇಕೆ ಎಂದು ನನಗೆ ಗಾಬರಿಯಾಯಿತು. ಬಹುಶಃ ಅಶಕ್ತತೆಯಿಂದ ಮೂರ್ಛೆ ಹೋಗಿರಬೇಕು ಎನಿಸಿತು. ಕೈ ಹಿಡಿದು ನೋಡಿದೆ. ತಣ್ಣಗಿತ್ತು. ಕಾಲೂ ತಣ್ಣಗಿತ್ತು. ತುಂಬಾ ಹೆದರಿದೆ. ಡಾಕ್ಟರರನ್ನು ಕರೆತರಲಾಯಿತು. ಅವರು ಬಂದು ನೋಡಿ ಉತ್ಸಾಹಹೀನರಾದರು. "ಡಾ॥ ಕಬ್ಬೂರ ಅವರಿಗೂ ಹೇಳಿ ಕಳಿಸಿ" ಎಂದರು. ನಾನೇ ಹೋಗಿ ಕರೆತಂದೆ. ಅವರ ಮುಖವೂ ಸ್ವಲ್ಪ ವಿವರ್ಣವಾದಂತೆ ಕಂಡಿತು. ಅವರಲ್ಲಿಯೂ ಉತ್ಸಾಹ ಕಾಣಲಿಲ್ಲ. ಶ್ರೀ ಅವರ ಜೀವನಶ್ರೀ ಮುಗಿದಿತ್ತು. ಅವರ ಪ್ರಾಣಪಕ್ಷಿ ಹಾರಿಹೋಗಿತ್ತು. ನಾಡಿನ ಸಾಂಸ್ಕೃತಿಕ ರಾಯಭಾರಿ ಕೊನೆಯ ಉಸಿರನ್ನು ಎಳೆದಿದ್ದರು. ಕನ್ನಡದ ರಸಋಷಿ, ಪರಿವ್ರಾಜಕ–ಇಲ್ಲದಾಗಿದ್ದರು. ●

ಅನುಬಂಧ–೧

ಶ್ರೀ ಸೂಕ್ತಿಗಳು

ಯಾವ ಯಾವ ಭೇದಗಳಿಂದ ಆರ್ಯಭೂಮಿಯಲ್ಲಿ ಒಗ್ಗಟ್ಟು ಹುಟ್ಟಲಿಲ್ಲವೋ, ಆಯಾ ಭೇದಗಳನ್ನೆಲ್ಲಾ ಸುಟ್ಟು ಬೂದಿಮಾಡಿ ನೀರಿನಲ್ಲಿ ಕಲಸಿಬಿಡಬೇಕು. ಆಚಾರ, ಜಾತಿ, ಮತ, ಎಲ್ಲಾ ಒಂದೇ ಆಗುವಂತೆ ಪ್ರಯತ್ನ ಮಾಡುತ್ತ ಹೋಗಬೇಕು.

ಮೇಲೆ ತೋಟ ಶೃಂಗಾರ, ಒಳಗೆ ಗೇಣಿಸೊಪ್ಪು. ಹಳ್ಳಕ್ಕೆ ಬಿದ್ದ ಹುಲಿಗೆ ತಲೆಗೊಂದು ಕಲ್ಲು ಎನ್ನುವ ಗಾದೆಯ ಉಪದೇಶಕ್ಕೆ ಸರಿಯಾಗಿ ನಡೆಯಬಾರದು. ನಮ್ಮ ಭಾಷೆಯನ್ನು ನಾವು ಎತ್ತದೆ ಹೋದರೆ, ಎತ್ತುವವರು ಯಾರು?

(ಹಳಗನ್ನಡ ಸಾಹಿತ್ಯದಲ್ಲಿ) ಹೆಬ್ಬಾವು ನುಲಿದುಕೊಂಡು ಬಿಗಿಯುತ್ತ ಹೋದ–ಹಾಗೆಲ್ಲಾ ಕೀಲು ಕೊಟ್ಟಂತೆ ಹೊರಡುತ್ತವೆ ನೋಡಿ ಒಂದಾದ ಮೇಲೊಂದು ದೇವತಾಸ್ತುತಿ, ಆತ್ಮಶ್ಲಾಘನೆ,....ಸಮುದ್ರವರ್ಣನೆ, ದೇಶ, ಪುರ. ಹೂವಿನಂಗಡಿ ಸೂಳೆಗೇರಿ.

ಸಂಸಾರವನ್ನು ತೊರೆದ ಸನ್ಯಾಸಿಯ ಕಥೆಯಾದರೂ ಸರಿಯೇ, ಒಂದು ರಾತ್ರಿ ಬೆಳದಿಂಗಳಿನಲ್ಲಿ ಅಲೆತ, ಹಿಂದಿನ ದಿನ ನೀರಿನಲ್ಲಿ ಆಟ, ಎಂದರೆ ಎರಡು ಆಶ್ವಾಸ ಮಲಗಿ ಹೋಯಿತು.

ಇದೇನು ಕನ್ನಡವೋ ನೀವೇ ನೋಡಿ :

ವಿಲುಠತ್ ಘಂಟಾಪಟಿಷ್ಠ ಧ್ವನಿಬಧಿರಿತದಿಙ್ಮಂಡಲಾ ಕರ್ಣತಾಳಾ
ನಿಲಲೋಲದ್ವೀಚಿ ಮಾಲಾಂಬರ ಸರಿದುದಕಾ ಪುಷ್ಕರೋಚ್ಚಾಟನವ್ಯಾ
ಕುಲಿತ ಬ್ರಹ್ಮಾಸನಾಂಭೋರುಹವತಿವಿತತಾಯೋಗ ರತ್ನಪ್ರಭಾಟಿಂ–
ಗಲಿತ ಸ್ವರ್ಗಾಂತರಾಳಂ ಹಿಮಗಿರಿಧವಳಂ ಬಂದುದಿಂದ್ರದ್ವಿಪೇಂದ್ರಂ॥

ತಾಯಿಬೇರನ್ನು ಕಡಿದು ಮರವನ್ನು ಚಿಗುರಿಸುವುದಕ್ಕೆ ಹೇಗೆ ಆಗಲಾರದೋ, ಹಾಗೆಯೇ ನಮ್ಮ ಪೂರ್ವವನ್ನು ಅಳಿಸಿಬಿಟ್ಟು ಭವಿಷ್ಯಕ್ಕೆ ಹಾರುವದಕ್ಕೆ ಆಗಲಾರದು.

ರೈಲನ್ನು ರೈಲೆಂದೇ ಕರೆಯುವುದು ಉತ್ತಮ; ಹೊಗೆಬಂಡಿ, ಹೊಗೆಗಾಡಿ ಎನ್ನುವುದು ಮಧ್ಯಮ; ಧೂಮಶಕಟವೆನ್ನುವುದು ಅಧಮ.

ಲಾಭವೇ ಗ್ರಂಥಕ್ಕೆ ಗುರಿಯಲ್ಲ; ಹರ್ಷವೂ ಆಗಿರುವದರಿಂದ ವಿನೋದವಾಗಿ ಹೊತ್ತು ಕಳೆಯುವುದಕ್ಕೆ, ಕಟ್ಟುಕಥೆಗಳನ್ನೂ, ಕಾದಂಬರಿಗಳನ್ನೂ, ಸರಸವಾದ ಪ್ರಸಂಗಗಳನ್ನೂ, ಬರೆಯಬೇಕು.

ಅಂದವಾದ ಹೂವು. ಬೇರು ಕೊನೆ ಬಲಿತ ಮೇಲೆ ಅರಳುವುದೇ ಹೊರತು, ಬಿತ್ತವನು ನೆಟ್ಟ ಬೆಳಿಗ್ಗೆ ಬಿಡಲಾರದು.

ಕವಿ ಎನ್ನಿಸಿಕೊಳ್ಳುವುದಕ್ಕೆ ಎಲ್ಲರಿಗೂ ಆಸೆಯೇ, ಯಾರಿಗಿಲ್ಲ? ಆದರೆ, ಅದಕ್ಕೆ ಕಾಲಬೇಕು, ಪ್ರಾಪ್ತಿಬೇಕು ...

(ಕೆಲವರಿಗೆ) ಪುಸ್ತಕದಲ್ಲಿ ಕಣ್ಣಿಗೆ ತೋರುವ ಭಾಷೆ ಅಂದರೆ ಗೌರವ: ಜನರ ಬಾಯಿಂದ ಕಿವಿಗೆ ಬೀಳುವ ಭಾಷೆ ಅಂದರೆ ಧಿಕ್ಕಾರ....ಬರೆಯುವ ಭಾಷೆಗೆ ಆಡುವ ಭಾಷೆಯೇ ಜನ್ಮಸ್ಥಾನ.

ಸತ್ತ ಕವಿಗಳೂ, ಶಾಸನಕಾರರೂ ಬಲವಾಗಿ ಹಿಡಿದಿರುವ ಮುಷ್ಟಿಯಿಂದ ಭಾಷೆಯನ್ನು ಸಡಿಲಿಸಿ, ಬದುಕಿರತಕ್ಕವರ ಬಾಯಿಯಲ್ಲಿ ಸ್ವತಂತ್ರವಾಗಿ ಉಸಿರಾಡಿ ಜೀವಕಳೆ ತುಂಬಿಕೊಳ್ಳುವಂತೆ ಮಾಡಬೇಕು.

ಗಂಗೆಯನ್ನು ಭೂಲೋಕಕ್ಕೆ ತರುವ ಉತ್ಸಾಹವಿದ್ದರೂ, ಮೊದಲು ಭಗೀರಥ ಶಿವನ ಸಹಾಯದಿಂದ ಪ್ರವಾಹವನ್ನು ಸಣ್ಣದು ಮಾಡಬೇಕಾಗಲಿಲ್ಲವೇ?

ಸಂಸ್ಕೃತ ಕನ್ನಡವನ್ನು ಕೊಚ್ಚಿ ಹಾಕಿದ ಹಾಗೆ, ಕಟ್ಟಿಲ್ಲದೆ ಹೋದರೆ, ಇಂಗ್ಲಿಷ್ ಹಿಂದುಸ್ತಾನಿಯೂ ಕೊಚ್ಚಿ ಹಾಕುವವು.

ಕವಿತ್ವದ ಮೇಲೆ ಕವಿತ್ವವಾಗಿ ನಮಗೆ ಅಜೀರ್ಣವಾಗಿದೆ. ಲಂಘನವೇ ಗುಣವೆಂದು ನಂಬಿದ್ದೇವೆ. ಪಾಂಡಿತ್ಯದ ಮೇಲೆ ಪಾಂಡಿತ್ಯವಾಗಿ ರೋಸಿಹೋಗಿದ್ದೇವೆ.

ಒಳ್ಳೆಯ ಸಾಹಿತ್ಯವನ್ನು ಪಡೆದ ಜನಾಂಗದ ಹೃದಯದಲ್ಲಿ ಜ್ಞಾನವೂ. ನಿಷ್ಕಲ್ಮಷವಾದ ಆನಂದವೂ, ಸತ್ಪ್ರೇರಣೆಯೂ, ಸಮಾಜದ ಪುನರ್ನಿರ್ಮಾಣದ ಕಾರ್ಯದಲ್ಲಿ ಐಕಮತ್ಯವೂ ಬಲವಾಗಿ ಬೇರೂರುತ್ತವೆ.

ನೆರೆಮನೆಯ ಮಕ್ಕಳು ಮನೆಯ ಮಕ್ಕಳಿಗಿಂತ ಮುದ್ದಾಗಿದ್ದರೆ, ಹೊಟ್ಟೆ ಉರಿದರೂ, ಅವರ ಚೆಲುವನ್ನು ಒಪ್ಪಿಕೊಳ್ಳೋಣ.

"ಬೆಳೆಯೇನೋ ಬೇಕಾದ ಹಾಗಿದೆ; ಕುಯಿಲುಗಾರರು ಕಡಿಮೆ." ಬನ್ನಿ ಜನ್ಮವನ್ನು ನಮ್ಮ ಜನರ ಬೋಧೆಗಾಗಿ ಸಮರ್ಪಣಮಾಡಿದ ಹೊಸಬಗೆಯ ದೀಕ್ಷಿತರಾಗಿ.

ರಿನೇಸಾನ್ಸ ಎಂಬ ಸಾಹಿತ್ಯದ ಪುನರ್ಜನ್ಮವುಂಟಾದಾಗ, ಒಬ್ಬ ಮಹಾ ಪಂಡಿತನು–"ನಾವು ಸತ್ತವರನ್ನು ಎಬ್ಬಿಸುವವಕ್ಕೆ ಹೋಗುತ್ತೇವೆ" ಎಂದು ಘೋಷಿಸಿದನು. ನಾವು ಕನ್ನಡಿಗರು ಇಂದು ಸತ್ತವರನ್ನು ಎಬ್ಬಿಸುವುದೇ ಅಲ್ಲ; ಬದುಕಿರುವವರನ್ನೂ ಎಚ್ಚರಗೊಳಿಸುವುದಕ್ಕೆ ಹೊರಟಿರುವೆವು,

"ಕನ್ನಡ ನಾಡಿಗೆ ಕನ್ನಡವೇ ಗತಿ, ಅನ್ಯಥಾ ಶರಣಂ ನಾಸ್ತಿ." ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ, ಕನ್ನಡ,

ಸಾಹಿತ್ಯದಿಂದ ಲಕ್ಷಣಸೂತ್ರಗಳೇ ಹೊರತು, ಲಕ್ಷಣಸೂತ್ರಗಳಿಂದ ಸಾಹಿತ್ಯವಲ್ಲ.

ಯಾವ ವಿಶ್ವಮಾತೆಯನ್ನು ನಾವು ಸೇವಿಸಿದರೂ, ನಮ್ಮ ಮಾತೆಯನ್ನು ಮಾತ್ರ ಬಿಡುವಂತಿಲ್ಲ. ನಮ್ಮ ತಾಯಿ ಎಷ್ಟೇ ಬಡವೆಯಾದರೂ, ಆಕೆಯನ್ನು ಕೀಳಾಗದಂತೆ ಮಕ್ಕಳು ನೋಡಿಕೊಳ್ಳಬೇಕು. ವಾಸ್ತವವಾಗಿ ನಮ್ಮ ತಾಯಿ ಬಡವೆಯಲ್ಲ;...ಆಕೆಯ ಪಾದಪದ್ಮದ ಮೇಲೆ ಭಕ್ತಿಯಿಂದ, ಪ್ರೀತಿಯಿಂದ, ಹೂವಿಟ್ಟು, ಬೇಕಾದರೆ, ಪ್ರಪಂಚವನ್ನೇ ಸುತ್ತಿಬರೋಣ.

ನಮ್ಮ ಮನೆಯಲ್ಲಿ ತಾಯಿಯನ್ನು ಉಪವಾಸವಿರಿಸಿ ಊರುತ್ಸವಕ್ಕೆ ಹೋಗುವುದೆ? ಪ್ರಪಂಚದ ಉತ್ಸವದಲ್ಲಿ ಮನೆಯನ್ನು ಬರಿದು ಮಾಡುವುದೆ? ಕನ್ನಡಮಾತೆಯ ಮೂಲಕ ಭಾರತಮಾತೆಯನ್ನು ಸೇವಿಸೋಣ.

ಕನ್ನಡದ ಕಾವಲುನಾಯಿ ನಾನು; ಅದಕ್ಕೆ ಕಾವು ತಟ್ಟುವುದಾದರೆ, ನಾನು ಬಗಳುವುದುಂಟು; ಕಚ್ಚುವ ನಾಯಲ್ಲ.

ಪ್ರೇಮಮಯಿಯಾಗದವನು ಮನುಷ್ಯನಲ್ಲ.

ಕನ್ನಡವನ್ನು ನಂಬಿ, ಕನ್ನಡವನ್ನು ಕೈ ಹಿಡಿಯಿರಿ; ಕನ್ನಡಿಗರನ್ನು ಎಚ್ಚರಿಸಿ ಮುಂದಕ್ಕೆ ನಡೆಸಿ.

ಕನ್ನಡ ದೇಶದಲ್ಲಿ ನೆಲಸಿರುವ, ತೆಲಗು, ತಮಿಳು ಭಾಷೆಗಳನ್ನಾಡುವ ಜನರು ಕನ್ನಡಿಗರಾಗಬೇಕು; ಕನ್ನಡಕ್ಕೆ ಹೊಂದಿಕೊಳ್ಳಬೇಕು; ಅದರ ಹೊಟ್ಟೆಯಲ್ಲಿ ಮುಳ್ಳಾಗಿ ನಿಲ್ಲಬಾರದು,

ವಿಶಾಲವಾದ ಸತ್ಯ, ಉದಾರವಾದ ಧರ್ಮ, ಕೌಶಲ್ಯವುಳ್ಳ ಲೌಕಿಕ, ಇವಕ್ಕೆ ಕಣ್ಣುಮುಚ್ಚಿ, ನಮ್ಮ ಬಾಳಿನ ಬಾಳಿಯು ಕಂಮುಗಳು ತೇಲಿಹೋಗಿ, ನಮ್ಮ ಸಂಘ ಶಕ್ತಿ

ಉಡುಗಿ, ಅತಿ ವೈರಾಗ್ಯದಲ್ಲಿ, ಅತಿ ಲೌಕಿಕವಲ್ಲಿ, ಅತಿಬದ್ಧ ಸಂಪ್ರದಾಯದಲ್ಲಿ ಮುಳುಗಿದ್ದರಿಂದಲ್ಲವೇ (ನಾವು ಕುಸಿದು ಹೋದದ್ದು)? ಹೊಂದೊಡರೂ ತೊಡರಲ್ಲವೇ?

ಡಿಳ್ಳಿ ನನಗೆ ಬಲುದೂರ, ಕನ್ನಡನಾಡಿನ ಹಳ್ಳಿ ನನಗೆ ಸಾಕು.

ನನ್ನ ಜೀವದ ಜೀವಾಳದಲ್ಲಿ ಜೈನಾಂಶವೂ ಸೇರಿದೆ.

ನನಗೆ ಬೇಕಾದ ಶಾಂತಿ ಸತ್ತದ್ದನ್ನಪ್ಪಿಕೊಂಡು ಬಿದ್ದಿರುವ ಶಾಂತಿಯಲ್ಲ, ಹಳೆಯ ವಸ್ತ್ರವನ್ನು ಬಿಸುಟು ಹೊಸ ಆತ್ಮವಾಗಿ ಮುನ್ನುಗ್ಗುವ ಏರಾಟದ ಶಾಂತಿ.

ಇಂಗ್ಲಿಷ್ ವಿದ್ಯೆ, ಸಾಹಿತ್ಯ ನನ್ನ ಜೀವಕ್ಕೆ ರಸವನ್ನು ತುಂಬಿದೆ.

ನಮ್ಮ ಮೈಯಲ್ಲಿ ಹುಟ್ಟಿದ ರೋಗ ನಮ್ಮದಾದರೂ ಕಳೆಯತಕ್ಕ ವಿಷ; ಹೊರಗಿನ ಕಾಡಿನಿಂದ ತಂದ ಮೂಲಿಕೆ, ಹೊರಗಿನದಾದರೂ ರಕ್ತಗತವಾಗಬೇಕಾದ ಅಮೃತ.

ಕಿಟಕಿಗಳಿಲ್ಲದೆ ಉಸಿರುಕಟ್ಟಿ ಕೆಟ್ಟದ್ದಾಯಿತು, ಕಿಟಕಿಗಳನ್ನು ವಿಶ್ವದ ಎಲ್ಲಾ ದಿಕ್ಕುಗಳಲ್ಲಿಯೂ ತೆರೆದು ಹೊಸ ಗಾಳಿ, ಹೊಸ ಬೆಳಕು ತುಂಬಿ ಹೊಸ ಉಸಿರು ಹೊಮ್ಮಲಿ.

ಪ್ರತಿಯೊಬ್ಬ ಕನ್ನಡಿಗನೂ ಕನ್ನಡಮ್ಮನ ಪೂಜಾರಿಯಾಗಬೇಕು. ಆಕೆಯ ಆಶೀರ್ವಾದ ಹೊಂದಿ ಭಾರತಮಾತೆಯ ಪೂಜೆಗೆ ಮುಂದಡಿಯಿಡಬೇಕು.

(ಕನ್ನಡದ ಅವನತಿಗೆ ನಮ್ಮ ನಿರಭಿಮಾನವೇ ಕಾರಣ) ಹಾಲು ಚೆಲ್ಲಿತು; ನೆಲದಲ್ಲಿ ಬತ್ತಿಹೋಯಿತು.

ಟ್ರಾಜೆಡಿ ಎಂದರೆ ಗ್ರೀಕಿನಲ್ಲಿ ಆಡಿನ ಹಾಡು ಎಂದು ಅರ್ಥ; ಅಜಗೀತೆ ಎಂದು ಬೇಕಾದರೆ ಹೇಳಬಹುದು.

ನಾಯಕನನ್ನು ಬೆನ್ನುಹತ್ತಿ 'ಜಯ' ವನ್ನು ಬಯಸುವವರು, ಪ್ರತಿನಾಯಕನ ದೃಷ್ಟಿಯಿಂದ ಅವನ ಅಪಜಯವನ್ನು ನೋಡಬಾರದೇಕೆ?

ರಂಗಸ್ಥಳದಲ್ಲಿ ಸಾವನ್ನು ನೋಡಲು ಹೆದರಿದರೆ, ಬೇಯುವ ಒಲೆ ಯಾವುದು? ಸಾಯದ ಮನೆ ಯಾವುದು?

ಸಾಹಿತ್ಯವೆಲ್ಲಾ ಮಿಠಾಯಿಯಲ್ಲ; ಕಹಿ ಔಷಧವೂ ಉಂಟು. ರುದ್ರನಾಟಕದ ಭಯ ಮಕ್ಕಳ ಭಯ, —ಅವು ಕತ್ತಲೆಗೆ ಹೆದರಿದಂತೆ.

'ಗುರು' ದೊಡ್ಡ ಹೆಸರು, ನಾವು ಸಂಬಳದ ಉಪಾಧ್ಯಾಯರು.

ಎಲ್ಲಾ ಸಾಹಿತ್ಯಗಳಲ್ಲಿಯೂ ಚಿನ್ನವೂ ಉಂಟು, ಹಿತ್ತಾಳೆಯೂ ಉಂಟು; ಜೀವರಸವೂ ಉಂಟು; ಬರಿಯ ಭ್ರಾಂತಿಯ ಕಸವೂ ಉಂಟು. ಹಿತ್ತಾಳೆಯಿಂದ ಚಿನ್ನ ಕೆಟ್ಟೀತು; ಕಸದಿಂದ ರಸ ವಿಷವಾದೀತು.

ಅಪ್ಪ ನೆಟ್ಟ ಮರವೆಂದು ನೇತುಹಾಕಿಕೊಳ್ಳಬೇಕಾದ್ದಿಲ್ಲ. 'ವಾಸಾಂಸಿ ಜೀರ್ಣಾನಿ ಯಥಾ ವಿಹಾಯ' ಎಂದಂತೆ....ಉಳಿಯಲಾರದ್ದನ್ನು,ಉಳಿಯಬಾರದ್ದನ್ನು, ತ್ಯಜಿಸುವ ಧೈರ್ಯ ನಮ್ಮಲ್ಲಿ ಬೆಳೆಯಬೇಕು.

ಪುರಾತನರ ಜ್ಞಾನವನ್ನೂ, ನೂತನರ ಜ್ಞಾನವನ್ನೂ, ಹೊಂದಿಸಿ, ಇಬ್ಬರ ಅವಿವೇಕವನ್ನೂ ದೂರಮಾಡಿ, ಬುದ್ಧಿಯನ್ನು ಪ್ರೇರಿಸುವ ವಿಶಾಲ ದೃಷ್ಟಿಯನ್ನು ಪಡೆಯುವುದು ಎಲ್ಲರ ಪರಮ ಕರ್ತವ್ಯವಾಗಿದೆ.

ಹಿಂದಿನ ಪ್ರಪಂಚ ಮರಳಲಾರದು; ಅಲ್ಲಿ ಮತ್ತೆ ಹೋಗಿ ನಾವು ಉಸಿರಾಡಲಾರೆವು,

ಮುಕ್ತಿಯೆಂದರೆ ಇಷ್ಟು ಸ್ಪಷ್ಟ ಅರ್ಥವನ್ನು ಇಟ್ಟುಕೊಳ್ಳೋಣ: ಬಿಡುಗಡೆ, ಸ್ವಾತಂತ್ರ್ಯ. freedom, liberation: ಅಜ್ಞಾನದಿಂದ, ಅಸತ್ಯದಿಂದ, ಅಧರ್ಮದಿಂದ, ಪಾಪವಾಸನೆಯಿಂದ ಬಿಡುಗಡೆ.

ನಿವೃತ್ತನಾದ ಮೇಲೂ, ದೃಢಕಾಯವಿರುವವರೆಗೆ, ನಾನು ಕನ್ನಡನಾಡನ್ನು ಇನ್ನೂ ಹೆಚ್ಚಾಗಿ ಸಂಚರಿಸಿ, ನಾಡಿನ ನಾನಾ ಭಾಗಗಳಲ್ಲಿನ ಹೊಸ ಮಿತ್ರರ ಮನೆಗಳಿಗೆ ನುಗ್ಗಿ, ಊಟಗಳ ಸವಿ ಬಯಸುತ್ತಿದ್ದೇನೆ. ಸರ್ವರ ಕರುಣದ ಶಿಶು ನಾನು, ನಾಡತೊತ್ತು,

ನಿಮ್ಮ ಪ್ರೇಮವನ್ನೆಲ್ಲಾ ನನ್ನ ಹೃದಯದಲ್ಲಿ ತುಂಬಿಕೊಂಡಿದ್ದೇನೆ–ಹಿಡಿಯಲಾರದೆ ಅದು ಬಿರಿಯುತ್ತಿದೆ, ದಾಳಿಂಬೆಯ ಹಣ್ಣಿನಂತೆ! ನಾನು ಇದರಲ್ಲಿ ಧನ್ಯ,

ಒಲುಮೆಗಿಂತ ಗೆಲುವಿಲ್ಲ. ಒಕ್ಕೂಟಕ್ಕಿಂತ ಬಲವಿಲ್ಲ. ಸಣ್ಣದನ್ನು ದೊಡ್ಡದು ಮಾಡದೆ, ದೊಡ್ಡದನ್ನು ಸಣ್ಣದು ಮಾಡದೆ, ತಾಳ್ಮೆ, ಶಿಸ್ತು, ಅಚ್ಚುಕಟ್ಟು, ಒಕ್ಕೂಟ, ಒಲುಮೆ ಇವು ಕಲೆತರೆ ಕನ್ನಡನಾಡಿನ ಮಣ್ಣು ಹೊನ್ನಾಗುವುದು; ಬಾಳು ಬಾನಾಗುವುದು.

ಬೀಳ್ಕೊಡಿಂ, ಎನಗೆ ಜೀವಾನಂದವಾಗಿರ್ದ್ದರೆಲ್ಲರ್ ಬೀಳ್ಕೊಡಿಂ, ನಾನ್ ಪೋಗಿ ಬರ್ಪೆನ್!

ಜಳ್ಳನ್ನು ತೂರಿ ಕಾಳನ್ನು ತುಂಬಿಕೊಳ್ಳಬೇಕಾಗಿದೆ, ಈಗ–ಸಾಹಿತ್ಯ ಕಲಾಪುತ್ರರ ಆತ್ಮಪುಷ್ಟಿಗಾಗಿ.

ಕೊನೆಗೆ ನಿಲ್ಲುವುದು ಅಭಿಮಾನವಲ್ಲ, ಸತ್ಯ,

ನಿಕೃಷ್ಟಮಿೂ ಸಂಸಾರಂ, ಅಸಾರಮಿೂ ಸಂಸಾರಂ ನಿಕೃಷ್ಟವಾದುವೂ, ಅಸಾರವಾದುವೂ ಸಂಸಾರದಲ್ಲಿಲ್ಲವೆಂದಲ್ಲ, ಆದರೆ, ಸಂಸಾರವೇ ನಿಕೃಷ್ಟವೇ? ಸಂಸಾರವೇ ಅಸಾರವೆ?

ಜನವಾಣಿ ಬೇರು; ಕವಿವಾಣಿ ಹೂವು.

ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ, ಶೀಘ್ರದಲ್ಲಿಯೇ ಕನ್ನಡನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು.

ನಾಗಚಂದ್ರಕವಿ ಕನ್ನಡದಲ್ಲಿ ನನ್ನ ಮೊದಲನೆಯ ಒಲುಮೆ; ಧಾರವಾಡ ನಗರದಲ್ಲಿ ನನ್ನ ಕನ್ನಡ ತೊಳಲಿನ ಮೊದಲನೆಯ ಮಾತು.

ಆದರೂ ಯಾವ ಗಳಿಗೆಗೆ ಹೇಗೋ ಮಾನವ ಪ್ರಕೃತಿ! ಯಾವ ಸೂಕ್ಷ್ಮದಲ್ಲಿ ಯಾವ ವಿಪಕ್ರಿಯೆಯೋ, ಕಾಲವೂ ಕರ್ಮವೂ, ವಿಧಿಯೂ ಕಾದಿರುವಾಗ!

ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟು.

ಕನ್ನಡಿಗರು ಒಡೆದಿದ್ದಾರೆ; ಒಡಕು ಬೆಳೆಯುತ್ತಲೂ ಇದೆ; ವಿದ್ಯೆಯಲ್ಲಿ ಜ್ಞಾನ ಪ್ರಚಾರದಲ್ಲಿ, ಸಾಹಿತ್ಯದಲ್ಲಿ, ಕನ್ನಡದೇಶದ ಎಲ್ಲಾ ಕಾರ್ಯಸ್ಥಾನಗಳಲ್ಲಿ ಕನ್ನಡಕ್ಕಿರಬೇಕಾದ ಪ್ರಧಾನ ಸ್ಥಾನವನ್ನು ಕೊಡಬೇಕೆಂದು ಹೋರಾಡುವವರು ಕೆಲವು ಮಂದಿ ಮಾತ್ರ.

ಹಳಗನ್ನಡಕ್ಕೆ ಹೆದರಬೇಡಿ, ಕೊಂಚ ಅಭ್ಯಾಸವಾದರೆ, ದೊಡ್ಡ ಬೊಕ್ಕಸಕ್ಕೆ ನಿಮಗೆ ಬೀಗದ ಕೈ ಅದು.

ಕವಿಯಿಲ್ಲದ ನಾಡು ಕುರುಡು ನಾಡು. ಕವಿ ಕಣ್ಣುಕೊಟ್ಟ ನಾಡು ಬಿರುಗಣ್ಣರ ಬೀಡು.

ತೆರೆ ತೆರೆಯಾಗಿ, ನೊರೆ ನೊರೆಯಾಗಿ, ಏಳಿಸಿ, ಕೇಳಿಸಿ, ಹೇಳಿಸಿ, ಮಹಾಭಾರಾವತಾರವಾಯಿತು.

ಭಾಷೆ ಭಾಷೆಗೆ ಹೊಯ್ಯುತ್ತಲೇ ಇರಬೇಕು, ರೀತಿ ರೀತಿಗೆ ನೆಯ್ಯುತ್ತಲೇ ಇರಬೇಕು,

"ಅಹಿಂಸಾ ಪರಮೋಧರ್ಮಃ" ಎಂಬ ಸೂತ್ರದ ಮೇಲೆ ಕಟ್ಟಿದ ಧರ್ಮಗಳಿಗೆ ಚ್ಯುತಿಯಿಲ್ಲ.

ಹೊಸ ಸಾಹಿತ್ಯದ ಮೂಲಮಂತ್ರ :"ಉದಾರಚರಿತಾನಾಂತು ವಸುಧೈವ ಕುಟುಂಬಕಂ." ಮಾನುಷಿಕವಾದದ್ದು ಯಾವುದೂ ನನಗೆ ಹೊರಗಲ್ಲ....

ಜಳ್ಳನ್ನು ತೂರಿ, ಕಾಳನ್ನು ಕಣಜಕ್ಕೆ ತುಂಬಿ.

ಬೊಜ್ಜು ಬಲವಲ್ಲ.

(ಪ್ರಜಾಪ್ರಭುತ್ವ) ಬರಿಯ ಬಲವಲ್ಲ;....ಹಕ್ಕುಗಳಿಗಿಂತಲೂ ಹೆಚ್ಚಾಗಿ ಜವಾಬ್ದಾರಿಯನ್ನು ಬಯಸುವ ಬಿಲ್ಲಾಳುಗಳ ಬಾಳಿಕೆಯ ಆಳಿಕೆ.

(ಪ್ರಜಾಪ್ರತಿನಿಧಿಗಳು) ಜನತೆಯ ಕೆನೆ, ಆಡಳಿತದ ಮೊನೆ.

ಬೆಲೆ ಜನಸಂಖ್ಯೆಯ ಮೇಲೆ, ವಿಸ್ತೀರ್ಣದ ಮೇಲೆ, ನಿಂತಿಲ್ಲ. ಬೆಲೆ ಬೆಲೆಯ ಮೇಲೆ ನಿಂತಿದೆ.

ನಮ್ಮ ಅದೃಷ್ಟ ನಮ್ಮ ಕೈಯಲ್ಲಿಯೇ ಅಡಗಿದೆ.

ಕನ್ನಡದ ಸಾರಮಂತ್ರ: ಹೀರಿ ಹೊಮ್ಮುವುದು;ಮರಳಿ ಮರಳಿ ಪುನರುಜ್ಜೀವನ.

ಕನ್ನಡದ ಕೆಲಸ, ನುಡಿಯ ನಾಡ ಕೆಲಸ–ಒಂದು ಗುರುಪರಂಪರೆ.

ನಮ್ಮ ಮುಂದಾಳುಗಳಿಗೆ, ವಿದ್ಯಾವಂತರಿಗೆ, ಕನ್ನಡದಲ್ಲಿ ನಂಬಿಕೆ ಸಾಲದು. ಮನಸ್ಸು, ಎತ್ತೆತ್ತವೊ ಹರಿಯುತ್ತಿದೆ. ಕನ್ನಡವನ್ನು ಇನ್ನೂ ನಂಬಿ, ಕನ್ನಡವನ್ನು ಕೈ ಹಿಡಿಯಿರಿ; ಕನ್ನಡಿಗರನ್ನು ಎಚ್ಚರಿಸಿ, ಮುಂದಕ್ಕೆ ನಡೆಸಿ.

ಎಲ್ಲಾ ಕಡೆಯೂ ಸೋತವರು ಉಪಾಧ್ಯಾಯ ವೃತ್ತಿಗೆ ಬರುವರೆಂಬ ಲೋಕೋಕ್ತಿಯಂತೆ, ನಾನು ಕಡೆಗೆ ಉಪಾಧ್ಯಾಯನಾದೆ. ಕರುಣಾಳು ಬೆಳಕು ನನ್ನನ್ನು ನನ್ನ ಹೃದಯಕ್ಕೆ ಒಗ್ಗಿದ ಕೆಲಸಕ್ಕೆ ತಂದುಬಿಟ್ಟಿತು. ಉಪಾಧ್ಯಾಯನಾಗಿ ಕನ್ನಡತಾಯ ಕೃಪಾಕಟಾಕ್ಷಕ್ಕೆ ಪಾತ್ರನಾದೆ, ಧನ್ಯನಾದೆ!

ತನ್ನಲ್ಲಿದ್ದ ಜ್ಞಾನವನ್ನು ತಿಳಿಯದವರಲ್ಲಿ ಹಂಚದಿದ್ದವನು 'ಬ್ರಹ್ಮರಾಕ್ಷಸ' ನಾಗುತ್ತಾನೆ.

ಬಲ್ಲವರಿಗೆ ಬೆರಗೆ ಇಲ್ಲಿ? ಅರಿಯದವರು ನಾಲ್ವರಲ್ಲಿ, ಕಳೆಯ ಬೆಳಕು ಹೊಳೆಯಲೆಂದು ದಣಿದು ಹೋದೆನು. ಬಡವನಳಿಲು ಸೇವೆಯೆಂದು ಧನ್ಯನಾದೆನು.

ಇಂದವನ್, ನಾಳೆ ನಾನ್; ಏನ್ ಪಾಡೊ ಆಳಬಾಳ್ ; ಬೀಸುವ ಬಯಲ್ ಗಾಳಿ, ಪರಿದಡಂಗುವ ನೆಳಲ್ ! !

ಮಿತಿಯರಿದು ನೆಗಳ್ವರ್ಗೆ ದೇವರ್ಕಳ್ ಒಸೆದಪರ್,–ಮುರಿದಪರ್ ಮಿಕ್ಕರನ್.

ಮರ್ದಲ್ತು ಪೊಲೆಗೆ ಪೊಲೆ.

ಇಂತಪ್ಪನ್ ಇಲ್ಲಮೆಂದಾದೆನ್, ಈಗಳೋ ಇಂತಪ್ಪನ್ ಇಲ್ಲವೆಂದೇ ಆದೆನ್.

ದೈವಂ ತಪ್ಪಾಗಿ ನಡೆಸುವೊಡೆ, ಕಲಿ ಎಡಪುವನ್, ಪೇಡಿ ಬರ್ದುಕುವನ್.

ತಕ್ಕನ್ ತಕ್ಕವೊಲ್ ಬಾಳ್ದಪನ್, ತಕ್ಕವೊಲ್ ಸತ್ತಪನ್.

ಮಗುಗೆ ಪಾಲ್ಗಿಲ್ಲ, ರಾಜರೊಳ್ ಕೆಳೆತನಂ.

ತಂದೆಯಿನ್, ಕಂದ, ಮೇಲಾಗು ಅದೃಷ್ಟದೊಳ್; ಮಿಕ್ಕೆಲ್ಲ ನಡತೆಯೊಳಮ್ ಅವನಂತೆ ಆಗು.

ಅರಿಯುಮೆಯೆ ಸುಖಂ!
ಅಳಬೇಡ; ಅಳ್ಕೆ ಪೆಣ್!

ತವರಡವಿ ನೆಳಲೊಳ್ ಸಮರುಮ ಮುರಿದೆರಕೆಯಾತ್ಮಮನ್, ತಪಮೆಸಗಿ.

ಬಾಳ್ ಬರಿಯದಾದಂದು, ಸಾವು ತಾನ್ ಪೂರ್ಣಂ.
ಪಗೆಯ ಮೆಚ್ಚೊಂದು ಮೆಚ್ಚಲ್ತು.

ಮೇಗಣಧಿಕಾರಕೆಂತಪ್ಪ ರೌದ್ರಮುಂ ಶಕ್ತಿಯುಂ ಮೊಳ್ಗುವುದು. ಕೊರೆಪಲ್ಲ ಕುಳಿರ ಹೇಮಂತನ್ ಪೊಳ್ತು ಬರೆ, ಮುಪ್ಪಾಗಿ, ಎಳಚಿಗುರ ಚೈತ್ರಂಗೆ ಬಳಿವಿಟ್ಟು ಪೋಕುಂ.

ಮನುಜಂಗೆ ಸ್ನೇಹಮೆಂಬುದು ಪುಸಿಯನಚ್ಚು.
ಅಶ್ವತ್ಥಾಮನ್ ಇದ್ದ ಮೊನೆ ಮುರಿಯದು.
ಪ್ರಾರ್ಥಿಪುದು ಸಾವರ್ಗೆ ಧರ್ಮಂ.
ಪಿಳ್ಳೆಪೆಸರಿಲ್ಲಾಯ್ತು ಕೌರವಕುಲಶ್ರೀ.

ಬಲಿಯಾಯ್ತು ಭಾರತಕೆ ತಂದೆ ಮಕ್ಕಳ ಬರ್ದುಕು.
ದೈವಕ್ಕೆ ಬಿಳ್ದನ್ ಇವನ್.
ಸತ್ತರೊಳ್ ಪುರುಡಿಸುವ ಶೂರರ್ ಇರ್ಪರ್ ಕೆಲರ್.

ವಿಧಿ ಮುಳಿಯೆ, ಆರಿರ್ದುಮ್ ಏನ್ ಮಾಳ್ಪರ್.

ಆಳ್ ಸಿರಿಗೆ ಕರುಬುವುದು ದೈವಮ್.
ನುಡಿಯಿಸಲ್ ಬಲ್ಲಂಗೆ ಬಿಲ್ಲೊಂದು, ಮೇಣ್ ಬೀಣೆಯೊಂದು.
ಬಡಪಾರ್ವರೊಳ್ ಬೆಳೆದು ಬಾಯ್ ಬಡಿವುದನೆ ಕಲ್ತೆ.

ಓ ಪೊಲ್ಲ ಯುದ್ಧಮೇ
ಎಂದು ನಿಲ್ವಯ್!
ಓ ತಾಯೆ ಶಾಂತಿಯೇ
ಎಂದು ಗೆಲ್ವಯ್!

ಪೇರಾಳಕಿಕ್ಕರೇ ನರಕದೊಳ್ ಗಿಡಿದು
ಯುದ್ಧಮನ್ ನೆಲಕೆ ಬಿತ್ತಿದ ಪರಮ ಪಾಪಿಯನ್!
ಸರ್ಪದುರಿಪಲ್ಗಳನ್ ಬಿತ್ತಿದಾ ಪಾಪಿಯನ್,
ಆ ಪಾಪಿ ಕಿಡಿಸಿದನ್ ಚೆಲ್ವಾದ ಬಾಳ್ಕೆಯನ್
ಆಟಪಾಟಂಗಳನ್, ಪಲಸಿರಿಯ ಮಾಳ್ಕೆಯನ್!!
ಕರ್ಮಮ್ ಈ ಪರಿ ಮರಿಗೆ ಮರಿ ಇಕ್ಕುತಿರ್ಕುಂ,
ಕ್ಷಮೆಯಿಂದೆ ಸಮೆಯದಿರೆ, ಮರುಕೊಳಿಸುತಿರ್ಕುಂ.

ದ್ವೇಷಮ್ ಎನಿತಿರ್ದೊಡಂ, ತುಳಿಯದಿರು ಧರ್ಮಮನ್.
ಕಲಿ ಸಾಯೆ ಪಗೆಗಳುಂ ಪೊಗಳ್ವುದು ಶೀಲಂ.
ಕೆಳೆಯಂಗೆ ಸೋಲ್ವುದೆ ಜಯಂ; ಕ್ಷಮೆಯೆ ತಾನ್ ಜಯಂ.

ಭರತಮಾತೆಯೆ, ಭರತಮಾತೆಯೆ, ಎಂದು ನೀ ತಲೆಯೆತ್ತುವೆ?
ಎಂದು ಲೋಕದ ಜನದ ಹೃದಯದಿ ನಿನ್ನ ಮಹಿಮೆಯ ಬಿತ್ತುವೆ?

ಏನು ಚೆಲುವಿನ ನಾಡು! ಚೆಲುವು ಚೆಲ್ಲುವ ನಾಡು! ಕನ್ನಡದ ನಾಡು!

ಏರಿಸಿ, ಹಾರಿಸಿ, ಕನ್ನಡದ ಬಾವುಟ!
ಓಹೊ ಕನ್ನಡ ನಾಡು, ಆಹ ಕನ್ನಡ ನುಡಿ!
ಹಾರಿಸಿ, ತೋರಿಸಿ, ಕೆಚ್ಚೆದೆಯ ಬಾವುಟ!
ಗಾಳಿಯಲಿ ಫಟಫಟ, ದಾಳಿಯಲಿ ಛಟಛಟ
ಉರಿಯಿತೋ ಉರಿಯಿತು ಹಗೆಯ ಪಟ ಮನೆ ಮಟ,
ಪಾಳ್ ಹಾಳ್ ಸುರಿಯಿತೋ ಹಗೆಯ ಬೀಡಕ್ಕಟ.

ಹೂವಾದ ಬಾಳುದುರೆ, ಹಣ್ಣಾಗಿ ಬಹುದು–ಮತ್ತೆ ಹೂವಹುದು.

ಮೊತ್ತಮೊದಲ್, ಬೆಳಕಾಗಲೆಂದಾಗ, ಬೆಳಕಾಯ್ತು; ಬೆಳಕು ಚೆಲುವಾಯ್ತು.
ಆನುದವರಿಯದರ್, ಆತ್ಮವನೆ ಒಲ್ಲದರ್, ಬಾನಗಡಿಯಲಿ ಗಿಡಿದ
ಕತ್ತಲೆಯ ಗುಹೆಯೊಳಡಗಿರ್ದರಾ ಅಸುರರ್...ಮುತ್ತಿ
ಮರುಳ್ಗೊಳಿಸಿದರ್ ಸಂಶಯಂಗಳನೊತ್ತಿ, ಪಾಪಮಂ ಬಿತ್ತಿ,
ಅಂದು ಮೊದಲಾದುದೇ ದೇವಾಸುರಂ
ಎಂದು ಕೊನೆಗಾಣ್ಬುದೋ ದೇವಾಸುರಂ!

ಋತುವೊಂದೆ ಗೆಲ್ಲುವುದು, ಅನೃತವಲ್ತು;
ಅಮೃತಮೆನೆ ವಿದ್ಯೆಯೆ, ಅವಿದ್ಯೆಯಲ್ತು;
ವಿಶ್ವಭಾರತಿ ಶರಣು, ಕಿರುತೀರ್ಥವಲ್ತು.

ಸರ್ವ ಜೀವಂಗಳುಂ ಮುಕ್ತಿಯಂ ಕಾಣ್ಗೆ;
ದೇವರೊಳ್ ಪಗೆವವರ ಕಾಳೆಗಂ ಮಾಣ್ಗೆ;
ಸಾವುದೆಲ್ಲಾ ಸತ್ತು, ಬಾನಾಳ್ಕೆ ಪೂಣ್ಗೆ.

ಅನುಬಂಧ-೨

ಶ್ರೀ ಜೀವನ ಪಥ[1] :

೧೮೮೪, ಜನವರಿ ೩	ತುಮಕೂರು ಜಿಲ್ಲೆಯ ಸಂಪಿಗೆ ಗ್ರಾಮದಲ್ಲಿ ಜನನ
೧೯೦೩	ಎಫ್. ಎ. ಪರೀಕ್ಷೆ
೧೯೦೪	ಬೆಳ್ಳೂರಿನ ರಾಮಸ್ವಾಮಿಯವರ ಮಗಳು ದೇವಮ್ಮ ಅವರೊಡನೆ ವಿವಾಹ
೧೯೦೬	ಬಿ. ಎ. ಪರೀಕ್ಷೆ
೧೯೦೭	ಬಿ. ಎಲ್. ಪರೀಕ್ಷೆ
೧೯೦೯	ಎಂ. ಎ. ಪರೀಕ್ಷೆ
೧೯೦೯	ಮೈಸೂರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ನೇಮಕ
೧೯೧೧	ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ 'ಕನ್ನಡ ಮಾತು ತಲೆ ಎತ್ತುವ ಬಗೆ' ಎಂಬುದನ್ನು ಕುರಿತು ಭಾಷಣ
೧೯೧೪	A Handbook of Rhetoric ಪ್ರಕಟನೆ

[1] ಅನುಬಂಧ ೨ ಹಾಗು ೩ ಸಿದ್ಧಪಡಿಸುವಲ್ಲಿ ನನ್ನ ಮಗ ಚಿ. ಅನಿಲ ತುಂಬಾ ಸಹಾಯ ಮಾಡಿದನು.

೧೯೧೪	ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉಪಪ್ರಾಧ್ಯಾಪಕರಾಗಿ ನೇಮಕ
೧೯೨೬	'ಗದಾಯುದ್ಧ ನಾಟಕಂ' ಪ್ರಕಟನೆ
೧೯೨೬	'ಇಂಗ್ಲಿಷ್ ಗೀತೆಗಳು' ಪ್ರಕಟನೆ
೧೯೨೬–೧೯೩೦	ಮೈಸೂರು ವಿಶ್ವವಿದ್ಯಾನಿಲಯದ ರಜಿಸ್ಟ್ರಾರರಾಗಿ ನೇಮಕ
೧೯೨೭	ಗೌರವ ಕನ್ನಡ ಪ್ರಾಧ್ಯಾಪಕರು
೧೯೨೮	ಕಲಬುರ್ಗಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಚುನಾವಣೆ
೧೯೨೯	'ಅಶ್ವತ್ಥಾಮನ್' ಪ್ರಕಟನೆ
೧೯೩೦	ಪ್ರಥಮ ದರ್ಜೆ ಪ್ರಾಧ್ಯಾಪಕರಾಗಿ ನೇಮಕ
೧೯೩೫	'ಪಾರಸಿಕರು' ನಾಟಕದ ಪ್ರಕಟನೆ
೧೯೩೬	'ಕನ್ನಡ ಛಂದಸ್ಸಿನ ಚರಿತ್ರೆ' ಪ್ರಕಟನೆ
೧೯೩೮	'ಕನ್ನಡದ ಬಾವುಟ' ಪ್ರಕಟನೆ
೧೯೩೮	ಮೈಸೂರು ಮಹಾರಾಜರಿಂದ 'ರಾಜಸೇವಾಸಕ್ತ' ಪದವಿ, 'ಕನ್ನಡ ನುಡಿ' ನಿಯತಕಾಲಿಕ ಪ್ರಾರಂಭ. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಚುನಾವಣೆ
೧೯೩೯	ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅಚ್ಚುಕೂಟದ ಸ್ಥಾಪನೆ
೧೯೪೦	ಸಾಹಿತ್ಯ ಪರಿಷತ್ತಿನ ಪರೀಕ್ಷೆಗಳ ಪ್ರಾರಂಭ
೧೯೪೧	'ಸಂಭಾವನೆ' ಪ್ರಶಸ್ತಿ ಗ್ರಂಥ ಸಮರ್ಪಣೆ
೧೯೪೨	ವಿಶ್ವವಿದ್ಯಾನಿಲಯದಿಂದ ನಿವೃತ್ತಿ
೧೯೪೨	ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ ನೇಮಕ
೧೯೪೨	'ಕನ್ನಡ ಸಾಹಿತ್ಯದ ಚರಿತ್ರೆ'ಯ ಪ್ರಕಟನೆ
೧೯೪೩	'ಹೊಂಗನಸುಗಳು' ಪ್ರಕಟನೆ
೧೯೪೪	ಧಾರವಾಡದ ಕೆ.ಇ. ಬೋರ್ಡ್ ಕಾಲೇಜಿನ(ಸದ್ಯದ ಜೆ. ಎಸ್. ಎಸ್. ಕಾಲೇಜು) ಪ್ರಾಚಾರ್ಯರಾಗಿ ನೇಮಕ
೧೯೪೬ ಜನವರಿ ೫	ಧಾರವಾಡದಲ್ಲಿ ನಿಧನ
೧೯೪೮	'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' 'ಇಸ್ಲಾಂ ಸಂಸ್ಕೃತಿ' ಪ್ರಕಟನೆ

೧೯೮೩	'ಶ್ರೀಸಾಹಿತ್ಯ' ಸಮಗ್ರಕೃತಿ ಸಂಪುಟದ ಪ್ರಕಟನೆ
೧೯೮೪	ಶ್ರೀ ಶತಮಾನೋತ್ಸವ ವರ್ಷ
೧೯೮೪ ಜನೆವರಿ, ೧	ಶ್ರೀಯವರನ್ನು ಕುರಿತು 'ಶ್ರೀಸ್ಮರಣೆ' ಪ್ರಕಟನೆ, ಧಾರವಾಡದ ಜೆ. ಎಸ್. ಎಸ್. ಕಾಲೇಜಿನಿಂದ
೧೯೮೪	'ಶ್ರೀನಮನ'–ರಾ. ಯ. ಧಾರವಾಡಕರ ಅವರ ಗ್ರಂಥ ಪ್ರಕಟನೆ
೧೯೮೪	'ಶ್ರೀ ನಿಧಿ'-ಬೆಂಗಳೂರಿನ ಬಿ. ಎಂ. ಶ್ರೀ. ಪ್ರತಿಷ್ಠಾನ ಪ್ರಕಟನೆ
೧೯೮೪	ಶ್ರೀಯವರನ್ನು ಕುರಿತು 'ಪುಸ್ತಕ ಪ್ರಪಂಚದ' ವಿಶೇಷ ಸಂಚಿಕೆ

ಬಿ. ಎಂ. ಶ್ರೀಕಂಠಯ್ಯನವರ ಕೃತಿಗಳು

೧೯೧೪	A Hand Book of Rhetoric
೧೯೨೬	ಇಂಗ್ಲಿಷ್ ಗೀತೆಗಳು
೧೯೨೬	ಗದಾಯುದ್ಧ ನಾಟಕಂ
೧೯೨೯	ಅಶ್ವತ್ಥಾಮನ್
೧೯೩೫	ಪಾರಸಿಕರು
೧೯೩೬	'ಕನ್ನಡ ಛಂದಸ್ಸಿನ ಚರಿತ್ರೆ' (ಕನ್ನಡ ಕೈಪಿಡಿ ಮೊದಲನೇ ಭಾಗದ ಎರಡನೇ ಮುದ್ರಣದಲ್ಲಿ ಸೇರಿದ್ದು)
೧೯೪೩	ಹೊಂಗನಸುಗಳು
೧೯೪೭	ಕನ್ನಡ ಸಾಹಿತ್ಯದ ಚರಿತ್ರೆ (ಕನ್ನಡ ಕೈಪಿಡಿಯ ಎರಡನೆ ಭಾಗ)
೧೯೪೮	ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ
೧೯೪೮	ಇಸ್ಲಾಂ ಸಂಸ್ಕೃತಿ (ಮುಹಮ್ಮದ ಅಬ್ಬಾಸ್ ಷೂಸ್ತ್ರಿ ಅವರ ಗ್ರಂಥದ ಅನುವಾದ)
೧೯೮೩	'ಶ್ರೀ ಸಾಹಿತ್ಯ' (ಸಮಗ್ರಕೃತಿ ಸಂಪುಟ)

ಸಂಪಾದಿತ ಕೃತಿಗಳು

೧೯೩೬	ಕನ್ನಡ ಕೈಪಿಡಿ
೧೯೩೮	ಕನ್ನಡದ ಬಾವುಟ
೧೯೪೨	ಕನ್ನಡ ಸಾಹಿತ್ಯದ ಚರಿತ್ರೆ
	ಅಲ್ಲದೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಕಟನೆಗಳ ಪ್ರಧಾನ ಸಂಪಾದಕರು

ಅನುಬಂಧ–೩

ಶ್ರೀಯವರನ್ನು ಮತ್ತು ಅವರ ಸಾಹಿತ್ಯವನ್ನು ಕುರಿತ ಕೃತಿಗಳು

ಸಂಭಾವನೆ ; (ಸಂ) ಮಾಸ್ತಿ ವೆಂಕಟೇಶ ಅಯ್ಯಂಗಾರ್ ೧೯೪೧
ಅಶ್ವತ್ಥಾಮನ್ : ವಿ. ಸೀತಾರಾಮಯ್ಯ ೧೯೪೬
ಕಾಣಿಕೆ : ವಯಸ್ಕರ ಶಿಕ್ಷಣ ಸಮಿತಿ, ಮೈಸೂರು ೧೯೪೬
ಅಶ್ವತ್ಥಾಮನ್-ಒಂದು ಹಕ್ಕಿ ನೋಟ : ಎನ್. ಅನಂತರಂಗಾಚಾರ್ ೧೯೫೪
ಬಿ. ಎಂ. ಶ್ರೀಕಂಠಯ್ಯ : ಬಿ. ಶ್ರೀ. ಪಾಂಡುರಂಗರಾವ್ ೧೯೭೧
ಬಿ. ಎಂ. ಶ್ರೀಕಂಠಯ್ಯ : ಎ. ಎನ್. ಮೂರ್ತಿರಾವ್ ೧೯೭೫
ಬಿ. ಎಂ. ಶ್ರೀಕಂಠಯ್ಯ : ಎಸ್. ಚೆನ್ನಪ್ಪ ೧೯೭೫
ಬಿ. ಎಂ. ಶ್ರೀಯವರ ಬದುಕು-ಬರಹ : ಕನ್ನಡ ಸಾಹಿತ್ಯ ಪರಿಷತ್ತು (ವರ್ಷ?)
B. M. Srikantia : S. V. Ranganna 1972
B. M. Srikantayya - A. N. Murthyrao 1974
ಶ್ರೀಸ್ಮರಣೆ : ಜೆ. ಎಸ್. ಎಸ್. ಕಾಲೇಜ ಧಾರವಾಡ ೧೯೮೪
ಶ್ರೀನಮನ : ರಾ. ಯ. ಧಾರವಾಡಕರ ೧೯೮೪
ಶ್ರೀನಿಧಿ : ಬಿ. ಎಂ. ಶ್ರೀಕಂಠಯ್ಯ ಪ್ರತಿಷ್ಠಾನ, ೧೯೮೪
ಆಚಾರ್ಯ ಬಿ. ಎಂ. ಶ್ರೀ : ಎಲ್ ಎಸ್. ಶೇಷಗಿರಿರಾವ್ ೧೯೮೪
ಕನ್ನಡದ ಕಣ್ವ : ಹೊ. ಶ್ರೀನಿವಾಸಯ್ಯ ೧೯೮೪

ಶ್ರೀವಾಣಿ : ಡಾ. ಹಾ. ಮಾ. ನಾಯಕ ೧೯೮೪
ಬಿ. ಎಂ. ಶ್ರೀ. ಭಾವಚಿತ್ರ : ೧೯೮೪

ಶ್ರೀಯವರನ್ನು ಕುರಿತು ಲೇಖನಗಳು

ಕನ್ನಡ ಕುಲಗುರು-ಬಿ. ಎಂ. ಶ್ರೀ : ಕೃಷ್ಣಶಾಸ್ತ್ರಿ ಎಚ್. ಎಸ್. (ಎತ್ತರದ ವ್ಯಕ್ತಿಗಳು ಪು ೨೩–೨೮)

ಕನ್ನಡದ ಕಣ್ವ ಬಿ. ಎಂ. ಶ್ರೀ. ಅವರು : ಮಲ್ಲಪ್ಪ. ಮ., (ಜಯ ಕರ್ನಾಟಕ ೪೦–೧೧, ಪು ೯–೧೪)

ಕನ್ನಡದ ದಿಗ್ಗಜ ಶ್ರೀಕಂಠಯ್ಯನವರು : ಸಂಪಾದಕರು (ಜಯ ಕರ್ನಾಟಕ ಪು ೫೯೨–೫೯೩)

ಕನ್ನಡದ ರಕ್ಷಾಮಣಿ ಶ್ರೀ ಬಿ. ಎಂ. ಶ್ರೀ : ರಾಜರತ್ನಂ ಜಿ. ಪಿ. (ಜೀವನ ೧೧-೯ ಪು ೩೫೮–೩೬೦)

ಕನ್ನಡದ ಶ್ರೀರಕ್ಷೆ : (ಜವರೇಗೌಡ, ದೇ., ಯಾತ್ರಿಕರು ಪು ೧–೨೪)

ನಂದಾ ನೆನಪು : ರಾಘವಾಚಾರ್, ಕ. ವೆಂ., (ಉಷಾ ಸಾಹಿತ್ಯ ಮಾಲೆ ಮೈಸೂರು ೧೯೭೩ ಪು ೨೧)

ನಾನು ಕಂಡ ಶ್ರೀಯವರು : ಕೃಷ್ಣಶಾಸ್ತ್ರಿ ಅಯ್ಯಂಗಾರ ಎಚ್. ಎಸ್. (ಕನ್ನಡ ನುಡಿ ೫–೧೧, ಪು ೬೧–೬೨)

ಶ್ರೀ 'ಶ್ರೀ' ಯವರ ಹೊಂಗನಸುಗಳು : ಮಾಸ್ತಿ ವೆಂಕಟೇಶ ಅಯ್ಯಂಗಾರ್ ("ಪೂಜನ", ೧೯೪೮)

ಬಿ. ಎಂ. ಶ್ರೀ. : ಶಂಕರಯ್ಯ ಜಿ. (ಕನ್ನಡನುಡಿ ೨೮–೧, ಪು ೩–೪)

ಬಿ. ಎಂ. ಶ್ರೀ. : ಸ್ವಾಮಿ ಬಿ. ಜಿ. ಎಲ್. (ಪಂಚಕಲಶ ಗೋಪುರ ಪು ೬೪-೬೯)

ಬಿ. ಎಂ. ಶ್ರೀಕಂಠಯ್ಯನವರು : ಗುಂಡಪ್ಪ ಡಿ. ವಿ. (ಸಾಹಿತ್ಯೋಪಾಸಕರು, ಪು ೨೧೮–೨೪೦)

ಬಿ. ಎಂ. ಶ್ರೀಕಂಠಯ್ಯನವರು : ಬಾಲಕೃಷ್ಣ ಮತ್ತು ದಾನಿ ಸುರೇಂದ್ರ, (ಕನ್ನಡ ಸಾಹಿತ್ಯ ಪರಿಷತ್ ಕಥೆ, ಪು ೫೨–೫೨)

ಬಿ. ಎಂ. ಶ್ರೀಕಂಠಯ್ಯನವರು : ಮಾಸ್ತಿ ವೆಂಕಟೇಶ ಅಯ್ಯಂಗಾರ (ಕನ್ನಡನುಡಿ ೮–೧೨-ಪು ೫೧–೫೪)

ಬಿ. ಎಂ. ಶ್ರೀಕಂಠಯ್ಯನವರು : ಮೂರ್ತಿರಾವ್, ಎ. ಎನ್. (ಚಿತ್ರಗಳು ಪತ್ರಗಳು, ಪು ೭೪–೯೦)

ಬಿ. ಎಂ. ಶ್ರೀಕಂಠಯ್ಯನವರು : ಲಿಂಗಯ್ಯ. ಡಿ. (ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರ ಭಾಷಣಗಳು ಪು ೨೪೫–೨೪೬)

ಬಿ. ಎಂ. ಶ್ರೀಕಂಠಯ್ಯನವರು : ಸೀತಾರಾಮಯ್ಯ ವಿ. (ಮಹನೀಯರು ಪು ೨೬–೪೩)

ಬಿ. ಎಂ. ಶ್ರೀಕಂಠಯ್ಯನವರು : (ಕರ್ನಾಟಕ–ಕನ್ನಡ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ ೧೪೪೬–೧೪೪೮)

ಬಿ. ಎಂ. ಶ್ರೀಕಂಠಯ್ಯನವರು : ಪರಿಚಯ–ಕಾಣಿಕೆ, ಸೀತಾರಾಮಯ್ಯ ವಿ. (ಶ್ರೀ ಸಾಹಿತ್ಯ ಪು ೧-೫೩)

ಬಿ. ಎಂ. ಶ್ರೀ ವ್ಯಕ್ತಿತ್ವ ಮತ್ತು ಸಾಧನೆ : ನಾಗರಾಜಯ್ಯ ಹಂಪ, (ದರ್ಶನ, ಬೆಂಗಳೂರು ೧೯೬೭)

ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯನವರು : ಕೃಷ್ಣಶಾಸ್ತ್ರಿ ಎ. ಆರ್. (ಭಾಷಣಗಳು ಮತ್ತು ಲೇಖನಗಳು. ಪು ೪೫೧-೪೫೨)

ಶ್ರೀಕಂಠಯ್ಯ, ಮೈಲಾರ ಬೆಳ್ಳೂರ : ಸಾಂಗಲಿ, ವೆಂಕಟೇಶ (ಸಿರಿಗನ್ನಡ ಗ್ರಂಥ ಕರ್ತರ ಚರಿತ್ರಕೋಶ ಪು ೧೮೬-೧೮೭)

ಶ್ರೀಕಂಠ ಸಮರ್ಥನೆ : ರಾಘವಾಚಾರ್ ಕ. ವೆಂ. (ಪ್ರಜಾವಾಣಿ ೧–೨–೧೯೭೧ ಪು ೪೨)

ಶ್ರೀಯವರ ಕೊನೆಯ ನಿಮಿಷಗಳು : ಧಾರವಾಡಕರ ರಾ. ಯ. (ಕನ್ನಡನುಡಿ ಪು ೬೩–೬೫)

ಶ್ರೀಯವರ ಜೀವನ ಪರಿಚಯ : ವೆಂಕಟರಾಮಯ್ಯ ಸಿ. ಕೆ. (ಕನ್ನಡನುಡಿ ೩-೫೦ ಪು ೪೦೫–೪೦೬, ಕನ್ನಡನುಡಿ ೮–೧೨,ಪು ೫೩-೫೪)

ಶ್ರೀಯವರು : ಗೋಕಾಕ ವಿ. ಕೆ. (ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು, ಪು ೧೨೭-೧೩೨)

ಶ್ರೀಯವರು ಮತ್ತು ಅವರ ಕೃತಿಗಳು : ಕೃಷ್ಣಕುಮಾರ ಸಿ. ಪಿ. (ಲೋಕವಾಹಿನಿ ಪು ೧೬೩–೧೭೫)

ಸಾಹಿತ್ಯಾಂತೀಲ್ ಬ್ರಹ್ಮರಾಕ್ಷಸ್ : ಮಾರುತಿ ಅನಂತ ಪೈ (ವಾಙ್ಮಯ, ಲೇಖನ ವ ಜೀವಿತ, ೪೭–೬೬ ಮರಾಠಿ)

ಬಿ. ಎಂ. ಶ್ರೀ. ಯವರ ಇತರ ಬರಹಗಳು

ಅಂಡ್ರೂ ಕಾರ್ನೆಗಿ ; ಜಿ. ಆರ್. ಜೋಸ್ಯರ್ ಅವರ 'ಅಂಡ್ರೂಕಾರ್ನೆಗಿ ಎಂಬ ಕೋಟ್ಯಾಧೀಶ್ವರನ ಕಥೆ'ಪುಸ್ತಕದ ಮುನ್ನುಡಿ

ಕರ್ಣ : ಎಂ. ಎಸ್. ಅನಂತಪದ್ಮನಾಭರಾವ ಅವರ 'ಕರ್ಣ' ಪುಸ್ತಕದ ಮುನ್ನುಡಿ (೨–೮–೧೯೫೯)

ಕನ್ನಡ ರಾಮಾಶ್ವಮೇಧ : ಸುವಾಸಿನಿ ಪತ್ರಿಕೆಯ ಡಿಸೆಂಬರ ೧೯೦೨ ರ ೨ನೇ

ಸಂಪುಟದಲ್ಲಿ ಮುದ್ರಿತವಾದ ಲೇಖನ.
(ಎಂ. ಎಸ್. ಎಸ್, ಅವರ ಜೊತೆಗೂಡಿ)

ಕನ್ನಡದ ಒಂದನೆಯ ಪುಸ್ತಕ : ಮೈಸೂರು ವಿದ್ಯಾ ಇಲಾಖೆಯ ಕನ್ನಡ ಒಂದನೆಯ ಪುಸ್ತಕದ ಮುನ್ನುಡಿ (೧೯೩೭)

ಕನ್ನಡ ಮೂರನೆಯ ಪುಸ್ತಕ : ಮೈಸೂರು ವಿದ್ಯಾ ಇಲಾಖೆಯ ಕನ್ನಡ ಮೂರನೆಯ ಪುಸ್ತಕದ ಮುನ್ನುಡಿ (೧೯೩೮)

ಕೊಳಲು : ಕುವೆಂಪು ಅವರ 'ಕೊಳಲು' ಕವನ ಸಂಕಲನದ ಮುನ್ನುಡಿ (೭-೧-೧೯೩೦)

ಕೋಗಿಲೆ : ಡಿ. ಆರ್. ರಾಮಯ್ಯ ಅವರ 'ಕೋಗಿಲೆ' ಕವನ ಸಂಕಲನದ ಮುನ್ನುಡಿ (೨೬-೧-೧೯೩೧)

ಗೀತಗಳು : ವಿ. ಸೀ. ಅವರ 'ಗೀತಗಳು' ಕವನ ಸಂಕಲನದ ಮುನ್ನುಡಿ (೧೯೩೧)

ನಾಡಹಬ್ಬ : ರಾ. ಗು. ಜೋಶಿಯವರ 'ನಾಡಹಬ್ಬ' ನಾಟಕದ ಮುನ್ನುಡಿ (೧೭-೧೦-೧೯೩೬)

ಪ್ರಬಂಧ ಪ್ರಕಾಶ : ದೇಶಪಾಂಡೆ ಮನೋಹರರಾಯರ 'ಪ್ರಬಂಧ ಪ್ರಕಾಶ' ಪುಸ್ತಕದ ಕಿರಿಯರ ಆವೃತ್ತಿ ಮುನ್ನುಡಿ (೮-೨-೧೯೪೧)

ಪ್ರಭುವರ್ಯರ ಯುರೋಪ ಪ್ರವಾಸ : ಆರ್. ಎಸ್. ನಾರಾಯಣರವರ 'ಪ್ರಭುವರ್ಯರ ಯುರೋಪ ಪ್ರವಾಸ'ಕ್ಕೆ ಬರೆದ ಮುನ್ನುಡಿ, ೧೯೩೭

ಪ್ರಳಯತಾಂಡವ : ಜಿ. ವಾಸುದೇವರಾವ ಅವರ 'ಪ್ರಳಯತಾಂಡವ' ಕವನ ಸಂಕಲನದ ಮುನ್ನುಡಿ

ಬಿನ್ನವತ್ತಳೆಗೆ ಉತ್ತರ : ಮೈಸೂರು ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘದವರು ಸಂಘದ ಬೆಳ್ಳಿಯ ಹಬ್ಬದಂದು ನೀಡಿದ ಬಿನ್ನವತ್ತಳೆಗೆ ಕೊಟ್ಟ ಉತ್ತರ 'ಬೆಳ್ಳಿಯ ಹಬ್ಬ' (೧೯೪೪)

ಮಾಸ್ತಿಯವರನ್ನು ಕುರಿತು : ಜೀವನ ೫-೧ ಮಾರ್ಚ, ೪-೧೯೪೦

ಮುಕ್ತದ್ವಾರ : ಶಿವರಾಮ ಕಾರಂತರ 'ಮುಕ್ತದ್ವಾರ' ಗೀತನಾಟಕದ ಮುನ್ನುಡಿ (೧೯೩೪)

ಮುಮ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರರು ; ಓ. ಎಸ್. ಲಿಂಗಣ್ಣಯ್ಯ ಅವರ ಪುಸ್ತಕದ ಮುನ್ನುಡಿ (೧೬-೧-೪೦)

ಮೊಗ್ಗಿನ ಮಾಲೆ ; ಹೈದರಾಬಾದಿನ ತರುಣ ತಂಡದವರು ಪ್ರಕಟಿಸಿದ 'ಮೊಗ್ಗಿನ ಮಾಲೆ' ಕವನ ಸಂಕಲನದ ಮುನ್ನುಡಿ (೧೯೩೭)

ಶಾಂತಾ : ಕರ್ನಾಟಕ ಜನಜೀವನ ಮತ್ತು ಅರ್ಥಸಾಧಕ ಪತ್ರಿಕೆಯು ೫-೮ ರಲ್ಲಿ ಅಚ್ಚಾದ ವಿಮರ್ಶೆ

ಸೂಕ್ತಿಸುಧೆ : 'ಸೂಕ್ತಿಸುಧೆ' ಪುಸ್ತಕಕ್ಕೆ ಬರೆದ ಮುನ್ನುಡಿ (೩೦-೭-೧೯೨೮)

ಹಿಂದೂ ದರ್ಶನ ಸಾರ : ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ ಅವರ 'ಹಿಂದೂದರ್ಶನ ಸಾರ' ಪುಸ್ತಕದ ಮುನ್ನುಡಿ (೨೧-೪-೧೯೪೦)

ಹೂ : ಕುಂದಗೋಳದ ತಾರೆಯ ಬಳಗದವರು ಪ್ರಕಟಿಸಿದ 'ಹೂ' ಕವನ ಸಂಕಲನದ ಮುನ್ನುಡಿ ೧೯೩೭

ಹೊನಲು : ಮೂರ್ತಿ ಅವರ ಹೊನಲು ಕವನ ಸಂಕಲನದ ಮುನ್ನುಡಿ (೨೦-೧೧-೧೯೩೭)

A Tragic Ravana : The Mysore University Magazine (Dec. 1923)

Kanarese Literature : The Mysore University Magazine (Feb. 1919)

Kannada Resurgent : The Mysore Census Report 1941

Karnataka Kavirajmargam : The Quarterly Journal of Mythic Society (Jan. 1933)

Manorama : Foreword to the book 'Manorama' (1931)

Mysore Meysiri : Introduction to 'Mysore Meysiri' (1933)

Present Tendencies in Kannada Literature : Mysore University Magazine (July 1927)

Ramanavami : The Triveni Quarterly (1942)

Shakespeare, 'The Man and Stage' : Mysore University Magazine (September 1923)

The Clarendon Series of English Literature : The Mysore University Magazine (September 1921)

The Kannada Movement : The Mysore University Magazine (September 1921)

The Study of English Literature :	The Quarterly Journal of the Mythic Society (January 1940)
The Teaching of English in India :	The Mysore University Magazine (September 1923)
Training in Literary Appreciation :	The Mysore University Magazine (July 1922)
Woodrow Wilson's message for Eastern Nations :	The Mysore University Magazine (March)

ಅನುಬಂಧ–೪

ಮಹಾಭಾರತದಲ್ಲಿ ಅಶ್ವತ್ಥಾಮನ 'ಸೈನ್ಯಾಧಿಪತ್ಯ'ದ ಕಥಾಭಾಗ

(ಶ್ರೀಕಂಠಯ್ಯನವರು ಚಿತ್ರಿಸಿದ ಅಶ್ವತ್ಥಾಮನ ಬಗ್ಗೆ ಈಗಾಗಲೇ ಐದನೇ ಪ್ರಕರಣದಲ್ಲಿ ವಿವರಿಸಲಾಗಿದೆ. ಪ್ರಸ್ತುತ, ಮಹಾಭಾರತದಲ್ಲಿ ಈ ಕಥೆ ಹೇಗೆ ಬಂದಿದೆ ಯೆಂಬುದನ್ನು ನೋಡಬಹುದು.)

ಮಹಾಭಾರತ ಯುದ್ಧದ ಸಮಯದಲ್ಲಿ ಭೀಷ್ಮ, ದ್ರೋಣ, ಕರ್ಣ, ಶಲ್ಯ ಇವರೆಲ್ಲರ ಸರತಿ ಮುಗಿದ ಮೇಲೆ ಯುದ್ಧಾನಂತರ ಕೊನೆಗೆ ಅಶ್ವತ್ಥಾಮನ 'ಸೈನ್ಯಾಧಿಪತ್ಯ'ದ ಸರತಿ ಬರುತ್ತದೆ. ಅಷ್ಟನ್ನುವುದರಲ್ಲಿಯೇ ಕೌರವ ವೀರಾಧಿವೀರರೆಲ್ಲ ಹತರಾಗಿರುತ್ತಾರೆ. ಸ್ವತಃ ದುರ್ಯೋಧನನೇ ತೊಡೆಯುಡಿದು ವೈಶಂಪಾಯನ ಸರೋವರದ ತಡಿಯಲ್ಲಿ ಬಿದ್ದಿರುತ್ತಾನೆ. ಈ ಮೊದಲಿನ ಸೈನ್ಯಾಧಿಪತಿಗಳಿಗೆಲ್ಲ ವಜ್ರ ವೈಡೂರ್ಯಾದಿಗಳಿಂದ ಸೈನ್ಯಾಧಿಪತ್ಯದ ಅಭಿಷೇಕ ಮಾಡಿದ್ದರೆ, ದುರ್ಯೋಧನ ಅಶ್ವತ್ಥಾಮನಿಗೆ ರಣಾಂಗಣದ ಧೂಳಿಯನ್ನು ಎರೆದೇ ಅಭಿಷೇಕ ಮಾಡುತ್ತಾನೆ. ಕೌರವಸೇನೆಯಲ್ಲಿ ಉಳಿದ ಮೂವರಲ್ಲಿ ಇಬ್ಬರಿಗೆ ಇವ 'ಸೇನಾಧಿಪತಿ'

ಇತ್ಯಾಹ, ನಿಷ್ಪಾಂಡವತಾಂ ಕುರುಷ್ವ ಇತ್ಯಮುಂ
ವ್ಯಧಾತ್ ಪಾಂಸು ಅಭಿಷೇಕಿಣಂ ನೃಪಃ॥ (ಮ.ಭಾ.ತಾತ್ಪರ್ಯನಿರ್ಣಯ)

(ಇಲ್ಲಿ 'ಪಾಂಸು' ಎಂಬುದಕ್ಕೆ ಮಧ್ವಾಚಾರ್ಯರು ನೀರು ಎಂದೇ ಅರ್ಥ ಮಾಡಿದ್ದಾರೆ. ಮೂಲ ಭಾರತದಲ್ಲಿಯೊ ನೀರೇ ಎಂದಿದೆ) ಆಚಾರ್ಯ ದ್ರೋಣರ ಮರಣದಿಂದ

ನಂದಿಸ್ಪ್ರಮಾನಮಾನಸನೂ, ತನ್ನ ಸ್ವಾಮಿಗಾದ ಅಪಮಾನದಿಂದ ಕ್ರುದ್ಧನೂ ಆಗಿದ್ದ ಅಶ್ವತ್ಥಾಮನಿಗೆ ಇಡೀ ರಾತ್ರಿ ನಿದ್ರೆ ಬರುವುದಿಲ್ಲ. ಅಶ್ವತ್ಥಾಮ, ಕೃಪ, ಕೃತವರ್ಮರು ಒಂದು ವೃಕ್ಷದ ಕೆಳಗೆ ರಾತ್ರಿ ಮಲಗಿದಾಗ, ಉಳಿದವರಿಬ್ಬರೂ ನಿದ್ರೆ ಹೋಗಿದ್ದರೆ, ಅಶ್ವತ್ಥಾಮ ಮಾತ್ರ ಎಚ್ಚರಿದ್ದೇ ಆ ವೃಕ್ಷವನ್ನು ನಿರೀಕ್ಷಿಸುತ್ತಿರುತ್ತಾನೆ. ಆಗ, ಆ ರಾತ್ರಿಯ ಸಮಯ ಆ ವೃಕ್ಷದಲ್ಲಿ ಒಂದು ಗೂಗೆ ಅಲ್ಲಿಯ ಕಾಗೆಗಳನ್ನು ಕೊಂದು ಹಾಕುತ್ತಿರುವುದನ್ನು ನೋಡಿ ಅಶ್ವತ್ಥಾಮನಿಗೆ ತಾನೂ ಪಾಂಡವರನ್ನು ಹೀಗೆಯೇ ರಾತ್ರಿಯ ಸಮಯ ಕೊಂದು ಹಾಕಬೇಕೆಂಬ ವಿಚಾರ ಹೊಳೆಯುತ್ತದೆ. ಆಗ ಅವ ಕೃಪ, ಕೃತವರ್ಮರನ್ನು ಎಬ್ಬಿಸಿ ಅವರು ತನಗೆ ಸಹಾಯ ಮಾಡಬೇಕೆಂದೂ, ತಾನು ರಾತ್ರಿಯ ಸಮಯಕ್ಕೇ ಸಮಗ್ರ ಪಾಂಡವರು ಮಲಗಿಕೊಂಡ ವೇಳೆಗೆ ಅವರೆಲ್ಲರನ್ನು ಕೊಂದು ಹಾಕುವದಾಗಿಯೂ ಹೇಳುತ್ತಾನೆ. ಇದಕ್ಕೆ ಕೃಪಾದಿಗಳು ಒಪ್ಪುವುದಿಲ್ಲ. ಈ ರೀತಿ ಮಲಗಿದವರನ್ನು ಕೊಲ್ಲುವುದು ಸರಿಯಲ್ಲ, ಅದು ಧರ್ಮವಲ್ಲ ಎಂದು ಹೇಳುತ್ತಾರೆ. (ಕನ್ನಡ ಜೈನ ಭಾರತದ ಪರಂಪರೆಯಲ್ಲಿ ಅಶ್ವತ್ಥಾಮ ತನಗೆ ತಿಳಿಯದೆಯೇ, ಪಾಂಡವರೆಂದು ತಿಳಿದು ಪಾಂಡುಸೂನುಗಳನ್ನು ಕೊಂದು ಹಾಕುತ್ತಾನೆ. ಬಿ. ಎಂ. ಶ್ರೀ ಅವರಲ್ಲಿ ರುದ್ರದೇವ ಅವನಿಗೆ ಭ್ರಾಂತಿಯುಂಟಾಗುವಂತೆ ಮಾಡುತ್ತಾನೆ. ಆದರೆ, ಮಹಾಭಾರತದಲ್ಲಿ ಅವನು ತಿಳಿದು ತಿಳಿದೂ ಅವರನ್ನು ಕೊಂದು ಹಾಕುತ್ತಾನೆ.) ಈ ಬಗ್ಗೆ ಅವರ ನಡುವೆ ವಾಗ್ವಾದವೇ ನಡೆಯುತ್ತದೆ. ರಾತ್ರಿಯವೇಳೆ ಮಲಗಿದವರನ್ನು ಕೊಲ್ಲಬಾರದೆಂದು ಕೃಪಾಚಾರ್ಯನು ಅಶ್ವತ್ಥಾಮನಿಗೆ ಹೀಗೆ ಹೇಳುತ್ತಾನೆ:

—ನ ವಧಃ ಪೂಜ್ಯತೇ ಲೋಕೇ ಸುಪ್ತಾನಾಮಿಹ ಧರ್ಮತಃ
ತಥೈವ ಅಪಾಸ್ತಶಸ್ತ್ರಾಣಾಂ ವಿಮುಕ್ತರಥವಾಜಿನಾಂ ॥
ಯೇ ಚ ಬ್ರೂಯುಃ ತವ ಅಸ್ಮೀತಿ, ಯೇ ಚ ಸ್ಯುಃ ಶರಣಾಗತಾಃ
ವಿಮುಕ್ತಮೂರ್ಧಜಾ: ಯೇ ಚ, ಯೇ ಚಾಪಿ ಹತವಾಹನಾಃ ॥

ಇಂಥವರನ್ನು ಕೊಲ್ಲಬಾರದು, ಕೊಲ್ಲುವುದು ಅನ್ಯಾಯವೆಂದು ಕೃಪಾಚಾರ್ಯನು ಹೇಳಿದರೆ, ಅದಕ್ಕೆ ಅಶ್ವತ್ಥಾಮ, ಪಾಂಡವರಾದರೂ ಏನು ಧರ್ಮಯುದ್ಧ ಮಾಡಿದರು? ಅವರೆಷ್ಟು ಅನ್ಯಾಯ ಮಾಡಲಿಲ್ಲ? ಅನ್ಯಾಯದ ಯುದ್ಧಕ್ಕೆ, ಅನ್ಯಾಯದ ಯುದ್ಧವೇ ಉತ್ತರ ಎಂದು ಹೇಳುತ್ತಾನೆಃ

ಏವಮೇವ ಯಥಾऽऽತ್ಥ ತ್ವಂ ಮಾತುಲೇಹ ನ ಸಂಶಯಃ
ತೈಸ್ತು ಪೂರ್ವಮಯಂ ಸೇತುಃ ಶತಧಾ ವಿದಲೀಕೃತಃ ॥
ಪ್ರತ್ಯಕ್ಷಂ ಭೂಮಿಪಾಲಾನಾಂ ಭವತಾಂ ಚಾಪಿ ಸನ್ನಿಧೌ
ನ್ಯಸ್ತಶಸ್ತ್ರೋ ಮಮ ಪಿತಾ, ಧೃಷ್ಟದ್ಯುಮ್ನೇನ ಪಾತಿತಃ॥

ಕರ್ಣಶ್ಚ ಪತಿತೇ ಚಕ್ರೇ ರಥಸ್ಯ ರಥಿನಾಂ ವರಃ
ಉತ್ತಮೇ ವ್ಯಸನೇ ಮಗ್ನೋ ಹತೋ ಗಾಂಡೀವಧನ್ವನಾ ॥
ತಥಾ ಶಾಂತನವೋ ಭೀಷ್ಮೋ ನ್ಯಸ್ತಶಸ್ತ್ರೋ ನಿರಾಯುಧಃ
ಶಿಖಂಡಿನಂ ಪುರಸ್ಕೃತ್ಯ ಹತೋ ಗಾಂಡೀವಧನ್ವನಾ ॥
ಭೂರಿಶ್ರವಾ ಮಹೇಷ್ವಾಸಸ್ತಥಾ ಪ್ರಾಯಗತೋ ರಣೇ
ಕ್ರೋಶತಾಂ ಭೂಮಿಪಾಲಾನಾಂ ಯುಯುಧಾನೇನ ಪಾತಿತಃ॥
ದುರ್ಯೋಧನಶ್ಚ ಭೀಮೇನ ಸಮೇತ್ಯ ಗದಯಾ ರಣೇ
ಪಶ್ಯತಾಂ ಭೂಮಿಪಾಲಾನಾಂ ಅಧರ್ಮೇಣ ನಿಪಾತಿತಃ॥
ಏಕಾಕೀ ಬಹುಭಿಸ್ತತ್ರ ಪರಿವಾರ್ಯ ಮಹಾರಥೈಃ
ಅಧರ್ಮೇಣ ನರವ್ಯಾಘ್ರೋ ಭೀಮಸೇನೇನ ಪಾತಿತಃ॥
ವಿಲಾಪೋ ಭಗ್ನಸಕ್ಥಸ್ಯ ಯೋ ಮೇ ರಾಜ್ಞಃ ಪರಿಶ್ರುತಃ
ವಾರ್ತಿಕಾಣಾಂ ಕಥಯತಾಂ ಸ ಮೇ ಮರ್ಮಾಣಿ ಕೃಂತತಿ॥

ಹೀಗೆ ವಾಗ್ವಾದವಾದ ಮೇಲೆ, ಆ ರಾತ್ರಿ ಅವರೆಲ್ಲ ಪಾಂಡವರ ಪಾಳೆಯಕ್ಕೆ ಬರುತ್ತಾರೆ, ಕೃಪ, ಕೃತವರ್ಮರು ಶಿಬಿರದ ಬಾಗಿಲನ್ನು ಕಾಯ್ದರೆ, ಅಶ್ವತ್ಥಾಮ ಶಿಬಿರದಲ್ಲಿ ನುಗ್ಗಿ ಜನರನ್ನು ಕೊಂದುಹಾಕುತ್ತಾನೆ.

ಹಾಗೆ ಕೊಂದು ತಂದ ಆ ಪಾಂಡವರ ಸೂನುಗಳ ರುಂಡಗಳನ್ನು, ವೈಶಂಪಾಯನದ ತಡಿಯಲ್ಲಿ ರಕ್ತವನ್ನು ಕಾರುತ್ತ ಬಿದ್ದಿದ್ದ ದುರ್ಯೋಧನನೆದುರು ತೋರಿಸಿದಾಗ, ಅವನು ಅಶ್ವತ್ಥಾಮನ ಕಾರ್ಯಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿ ಸುಖದಿಂದ ಪ್ರಾಣಬಿಡುತ್ತಾನೆ:

ನ ಮೇಽ ಕರೋತ್ ತದ್ಗಾಂಗೇಯೋ, ನ ಕರ್ಣೋ, ನ ಚ ತೇ ಪಿತಾ
ಯತ್ ತ್ವಯಾ ಕೃಪಭೋಜಾಭ್ಯಾಂಸಹಿತೇನಾದ್ಯ ಮೇ ಕೃತಂ ॥
ಸ ಚ ಸೇನಾಪತಿಃ ಕ್ಷುದ್ರೋ ಹತಃ ಸಾರ್ಧಂ ಶಿಖಂಡಿನಾ
ತೇನ ಮನ್ಯೇ ಮಘವತಾ ಸಮಮಾತ್ಮಾನಮದ್ಯ ವೈ ॥
ಸ್ವಸ್ತಿ ಪ್ರಾಪ್ನುತ ಭದ್ರಂ ವಃ ಸ್ವರ್ಗೇ ನಃ ಸಂಗಮಃ ಪುನಃ
ಇತ್ಯೇವಮುಕ್ತ್ವಾ ತೂಷ್ಣೀಂ ಸ ಕುರುರಾಜೋ ಮಹಾಮನಾಃ ॥
ಪ್ರಾಣಾನ್ ಉಪಾಸೃಜದ್ ವೀರಃ ಸುಹೃದಾಂ ದುಃಖಮುತ್ಸೃಜನ್ ।

ಪುನಃ ಸ್ವರ್ಗದಲ್ಲಿ ಪರಸ್ಪರ ಭೆಟ್ಟಿಯಾಗೋಣ ಎಂದು ದುರ್ಯೋಧನ ಹೇಳುತ್ತಾನೆ. ಅಲ್ಲಿಂದ ನಿರ್ಗಮಿಸಿದ ಅಶ್ವತ್ಥಾಮ ಆ ಸ್ಥಳವನ್ನು ಬಿಟ್ಟು ಭಾಗೀರಥೀ ನದೀ ತೀರದಲ್ಲಿ ವಾಸಿಸುತ್ತಿದ್ದ ವ್ಯಾಸ ಮೊದಲಾದ ಋಷಿಗಳ ಮಧ್ಯದಲ್ಲಿ ಹೋಗಿ

ಕೂಗಿಕೊಳ್ಳುತ್ತಾಳೆ. ತನ್ನ ಮಕ್ಕಳ ವಧೆಮಾಡಿದ ಹಂತಕನನ್ನು ಹಿಡಿ ದ್ರೌಪದಿಯು ಅಶ್ವತ್ಥಾಮನನ್ನು ಕೊಂದು ತರಬೇಕಾಗಿ ಭೀಮಸೇನನಿಗೆ ಹೇಳುತ್ತಾಳೆ. ಆ ಮೇರೆಗೆ ಭೀಮಸೇನ, ಅರ್ಜುನ, ಕೃಷ್ಣಾದಿಗಳು ರಥಾರೂಢರಾಗಿ ಅಶ್ವತ್ಥಾಮನನ್ನು ಅರಸುತ್ತಾ ಹೋಗಿ, ಕೊನೆಗೆ ಅವನು ಋಷಿ ಸಮುದಾಯದ ಮಧ್ಯ ಭಾಗೀರಥೀ ತಟದಲ್ಲಿ ಕುಳಿತದ್ದನ್ನು ಕಾಣುತ್ತಾರೆ. ಹಿಂತಿರುಗಿ ನೋಡಿ, ಭೀಮಸೇನನನ್ನು ಗುರುತಿಸಿದ ಅಶ್ವತ್ಥಾಮ, ಇನ್ನು ಇವರು ತನ್ನನ್ನು ಕೊಲ್ಲದೆ ಬಿಡರು ಎಂದು ಭಾವಿಸಿ ಒಂದು ಇಷೀಕವನ್ನು (ಹುಲ್ಲಿನ ಕಡ್ಡಿಯನ್ನು) ತೆಗೆದುಕೊಂಡು ಅದನ್ನು ಅಭಿಮಂತ್ರಿಸಿ ತನ್ನ ತಂದೆ ತನಗೆ ಹೇಳಿಕೊಟ್ಟಿದ್ದ ಭಯಂಕರವಾದ,ಪ್ರಳಯಸದೃಶವಾದ, ಬ್ರಹ್ಮ ಶಿರೋಸ್ತ್ರವನ್ನು ಬಿಡುತ್ತಾನೆ. ಈಷಿಕ ಅಂದರೆ ಗಲಗು. ಇಷೀಕಾ ಅಂದರೆ ಹುಲ್ಲು. ಅಶ್ವತ್ಥಾಮನ ಚಲನವಲನವನ್ನು ದೂರದಿಂದಲೇ ಗಮನಿಸಿದ ಚಾಣಾಕ್ಷ ಕೃಷ್ಣನು ಅರ್ಜುನನಿಗೆ ಆ ಅಸ್ತ್ರವನ್ನು ಎದುರಿಸಲು ತಾನೂ ತನ್ನ ಅಸ್ತ್ರವನ್ನು ತ್ವರಿತವಾಗಿ ಬಿಡಬೇಕೆಂದು ಹೇಳುತ್ತಾನೆ.

(ಬ್ರಹ್ಮ ಶಿರೋಸ್ತ್ರ ಅತ್ಯಂತ ಭಯಂಕರವಾದ ಅಸ್ತ್ರ. ಅದನ್ನು ಒಂದು ಸಲ ಪ್ರಯೋಗಿಸಿದರೆ,ಆ ಭೂಮಿಯಲ್ಲಿ ಹನ್ನೆರಡು ವರ್ಷ ಕಾಲ ಮಳೆಯಾಗುವಂತಿಲ್ಲ. ಈ ಅಸ್ತ್ರ ಆಚಾರ್ಯ ದ್ರೋಣರಿಗೆ ಮಾತ್ರ ಗೊತ್ತಿತ್ತು. ಅವರು ತಮ್ಮ ನೆಚ್ಚಿನ ಶಿಷ್ಯನಾದ ಅರ್ಜುನನಿಗೆ ಇದನ್ನು ಹೇಳಿಕೊಟ್ಟಿದ್ದರು. ಇಂಥ ಭಯಂಕರವಾದ ಮಾರಕಾಸ್ತ್ರವು ಯಾವಾಗಲೂ ತನ್ನ ಹತ್ತಿರವಿದ್ದರೂ ನಿಗ್ರಹಶೀಲನಾದ ಅರ್ಜುನನು ಮಹಾಭಾರತ ಯುದ್ಧದ ಕಾಲದಲ್ಲಿ ಅದನ್ನು ಈ ಮೊದಲು ಎಂದಿಗೂ ಉಪಯೋಗಿಸಿರಲಿಲ್ಲ. ಹಾಗೆ ಅವನು ಅದನ್ನು ಉಪಯೋಗಿಸಿದ್ದರೆ, ಮೊದಲನೇ ದಿವಸದಲ್ಲಿಯೇ ಮಹಾ ಭಾರತದ ಯುದ್ಧ ಮುಗಿದು ಹೋಗುತ್ತಿತ್ತು. ಅಂಥ ತಾಳ್ಮೆ ಮತ್ತು ನಿಗ್ರಹವುಳ್ಳ ಅರ್ಜುನನು ಪ್ರಜಾಹಿತ ಚಿಕೀರ್ಷೆಯಿಂದ ಅದನ್ನು ಪ್ರಯೋಗಿಸಿರಲಿಲ್ಲ.
ವ್ಯಾಸರು ಹೇಳಿದಂತೆ:

ಅಸ್ತ್ರಂ ಬ್ರಹ್ಮಶಿರೋ ಯತ್ರ ಪರಮಾಸ್ತ್ರೇಣ ವಧ್ಯತೇ
ಸಮಾ ದ್ವಾದಶ ಪರ್ಜನ್ಯಃ ತದ್ರಾಷ್ಟ್ರಂ ನಾಭಿವರ್ಷತಿ॥
ಏತದರ್ಥಂ ಮಹಾಬಾಹುಃ ಶಕ್ತಿಮಾನಪಿ ಪಾಂಡವಃ
ನ ವಿಹನ್ಯಾತ್ತದಸ್ತ್ರಂ ಚ **ಪ್ರಜಾಹಿತ ಚಿಕೀರ್ಷಯಾ**॥

ಇಂಥ ಭಯಂಕರವಾದ ಮಾರಕಾಸ್ತ್ರವನ್ನು ದ್ರೋಣಾಚಾರ್ಯರು ತಮ್ಮ ಶಿಷ್ಯನಾದ ಅರ್ಜುನನಿಗೆ ಕೊಟ್ಟಿದ್ದಾರೆಂಬುದನ್ನು ತಿಳಿದ ಅಶ್ವತ್ಥಾಮ ತನಗೂ ಆ ಮಂತ್ರವನ್ನು ಉಪದೇಶಿಸಬೇಕೆಂದು ಅವರಿಗೆ ದುಂಬಾಲು ಬೀಳುತ್ತಾನೆ. ಆದರೆ ಮಗನ ಶೀಘ್ರ ಕೋಪವನ್ನು ಬಲ್ಲ ದ್ರೋಣರು ಅವನಿಗೆ ಅದನ್ನು ಕೊಡಲು ಸುತರಾಂ ಒಪ್ಪಲಿಲ್ಲ.

ಅಶ್ವತ್ಥಾಮ ಬಿಡಲಿಲ್ಲ. ಅವರನ್ನು ಕಾಡಹತ್ತಿದ. ಕೊನೆಗೆ ಬೇಸತ್ತ ದ್ರೋಣರು ಒಂದು ಕರಾರಿಗೆ ಒಳಪಟ್ಟು ಆ ವಿದ್ಯೆಯನ್ನು ಅವನಿಗೆ ಬೋಧಿಸುವುದಾಗಿ ಹೇಳುತ್ತಾರೆ. ಆ ಕರಾರೆಂದರೆ ಅವನು ಅದನ್ನು ಎಂದಿಗೂ ಮನುಷ್ಯರ ಮೇಲೆ ಸರ್ವಥಾ ಪ್ರಯೋಗಿಸ ಬಾರದು. ಅಶ್ವತ್ಥಾಮ ಅದಕ್ಕೆ ಹೂಗುಟ್ಟಿದ. ಅನಿವಾರ್ಯವಾಗಿ ದ್ರೋಣರು ಅವನಿಗೆ ಅದನ್ನು ಉಪದೇಶಿಸಿದರು. ಈಗ ದೂರದಿಂದ ಭೀಮಾದಿಗಳನ್ನು ಕಂಡಿದ್ದ ಅಶ್ವತ್ಥಾಮ ಸಿಡುಕನಾಗಿ ಅದನ್ನು ಅವರ ಮೇಲೆ ಪ್ರಯೋಗಿಸಿದ)

ಅಶ್ವತ್ಥಾಮ ಬ್ರಹ್ಮಶಿರೋಸ್ತ್ರವನ್ನು ಪ್ರಯೋಗಿಸುವಾಗ- **ಅಪಾಂಡವಾಯೇತಿ ರುಷಾ ವ್ಯಸೃಜದ್ ದಾರುಣಂ ವಚಃ.** ಪೃಥ್ವಿ ಅಪಾಂಡವವಾಗಬೇಕು ಎಂದು ರೋಷದ ಮಾತನ್ನು ಹೇಳಿ ಅದನ್ನು ಪ್ರಯೋಗಿಸಿದ. ಆ ಅಸ್ತ್ರ ಘೂತ್ಕರಿಸುತ್ತ ಘಟ ಸರ್ಪದಂತೆ ಕೆಂಡ ಕಾರುತ್ತ ಪಾಂಡವರ ಹತ್ತಿರ ಬರಹತ್ತಿತು. ಇದನ್ನು ಗಮನಿಸಿದ ಶ್ರೀ ಕೃಷ್ಣ ಅರ್ಜುನನಿಗೆ (ಅರ್ಜುನನಿಗೂ ಆ ಅಸ್ತ್ರ ಗೊತ್ತಿದ್ದರಿಂದ)

ಅರ್ಜುನ ಅರ್ಜುನ ಯದ್ದಿವ್ಯಂ ಅಸ್ತ್ರಂ ತೇ ಹೃದಿ ವರ್ತತೇ
ದ್ರೋಣೋಪದಿಷ್ಟಂ ತಸ್ಯ ಅಯಂ ಕಾಲಃ ಸಂಪ್ರತಿ ಪಾಂಡವ॥
ಭ್ರಾತೃಣಾಮ್, ಆತ್ಮನಶ್ಚೈವ, ಪರಿತ್ರಾಣಾಯ ಭಾರತ
ವಿಸೃಜ ಏತತ್ ತ್ವಮಪ್ಯಾಜಾವಸ್ತ್ರಮಸ್ತ್ರನಿವಾರಣಮ್॥

ಎಂದು ಹೇಳುತ್ತಾನೆ. ಅಶ್ವತ್ಥಾಮ 'ಅಪಾಂಡವಾಯ ಇತಿ' ಎಂದು ಈ ಅಸ್ತ್ರ ಪ್ರಯೋಗ ಮಾಡಿದ್ದರೆ, ಧರ್ಮಿಷ್ಟನಾದ ಅರ್ಜುನನು—

ಪೂರ್ವಮ್ ಆಚಾರ್ಯ ಪುತ್ರಾಯ, ತತೋ ನಂತರಮಾತ್ಮನೇ
ಭ್ರಾತೃಭ್ಯಶ್ಚೈವ ಸರ್ವೇಭ್ಯಃ **ಸ್ವಸ್ತೀತಿ** ಉಕ್ತ್ವಾ ಪರಂತಪಃ॥
ದೇವತಾಭ್ಯೋ ನಮಸ್ಕೃತ್ಯ ಗುರುಭ್ಯಶ್ಚೈವ ಸರ್ವಶಃ
ಉತ್‌ಸಸರ್ಜ ಶಿವಂ ಧ್ಯಾಯನ್ ಅಸ್ತ್ರಮಸ್ತ್ರೇಣ ಶಾಮ್ಯತಾಮ್॥

It is good to have giant's strength, but it should not be used in the giant's way. ಮನುಷ್ಯನಿಗೆ ರಾಕ್ಷಸ ಶಕ್ತಿ ಇರಬೇಕು. ಆದರೆ, ಅದನ್ನು ಅವನು ರಾಕ್ಷಸರೀತಿಯಲ್ಲಿ ಉಪಯೋಗಿಸಬಾರದು. ಅಶ್ವತ್ಥಾಮ ಹಾಗೆ ರಾಕ್ಷಸ ರೀತಿಯಲ್ಲಿ ಉಪಯೋಗಿಸಿದ್ದರೂ, ಅರ್ಜುನನು **ಪೂರ್ವಮ್ ಆಚಾರ್ಯ ಪುತ್ರಾಯ** (ಅಶ್ವತ್ಥಾಮ್ನೇ) **ಸ್ವಸ್ತಿ** ಇತ್ಯುಕ್ತ್ವಾ ಬಾಣವನ್ನು ಬಿಡುತ್ತಾನೆ. ಬಿಡುವಾಗ ಸಹ ದೇವತೆಗಳಿಗೆ, ಗುರುಗಳಿಗೆ, ಸರ್ವರಿಗೆ ನಮಸ್ಕರಿಸಿ ಬಿಡುತ್ತಾನೆ. ಅಲ್ಲದೆ, ಅವನ ಉದ್ದೇಶ ಅಸ್ತ್ರಮ್ ಅಸ್ತ್ರೇಣ ಶಾಮ್ಯತಾಮ್ ಎಂಬುದು. ಅಸ್ತ್ರ, ಅಸ್ತ್ರದಿಂದ ಶಾಂತವಾಗಬೇಕು.

ಈ ಎರಡೂ ಅಸ್ತ್ರಗಳು ಒಂದಕ್ಕೊಂದು ಸಂಘಟ್ಟಿಸಿದರೆ ಇಡೀ ಪ್ರಪಂಚವೇ ಸುಟ್ಟುಹೋಗುತ್ತದೆಂಬುದನ್ನು ಅರಿತಿದ್ದ ವ್ಯಾಸರು, ಈ ಎರಡೂ ಅಸ್ತ್ರಗಳ ಮಧ್ಯದಲ್ಲಿ ತಾವೇ ನಿಂತು ಅಸ್ತ್ರ ಸಂಘಟ್ಟಿಸದ ಹಾಗೆ ನೋಡುತ್ತಾರೆ. ಇದರ ಮಾರಕ ಶಕ್ತಿಯನ್ನರಿತ ವ್ಯಾಸರು ಅರ್ಜುನ ಅಶ್ವತ್ಥಾಮರಿಗೆ ಅದನ್ನು ಉಪಸಂಹರಿಸಲು (ಹಿಂದಕ್ಕೆ ತೆಗೆದುಕೊಳ್ಳಲು) ಹೇಳುತ್ತಾರೆ. ಅದಕ್ಕೊಪ್ಪಿ ಅರ್ಜುನ ತನ್ನ ಅಸ್ತ್ರವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾನೆ. ಆದರೆ, ಅಶ್ವತ್ಥಾಮನಿಗೆ ಮಾತ್ರ ಇದು ಸಾಧ್ಯವಾಗುವುದಿಲ್ಲ. ಯಾಕೆಂದರೆ, ಮಹಾಭಾರತಕಾರರ ಮೇರೆಗೆ "ಅಬ್ರಹ್ಮಚರ್ಯತ್ವಾತ್"........ ಬ್ರಹ್ಮಚಾರಿಯೇ ಆಗಿದ್ದ ಅಶ್ವತ್ಥಾಮನಿಗೆ ಅ-ಬ್ರಹ್ಮಚರ್ಯ ಹೇಗೆ ಉಂಟಾಯಿತು?.... ತನ್ನ ಸಂತಾನವೆಲ್ಲ ನಷ್ಟವಾದದ್ದನ್ನು ಕಂಡ ದುರ್ಯೋಧನ ಸಾಯುವ ಮೊದಲು ಅಶ್ವತ್ಥಾಮನಿಂದ ವಚನ ತೆಗೆದುಕೊಂಡಿರುತ್ತಾನೆ. ತಾನೇನಾದರೂ ಅಶ್ವತ್ಥಾಮನಕಿಂತ ಮೊದಲು ಮೃತನಾದರೆ, ತನ್ನ ಹೆಂಡತಿಯ ಜೊತೆಗೂಡಿ ಅಶ್ವತ್ಥಾಮ ಕುರುವಂಶವನ್ನು ಮುಂದುವರಿಸಬೇಕೆಂದು. ಅದಕ್ಕೆ ಅಶ್ವತ್ಥಾಮ ಒಪ್ಪಿಗೆಕೊಟ್ಟಿರುತ್ತಾನೆ. ಹೀಗೆ ವಾಚಾ ಒಪ್ಪಿಗೆಕೊಟ್ಟ ಮೂಲಕ ತನ್ನ ಬ್ರಹ್ಮಚರ್ಯಕ್ಕೆ ನ್ಯೂನತೆ ಉಂಟು ಮಾಡಿಕೊಂಡಿರುತ್ತಾನೆ. ಯಾರು ಏನೇ ಹೇಳಿದರೂ ಅವನು ತನ್ನ ಅಸ್ತ್ರವನ್ನು ಹಿಂತೆಗೆದುಕೊಳ್ಳಲು ಇಚ್ಛಿಸುವುದಿಲ್ಲ. ಪೃಥ್ವಿ ಅಪಾಂಡವವಾಗಬೇಕೆಂಬ ತನ್ನ ಛಲಕ್ಕೆ ಕಟ್ಟುಬಿದ್ದು ಬ್ರಹ್ಮಶಿರೋಸ್ತ್ರವು ಉತ್ತರೆಯ ಗರ್ಭದಲ್ಲಿ ಹೊಕ್ಕು ಆ ಗರ್ಭದಲ್ಲಿದ್ದ ಪಿಂಡಗಳನ್ನು ಸಹ ಕೊಂದು ಹಾಕುತ್ತದೆಂದು ಹೇಳುತ್ತಾನೆ :

ನ ಚ ಮದ್ ವಾಕ್ಯಮ್ ಅನ್ಯಥಾ

ಪತಿಷ್ಯತಿ ತದ್ ಅಸ್ತ್ರಂ ಹಿ ಗರ್ಭೇ ತಸ್ಯಾಃ ಮಯೋದ್ಯತಮ್
ವಿರಾಟದುಹಿತುಃ ಕೃಷ್ಣ, ಯಂ ತಂ ರಕ್ಷಿತುಮಿಚ್ಛಸಿ॥

ಕೃಷ್ಣಾ, ವಿರಾಟಪುತ್ರಿಯ ಯಾವ ಭ್ರೂಣವನ್ನು ನೀನು ರಕ್ಷಿಸಲು ಇಚ್ಛಿಸುತ್ತೀಯೋ, ಆಗರ್ಭದಲ್ಲಿ ಹೊಕ್ಕು ನನ್ನ ಅಸ್ತ್ರವು ಅದನ್ನು ನಾಶಪಡಿಸುತ್ತದೆ. ನ ಚ ಮದ್ ವಾಕ್ಯಮ್ ಅನ್ಯಥಾ. ನನ್ನ ಮಾತು ಸುಳ್ಳಾಗುವುದಿಲ್ಲ-ಎಂದು ಅಶ್ವತ್ಥಾಮನು ಅಂದಾಗ ಶ್ರೀಕೃಷ್ಣನು "ನಿನ್ನ ಅಮೋಘವಾದ ಅಸ್ತ್ರವು ಆ ಭ್ರೂಣವನ್ನು ಕೊಲ್ಲುವುದರಲ್ಲಿ ಸಂಶಯವಿಲ್ಲ, ಆದರೆ, ಮೃತವಾದ ಆ ಭ್ರೂಣವನ್ನು ನಾನು ಪುನಃ ಬದುಕಿಸುತ್ತೇನೆ" ಎಂದು ಹೇಳಿ ಭ್ರೂಣಹತ್ಯೆಯಂಥ ಪಾಪದ ಕಾರ್ಯದ ಸಲುವಾಗಿ ಈ ಭೂಮಿಯ ಮೇಲೆ ವ್ರಣವ್ಯಾಧಿತನಾಗಿ, ರಕ್ತ ಕೀವು ಸೋರಿಕೊಳ್ಳುತ್ತ, ಮೂರು ಸಾವಿರ ವರ್ಷ ಅಲೆಯುತ್ತಿ" ಎಂದು ಹೇಳುತ್ತಾನೆ. ಅಮಾಯಕವಾದ ಭ್ರೂಣವನ್ನು ಕೊಂದದ್ದಕ್ಕೆ ಇದಕ್ಕಿಂತ ಕಡಿಮೆಯ ದಂಡನೆಯೇನು?

ಅಮೋಘಃ ಪರಮಾಸ್ತ್ರಸ್ಯ ಪಾತಸ್ತಸ್ಯ ಭವಿಷ್ಯತಿ
ಸ ತು ಗರ್ಭೋ ಮೃತೋಜಾತೋ ದೀರ್ಘಮಾಯುರವಾಪ್ಸ್ಯತಿ॥

ತಸ್ಮಾತ್, ತ್ವಮ್ ಅಸ್ಯ ಪಾಪಸ್ಯ ಕರ್ಮಣಃ ಫಲಮಾಪ್ನುಹಿ
ತ್ರೀಣಿವರ್ಷಸಹಸ್ರಾಣಿ ಚರಿಷ್ಯಸಿ ಮಹೀಮ್ ಇಮಾಮ್॥
ಪೂಯಶೋಣಿತ ಗಂಧೀಚ ದುರ್ಗಕಾಂತಾರ ಸಂಶ್ರಯಃ।

ಹೀಗೆ, ಸತ್ತು ಹುಟ್ಟಿದ ಭ್ರೂಣವೇ ಪರೀಕ್ಷಿತರಾಜ. ಅವನು ಈ ಭೂಮಿಯನ್ನು ೬೦ ವರ್ಷ ಆಳುತ್ತಾನೆ. ಅಶ್ವತ್ಥಾಮ ಮಾತ್ರ ವ್ರಣಪೀಡಿತನಾಗಿ ಮೂರು ಸಾವಿರ ವರ್ಷ ಭೂಮಿಯನ್ನು ಅಲೆಯುತ್ತಾನೆ. ೧

ಕೊನೆಗೆ ಅಶ್ವತ್ಥಾಮನ ಕೊಲೆಗಿಂತ ಅವನ ತೇಜೋಭಂಗವೇ ಲೇಸೆಂದು ಭಾವಿಸಿದ ವ್ಯಾಸರುಃ

ಮಣಿಂ ಚೈವ ಪ್ರಯಚ್ಛಾದ್ಯ ಯಸ್ತೇ ಶಿರಸಿ ತಿಷ್ಠತಿ
ಏತದಾದಾಯ ತೇ ಪ್ರಾಣಾನ್ ಪ್ರತಿದಾಸ್ಯಂತಿ ಪಾಂಡವಾಃ॥

ಎಂದು ಅಶ್ವತ್ಥಾಮನಿಗೆ ಹೇಳುತ್ತಾರೆ. ಅಶ್ವತ್ಥಾಮ ತನ್ನ ಶಿರೋರತ್ನವನ್ನು ಪಾಂಡವರಿಗೆ ಕೊಡುತ್ತಾನೆ. ಅವರು ಅವನನ್ನು ಸಜೀವ ಬಿಟ್ಟು ಬಿಡುತ್ತಾರೆ.

ಆದರೆ, ದ್ರೌಪದಿ ಅಶ್ವತ್ಥಾಮನನ್ನು ಕೊಂದು ತರಬೇಕೆಂದು ಹೇಳಿದ್ದಳಲ್ಲ–ಏನು ಮಾಡುವುದು? ದ್ರೌಪದಿಗೆ ಹೋಗಿ, ಭೀಮಸೇನಾದಿಗಳು ಅಶ್ವತ್ಥಾಮನ ಶಿರೋರತ್ನವನ್ನು ತಂದಿರುವುದಾಗಿಯೂ ಅವನನ್ನು ಸಜೀವ ಬಿಟ್ಟಿರುವುದಾಗಿಯೂ ಹೇಳುತ್ತಾರೆ. ಆಗ, ಆ ಅಗ್ನಿಕನ್ಯೆ ಶಾಂತಳಾಗಿ "ಪರವಾ ಇಲ್ಲ; ಅವನ ತೇಜವೇ ನಾಶವಾದ ಮೇಲೆ ಅವ ಕಳೇವರ ಇದ್ದ ಹಾಗೆಯೇ; ಅಲ್ಲದೆ, ಗುರುಪುತ್ರನಾದ ಅವ ನನಗೂ ಗುರುವೇ" ಎಂದು ಹೇಳುತ್ತಾಳೆ.

ಕೇವಲಾನೃಣ್ಯಮಾಪ್ತಾಸ್ಮಿ **ಗುರು ಪುತ್ರೋ ಗುರುರ್ಮಮ.** ಇಲ್ಲಿಗೆ ಅಶ್ವತ್ಥಾಮನ ಒಂದು ರಾತ್ರಿಯ 'ಸೈನ್ಯಾಧಿಪತ್ಯ'ದ ಕಥೆ ಮಹಾಭಾರತದಲ್ಲಿ ಹೀಗೆ ಮುಗಿಯುತ್ತದೆ, ●

---

೧ ಈ ಸಾಲುಗಳನ್ನು ಓದುವಾಗ ನಮಗೆ ಒಂದು ಪಾಶ್ಚಿಮಾತ್ಯ ಐತಿಹ್ಯದ ನೆನಪಾಗುತ್ತದೆ. ಆಕಾಶದಲ್ಲಿರುವ ಚಂದ್ರನಲ್ಲಿ ಒಂದು ಲಾಂಛನವಿದೆಯಷ್ಟೇ. ಅದು ಜಿಂಕೆಯ ಹಾಗೆ ಕಾಣುವುದರಿಂದ, ನಮ್ಮ ಭಾರತೀಯರು ಅದನ್ನು ಜಿಂಕೆಯೆಂದು ಕರೆದರು. ಆ ಕಲಂಕವನ್ನು ಇನ್ನೂ ಸಲ್ಪ ದಿಟ್ಟಿಸಿ ನೋಡಿದರೆ, ಬಾಗಿದ ಒಬ್ಬ ಮನುಷ್ಯ ತಲೆಯ ಮೇಲೆ ಮುಳ್ಳಿನ ಹೊರೆಯನ್ನು ಹೊತ್ತುಕೊಂಡು ಚಲಿಸುತ್ತಿರುವಂತೆ ಕಾಣುತ್ತದೆ. ಪಾಶ್ಚಿಮಾತ್ಯರ ನಂಬುಗೆಯು ಮೇರೆಗೆ ಹಾಗೆ ಬಗ್ಗಿ ಮುಳ್ಳಿನ ಹೊರೆ ಹೊತ್ತು ನಡೆಯುವವ CAIN. (ಕೇನ್) ತನ್ನ ತಮ್ಮನಾದ (Abel) ನನ್ನು ಕೊಲೆ ಮಾಡಿದ್ದಕ್ಕಾಗಿ, ಅದು ಅವನಿಗೆ ದೈವೀಶಾಪ. ಅವನು ಹೀಗೆ ಮುಳ್ಳಿನ ಹೊರೆಯನ್ನು ಹೊತ್ತುಕೊಂಡು ಈಗಲೂ ಭೂಮಂಡಲ ಪ್ರದಕ್ಷಿಣೆ ಹಾಕಬೇಕು. (ನೋಡಿ 'ಆರು ಪ್ರಬಂಧಗಳು' ರಾ. ಯ. ಧಾರವಾಡಕರ)

ಈ ಲೇಖಕರ ಕೃತಿಗಳು ಹಾಗೂ ಅವುಗಳ ಬಗ್ಗೆ ಅಭಿಪ್ರಾಯಗಳು

ಪತ್ರಿಕಾ ವ್ಯವಸಾಯ (೧೯೪೮)

"ನನಗೆ ಗೊತ್ತಿದ್ದ ಮಟ್ಟಿಗೆ ಕನ್ನಡದಲ್ಲಿ ಇಂತಹ ವಾಙ್ಮಯ ತೀರ ವಿರಳ"

೨೮–೧–೧೯೪೯ — **ರಂಗನಾಥ ದಿವಾಕರ**

"ಬಹಳ ಒಳ್ಳೇ ಪ್ರಬಂಧವನ್ನು ಬರೆದಿದ್ದೀರಿ. ವಿಷಯ ಸಂಗ್ರಹವನ್ನು ಬಹಳ ಜಾಣ್ಮೆಯಿಂದ ಮಾಡಿದ್ದೀರಿ. ನಿಮ್ಮ ಕೊನೆಯ ಅಧ್ಯಾಯ ನಿಮ್ಮ ಜೋಕೆ ತೂಕದ ವಿಚಾರವನ್ನು ತೋರಿಸುತ್ತದೆ. ಗಂಡ–ಭೇರುಂಡ ಸರಿ; ಆದರೆ, ಈ ಎರಡೂ ರುಂಡಗಳು ತಮ್ಮತಮ್ಮಲ್ಲಿಯೇ ಕಡಿದಾಡದಂತೆ ನೋಡಿಕೊಳ್ಳುವುದು ನಿಮ್ಮಂತಹ ವಿವೇಕಿಗಳು ಮಾಡಬೇಕಾದ ಕೆಲಸ"

೧೧-೧-೧೯೪೯ — **ವರಕವಿ ದ. ರಾ. ಬೇಂದ್ರೆ**

"ಶ್ರೀ ಧಾರವಾಡಕರರ 'ಪತ್ರಿಕಾ ವ್ಯವಸಾಯ' ವಿಚಾರ ಪರಿಪ್ಲುತವಾದ ಹೊತ್ತಗೆ, ಕನ್ನಡದಲ್ಲಿ ಪತ್ರಿಕಾ ವ್ಯವಸಾಯ ಪ್ರಾರಂಭವಾದ ರೀತಿಯನ್ನು ಲೇಖಕರು ಚೆನ್ನಾಗಿ ನಿರೂಪಿಸಿದ್ದಾರೆ. ಸಾಹಿತ್ಯ–ಪತ್ರಿಕಾಲೇಖನದ ಸಂಬಂಧಗಳನ್ನು ಮಾರ್ಮಿಕವಾಗಿ ಚರ್ಚಿಸಿದ್ದಾರೆ."

೧೫–೧–೧೯೪೯ — **ಪ್ರಿ. ವಿ. ಕೃ. ಗೋಕಾಕ**

"Prof. Dharwadkar has done a good job in his 'Patrika -Vyavasaya'....The book must have involved considerable research work, for the author has taken pains to trace the history and growth of journalism not only in England, but also in India, with special reference to journalism in Karnataka. It may be of considerable interest to the reader to know that the date of the three Kannada Weeklies existing in 1880 was 'Belgaum Samachar' 250 copies, 'Karnataka Mitra' 150 copies and 'Jnana Bodha' 150 copies"

—M. V. Kamath

2-1-1949 Bharatjyoti-A Kannadiga's Dream Coming True

ಕರ್ನಾಟಕದಲ್ಲಿ ವೃತ್ತಪತ್ರಿಕೆಗಳು

"Excellent work" —**R. S. Hukerikar**

ಸಾಹಿತ್ಯ ಸಮೀಕ್ಷೆ (೧೯೪೯) :

"ಶ್ರೀ ಧಾರವಾಡಕರರು ಉಭಯ ಭಾಷಾವಿಶಾರದರು. ಆಂಗ್ಲ ಸಾಹಿತ್ಯದಲ್ಲಿಯೂ ಅವರಿಗೆ ಕನ್ನಡ ಸಾಹಿತ್ಯದಲ್ಲಿಯಷ್ಟೇ ಅಭಿರುಚಿಯಿದೆ....ವ್ಯುತ್ಪತ್ತಿ, ಪ್ರತಿಭೆ ಇಲ್ಲವೆ ಒಂದು ಕೃತಿಯ ತಿರುಳನ್ನೇ ಕಂಡು ಹಿಡಿಯುವ ತೀಕ್ಷ್ಣಬುದ್ಧಿ, ಹೆಚ್ಚಿನದನ್ನು ತಿಳಿದುಕೊಳ್ಳಬೇಕೆಂಬ ಜಿಜ್ಞಾಸೆ, ಯಾವ ಪೂರ್ವಗ್ರಹಕ್ಕೂ ಅಂಟಿಕೊಳ್ಳಬಾರದೆಂಬ ವಿವೇಕ, ಪ್ರಜ್ಞೆ, ಇವಿಲ್ಲದೆ ಸಾಹಿತ್ಯವಾಗಲಿ, ವಿಮರ್ಶೆಯಾಗಲಿ ಉನ್ನತಿ ಹೊಂದಲಾರದು; ಇಲ್ಲಿಯ ವಿಮರ್ಶೆಗಳ ಕೆಚ್ಚು ಮೇಲೆ ತೋರಿಸಿದ ಗಣೆಯಿಂದಲೇ ತಂದುದಾಗಿದೆ...."

—**ಪ್ರಿ. ವಿ. ಕೃ. ಗೋಕಾಕ**
(ಮುನ್ನುಡಿಯಿಂದ)

ಕನ್ನಡ ಭಾಷಾಶಾಸ್ತ್ರ (೧೯೫೧)

"I heartily welcome the 'Kannada Bhasha Shastra' of Prof. R. Y. Dharwadkar, He is a deep and painstaking scholar and is fully equipped to devote all his attention to the comparitive study of Kannada and other allied languages. It is an eminent introduction to the study of Kannada language and supplies a keenly felt need. I strongly recommend this book to the notice of Kannada scholars . . . ."

(Dr.) S. C. Nandimath
M.A. Ph. D. (Lond.)

"I went through the book and I find it is excellently written. It is a comprehensive work and I see you have taken great pains for your chapter on Kannada vocabulary . . . . You have done well in bringing it out."

Prof. K. Ramakrishnayya
(Telugu Scholar)

"I have carefully gone through your scholarly treatise on Kannada Linguistics, 'Kannada Bhasha Shastra'. The book is useful addition to the stock of literature on Kannada Linguistics. You have ransacked the available sources in the Dravidian as well as Aryan Languages to trace the evolution of Kannada and your treatment of Kannada morphology is very instructive. The language you have used is pure and impressive and the book reads like a novel"

Vidyaratna R. S. Panchamukhi M.A.
Director of Kannada Research Institute

"....ಕನ್ನಡ ಭಾಷೆಯ ಇತಿಹಾಸದಲ್ಲಿ ಈ ನಿಮ್ಮ ಗ್ರಂಥ ವಿಶಿಷ್ಟವಾದ ಸ್ಥಾನವನ್ನು ಪಡೆಯುವದರಲ್ಲಿ ಸಂದೇಹವಿಲ್ಲ. ಮುಂದಿನ ವ್ಯಾಸಂಗ-ಸಂಶೋಧನೆಗಳಿಗೆ ಇದು ತಳಹದಿಯಾಗಿರುತ್ತದೆ. ಈ ಗ್ರಂಥರಚನಾ ಕಾರ್ಯದಲ್ಲಿ ನೀವು ಪಟ್ಟಿರುವ ಶ್ರಮ ಎಷ್ಟೆಂಬುದನ್ನು ಇದನ್ನು ಓದಿದವರೇ ಗ್ರಹಿಸಬಲ್ಲರು. ನಿಮ್ಮ ದುಡಿಮೆ, ಸಹನೆ ಮತ್ತು ಸಾಹಸಗಳು ವಾಸ್ತವವಾಗಿಯೂ ಸ್ತುತ್ಯರ್ಹವಾಗಿವೆ..."

— ರಾಷ್ಟ್ರಕವಿ ಕೆ. ವಿ. ಪುಟ್ಟಪ್ಪ

"ತಮ್ಮ ಗ್ರಂಥ ಅತ್ಯುಚ್ಚ ತರಗತಿಯದು. ಇಂಥಾ ಗ್ರಂಥವೆಂದರೆ, ಆಂಗ್ಲವೇ ಇತ್ಯಾದಿ ಈಗಣ ಜಗತ್ತಿನಲ್ಲಿ 'ಅ' ಗ್ರನೆಯವೆಂದು ಪರಿಗಣಿಸಲ್ಪಡುತ್ತಿರುವ ಭಾಷೆಗಳಲ್ಲಿ ರಚಿಸಲ್ಪಡುವ ಗ್ರಂಥವಲ್ಲದೆ, ಕನ್ನಡದಂಥಾ 'ಹಿಂದಣ' ಭಾಷೆಯಲ್ಲಿ ಅಲ್ಲ. ಆತಏವ ಇದು ಕನ್ನಡದಲ್ಲಿ ಬರೆಯಲ್ಪಟ್ಟ ಕಾರಣ, ಕನ್ನಡದ ಗೌರವ ಒಂದೇ ಸವನೆ ಕೆಲವು ಮಾರು ಮುಂದರಿಯಿತು.ಇದನ್ನು ಬಗೆಯಲಿಕ್ಕೂ, ಬರೆಯಲಿಕ್ಕೂ,ಪಟ್ಟಪರಿಶ್ರಮವನ್ನು ಮನವರಿಸುವಲ್ಲಿ ಜ್ಞಾನಾರ್ಜನೆಯಲ್ಲಿ ಉಳ್ಳ ಆ ಪಿಪಾಸೆ, ಆ ಭುಭುಕ್ಷೆ, ಅ ಒಲ್ಮೆ, ಆ ತಾಳ್ಮೆ,—ಇವುಗಳ ಮುಂದೆ ಕಣ್ಣು ತುಂಬುತ್ತದೆ. ಮನಸ್ಸು ಭಲಾ! ಭಲಾ! ಅನ್ನುತ್ತದೆ. ಈ ಗ್ರಂಥವನ್ನು ಓದಿ ಮೆಚ್ಚಬೇಕು, ಮೆಚ್ಚಿ ಓದಬೇಕು. ತಮ್ಮನ್ನು ಈ ಬಗ್ಗೆ ಮನವಾರೆ ಅಭಿನಂದಿಸುತ್ತೇನೆ. ಶ್ರೀ ದೇವರು ತಮಗೆ ತುಂಬ ಆಯುಸ್ಸನ್ನು ನೀಡಿ, ತಮ್ಮಿಂದ ಹಲಬಗೆಯ ಸಾಹಿತ್ಯ ಸಂಶೋಧನಾದಿ ಸೇವೆಗಳನ್ನು ಮಾಡಿಸಿಕೊಡಲಿ! ತಮ್ಮಂಥಾ ವಿದ್ವಾಂಸರನ್ನು ಭಾರತದಲ್ಲಿ ಕನ್ನಡದಲ್ಲಿ ಅವಿರತವಾಗಿ ಸೃಷ್ಟಿಸಿ ನಮ್ಮ ಮಾತೃಭೂಮಿಯ ವಿದ್ವತ್ತಿಕೆಯನ್ನು ಮತ್ತೂ ಮತ್ತೂ ಹೆಚ್ಚಿಸಲಿ. ಇತಿ ಶಮ್!

— ರಾಷ್ಟ್ರಕವಿ ಗೋವಿಂದ ಪೈ

ಲೋಕಮಾನ್ಯ ಟಿಳಕರು (೧೯೫೬) :
(ಸಂಪಾದಿತ)

"ಈ ಹೊತ್ತಗೆಯಲ್ಲಿ ಪ್ರಕಟಗೊಂಡ ವಿದ್ಯಾರ್ಥಿಗಳ ಹಾಗೂ ಬೇರೆಯವರ ಪ್ರಬಂಧಗಳು ಉತ್ತಮ ಸಾಹಿತ್ಯ ಗುಣಗಳಿಂದ ಕೂಡಿರುವವಲ್ಲದೆ, ಈ ಲೇಖನಗಳನ್ನು ಬರೆಯುವಲ್ಲಿ ಲೇಖಕರು ವಹಿಸಿದ ಪರಿಶ್ರಮವನ್ನು ವ್ಯಕ್ತಗೊಳಿಸುತ್ತವೆ"

೨೮-೧೧-೫೬ — **ಡಿ. ಸಿ. ಪಾವಟೆ**

ಉಪಕುಲಪತಿಗಳು ಕರ್ನಾಟಕ ವಿಶ್ವವಿದ್ಯಾಲಯ

ನಮ್ಮ ದೇಶದ ಯೋಜನೆಗಳು (೧೯೫೯) :

"ಕನ್ನಡದಲ್ಲಿ ಯೋಜನೆಗಳನ್ನು ಕುರಿತ ಪುಸ್ತಕಗಳು ತೀರ ಕಡಿಮೆ. ಇರುವ ಹಲಕೆಲವು ಸರ್ಕಾರಿ ಪ್ರಕಟನೆಗಳು ಅಂಕಿಸಂಖ್ಯೆಗಳಿಂದ ತುಂಬಿದ್ದರಿಂದ ಜನತೆಗೆ ಬೇಸರವುಂಟಾಗುವುದು ಸ್ವಾಭಾವಿಕ. ಎಂತಲೇ, ಯೋಜನೆಯನ್ನು ಜನಪ್ರಿಯಗೊಳಿಸುವಲ್ಲಿ ಈ ಪುಸ್ತಕವು ತುಂಬಾ ಉಪಯುಕ್ತವಾಗುವುದನಲ್ಲಿ ಸಂದೇಹವಿಲ್ಲ."

೨೧-೧-೧೯೫೯ **ರಾ. ಶ್ರೀ. ಹುಕ್ಕೇರಿಕರ**

ಆರು ಪ್ರಬಂಧಗಳು

"ಪ್ರಿ. ಆರ್. ವಾಯ್. ಧಾರವಾಡಕರ ಅವರು ಕನ್ನಡಸಾಹಿತ್ಯದಲ್ಲಿ ಗಣ್ಯವಾದ ಸ್ಥಾನವನ್ನು ಪಡೆದಿರುವರು. ವೈಯಾಕರಣರಾಗಿ, ವಿಮರ್ಶಕರಾಗಿ, ಸಂಪಾದಕರಾಗಿ, ಕನ್ನಡ ಸಾಹಿತ್ಯಕ್ಕೆ ಅವರು ವಿವಿಧಮುಖವಾದ ಸೇವೆಯನ್ನು ಸಲ್ಲಿಸಿರುವರು. ಕನ್ನಡ, ಇಂಗ್ಲಿಷ್, ಸಂಸ್ಕೃತ ಸಾಹಿತ್ಯಗಳ ಸಾರವನ್ನು ಹೀರಿ, ಅವುಗಳಲ್ಲಿ ಒಂದು ಬಗೆಯ ಪ್ರಭುತ್ವವನ್ನು ಪಡೆದಿರುವರು. ಜೊತೆಗೆ, ಪ್ರಿ. ಧಾರವಾಡಕರ ಅವರ ಲೋಕಾನುಭವಕ್ಕೇನೂ ಕೊರತೆಯಿಲ್ಲ. ಉತ್ತಮ ಪ್ರಾಧ್ಯಾಪಕರಾಗಿ, ಆದರ್ಶ ಪ್ರಿನ್ಸಿಪಾಲರಾಗಿ, ಒಳ್ಳೆಯ ವಾಗ್ಮಿಗಳಾಗಿ, ಕನ್ನಡ ಲೋಕಕ್ಕೆ ಚಿರಪರಿಚಿತರಾಗಿರುವರು. ಹೀಗೆ, ಪ್ರಿ. ಧಾರವಾಡಕರ ಅವರು ಶಕ್ತಿ, ನೈಪುಣ್ಯ, ಲೋಕಾನುಭವ ಸಂಪನ್ನರಾಗಿರುವರು. ಈ ಪರಿಸರದಲ್ಲಿ ಪ್ರಾದುರ್ಭವಿಸಿವೆ ಶ್ರೀಯುತರ ಪ್ರಬಂಧಗಳು"

೧೩-೭-೧೯೬೨ **(ಡಾ.) ಆರ್. ಸಿ. ಹಿರೇಮಠ**

ವಿಜಯ ದುಂದುಭಿ (ಸಂಪಾದಿತ) (೧೯೬೩) :

"ದೇಶಾಭಿಮಾನವನ್ನು ಪ್ರಚೋದಿಸುವುದರ ಜೊತೆಗೆ ವಾಸ್ತವ ಪರಿಸ್ಥಿತಿಯ ಅರಿವನ್ನುಂಟು ಮಾಡಿಕೊಡುವ, ಎಚ್ಚರಿಕೆಯನ್ನು ನೀಡುವ, ಸಾಹಸಕ್ಕಾಗಿ ಅಣಿಗೊಳಿಸುವ, ಧೀರವಾಣಿಯನ್ನು ನಮ್ಮ ಕನ್ನಡ ಕವಿಗಳು ತಮ್ಮ ತಮ್ಮ ಶಕ್ತಿಗನುಗುಣವಾಗಿ 'ವಿಜಯ ದುಂದುಭಿ'ಯಲ್ಲಿ ಮೊಳಗಿಸಿದ್ದಾರೆ....ಇದರ ಸಂಪಾದಕರಾಗಿ ತಮ್ಮ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿರುವ ಪ್ರಿ. ರಾ. ಯ. ಧಾರವಾಡಕರ ಅವರನ್ನೂ ಹಾಗೂ ಅವರಿಗೆ ನೆರವಾದ ಕವಿಗಣವನ್ನೂ ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ"

೧೩-೩-೧೯೬೩

ಡಾ. ದಾ, ಚಿಂ. ಸಾವಟೆ
ಕುಲಪತಿ

ಧೂಮ್ರವಲಯಗಳು (೧೯೬೫) :

"(ಶ್ರೀ ಧಾರವಾಡಕರರ) ಶಬ್ದ ಜೋಡಣೆ ಮುತ್ತಿನ ಹಾರದಂತೆ. ಅಂಥ ಕಲಾವಂತಿಕೆ ಮಾತಿನಲ್ಲಿ. ನಡುನಡುವೆ ಸಂದರ್ಭಕ್ಕೊಪ್ಪುವ ಅನುಭವ ಕಥನಗಳು, ಉಪಕಥೆಗಳು, ಮಾತಿನುದ್ದಕ್ಕೂ ಚುರುಕಾದ ಹಾಸ್ಯ, ನಕ್ಕು ನಗಿಸುವ ನಗೆ, ಅಪಹಾಸ್ಯವಿಲ್ಲದ ವಿನೋದ. ಸುಸಂಸ್ಕೃತರಾದ ಅವರೊಡನೆ ಸಂಭಾಷಣೆಯೆಂದರೆ, ಅದೊಂದು ಆಹ್ಲಾದಕರ ಅನುಭವ. ಹರಿಯುವ ನೀರಿನ ಮೇಲೆ ಹೊಳೆಯುವ ಸೂರ್ಯಪ್ರಕಾಶದಂತೆ ಆ ಮಾತಿನ ಚಮತ್ಕಾರ. ಅವರ ಕೂಡ ಕಳೆಯುವ ವೇಳೆಯಲ್ಲಿ ಬೇಸರವೆಂಬುದಿಲ್ಲ...ಅವರು ಇಂಗ್ಲಿಷ್ ಹಾಗು ಕನ್ನಡ ಸಾಹಿತ್ಯ ವಚನಗಳಲ್ಲಿ ಸ್ವಚ್ಛಂದವಾಗಿ ವಿಹರಿಸಿದವರು.

ವಿಶಾಲವಾದ ಓದು, ಚುರುಕಾದ ಬುದ್ಧಿಮತ್ತೆ, ಬಹುಶ್ರುತತ್ವ, ಬಹುಮುಖ ಅನುಭವ, ಇವೆಲ್ಲಕ್ಕೂ ಹೆಚ್ಚಾಗಿ ರಸಿಕತೆ–ಇವುಗಳನ್ನು ಇಷ್ಟೊಂದು ಪ್ರಮಾಣದಲ್ಲಿ ಪಡೆದಿರುವ ಶ್ರೀ ಧಾರವಾಡಕರರು ಶ್ರೇಷ್ಠ ಪ್ರಬಂಧಕಾರನಿಗಿರಬೇಕಾದ ಎಲ್ಲ ಗುಣಗಳನ್ನೂ ಪಡೆದಿದ್ದಾರೆ. ಈ ಪ್ರಬಂಧಗಳು ಹದವಾದ ಮನಸ್ಸಿನಿಂದ ನಿರರ್ಗಳವಾಗಿ, ನಿರಾಯಾಸವಾಗಿ, ಹರಿಯುವ ಸರಸ ಸಲ್ಲಾಪಗಳು. ಇಲ್ಲಿ ಪಾಂಡಿತ್ಯದ ಜಡತೆಯಿಲ್ಲ. ಇವುಗಳನ್ನು ಓದುವುದೆಂದರೆ ಬೆಳದಿಂಗಳಲ್ಲಿ ವಿಹರಿಸಿದಂತೆ"

೩೦–೧೨–೧೯೬೫

ಸದಾಶಿವ ಒಡೆಯರ
(ಮುನ್ನುಡಿಯಿಂದ)

ಹೊಸಗನ್ನಡ ಸಾಹಿತ್ಯದ ಉದಯಕಾಲ (೧೯೭೫) :

"ಡಾ. ರಾ. ಯ. ಧಾರವಾಡಕರ ಅವರು ಪಾಂಡಿತ್ಯಪೂರ್ಣವಾದ ತಮ್ಮ ಅನೇಕ ಕೃತಿಗಳಿಂದ ಈಗಾಗಲೇ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಸುಪ್ರಸಿದ್ಧರಾಗಿದ್ದಾರೆ. ಅವರ 'ಕನ್ನಡ ಭಾಷಾಶಾಸ್ತ್ರ' ಭಾಷಾಚರಿತ್ರೆಯ ಇತಿಹಾಸದಲ್ಲಿ ಒಂದು ಮಹತ್ವದ ಮೈಲುಗಲ್ಲಾಗಿದೆ. ಅವರ 'ಧೂಮ್ರ ವಲಯಗಳು' ಎಂಬ ಪ್ರಬಂಧ ಸಂಗ್ರಹ ಸುಂದರವಾದ ಲಲಿತಕೃತಿಯಾಗಿದ್ದರೆ, ಅವರ ಸಂಪಾದಕತ್ವದಲ್ಲಿ ಹೊರಬಂದ ಗಾಂಧೀ ಸಾಹಿತ್ಯ ಕುರಿತ ಪುಸ್ತಕಗಳು ಕನ್ನಡ ಗಾಂಧೀ ಸಾಹಿತ್ಯದ ಮೌಲಿಕವಾದ ಆಸ್ತಿಗಳಾಗಿವೆ. ಒಂದು ದೊಡ್ಡ ಶಿಕ್ಷಣ ಸಂಸ್ಥೆಯ ಪ್ರಾಚಾರ್ಯರಾಗಿ ಕೆಲಸಮಾಡಿದ ಡಾ. ಧಾರವಾಡಕರ ಅವರ ಶೈಕ್ಷಣಿಕ ಮತ್ತು ಸಾಮಾಜಿಕ ಸೇವೆಯನ್ನು ಜನತೆ ಮತ್ತು ಪ್ರಭುತ್ವಗಳೆರಡೂ ಮೆಚ್ಚಿಕೊಂಡಿವೆ.... (ಪ್ರಸ್ತುತ) ಗ್ರಂಥ ಕೇವಲ ಸಾಹಿತ್ಯ ಚರಿತ್ರೆ ಮಾತ್ರವಾಗಿರದೆ, ಉತ್ತರ ಕರ್ನಾಟಕದ ಒಂದು ಕಾಲದ ಸಾಹಿತ್ಯಕ, ಸಾಮಾಜಿಕ, ಆಧ್ಯಾತ್ಮಿಕ ಜೀವನದ ದರ್ಶನವೇ ಆಗಿದೆ. ಈ ಗ್ರಂಥ, ನಾಡಿಗಾಗಿ ತಮ್ಮನ್ನೇ ಅರ್ಪಿಸಿಕೊಂಡ ಮಹಾವ್ಯಕ್ತಿಗಳ ಜೀವನ ಚಿತ್ರಶಾಲೆಯೆಂದೂ ಹೇಳಬಹುದು."

೧೨-೪-೧೯೭೫ **ಎಂ. ಮಲ್ಲಿಕಾರ್ಜುನ ಸ್ವಾಮಿ**

ವಿದ್ಯಾಸಚಿವರು, ಬೆಂಗಳೂರು.

"ಸಾಮಾನ್ಯವಾಗಿ ನಾವು ಸ್ಮರಿಸಿಕೊಳ್ಳುವ ಕೆಲವರು, ನಾಡಿನ ಗಮನಕ್ಕೆ ಬಾರದ ಪಲವರು ನುಡಿಸೇವಕರ ಜೀವನ-ಕಾರ್ಯಗಳ ಪರಿಚಯ (ಈ ಗ್ರಂಥದಲ್ಲಿ) ಲಭ್ಯವಾಗುತ್ತದೆ. ಈ ಕಾಲಾವಧಿಯ ಸಾಮಾಜಿಕ ಜೀವನದ ಅಧ್ಯಯನಕ್ಕೂ ಸಾಕಷ್ಟು ಸಾಮಗ್ರಿ ಸಿಕ್ಕುತ್ತದೆ. ಸಾಹಿತ್ಯಕೃತಿಗಳಿಂದಷ್ಟೆ ಅಲ್ಲದೆ; ಇತರ ಮೂಲಗಳಿಂದಲೂ ಭಾಗಗಳನ್ನು ಉದ್ಧರಿಸಿದೆ. ಕನ್ನಡ ಗದ್ಯ ಮತ್ತು ಪದ್ಯ ಪ್ರಕಾರಗಳಲ್ಲಿ ಭಾಷೆ, ಶೈಲಿ, ಬೆಳೆದ ರೀತಿಯ ಅಧ್ಯಯನಕ್ಕೆ ಇದು ನೆರವಾಗುತ್ತದೆ."

೧-೧-೧೯೭೮ **ಎಲ್. ಎಸ್. ಶೇಷಗಿರಿರಾವ್**

(ಗ್ರಂಥಲೋಕದಲ್ಲಿ)

ಡಾ. ರಾ.ಯ. ಧಾರವಾಡಕರರನ್ನು ಪರಿಚಯಿಸಿ ಕೊಡುವ ಆಗತ್ಯವಿಲ್ಲ. ಅವರು ಆಧುನಿಕ ಕನ್ನಡ ಸಾಹಿತ್ಯದ ಪೃಥ್ವಿಯನ್ನು ಹೊತ್ತು ನಿಂತಿರುವ ಒಂದು ವಿಶಿಷ್ಟ ದಿಗ್ಗಜವೇ ಆಗಿದ್ದಾರೆ. ನಾಡಿಗೆ, ನುಡಿಗೆ, ಅವರ ನಿರುತರ ಸೇವೆ ಸಂದಿದೆ, ಸಲ್ಲುತ್ತಿದೆ. ಅವರ 'ಕನ್ನಡ ಭಾಷಾಶಾಸ್ತ್ರ' ಸುಮಾರು ಎರಡು ದಶಕಗಳ ಕಾಲ ಏಕಮೇವಾದ್ವಿತೀಯವೆನಿಸಿದ್ದ ಭಾಷೇತಿಹಾಸದ ಪ್ರಮಾಣ ಗ್ರಂಥವಾಗಿತ್ತು. ಇಂದಿಗೂ ಭಾಷಾ

ಭ್ಯಾಸಿ ಅದಕ್ಕೆ ಮಣಿದೇ ಮುಂದೆ ಹೋಗಬೇಕಾಗಿದೆ. ಇಂತಹ ವಿದ್ವತ್ ಪೂರ್ಣವೂ, ವಿಚಾರ ಪರಿಪ್ಲುತವೂ ಆದ ಕೃತಿಗಳನ್ನಿತ್ತ ಪ್ರಬುದ್ಧ ಪ್ರಾಚಾರ್ಯರಲ್ಲಿ ರಾ. ಯ. ಧಾರವಾಡಕರರು ಒಬ್ಬರಾಗಿದ್ದಾರೆ.

'ಹೊಸಗನ್ನಡ ಸಾಹಿತ್ಯದ ಉದಯಕಾಲ'ದಲ್ಲಿ ಮುಷ್ಟಿ ಕಟ್ಟಿ ಹೊಡೆದು ಹೋರಾಡಿದ, ಕನ್ನಡಕ್ಕಾಗಿ ಕನ್ನಡದ ಅಸ್ತಿತ್ವಕ್ಕಾಗಿ ದುಡಿದ, ಮಡಿದ, ಮಹಾ ಪುರುಷರ ಭವ್ಯೇತಿಹಾಸ ಇದರ ವಸ್ತು. ಆಳವಾದ ಅಧ್ಯಯಂನದ ಫಲ ಇದಾಗಿದೆ. ಡಾ. ಧಾರವಾಡಕರರ ಈ ಮಹಾಪ್ರಬಂಧದ ಒಂದೊಂದು ಅಂಶವೂ ಒಂದೊಂದು ಥೀಸಿಸ್‌ಗೆ ವಸ್ತುವಾಗಬಲ್ಲುದು. ಉದಾಹರಣೆಗೆ ಕ್ರೈಸ್ತ ಮಿಶನರಿಗಳು ಸಲ್ಲಿಸಿದ ಕನ್ನಡ ಸೇವೆ; ಇಲ್ಲವೇ ಕನ್ನಡದಲ್ಲಿ ಬೆಳೆದು ಬಂದ ಬೈಬಲ್ಲುಗಳು. ಇಲ್ಲಿನ ಒಬ್ಬೊಬ್ಬ ಸಾಹಿತ್ಯ ಕನೂ ಸಂಶೋಧನೆಗೆ ಆಹಾರವಾಗಬಲ್ಲ....ಎಂದಿಗೂ ಕಾಣಸಿಗದ ಪಲವಾರು ಕಾಗದ ಪತ್ರ ವ್ಯವಹಾರ ಲೇಖನಗಳ ಆಧಾರದೊಂದಿಗೆ ಮಹಾಪ್ರಬಂಧವನ್ನು ಪೂರ್ಣಗೊಳಿಸಿ ದ್ದಾರೆ. ವಿಷಯ ಸಂಗ್ರಹಣೆಯಲ್ಲಿ ದುಂಬಿಯಾಗಿ, ವಿಶ್ಲೇಷಣೆಯಲ್ಲಿ ಜ್ಞಾನಿಯಾಗಿ, ವೈಚಾರಿಕತೆಯಲ್ಲಿ ನಿಶಿತಮತಿಯಾಗಿ. ರಸಗ್ರಹಣದಲ್ಲಿ ರಸಿಕರಾಗಿ, ಸೃಷ್ಟಸಾಹಿತ್ಯದ ಒಡನಾಡುವ ಕ್ರೀಡಾಪಟುವಾಗಿ, ಹೊಸಗನ್ನಡದ ನವೋದಯಕಾರರ ಹರಿಕಾರರಾಗಿ ಬೆಳಗಿದ್ದಾರೆ ಡಾ. ರಾ. ಯ. ಧಾರವಾಡಕರರು. ಗ್ರಂಥ, ಸರ್ವರೂ ಆವಶ್ಯ ಓದ ಬೇಕಾದ ಆಕರ ಗ್ರಂಥ."

೧೬-೫-೧೯೭೬ — **ಡಾ. ಸಾ.ಶಿ. ಮರುಳಯ್ಯ**

('ಕರ್ಮವೀರ' ಪತ್ರಿಕೆಯಲ್ಲಿ)

ಕನ್ನಡದಲ್ಲಿ ಕಾನೂನು ಸಾಹಿತ್ಯ (೧೯೭೬) :

"ನಿಷ್ಣಾತ ಪ್ರಾಧ್ಯಾಪಕರಾಗಿ, ದಕ್ಷ ಆಡಳಿತಗಾರರಾಗಿ, ಶ್ರೇಷ್ಠ ವಾಗ್ಮಿಗಳಾಗಿ, ಡಾ. ರಾ. ಯ. ಧಾರವಾಡಕರರು ನಾಡಿನ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ. ನಿಜವಾದ ಶಿಕ್ಷಕರಾದ ಡಾ. ಧಾರವಾಡಕರರು ಸಮಾಜದಲ್ಲಿರುವ ದುರ್ಬಲವರ್ಗದ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಹಾಯವನ್ನು ಸಲ್ಲಿಸಿದ್ದಾರೆ. ಅವರು ಪ್ರಾಧ್ಯಾಪಕವೃತ್ತಿಯಿಂದ ನಿವೃತ್ತರಾಗುತ್ತಿರು ವಂತೆಯೇ ನಮ್ಮ ರಾಜ್ಯ ಸರಕಾರವು ಅವರನ್ನು ಬೆಂಗಳೂರಲ್ಲಿ ರಾಜಭಾಷಾ (ವಿಧಾಯೀ) ಆಯೋಗದ ಸದಸ್ಯನನ್ನಾಗಿ ನೇಮಿಸಿತು. ಇಲ್ಲಿ ಬಂದ ಅಲ್ಪ ಕಾಲ ದಲ್ಲಿಯೇ, ತಮ್ಮ ಸಂಶೋಧನಾತ್ಮಕವಾದ ಪ್ರಸ್ತುತ ಪ್ರಬಂಧದ ಮೂಲಕ, ಅವರು ಈ ಹೊಸಕ್ಷೇತ್ರಕ್ಕೂ ಅಮೌಲ್ಯವಾದ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಈ ಕೃತಿಯ ಉದ್ದಕ್ಕೂ ಡಾ. ಧಾರವಾಡಕರರ ಆಳವಾದ ಅಭ್ಯಾಸ, ಅ-ವಿರತವಾದ

ಪರಿಶ್ರಮ, ನಿಶಿತವಾದ ಬುದ್ಧಿಶಕ್ತಿ ಮತ್ತು ರಸಪೂರ್ಣವಾದ ವಿವೇಚನೆಯನ್ನು ಕಾಣುತ್ತೇವೆ. ವ್ಯಾಕರಣ ಶಾಸ್ತ್ರದ ಹಾಗೆ ಕಾನೂನು ರಸವಿಹೀನವಾದ ಶಾಸ್ತ್ರ. ಅಂಥದನ್ನೂ ಶ್ರೀಯುತರು ತಮ್ಮ ಕಥನಕಲೆಯ ಮೂಲಕ ರಸವಂತವಾಗಿ ಮಾಡಿದ್ದಾರೆ. ಕನ್ನಡ ಸಾಹಿತ್ಯಚರಿತ್ರೆಗೆ ಒಂದು ಹೊಸ ಆಯಾಮವನ್ನು ಕಲ್ಪಿಸಿ ಕೊಟ್ಟಿದ್ದಾರೆ"

೨–೫–೧೯೭೬ — **ದೇ. ಕ. ನಾಯ್ಕರ**

ಕಾನೂನು ಮತ್ತು ಪೌರಾಡಳಿತ ಸಚಿವರು, ಬೆಂಗಳೂರು

"ಕ್ರಿ. ಶ. ೧೮೫೬ನೇ ಇಸವಿಯಷ್ಟು ಹಿಂದಿನಿಂದ ಈವರೆಗೆ ಕಾನೂನುಗಳನ್ನು ಕನ್ನಡದಲ್ಲಿ ಬರೆಯುವುದರಲ್ಲಿ, ಇಂಗ್ಲಿಷ್ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿ ಜನಸಾಮಾನ್ಯರಿಗೆ ಒದಗಿಸುವಲ್ಲಿ, ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ವ್ಯಕ್ತಿಶಃ ಮತ್ತು ಸರಕಾರದ ವತಿಯಿಂದ ನಡೆಸಲಾದ ಪ್ರಯತ್ನಗಳನ್ನು ಈ ಗ್ರಂಥದಲ್ಲಿ ಬೆಳಕಿಗೆ ತರಲಾಗಿದೆ. ಕಾನೂನು ಜ್ಞಾನದ ಆವಶ್ಯಕತೆ, ಬರವಣಿಗೆಯ ಪದ್ಧತಿ ಮತ್ತು ಭಾರತೀಯ ಪರಂಪರೆಯ ಕಾನೂನು ಗ್ರಂಥಗಳ ಬಗೆಗೆ ವಿದ್ವತ್ಪೂರ್ಣ ಪರಿಚಯ ನೀಡಿ (ಲೇಖಕರು) ಒಂದು ಹೊಸ ಜಗತ್ತನ್ನೇ ಬೆಳಕಿಗೆ ತಂದಿದ್ದಾರೆ. ಕನ್ನಡದಲ್ಲೇ ಯೋಚಿಸಿ, ಕಾನೂನುಗಳನ್ನು ಬರೆಯುವುದು ಮತ್ತು ತೀರ್ಪು ನೀಡುವುದು ಹೆಚ್ಚು ಪರಿಣಾಮಕಾರಿ ಹಾಗೂ ಸುಲಭದ ಕಾರ್ಯವೆಂಬುದು ಕಾನೂನು ರಚಕರಿಗೂ ನ್ಯಾಯಾಧೀಶರುಗಳಿಗೂ ಮನವರಿಕೆ ಮಾಡಿಕೊಡುವ ಕೆಲಸ ಇಂಥ ಗ್ರಂಥಗಳಿಂದ ಆಗುತ್ತದೆ"

೨೬–೯–೧೯೭೬ 'ಉದಯವಾಣಿ', ಮಂಗಳೂರು

ತೂರಿದ ಚಿಂತನಗಳು (೧೯೮೨) :

" 'ರಾ. ಯ. ಧಾ' ಕನ್ನಡಕ್ಕೆ ಹೊಸಬರಲ್ಲ. ಅವರು ಆದ್ಯರೆಂಬಷ್ಟು ಹಳಬರು. ಪ್ರಾಧ್ಯಾಪಕರಾಗಿ, ಪ್ರಬಂಧಕಾರರಾಗಿ, ಭಾಷಾಶಾಸ್ತ್ರಜ್ಞರಾಗಿ ಪ್ರಾಚಾರ್ಯರಾಗಿ, ಅದ್ವಿತೀಯ ವಾಗ್ಮಿಯಾಗಿ, ಅವರ ಸೇವೆ ಅವ್ಯಾಹತವಾಗಿ ಮುಂದುವರಿದಿದೆ. ಬದುಕಿನಲ್ಲೂ ಬರಹದಲ್ಲೂ ವಿಶಿಷ್ಟ ಸ್ವೋಪಜ್ಞ ಎನಿಸಬಹುದಾದ ಹಾಳತವನ್ನು ಕಾಪಾಡಿಕೊಂಡು ಬಂದಿದ್ದಾರೆ. ವೃತ್ತಿಗೌರವದ ಜೊತೆಗೆ ಜೀವನ ಘನತೆಯನ್ನೂ ಉಳಿಸಿಕೊಂಡು ಬಂದಿದ್ದಾರೆ. ತುಂಬಿದ ಬದುಕು ನಡೆಸಿದ್ದಾರೆ, ತೂಕದ ಬರವಣಿಗೆ ಮಾಡಿದ್ದಾರೆ. ಅವರು ಮಾಡಿರುವ ನೂರಾರು ಉಪನ್ಯಾಸಗಳ ಮೊತ್ತಕ್ಕೆ ಹೋಲಿಸಿದಾಗ ಬರೆದದ್ದು ಕಡಿಮೆಯೇ; ಬರೆದಷ್ಟೂ ಜನಪ್ರಿಯವಾಗಿದೆ. ಅವರ ಶಿಷ್ಯ ಸಂಪತ್ತು ಇತರರು ಕರುಬುವಷ್ಟು ದೊಡ್ಡದು. ಸಾರ್ಥಕ ಜೀವನಕ್ಕೆ ಇನ್ನೆಷ್ಟು ಬೇಕು, ಇನ್ನೇನು ಬೇಕು."

— **ಹಂಪ ನಾಗರಾಜಯ್ಯ** (ಮುನ್ನುಡಿಯಿಂದ)

"ತುಂಬ ಸೊಗಸಾದ ಬರವಣಿಗೆ. ಬರವಣಿಗೆಯುಲ್ಲಿ ಬನಿ ಇದೆ. ಹಾಸ್ಯ, ವಿವೇಕ ಕಿರುವಿಡಂಬ ಎಲ್ಲ ಇವೆ...ತುಂಬ ಗೆಲುವಾದ ಬರವಣಿಗೆ. ನಿಮ್ಮ ಗದ್ಯದಲ್ಲಿ ನಿಜವಾದ ತೇಜಸ್ಸು, ಓಟ, ನವಿರು, ಇವೆ. ಇವುಗಳನ್ನು ಓದುವುದು ಬೇಸಿಗೆಯಲ್ಲಿ ತಂಗಾಳಿಗೆ ಮೈ ಒಡ್ಡಿದಂತೆ"

೧೫-೧೧-೧೯೮೨ ಡಾ. ಗೊರೂರ ರಾಮಸ್ವಾಮಿ ಅಯ್ಯಂಗಾರ

"ಅನುಭವಜನ್ಯವಾದ ಹಲವಾರು ವಿಚಾರಗಳನ್ನು ಶಕ್ತವಾದ ಭಾಷೆಯಲ್ಲಿ ಸೆರೆಹಿಡಿದಿದ್ದಾರೆ....ಇದೊಂದು ಅಪೂರ್ವ ಸಂಕಲನ. ಲೇಖಕರ ಅನುಭವ, ಹರಹು, ಎಂಥವರನ್ನೂ ಬೆರಗುಗೊಳಿಸುವಂಥಾದ್ದು. ಘಟನೆಯಿಂದ ಘಟನೆಗೆ ಕುಪ್ಪಳಿಸುತ್ತಾ ಸಾಗುವ ಇಲ್ಲಿನ ಶೈಲಿ, ಓ ಪ್ರಶಂಸನೀಯ. ಕನ್ನಡ ಪ್ರಬಂಧ ಸಾಹಿತ್ಯಕ್ಕೆ ಇದೊಂದು ವಿಶಿಷ್ಟ ದೇಣಿಗೆ"

೧-೧೨-೧೯೮೨ ನಾ. ದಾಮೋದರಶೆಟ್ಟಿ

(ಗ್ರಂಥಲೋಕದಲ್ಲಿ)

"ನೀವು ಗಾಢವಾಗಿ ಚಿಂತನೆ ಮಾಡುತ್ತೀರಿ. ಅನುಭವ, ವಿದ್ವತ್ತು, ಚಿಂತನೆ, ನಿಮ್ಮ ಅಭಿವ್ಯಕ್ತಿಗೆ ಮೊನಚನ್ನು ಕೊಡುತ್ತವೆ. ನಮ್ಮಲ್ಲಿ ಈ ಬಗೆಯ ವೈಚಾರಿಕ ಪ್ರಬಂಧಗಳ ಕೊರತೆ ಇದ್ದೇ ಇದೆ. ಅದನ್ನು ನೀವು ತುಂಬುತ್ತಿದ್ದೀರಿ"

೧-೧೧-೧೯೮೨ ಜಯತೀರ್ಥ ರಾಜಪುರೋಹಿತ M. A. I. A. S.

"ನಿಮ್ಮ ಅನನ್ಯವಾದ ಚಿಂತನಶೀಲತೆ, ಬೆರಗುಗೊಳಿಸುವ ಪಾಂಡಿತ್ಯ, ಹೃದಯಸ್ಪರ್ಶಿ ಸಿವೇದನತಖರಿ ಎಲ್ಲವೂ ಇದರಲ್ಲಿ ಪಡಿಮೂಡಿದೆ ಎಂದು ಪುನಃ ಸಂತೋಷಪಟ್ಟೆ. ನನ್ನಂತಹ ಸಾಮೂಹಿಕ ಮಾಧ್ಯಮದ ಸಂಪರ್ಕವಿರುವ ವ್ಯಕ್ತಿಗಳಿಗೆ ಇದು ತುಂಬಾ ಉಪಯುಕ್ತ ಎನಿಸುತ್ತದೆ. ಇದರಲ್ಲಿ ನೀವು ತೂರಿಬಿಡುವ ಯೋಚನೆಗಳನ್ನು, ಭಾವನೆಗಳನ್ನು, ಒದಗಿಸುವ ಆಕರಗಳನ್ನು, ಹಿಂಬಾಲಿಸುವುದು ನಿಜಕ್ಕೂ ಬೌದ್ಧಿಕವಾಗಿ ಫಲಪ್ರದ. ನಮ್ಮ ಸಾಹಿತ್ಯದಲ್ಲಿ ಅಪರೂಪವಾಗುತ್ತಿರುವ ಸೃಜನಶೀಲ ಚಿಂತನೆಗೆ ನಿಮ್ಮ ಬರಹಗಳು ಉದಾಹರಣೆಯಾಗಿವೆ."

೨೬-೩-೧೯೮೩ — ಎಂ. ಎಸ್. ಕೆ. ಪ್ರಭು

'ಆಕಾಶವಾಣಿ' ಭದ್ರಾವತಿ.

"ಈ ಪುಸ್ತಕದ ಬರಹಗಳಲ್ಲಿ ಗಾಢವಾದ ವ್ಯುತ್ಪತ್ತಿ, ವಿಚಾರಶೀಲತೆ, ಹಾಸ್ಯಪ್ರಜ್ಞೆ, ಸ್ವಾರಸ್ಯಪೂರ್ಣ ನಿರೂಪಣೆ ಮುಂತಾದ ಗುಣಗಳು ನಿಚ್ಚಳವಾಗಿವೆ. ಬೋಧಪ್ರದವಾದ ಕೃತಿ; ಕನ್ನಡ ಪ್ರಬಂಧಪ್ರಕಾರಕ್ಕೆ ಒಂದು ವಿಶಿಷ್ಟವಾದ ಕೊಡುಗೆ"

೬-೪-೧೯೮೩ — ಡಾ|| ಸಿ. ಪಿ. ಕೃಷ್ಣಕುಮಾರ

ಮಾನಸ ಗಂಗೋತ್ರಿ, ಮೈಸೂರು.

ನವಿಲುಗರಿ (೧೯೮೩)

"ಕನ್ನಡಸಾಹಿತ್ಯದಲ್ಲಿ ಪ್ರಬಂಧಗಳ ಕೃಷಿ ಹೇಳಿಕೊಳ್ಳುವ ಪ್ರಮಾಣದಲ್ಲಿ ಆಗಿಲ್ಲವಾದರೂ, ಹಲವಾರು ಸಾಹಿತಿಗಳು ಈ ವಿಭಾಗದಲ್ಲಿ ಸಾಕಷ್ಟು ಪರಿಶ್ರಮಿಸಿದ್ದಾರೆ.

ಅಂಥವರಲ್ಲಿ ಡಾ.ರಾಮ ಧಾರವಾಡಕರರೂ ಒಬ್ಬರು. ಅವರ ಈ ಮೊದಲಿನ ಪ್ರಬಂಧ ಸಂಕಲನ 'ಧೂಮ್ರವಲಯಗಳು' ಸಾಕಷ್ಟು ಜನಪ್ರಿಯತೆ ಗಳಿಸಿದೆ. ಪ್ರಸ್ತುತ ಸಂಕಲನವೂ ಲೋಕಾನುರಾಗವನ್ನು ಹೊಂದಿರುತ್ತದೆ. ಮನಸ್ಸಿಗೆ ಮುದವನ್ನೂ, ಬುದ್ಧಿಗೆ ತುಸುಚುರುಕನ್ನೂ ಉಂಟುಮಾಡುವಂಥ ಹರಟೆ ಒಂದು ವಿಧವಾದ ಟಾನಿಕ್ ಇದ್ದಂತೆ. ಮಾತು ಬಲ್ಲವ ಮಾಣಿಕ ತಂದ ಎಂಬ ನಾಣ್ಣುಡಿಯೆ ಇದೆ. ಹಾಗೆ ಲೋಕಾಭಿರಾಮವಾಗಿ ಹರಟುವ ಕಲೆ ಎಲ್ಲರಿಗೂ ಸಾಧಿಸುವದಿಲ್ಲ, ಆದರೆ, ಡಾ ಧಾರವಾಡಕರರಿಗೆ ಅದು ಚೆನ್ನಾಗಿ ಸಾಧಿಸಿದೆ ಎಂದು 'ನವಿಲುಗರಿ' ಪ್ರಬಂಧಗಳನ್ನು ಓದಿ ಧಾರಾಳವಾಗಿ ಹೇಳಬಹುದು. ಇಲ್ಲಿರುವವೆಲ್ಲ ಹಾಳು ಹರಟೆಗಳಲ್ಲ, ಬೌದ್ಧಿಕ ಸಮಾಧಾನವನ್ನು ತರಬಲ್ಲ ಮಿಠಾಯಿಗಳಾಗಿವೆ.........ಒಂದು ವಿಚಾರದ ಸುಳಿಯನ್ನು ಒಡಿದು ಅದನ್ನು ಬೆಳೆಸಿಕೊಂಡು ಹೋಗಲುತಕ್ಕುದಾದ ಮಾರ್ಮಿಕತೆಯನ್ನು, ಚಾತುರ್ಯವನ್ನು, ಪಾಂಡಿತ್ಯವನ್ನು ಲೇಖಕರು ಈ ಪ್ರಬಂಧಗಳಲ್ಲಿ ಪ್ರದರ್ಶಿಸಿದ್ದಾರೆ. ಸುಲಲಿತ ಭಾಷೆಯಲ್ಲಿ, ಸರಾಗವಾಗಿ, ಆತ್ಮೀಯತೆಯಿಂದ ಓದುಗರೊಡನೆ ಆತ್ಮವಿನಿಯೋಗ ಮಾಡಿಕೊಳ್ಳಬಲ್ಲ ಕಲೆ ಲೇಖಕರಿಗೆ ಬಲು ಚೆನ್ನಾಗಿ ಸಾಧಿಸಿರುವದರಿಂದ 'ನವಿಲುಗರಿ' ವರ್ಣರಂಜಕವಾಗಿ ಆಕರ್ಷಕವಾಗಿದೆ,"

೧೫-೮-೧೯೮೩ — ದ. ಲ. ಕೆರೂರ

(ಸಂಯುಕ್ತ ಕರ್ನಾಟಕದಲ್ಲಿ)

ಶಾಂತಕವಿಗಳ ಮೂರು ಕೀರ್ತನೆಗಳು (೧೯೮೩) :

"ಎಂಟು ದಶಕಗಳ ಪರಿಶ್ರಮದ ನಂತರ ಇಂದೇನೋ ಹೊಸಕನ್ನಡ ಸಾಹಿತ್ಯ ವಿಜೃಂಭಿಸುತ್ತಿದೆಯಾದರೂ, ಈ ಶತಮಾನದ ಪ್ರಾರಂಭದಲ್ಲಿ, ಅದಿನ್ನೂ ಜನರ ಉಪೇಕ್ಷೆಗೆ ಈಡಾಗಿಯೆ ಇತ್ತು. (ಈ ಕಾಲದಲ್ಲಿ) ಶಾಂತಕವಿಗಳು ಕಾವ್ಯಗಳ ಬರೆದರು: ನಾಟಕಗಳನ್ನು ಬರೆದು ಆಡಿಸಿದರು; ಕೀರ್ತನೆಗಳನ್ನು ಬರೆದು ಹಾಡಿ ಕಾಳಿದಾಸನ ಮೇಘದೂತ ರಘುವಂಶಗಳನ್ನು ಕನ್ನಡಕ್ಕೆ ತಂದರು. ಅವರ ಎಲ್ಲ ಕೃತಿಗಳು ಇಂದು ಲಭ್ಯವಿಲ್ಲ...


ಶಾಂತಕವಿಗಳ ಸಮಗ್ರ ಕೃತಿಗಳನ್ನು ಪ್ರಕಟಿಸುವ ಹಂಬಲ ಹೊತ್ತಿದ್ದಾರೆ ಡಾ. ಧಾರವಾಡಕರರು. ಇದು ಸ್ತುತ್ಯವೇ. ಇದಕ್ಕೆ ಕನ್ನಡಿಗರ ನೆರವೂ ಒದಗಬೇಕು ಎಂದಿದ್ದಾರೆ. ಹಾಗೆ ನೆರವಾಗುವುದು ಕನ್ನಡಿಗರ ಕರ್ತವ್ಯ. ಈ ಶತಮಾನದ ಹಿರಿಯ ಕವಿಯೊಬ್ಬನನ್ನು ಸಂಪೂರ್ಣವಾಗಿ ಅರಿತುಕೊಳ್ಳಬೇಕಾದುದು ಕನ್ನಡಿಗರ ಧರ್ಮ. ಅವರ ಸಹಾಯ ಸಹಕಾರಗಳಿಂದ ಶಾಂತಕವಿಗಳ ಎಲ್ಲ ಕೃತಿಗಳು ಬೆಳಕು ಕಾಣಲಿ ಎಂದು ಹಾರೈಸುತ್ತೇನೆ"

೨೨-೮-೧೯೮೩ ದ. ಲ. ಕೆರೂರ (ಸಂಯುಕ್ತ ಕರ್ನಾಟಕದಲ್ಲಿ)

ಇತರ ಸಂಪಾದಿತ ಕೃತಿಗಳು

ಕರ್ಮಯೋಗಿ, ಯೋಜನಾಗೋಷ್ಠಿ ಇತ್ಯಾದಿ

ಅಲ್ಲದೆ, ಗಾಂಧೀ ಸಾಹಿತ್ಯದ ಇಪ್ಪತ್ತು ಕೃತಿಗಳು.



ಕವಿಗಳಾಗಿ, ವಿಮರ್ಶಕರಾಗಿ, ಸಂಶೋಧಕರಾಗಿ,
ಪ್ರಗಲ್ಭ ಪಂಡಿತರಾಗಿ, ಸುಪ್ರಸಿದ್ಧ ಪ್ರಾಧ್ಯಾಪಕರಾಗಿ,
ಪ್ರಚಂಡ ವಾಗ್ಮಿಗಳಾಗಿ, ನಾಡಿನ ತುಂಬೆಲ್ಲ ಸುತ್ತಿದ
'ಶ್ರೀ'ಯವರು ಪ್ರಾತಃಸ್ಮರಣೀಯರು.
ಹಳೆಯ ಮೈಸೂರಿನ ಸಂಪಿಗೆ ಗ್ರಾಮದಲ್ಲಿ ಜನಿಸಿ
ಸಂಪಿಗೆಯ ಕಂಪಿನ ಧಾರವಾಡಕ್ಕೆ ಅಗಮಿಸಿ,
ನೆಲೆನಿಂತು, ಹಳೆಯ ಮೈಸೂರು ಹಾಗು ಉತ್ತರ
ಕರ್ನಾಟಕದ ಮೇಲೆ ಮೂಡಿದ ಮಳೆಬಿಲ್ಲಾದರು;
ಕಾವ್ಯವಾದರು.....

ಮುಖಪುಟ: ಸ್ಕ್ರೀನಆರ್ಟ್ಸ ಶಿರಸಿ